REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥ REGISTERED No M. 226

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರಧುರಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀರೇಕಮಂ ॥

ಸ್ವಗ್ರಹದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ ಪೈ. ಪರಸ್ಥಳದವರಿಗೆ ೨ ರೂ ೪ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ ನೇ ಜನವರಿ ೧೯೪೧ [ಸಂಚಿಕೆ ೩೫

ಶ್ರೀ ಜಗದ್ಗುರು ಸಿದ್ಧಲಿಂಗೇಶ ವಿಜಯತೇ

ಕಣ್ಮರೆಯಾದ ಗುರುವರನ ಪ್ರಾರ್ಥನೆ

॥ ಕಂದ ॥

ಅದುಹಾಗುರಂ ನಗಮಿ ।
ಜಾಂ ತೀಯಾಮಿ ನೀ ಪಾದಮಂ ।
ಮಾದಿಜಸಂಸ್ಕೃತಿಮಂದಿರಂ ।
ಸಾರಿತಿಪಾಸಮಸ್ತಜನಕ್ಕಧಿಪುರಂ ॥೧॥

ಶೃತಕೇವಲಂ ಜಿತತಾಪಂ ।
ನಿತಜನತಾಭೂತಿಭಾಗ್ಯವಿತರಣಶೀಲಂ ॥
ಯತಪತಿಪೀಠವರಿಷ್ಠಂ ।
ಯತಿಕಂ ಶ್ರೀಸಿದ್ಧಲಿಂಗಸಾಮಿಕವೇಷಂ ॥೨॥

ಧಾಗಿವಿಪೂತಂ ಧೀರಂ ।
ಯೋಗಿವಿಲೋಲಂ ವಿಧೂತಕಲ್ಪೂಷಿತಶಾಲಂ ॥
ಭೋಗಿನಿಭೂಷಪಕರಾಭಂ ।
ಪೋಗಿರುತಂ ನಮ್ಮುನೀಯೆದು ಹಾ ಯೆಂ ಗೈವೇಂ ॥೩॥

ಚಂಪಾಷಾವೃತ್ತಂ

ಪರಮಶಿವಪ್ರಭಾವವಿಶದಂ ಸುವಿನಯ ವರದಂ ಶುಭಾವ್ಹದಂ ।
ವರಶ್ರುತಿಬೋಧನಂ ಶಿವಪಟಾಂ ಭಗವಾಗಮತತ್ವಪ್ರಚಾರಗಂ ॥
ಮಿಲಿತಕಳಾಯಾಸನಿಧಯಮನಿಲಯಮುಖಂ ಶಿವಾಳಲಂ ।
ಚರವರಸಿದ್ಧ ಲಿಂಗಗುರುಪುಂಗವನೆಲ್ಲಿಸನೊಲ್ದು ಬೇಗ್ಕೈ ॥೪॥

॥ ಕಪಿಲ ॥

ಅಳುವಿಕೆಯೂಲಿಸಿ ಮಗುವಿನ ।
ನೊಳೆಗೊಟ್ಟೆಂಬಂ ಪೊರೆದ ಜನಿಯಂ ಜಗೆಯಂ ॥
ತಳಲುವ ಭಕ್ತಜನೋ ನಮ್ಮಂ ।
ನಲಜ್ಜೆ ಭವಭೀತಿವರೆ ಮಹಿಮಾಶರಣೇ ॥೫॥

ಪುಣ್ಯಯ ನಚ್ಚಿನ ಧರ್ಮದ ।
ಖಣ್ಣಿಯ ಪೋಗಿಗ ದೆಗ ಸಾಗಾಗುವುದಂ ॥
ಕಣ್ಣಿಂ ನೋಡುತೆ ಪಡುಮೆವೆ ।
ಬನ್ನ ವಸದಂಬಂತೆ ಪಾಪಿಗ ಗುರುಕುಲರವಿಯೇ ॥೬॥

ಏನಗಿದು ತಕ್ಕುದೆ ದೇವನೆ ।
ಹೀನಕಪಾಷಂಡಿಗಳಿಂ ನಾಮವಿದಿರ್ಪಂ ॥
ಮೌಢ್ಯವ್ಹಮ ಬಾಲರನೆಯ್ದೊ ।
ದೆನಪಿಂದ್ಯೆತಂದು ಸಲುಮ ಧರ್ಮಾಬಲೆಯೊಳ್ ॥೭॥

ಈ ಮಾಲಾವೃತ್ತಂ

ಜಾರ ಯಮಾತಿಕವಾಸನಮಾಲ ಮನೋಭವಮರ್ದನೋತ್ಪವಾ ।
ಜಾರ ವಿಕೃತಸಂಸ್ತುತಪೋತ್ಪಲ ಜಾತ ಬುಧೋದ್ಭಪ್ರಕಾಲ ಜಾ ॥
ಜಾರ ವಿಷಾಹಿರಕ್ಷಿಗಳ ಸುಗಂಧದ ಪಲ್ಲವರಿ ನಿರೀಷಾಧಿ ನೀ ।
ಜಾರ ಯತೀಶ್ವರಾಷ ವಿಜಯಾರ ಯತೀಶ್ವರಸಾರ್ವಭೌಮ ಜಾ ॥೮॥

॥ ಕಂದ ॥

ಹಾ ತೀಯಿಮಿ ನೀ ಪಾದಮಂ ।
ಭೂತಲಬಂಧುವಿಗಿಗ ಪಾಪ ದೆಳೆಮಿದ ನೋಡಿ ।
ಕಾತರಿಗೊಂದೆಮೊ ಪೇಳ್ದೆ ।
ಭೀತಿಯದೇಕುಗ್ರಳಿಗಗೆ ತಿಮಿರದ ಭಯಮೇಂ ॥೯॥

ಪ್ರಸಿಮಿಲಗುಗಣಗಣಾಯತ್ಕಂ ।
ಭವನೋಗಬ್ಬಾವತ್ಪ್ರಸೌಭೀಷಣಾಭುಂಭೂಂ ॥
ಪವನಂ ಪಾವನಸವನಿಯಂ ।
ತವೆ ಪಾಲಿಕೆ ಸಿದ್ಧಲಿಂಗಯೋಗಿಲಲಾಮಂ ॥೧೦॥

ಕವಿ-ಬಾಲಬೃಹಸ್ಪತಿ

ಸೌ॥ ಭಾಗೀರಥೀಮಾಯಿ ಜಾಯಗಾಂವಕರ್ ಇವರ ಅಭಿನಂದನ.

ಸೌ॥ ಭಾಗೀರಥೀಬಾಯಿ ಶಂಕರಶ್ಯಾಮ ಜಾಯಗಾಂವಕರ್ ಇವರು ಬ್ರಾಹ್ಮಿಕರ ಮುಖಪತ್ರಿಕೆಯಲ್ಲಿ ಶ್ರೀಯರ ಪ್ರಾಪ್ತಿ ಬಗ್ಗೆ ಮೆಂಬರಾಗಿ ಅರಿವಲ್ಲಿ ಬರುವಂಥ ವಿಷಯವನ್ನು ತಿಳಿಸಿ ಸಲು ಆತ್ಮಾನಂದನೆನಿಸುತ್ತಿದೆ.

ಮಹಾರಾಷ್ಟ್ರ ವೀರಕ್ಷೇತ್ರಸಮಾಜದಲ್ಲಿ ಶ್ರೀಯರ ವತಿಯಿಂದ ಮುಖಪತ್ರಿಕೆಯು ಮೆಂಬಾಗಿ ಒಂದವರ್ಷದಲ್ಲಿ ಇವರೇ ದೊಪಲನೆಯವರಾಗಿದ್ದಾರೆ ಇವರು ೧೯೦೬ ನೆಯ ಇಸವಿಯಲ್ಲಿ ಶಾಹಾಬಾದ ಜಿಲ್ಲೆಯಲ್ಲಿ ಪಾಪಾ ಎಂಬ ಗ್ರಾಮದಲ್ಲಿ ಜನಿಸಿದರು ಆ ಸಮಯದಲ್ಲಿ ಶ್ರೀ ಶಿಕ್ಷಣವು ಪ್ರೈಮಾರಿಸ್ಕೂಲಿನಲ್ಲಿ ಇದ್ದಪ್ಪರೂ ಸೌ॥ ಭಾಗೀರಥೀ ಬಾಯಿ ಜಾಯಗಾಂವಕರ ಇವರು ಮಾತ್ರ ಮಹಾ ಸ್ವಾಂತೇ ಇಯತ್ತೆಯಲ್ಲಿ ತೇರ್ಗಡೆ ಹೊಂದಿದ್ದರು. ಇವರ ೧೧ ನೆಯ ವಯಸ್ಸಿನಲ್ಲಿ ಶ್ರೀ ಶಂಕರಶ್ಯಾಮ ಜಾಯಗಾಂವಕರ ರವರು ಬಿ ಎಸ್ಸ್. ಇವರೊಡನೆ ವಿವಾಹವಾಯಿತು ಶ್ರೀಶಂಕರಶ್ಯಾಮ ಜಾಯಗಾಂವಕರ ಇವರು ಸುಶಿಕ್ಷಿತರೂ ಧರ್ಮಾಭಿಮಾನಿಗಳೂ ಸಮಾಜ ಸೇವಾ ಧುರೀಣರೂ ಆಗಿದ್ದರಿಂದಾಯಿಯವರು ಅತ್ಯಂತ ಕೀರ್ತಿಶಾಲಿಗಳಾದರು.

ಶ್ರೀ ಶಂಕರಶ್ಯಾಮ ಜಾಯಗಾಂವಕರ ಇವರು ಮಹಾರಾಷ್ಟ್ರ ದೇಶದಲ್ಲಿ ಪ್ರಸಿದ್ಧರಾದ ದಾರ್ಸ್ ನಗರದಲ್ಲಿ "ವೀರಕ್ಷತ್ರಾ" ಎಂಬ ಹೆಸರಿನ ಸಾಪ್ತಾಹಿಕ ವರ್ತಮಾನಪತ್ರಿಕೆಯನ್ನು ಸಮ್ಮ ಸಂಪಾದಕತ್ವದಲ್ಲಿ ಹೊರಡಿಸಿ ೨-೩ ವರ್ಷಗಳ ವರೆಗೆ ನಡಾಯಿಸಿದೆ ಮಾತ್ರವಲ್ಲದೆ ಮಹಾರಾಷ್ಟ್ರ ದೇಶದವರೆಲ್ಲೆಲ್ಲಾ ವಿದಿತವೇ ಆದೆ ಇಂತಹವರ ಧರ್ಮಪತ್ನಿಯವರು ಮೆಂಬರಾಗಿ ಆರಿಸಿ ಬಂದದ್ದು ಸರ್ವರಿಗೂ ಸಂತೋಷದಾಯಕವಾಗಿದೆ ಸೌ॥ ಜಯಗಾಂವಕರ ದಾಯಿಯವರಿಂದ ಜಗೀರದಾರರ ಇನ್ನೂರಕ್ಕೂ ಹೆಚ್ಚಿನ ಕಾಲುಳು ನೆರವೇರಲೆಂದೂ, ದೇವರು ಇವರಿಗೆ ದೀರ್ಘಾಯುಷ್ಯವನ್ನೆಯಲೆಂದೂ ಪ್ರಾರ್ಥಿಸುತ್ತೇನೆ

ಸಮಾಜಸೇವಾನಿರತಾಭಿಲಾಷಿನಿ,
ಲಕ್ಷ್ಮೀದಾಯಿ, ತಪಸೀರೆ

ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು.

ಅಭಿಕಂದನಸಭೆ, ಅದರಗುಂಚಿ.

ತಾ॥ ೧೯—೧೨—೧೯೪೦ ನೇ ಶಿವಪಟ್ಟಣ ಹುಬ್ಬಳ್ಳಿ ತಾಲೂಕು ಅದರಗುಂಚಿಯಲ್ಲಿ ಶ್ರೀ॥ ಪಿ ಟಿ॥ ಚರಬಸಪ್ಪ ಪ್ರ. ಪಟೆರರು ಮಕ್ಕ ಹುಬ್ಬಳ್ಳಿ ಇವರ ಅಕ್ಷರಸ್ಥೆಯಲ್ಲಿ ಸಭೆಯೇರಿ, ಧಾರವಾಡ ಪಲ್ಲಿಯವ "ಸ್ವದೇಶಾಭಿಮಾನಿ" ಯ ಪತ್ರಿಕಾಸಂಪಾದಕರ ಆರ್ಯರಲ್ಲಿ ನಿಮಿತ್ತರಾಗಿರುವ ದಿ॥ ಬ॥ ಆರ್. ಎಸ್. ಹಿರೇಮಕ ಸಾ.ಹೆಬ್ಬರವರ ಅಭಿನಂದನೆಯು ಮಾತಲ್ಪಟ್ಟಿತು "ಸಾಹೆಬರು ಸದರ ಅಂದಾಗಿ ೩೦,೦೦೦ ರೂಪಾಯಿಗಳನ್ನು ದೃವ್ಯ ಸಹಾಯ ಮಾಡಲು ಸಿದ್ಧರಾಗಿದ್ದಾರೆಂದು ತಿಳಿಸಿಸಲು ಅತ್ಯಂತ ಸಂತೋಷ ವಾಗುವುದೆಂದೂ, ಇಂತಹ ಲೋಕೋದ್ಧಾರ ಆರ್ಥದಲ್ಲಿ ಪ್ರವೃತ್ತರಾದ ರಾಜ ಸಾಹೆಬರವರಿಗೆ ಸರ್ವರೂ ಸಹಾಯಹಸ್ತವನ್ನೆಯಲೆಂದೂ, ಈ ಕಂಪನಿಯಲ್ಲಿ ಹುಂಬಿದ ಹಣಕ್ಕೆ ಯಾವ ವಿಧವಾದ ಬ್ಯಾಂಕಿ ಯಿರುವದಿಲ್ಲವೆಂದೂ, ಬೇರೆ ಕಂಪನಿಗಳಲ್ಲಿರುವ ಹಣಕ್ಕಿಂತಲೂ ಈ ಕಂಪನಿಯಲ್ಲಿರುವ ಹಣಕ್ಕೆ ಹೆಚ್ಚು ಲಾಭ ದೊರೆಯಲು ಸಾಧ್ಯವಿದೆಯೆಂದೂ, ಇದರಲ್ಲಿ ಭಾಗವಿಗೆಯಿಳೆಯುವದರಿಂದ ಸಾಹೇ ಬರು ಕೈಕೊಂಡ ಕಾರ್ಯಕ್ಕೆ ಸಹಾಯಮಾಡಿದಂತಾಗುವಲ್ಲದೆ ಸಾವಿರಾರು ಉಟುಂಬಿಗಳ ರಕ್ಷಣವಾದಿತೆ ಪಲವು ಜೊರಯುವ ದೆಂದೂ, ಅದಕ್ಕಾದಗ ಧನಿಕರು, ಶೇರುದಾರನ್ನು ತೆಗೆದುಕೊಂಡು ಸಹಾಯನೀಡಬೇಕೆಂದೂ" ಶ್ರೀ॥ ಹಿ॥ ಬ್ರ॥ ಗುರುವರ್ಯ ಶಿವಾ ಚಾರ್ಯರು ಹಿರೇಮಕ ಸುತ್ತಗಟ್ಟೆ ಮತ್ತು ರಾಷಪ್ಪ ತೋಟದ ಇವರಿಬ್ಬರೂ ಛಾಷಣ ಮಾಡಿದರು ಈ ವಿಧವಾದ ಮಹಾ ಕಾರ್ಯದಲ್ಲಿ ಪ್ರವೃತ್ತರಾದ ಸಾಹೇಬರ ಕಾರ್ಯವು ಯಶಸ್ವಿ ಗಲಿಲಿ, ಮತ್ತು ಸಾಹೇಬರಿಗೆ ದೇವರು ಆಯುಷಾ ರೈಶ್ವರ್ಯಾದಿಗಳನ್ನು ದಯಪಾಲಿಸಲೆಂದೂ, ಸರ್ವರೂ ಪ್ರಾರ್ಥಿ ಸಿದೇಶಕ್ಕೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪಾರ್ವತಂಡಪ್ಪ ಬಡಿಗೇರ

ಸ್ವೀಕಾರ.

ಮಿ॥ ರಾ॥ ಬಾಬಾಸಾಹೆಬ ಸಾಳೇಲ ಇವರ ಪುತ್ರ ಚಿ॥ ಸೌ॥ ಯಶೋದಾಬಾಯಿ ಮತ್ತು ಮಿ॥ ರಾ॥ ಬಸ ವಂತರಾವ ಜೋಗದೆ ಬಿಕ್ಕಳ್ಳಿ ಇವರ ಪುತ್ರ ಚಿ॥ ರುದ್ರಪ್ಪ ಇವರ ಫಲತೋಳನದ ಕಾಲದಲ್ಲಿ ಪ್ರಭಾ ಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ ತ್ರಿರೂ ಗಳು, ಮತ್ತು ಮಿ॥ ರಾ॥ ಅಣ್ಣಪ್ಪ ಬೀರೆದಾಸ ಇವರ ಪುತ್ರ ಚಿ॥ ರುದ್ರಪ್ಪನ ಫಲತೋಳನ ಕಾಲದಲ್ಲಿ ಸಮ ರ್ಪಿಸಿದ [ರೂ. ಒಟ್ಟು 4ರೂ. ಗಳು ಶೈಕಾಪುರ ಹಿರೇಮಕದ ಶ್ರೀಗುರುಸ್ವಾಮಿಯವರ ದ್ವಾರಾ ತಲ್ಪಿರು ತ್ತವೆ.

ವಿಜಾಪುರ ಡಿ॥ ಹೆಸರೂರ ತಾ॥ ಕಮತಿಗಿ ಹಿರೇ ಮಕದಲ್ಲಿ ಬಾಗಲಕೋಟೆ ತಾಲೂಕು ಮಾಸ್ತರ ವೇ॥ ವಿರೂಪಾಕ್ಷಯ್ಯನವರ ಪುತ್ರರಾದ ಚಿ॥ ಶಂಕರಯ್ಯ, ಬಸವಯ್ಯ, ಮತ್ತು ಇದೇ ಗ್ರಾಮದ ವೇ॥ ಚೌರಿಮಕದ ಬಸವಯ್ಯನವರ ಪುತ್ರರ ದೀಕ್ಷಾ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 2ರೂ ಗಳು ವೇ॥ ಮುರುಘಾರ್ಯ ಕಟ್ಟಿಮಕ ಗುಳೇದಗುಡ್ಡ ಇವರ ದ್ವಾರಾ ತಲ್ಪಿರುತ್ತವೆ

ಮಧುಗಿರಿ ತಾ॥ ಚಂದ್ರಗಿರಿ ಮಜರೆ ಅಭಿವಪಂಚಕ ಪುರದ ಗುರುಲಿಂಗಜಂಗಮ ಸೇವಾನಿರತ ಭಕ್ತಾಗ್ರೇಸರ ಮಿ॥ ರಾ॥ ಶಿವರದ ಲಿಂಗಪ್ಪನವರು ಶ್ರಾವಣ ಶು॥ ೫ ದಿವಸ ತಿನಾಧೀನರಾದ ಸಮಯದಲ್ಲಿ ಅವರ ಮಕ್ಕಳು ಮಿ॥ ರಾ॥ ಪುಟ್ಟಯ್ಯನವರು ಸ್ವಯಂ ಪೋಷಣಕ್ಕೋಸ್ಕರ ॥ರೂ. ಯಮು [illegible]

ಒಂಬತ್ತನೆಯ ಮೈಸೂರು ಸ್ಪೆಷಲ್ ಸ್ಕೌಟ್ ರ್ಯಾಲಿ

ನಮ್ಮ ಶ್ರೀಮನ್ಮಹಾರಾಜರವರು ಮೈಸೂರು ಸಂಸ್ಥಾನದ ಒಂಬತ್ತನೇ ಸ್ಕೌಟ್ ಸಮ್ಮೇಳನದ ಪ್ರಾರಂಭೋತ್ಸವವನ್ನು ದಿನಾಂಕ ೨೬ ನೇ ಗುರುವಾರ ಬೆಳಿಗ್ಗೆ ಬೆಂಗಳೂರು ನಗರದಲ್ಲಿ ಪ್ರಾರಂಭಿಸಿದರು ಈ ಸಂಸ್ಥಾನ ಎಂಬತ್ತು ಜಿಲ್ಲೆಗಳಷ್ಟಲ್ಲಿ ಹರಡಿರು, ಜೊಂಪಾಮಯ, ಸಿಲೋನ್, ಕೊಡ್ಡಗ ಮತ್ತು ಬಿದು ತೋಟಿ ಮುಂತಾದ ಪಟ್ಟಣಗಳಲ್ಲೂ ಸ್ಕೌಟುಗಳು ಕಬ್ಬುಗಳೂ ಮತ್ತು ರೋವರುಗಳೂ ತಮ್ಮತಮ್ಮ ಸ್ಥಾನಿಕ ಸ್ಥಳಗಳಿಂದ ಬೆಂಗಳೂರು ನಗರದ ಕಬ್ಬಾರ್ಡ್‌ನಲ್ಲಿ ಏರ್ಪಡಿಸಿದ್ದ ಶಿಬಿರಗಳಲ್ಲಿ ಬಂದಿದ್ದರು ಸ್ಕೌಟ್ ಗಳು ಇವರ ಕೆಲಸಕ್ಕೆ ಎಂದು ಮಾಡಿರುವ ಕಬ್ಬಾರ್ಡ್‌ನಲ್ಲಿ ಏರ್ಪಡಿಸಿದ್ದ ಶಿಬಿರಗಳಲ್ಲಿ ಸುಮಾರು ೩೦೦ ಬಿಂಗಳು ಅಲ್ಲಿ ರಚಿಸಲ್ಪಟ್ಟಿದ್ದವಲ್ಲದೆ ಬೆಂಗಳೂರಿನ ಸ್ಕೌಟ್ ಗಳು ಮತ್ತು ಕಬ್ಬುಗಳೂ ಸುಮಾರು ೨೦೦ ಜನ ಸೇರಿ ಒಟ್ಟು ೫೦೦ ಜನ ಸೇರಿದ್ದರು

ಈ ರಾಷ್ಟ್ರೀಯ ಮಹೋತ್ಸವವನ್ನು [illegible] ಭೂಮಿಯ ನಿಯಮನುಸಾರ್ಯವಾಗಿ [illegible] ಯಲ್ಲಿ ದಯಮಾಡಿಸಿ [illegible] ಯಜಮಾನರಾದ ಎಸ್ ಅಬ್ದುಲ್ ಖಾಜಿದ್ ಸಾಹೆಬ್ ಬಿ ಎ ಬಿ ಎಲ್ ರವರು ಸ್ವಾಗತ ಭಾಷಣ [illegible] ಯವರನ್ನು ಸ್ವಾಗತಿಸಿದರು

ಆನಂತರ ಸ್ಕೌಟ್ [illegible] ಸಾಲುಸಾಲಾಗಿ ಮುಂದೆ ನಿಂತು [illegible] ವಂದನೆ ಮಾಡಿದರು

ತರುವಾಯ [illegible] ಪಾಚಿದ್ದರೆಯರು [illegible] ರಿಗೆ ಬ್ಯಾಡ್ಜುಗಳನ್ನು ಕೊಟ್ಟರು ಈ ಸಂಸ್ಥಾನದ ಸ್ಕೌಟ್ [illegible] ಪ್ರಮಾಣಪತ್ರಗಳನ್ನು ಅವರಿಗೆ ಈ ತರಬೇಮೆಯ ವಿಷಯ [illegible] ರವರಿಗೂ ಮತ್ತು ಕೆಲಸಕ್ಕೆ ಸಹಾಯಕರಾಗಿ ಕೆಲಸಮಾಡಿದ ಸ್ಕೌಟ್‌ಮಾಸ್ಟರುಗಳಿಗೂ ಬಹುಮಾನಗಳನ್ನು ಕೊಟ್ಟರು

ಶ್ರೀಮನ್ಮಹಾರಾಜರವರ ಭಾಷಣ

ಆನಂತರ ಶ್ರೀಮನ್ಮಹಾರಾಜರು ಈ [illegible] ಭಾಷಣ ಮಾಡಿದರು —

' ಚೀಫ್ ಕಮಿಷನರ್ ಡ್ಯಾರಿಸ್ ಎಂ ಸಮಸ್ಥರೇ, ರೋವರುಗಳೇ, ಸ್ಕಾಟಿಸ್ಟರ್‌ಗಳೇ ಮತ್ತು ಸ್ಕೌಟರ್‌ಗಳೇ—ಈ ವಿಶೇಷ ಸಂಭ್ರಮದಲ್ಲಿ ನಿಮ್ಮನ್ನೆಲ್ಲಾ ಸ್ವಾಗತಿಸಲು ಅವಕಾಶವುಂಟಾಗಿರುವುದು ನಿಜವಾಗಿಯೂ ಸಂತೋಷದ ವಿಷಯ ಎಂದು ಒಬ್ಬ ಜಾಣ ಮಹಾಪುರುಷರು ಹೇಳಿದ್ದಾರೆ. ಅಂದರೆ, ಯೌವನದ ಮತ್ತು ಮನೋಭಾವಗಳನ್ನು ಹಿಡಿಯಬೇಕೆ, ವಯಸ್ಸು ಅವ್ಯ ಅಳವಾಗಿದ್ದರೂ ಮನಸ್ಸಿನಲ್ಲಿ ಬಲವಾಗಿ ನಾಟಿ ಎದುರಿಗೂ ತೀಕ್ಷ್ಣಗಾರಿಕೆ ಬೇಕೂರಿ ಪಲ್ಲುವಿರು

ವಿಶೇಷವಾಗಿ ಮನೋಭಾವಗಳನ್ನು ಹಿಡಿದು ವಿಶ್ವಿಸ್ಕೌಟ್ ಆದರ್ಶಗಳಾಲ ಒಟ್ಟು ಮನುಷ್ಯನ ಜೀವಮಾನದಲ್ಲಿ ಬೇಕಾಲ ಬೇಕಾಗಿರುವ ಜನರಿಗಳು ಜನರಿಗಳು ಜೀವಮಾನವಲ್ಲಿರುವ ಅಂಶ ಸಾಲಾಗಿರುತ್ತವೆ, ಆಗ ಮೂಡಿಸಿದ ಮನೋಭಾವಗಳನ್ನು ಎಂದೆಂದಿಗೂ ತೆಗೆಯಲಾಗುವುದಿಲ್ಲ. ಒಡವರು ನಿರಾಶೆ ಪ್ರತಿಕೂಲತೆಯಿಂದ ಕುಗ್ಗಿಹೋಗುವಂಥಹ ಸಂದರ್ಭಗಳು ಜನರಿಗೆ ಜನರಿಗೂ ವರ್ಗದವರ ವರ್ಗದವರಿಗೂ ಬರುತ್ತವೆ. ಆಗ ಅಂಥಹ ಸಂದರ್ಭಗಳಲ್ಲಿ ಈ ಕಾಲದಲ್ಲಿ ನೀವೆಲ್ಲರು ತಪ್ಪದೆ ನಿಂತಾ [illegible] ಕಾಲ ಚಿಚ್ಚಿಗಳು ರಚಿಸಿ ಮಂತ್ರಶಕ್ತಿ ಬಲವನ್ನು [illegible] ಕಾಲ, ದಾಖಲಿಗಳೂ ಹೋರಾಟದ ಆಚರಣೆಗಳನ್ನು ಹಾಡುಗಳೂ ಕಾಳಗಗಳೂ ವಿಜಾ [illegible] ಆತ್ಮಾರ್ಪಣ ಕಾಲ ಎಲ್ಲರಿಗಿಂತಲೂ ಇವನ್ನು [illegible] ಯಾರೆಂದು ದೊಂಬಿ ನುಸಿಳಿಕೆತ್ತಿಯನ್ನು ಅವ್ಯಮ ನಾಶಿಸಿ ಈ ನಿರಂಕುಶ ಸರ್ವಾಧಿಕಾರಿಗಳು. [illegible] ಗಳನ್ನು ನಾಮಾವಶೇಷ ಮಾಡುವುದರ ಬದಲು ಇವರು [illegible] ಪ್ರಯತ್ನಿಸಿದ್ದಾರೆ. ಪ್ರತಿಯೊಂದು ಬಗೆಯ ಮಿಥ್ಯೆ, [illegible] ಪ್ರಪಂಚದ ಪ್ರಜಾಪ್ರಭುತ್ವ ಹುಟ್ಟು ಕೊಡುಗೆಯಂದ, [illegible] ಪ್ರಜೆಗಳಿಗೆ ಸಾಧಿಸಿಕೊಟ್ಟ ಮತ್ತು ಇಂದಿ ನಿಡಿಸಿರುವ ಪ್ರಜಾಪ್ರಭುತ್ವದ ಮೇಲೂ, ರಾಜಕೀಯದ ಪ್ರತಿ [illegible] ಇಂದು ಪ್ರಪಂಚದ ಮೇಲೂ ದ್ವೇಷ ಹುಟ್ಟಿಸಿ [illegible] ಯಗಳನ್ನು ಕೆರಳಿಸುವದು. [illegible] ಸಾಧಿಸಲಾದ ತತ್ವ ಆಧಿಪತ್ಯಗಳನ್ನು ನೆಡುವ [illegible] ಎಂಬ ವರ್ಷದಿಂದ ಹಿಡಿದು ಸ್ಕೌಟ್‌ವಲ್ಲಿ ಸೇರಿದ ಪ್ರತಿ [illegible] 'ಸ್ಕೌಟರ್‌ಗಳಿಗೆ ಸಾಧಿಸಿ ಯುವಕರಲ್ಲಿಲ್ಲಾ ಸಂಗ್ರಹಿಸಿ ಸಾಧಿಸಿ [illegible] ಸುಳ್ಳು ಚರಿತ್ರೆಯ, ಸುಳ್ಳು ವಿಚಿತ್ರ ಸುಳ್ಳು [illegible] ತಮ್ಮ ಜೋಳಿಗೆಯನ್ನು ಬಲಪಡಿಸಿ ತುಂಬು [illegible] ಸೇವೆ' ಮುಂತಾದ ಸೇವಾ ಶಿಬಿರಗಳಿಗೆ ತಯಾರು ಮಾಡುವುದಕ್ಕಾಗಿ ರಾಷ್ಟ್ರೀಯ ಕ್ಯಾರ್ಯವನ್ನು ಕಲಿಸುವ ಪ್ರೌಢ ನಿಮ್ಮಾಸ್ಟ್ರುಗಳ ಶೀಲ ಮಟ್ಟಿಲಿಗೆ ಅವರನ್ನು ಒಯ್ಯುತ್ತಾರೆ. ಇಂತಹ ಮೆಲ್ಲನೆ ಚಿನ್ನಾಗಿ ಬಲ್ಲವನೆಬ್ಬಿಸಲು 'ಟಿಪ್ಪರನು ಈ ಪ್ರಮಖ್ಯಾಂಶಗಳು ಯಜ್ಞವನ್ನು ತಿನ್ನು ಸಂಘಟನೆಗಳಲ್ಲಿ ಪಳಗಿರುವ ಜನುಸರಿಗೆ ಹತ್ತಿಸಿ ನಿಷ್ಕರುಣೆಗೂ ಇವನ್ನೆಲ್ಲ ಪ್ರೌಢಿಗಳಾಗಿ ತ್ಸೆತ್ತರೆ ಲೋಕಕುಟಿರವೂ ಅವರ ಒಂದು ತಲೆಮಾರಿ ಯನ್ನು ನಿರುತ್ಸಾಹಿಸಿರುವುದೇ ಅವನ ಅಹಂಕಾರ ' ಎಂದು ಹೇಳಿ ಎಲ್ಲದರಲ್ಲೂ ಆಶ್ಚರ್ಯವೇನಿದೆ ?

' ಇಂತಹ ಕಾರ್ಯಕ್ರಮಕ್ಕೆ ಪ್ರತಿಯಾಗಿ ಸ್ಕೌಟಿಂಗ್ ಏನು ಕೊಡಬಲ್ಲುದು ? ದೊಂದಿಯೊಡನೆ ಮುನ್ನುಗ್ಗಿ ನಿಮ್ಮ ಯೋಚನೆಯನ್ನು ಇನ್ನೊಬ್ಬನು ಮಾಡುವುದಲ್ಲದೆ, ಇನ್ನೇನಿನ್ನೂ ನೀವು ಮಾಡಬೇಕೆಂಬುದಕ್ಕಿಂತಲೂ ಸುಲಭ ಮಾರ್ಗವನ್ನು ಅದು ಕೆಲವು ವ್ಯಕ್ತಿಗಳಿಗೆ ಹೇಳಿಸಿ ನಾವು ಹೇಳಿದಂತೆಯೂ ನಿಮ್ಮನ್ನೇ ಅಭಿವೃದ್ಧಿಪಡಿಸಲು ನಮ್ಮ ಚೀಫ್ ಸ್ಕೌಟರು 1907 ರಲ್ಲಿ ಹೊಂದಿ ಈ ಚಳವಳಿಯನ್ನು ಸ್ಥಾಪಿಸಿದಾಗ ಅವರ ಉದ್ದೇಶವನ್ನು ' ಸತ್ಪ್ರಜೆಗಳನ್ನು ಸೃಷ್ಟಿಮಾಡುವುದು ' ಎಂಬುದಾಗಿ ಪರಿಮಿತಿಯಿಂದ ಅಂದಿಗೆ ಹೇಗೆ ಬರಿದಿದ್ದರೋ—ಶಾಸ್ತ್ರಾಧಾರವೆ, ಅಥವ ಸಂಯಮವು, ವಿಶಾಲ ಹಾಸವು ಭೂಮಿ ಮಾನವೃಷ್ಟಿಯು, ಮತ್ತು ಕರ್ತವ್ಯ ನಿಷ್ಠೆ, ಈ ಗುಣಗಳನ್ನು ಪಾಟಿಸಬೇಕು ತನ್ನ ಸ್ಥಿತಿ ಏನೇ ಇರಲಿ, ಕಿಸ್ತಪ್ರಕ್ಕೇ ಸಂಬಂಧಪಟ್ಟ

ಳಿಲಮೆಹಿಂದಾನು. ಆ ಆಲದಲ್ಲಿ ಮುನಿಗಳು ರಾಮ.ಜ.ಪ್ರಸಾದ್ತುತಿಂದನ್ನು ಮಾಡಿದನು. ಆಗ ಶ್ರೀರಾಮನು ತಾವಸ್ಪತ್ಯಾಚಿಕ್ಕೆ ಅಣಿಯಾದ ರೀತಿಯಲ್ಲಿ ಸಜ್ಜಾರಸನ್ನು ಮಾಡಿ, ಜೀತಮದೇನಿ ಬಳಿ " ಎಲ್ಲೆ ಮುಹಿಕ್ಕಿಸಿರೆ ! ನಾನು ಫುಲಕ್ಕೆ ಕೆಲಸಲ್ಪರ ಪನ್ನು ಮಾಡಿಮುದರಿಂದ ನೆಸರ ಬ್ರಹ್ಮಹತ್ಯಾ ದೋಷವು ಪ್ರಾಪ್ತ ವಾಗುವುದು. ಆ ದೋಷದಿಂದ ನಿಮ್ಮುಕ್ತಿಗಾಗಿಯು ಯಾವ ಉಪಾಯ ಯಿದ್ದರೂ ತಿಳುಸಿಸಬೇಕು " ಎಂದು ಪ್ರಾರ್ಥಿಸಿದನು.

ಮಾತೃಹತ್ಯೆಪ್ಪಿದ್ದಲ್ಲಾ ಪಾಪಕಂಡಿಂದ ಎಲ್ಲೆ ರಾಮಚಂದ್ರನೆ ! "ಬ್ರಹ್ಮಹತ್ಯಾದೋಷವಾರಿಗೆ ಒಂಬೆ ಒಂದು ಉಪಾಯವಿದು ಪುದು, ಅದಕ್ಕೆ ನಿನ್ನ ಬ್ರಹ್ಮಹತ್ಯಾ ಪಾಪವನ್ನು ಪೋಪಡೇಕು. ಆದ ರಿಂದ ಬ್ರಹ್ಮಹತ್ಯಾದೋಷವನ್ನು ಪೋಕಿಸುವುದು. " ಎಂದು ಹೇಳ ದರು.

ಆಗ ರಾಮಚಂದ್ರನು ಅಂಜನೇಯನನ್ನು ಕರೆದು ನೀನು ಕೈಲಾಸಕ್ಕೆ ಹೋಗಿ ಶಿವಲಿಂಗವನ್ನು ತರಲೇಕೆಂದು ಅಪ್ಪಣೆಯಾಗಿ ಪನು. ಕೂಡಲೇ ಹನುಮಂತನು ಕೈಲಾಸಕ್ಕೆ ಹೋದನೆ. ಅಲ್ಲಿ ಶಿವನ ದರ್ಶನವೇ ಆಗಲಿಲ್ಲ. ಆದುದರಿಂದ ಶಿವನನ್ನು ಕುರಿತು ಘೋರತಪವನ್ನು ಮಾಡಲು ಆರಂಭಿಸಿದನು. ಆಗ್ಗೆ ತುಳ ಸಿಯ ಪ್ರತ್ಯಕ್ಷವಾಗಿ ಲಿಂಗವನ್ನು ಅನುಗ್ರಹಿಸಿದನು ಹನುಮಂತನು ಆ ಲಿಂಗವನ್ನು ತೆಗೆದುಕೊಂಡು ಶ್ರೀರಾಮಚಂದ್ರನ ಬಳಿಗೆ ಬರುತ್ತಿ ದ್ದನು. ಆದರೆ ಅಷ್ಟರಲ್ಲಿ ಕೈಲಾಸ ಪರ್ವತ ೧೦ ದಕ್ಷಿಣ ಭಾಗವನ್ನು ಬಿಳುಕ ಮುಹೂರ್ತದಿಂದ ಕೊಡಿದ್ದರಿಂದ ೪ ದಿನ ಶ್ರೀರಾಮ ಚಂದ್ರನು ಮರೆಗೆಂದಿಗೆ ಸ್ಥಾಪಿಸಿಡಿದ್ದಿದ್ದನು ಹನುಮಂತ ನಿಗೆ ಈ ವರ್ತಮಾನವು ತಿಳಿದು ಆತನ ಮಷ್ಟಿಗೆ ಅತ್ಯಂತ ವ್ಯಸನ ವಾಗಿ ತನ್ನ ಪ್ರಭುವಾದ ಶ್ರೀರಾಮಚಂದ್ರನ ಚರಣದಿಂದ ಗಳ ಮೇಲೆ ದಿಷ್ಟಿಸು ಅಗ್ಗೆ ರಾಮಚಂದ್ರನು ಎಲ್ಲೆ ಹನುಮಂ ತನೇ ನೀನು ಬರುವುದಲ್ಲೆ ಮೊದಲೇ ಲಿಂಗವನ್ನು ಸ್ಥಾಪಿಸಲು ಹುಮುಹೂರ್ತಕ್ಕೆಯ್ತುಮಾನುವುದೇಲ ಇರುವೇ ಹೊರತು ವೇರಾವುದೂ ಇಲ್ಲವು. ನಿಸ್ಸಾತ್ಸತ್ಸಿನಿಗೊಸ್ಕರ ನಾನೊಂದು ವಿಷಯವನ್ನು ಹೇಳುತ್ತೇನೆ ಕೇಳು ನಾನು ಈಗ ಸ್ಥಾಪಿಸಿರುವ ಲಿಂಗವನ್ನು ಕಿತ್ತುಹಾಕಲೇಕು ಬಳಿಕ ನೀನು ತಂದಿರುವ ಲಿಂಗ ವನ್ನು ಪ್ರತಿಷ್ಠೆ ಮಾಡುವೆನು " ಎಂದು ಹೇಳಿದನು ಆ ಮಾತುಗಳ ನ್ನು ಕೇಳಿ ಹನುಮಂತನು ತಂತೋಷಭರಿತ ಎಮ್ಮು ಶ್ರೀರಾಮಚಂದ್ರನು ಸ್ಥಾಪಿಸಿದ ಲಿಂಗವನ್ನು ಕಿತ್ತುಹಾಕಲು ಸಿದ್ಧ ನಾದನು ಆದರೆ ಆ ಇವ್ಯೆಲ್ಲ ಸಿಲಲ್ಲಾನಿ ಇವ್ಯನಾನುವುದಲ್ಲಿಂಬಂಕವನ್ನು ಸ್ವಷ್ಟಪಡಿ ಯಾತಿ ಹನುಮನು ತನ್ನ ಸಾಮರ್ಥ್ಯವನ್ನೆಲ್ಲಾ ಬರ್ಚುಮಾಡಿದರೂ ಅವನಯೋಗವಾಗಲಿಲ್ಲ. ಆಳ್ಳೆ ಆಯಿಗೆ ತನ್ನ ದೀರ್ಘಲಾಜಲದಿಂದ ಲಿಂಗ ವನ್ನು ಸುತ್ತಿ ಬಲಪತಂತಿಂದೆಕ್ಕಲು ಪ್ರಯತ್ನಿಸಿದನು ಆದರೂ ಲಿಂಗವು ಅಣುಮಾತ್ರವೂ ಕದಲಲಿಲ್ಲ. ಆಳ್ಳೆ ಆಯಿಗೆ ತನ್ನ ದೀರ್ಘಲಾಜಲದಿಂದ ಲಿಂಗ ವನ್ನು ಕಿತ್ತಿ ಹಾಕುವುದು ಸಾಧ್ಯವಿಲ್ಲವೆಂದು ಹನುಮಂತನ ಶಕ್ತಿಗೆ ಭೂಮಿಯೇ ನಡುಗಿತು ಲಿಂಗವು ಚಲನವಾಗುವುದಕ್ಕೆ ಒದರಾಗಿ ಹನುಮಂತನೇ ಒಂದು ಸಲವಾರಿ ದೊಡದಲ್ಲಿ ಹೊಸಿಗಿ ಮರ್ಧಿಸಲಾಗಿ ಬಿದ್ದನು ಆತನ ಬಾಯಿಯೂಳಿಂದ ರಕ್ತಪ್ರವಾ ಹವು ಹರಿಯಿತು. ಆಗ್ಗೆ ಶ್ರೀರಾಮಚಂದ್ರನೇ ಮೊದಲಾದವರು ವ್ಯಸನವ್ಯಥಪಡಿದರು. ಸ್ವಲ್ಪ ಹೊತ್ತಿನಲ್ಲಿಯೇ ಹನುಮಂತನಿಗೆ ಜ್ಞಾನವು ಬಂದು ಎಮದುಕ್ಕಲ್ಲಿ ಸಂತಿಯವ ರಾಮಚಂದ್ರನನ್ನು ನೋಡಿ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಆಗ್ಗೆ ರಾಮ ಚಂದ್ರನು ಆತನನ್ನು ಕುರಿತು " ನೀನು ಭ್ರಾಂತಿಯಿಂದ ಕೆಲಸ ಮಾಡಿದುದರಿಂದ ಇನ್ನು ಹೊಂದರೆಯನ್ನ ನುಭವಿಸಿದೆ ಸ್ವಾಂದ ಸ್ಫಟಿಕಕ್ಷಲ್ಲಿ ಲಿಂಗವನ್ನು ಪ್ರತಿಷ್ಠಿಸಲ್ಪಟ್ಟ ಲಿಂಗವನ್ನು ಪ್ರತಿಷ್ಠಿಸಲ್ಪಟ್ಟ ಮಹಾಶಕ್ತಿಳಿಲ್ಲಾ ವಿಕ್ಷೇಪಿಸಿದರೂ ಭೇದಿಸಲು ಕಳ್ಳರಿಗಲಾರು ಮತ್ತಾದೇವಾಜ ರಾಧಿಂದ ಬಗೆಗಳವು ಪ್ರಾಪ್ತವಾಯಿತು. ಇನ್ನು ಮುಂಡೆ ಯಾವಾಗಲೂ ಇಂತಹ ಚೇಷ್ಟೆಗಳನ್ನು ಮಾಡಬೇಡ " ಎಂದು ಆಜ್ಞಾ ಪಿಸಿದನು.

ಬಳಿಕ ಶ್ರೀ ರಾಮಚಂದ್ರನು ಹನುಮಂತನಿಂದ ತರಲ್ಪಟ್ಟ ಲಿಂಗವನ್ನು ಸಮಿಚಾದಿಧಾರ್ಮಿಕ ಪ್ರಕಾರ್ಕ್ಕ ಪ್ರತಿಷ್ಠೆ ಮಾಡಿಸಿ, ಅದಕ್ಕೆ " ಸಮುದ್ರೇಶ್ವರ " ಎಂಬ ಹೆಸರಿಟ್ಟನು.

ಶ್ರೀ ರಾಮೇಶ್ವರ ದೇವಾಲಯದ ಉದ್ದ ಸುಮಾರು ಒಂಬು ಸಾವಿರ ಅಡಿ, ಅಗಲ ಅಷ್ಟುಸಾಕ ವಿಪಲ್ಲು ಅಡಿ, ಎತ್ತರ ನೂರ ಇಪ್ಪತ್ತೈದು ಅಡಿ ಇರುತ್ತದೆ ಇಲ್ಲಿರುವ ನಂದೀಶ್ವರ ವಿಗ್ರಹವು ಬಹಳ ದೊಡ್ಡದು.

ದೇವಾಲಯದ ಒಳಕಾಗಲ್ಲಿ ಇಪ್ಪತ್ತೈನಾಲ್ಕು ಕೊಳಗಳಿರು ತ್ತವೆ ಇವುಗಳಲ್ಲಿ ತೀರ್ಥಗಳಿಂದು ಹೆಸರು ಇವುಗಳ ನೀರು ನಲ್ಲಿ ಸ್ನಾನಮಾಡುವುದು ಫಲಪ್ರಪ್ರದವಾಗಿರುತ್ತದೆ ಈ ಭಾಗಿಗ ಲಿರುವ ಪ್ರತಿಯು ಹಿಹಿಮಾಗಿರುತ್ತದೆ ದೇವಾಲಯದ ಹೊರಭಾಗ ವಲ್ಲಿರುವ ಭಾವಿಗಳ ನೀರು ಉಪ್ಪಾಗಿರುವುದು ಈ ತೀರ್ಥ ಗಳನ್ನು ರಾಮಚಂದ್ರನು ತನ್ನ ಆಯೋಧ್ಯಾವಾದ ಬಾಣಗಳ ನ್ನೂಲಕ ಪಿಸಿಗಿರುವನು ಆವೆಗಳಲ್ಲಿ ಗಂಗಾ ಮೊದಲಾದ ವೇದ ವೇಗಿ ತೀರ್ಥಗಳ ನೀರನ್ನು ತಂದು ಸಿಲ್ಲಿಸಿದ್ದಾನೆ

ಆವೆಗಳಲ್ಲಿ ರಾಮತೀರ್ಥ, ಅಮೃತಾವಿಳಿ, ಹನುಮತೀರ್ಥಂದು, ಬ್ರಹ್ಮಹತ್ಯಾತೀರ್ಥ, ವಿಘ್ನೇಶ್ವರತೀರ್ಥ, ಮಾರ್ಕಂಡೇಯ, ಶೇಷ ತೀರ್ಥ, ನಂದೀಶ್ವರ, ಆಷ್ಟಲಕ್ಷ್ಮಿಯರುಟಿವೆ ಎಂಬವು ಪ್ರಸಿ ದ್ಧವಾಗಿವೆ

ರಾಮೇಶ್ವರಕ್ಕೆ ೧೫-ಮೈಲಿ ದೂರದಲ್ಲಿ ಧನುಷ್ಕೋಟಿ ಯೆಂಬ ಸ್ಥಳವಿರುವುದು. ಅಲ್ಲಿ ಹಿಂದೂ ಮಹಾಸಾಗರವೂ, ಬಂಗಾಳ ಉಪಸಾಗರವೂ ಸೇರಿಕೊಂಡಿವೆ ಅಲ್ಲಿ ಇನ್ನೂ ಪ್ರಾಚ್ಯಾ ವಿದಗಳನ್ನು ನೆನ್ನೆನೆಲಿಸುವಂಲು, ಧನುಷ್ಕೋಟಿಯಿಂದಲೇ ರೈಲುಮಾ ರ್ಗವಿರುವುದು ಈ ಸ್ಥಳದಲ್ಲಿ ಶ್ರೀರಾಮನು ಸಮುದ್ರದ ಮೇಲೆ ಶಿಷ್ಟಾಗಿ ಕಟ್ಟಲಂಭಿಸಿದನು ಧನುಷ್ಕೋಟಿಯಿಂದ ೨೪ ಮೈಲು ದೂರದಲ್ಲಿ ಲಂಕಾ ದ್ವೀಪವಿದೆ. ಅಲ್ಲಿ ರಾವಣನು ಸೀತಾಪಹರಣವನ್ನು ಮಾಡಿದನು ಆಗ ಶ್ರೀರಾಮನು ಸೀತಾನ್ವೇಷಣೆಯ ಮೇಲೆ ಲಂಕೆಗೆ ಹೋಗಲು ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದನು ಆ ಸೇತುವೆಯ ಅವಶೇಷಗಳು ಈಗಲೂ ಕಾಣಬರುತ್ತವೆ. ಶ್ರೀರಾಮನು ಸೇತು ವೆಯು ಈಗಲೂ ಸ್ಥಲ ಭಗ್ನವಾಗಿರುತ್ತದೆ ಅದನ್ನು ಆಧುನಿಕರಾಗಿಬ್ಬಿರೊಂದಿಗೆ ಅಂಗ್ಲೇಯರು ರೈಲುಮಾರ್ಗವನ್ನು ನಿರ್ಮಿಸಿದ್ದಾರೆ ಹೌದಾ ಇಂದಿರ್ಕೈಲ್ಲಿ ಪ್ರಾಣ ತರುಚಿನ ಬಳ್ಳಿಯ ಮೂಲಕ ರಾಮೇಶ್ವರಕ್ಕೆ ಹೋಗಬೇಕು ಈ ಪ್ರದೇ ಶವು ಪಾಲಿ ಬೆಲ್ಲದಿಲ್ಲಿದ್ದು ರಾಮಾಯಣಕಾಲದ ಅಧಿಷ್ಠಿಸಲ್ಪಟ್ಟಿ ರುತ್ತದೆ.

ಶ್ರೀ ಪಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಅನುಜ್ಞಾನ ಸಮಾಪ್ತಿ, ಮಿರಗಿ

ವಿಜಾಪುರ ಡಿಸ್ಟ್ರಿಕ್ಟ ಇಂಡಿತಾಲೂಕು ಮೈಕಿ ಮಿರಗಿ ಗ್ರಾಮದಲ್ಲಿ ಸಂಗಮೇಶ್ವರ ದೇವಾಲಯದಲ್ಲಿ ಆಚಾರ್ಯಾಗಿ ಸಿರೇಷವಿದ ವೇದ ಸಂಗಮೇಶ್ವರಯ್ಯನವರು ಆಲುಮೇಲಗ್ರಾಮದಲ್ಲಿ ವೀರ ಶೈವ ಬಣಜುದ್ಯೋಗಿಗಳೊಕ್ಕೂರ ಒಂದು ಮೋಡಿಂಗನ್ನು ಕಟ್ಟಿಸಲೇಕೆಂದು ಸಚಿ.ನೈಕಡಿಂದ ೩೭ ದಿವಸಗಳವರೆಗೆ ಶ್ರೀರಾ ಜಾರ್ಯರಾಗಿ ಪೌರವ್ಯಸಹಿಂದ ಅಜ್ಞೆ ಅನುಜ್ಞಾನ್ಕೆ, ಕ.ಆ ದ್ದರು ಅನುಜ್ಞಾನವು ತಾ॥ 22-12 40 ನೇ ರವಿವಾರ ಅಕ್ಕಂತ ವೈಭವದಿಂದ ನೆರವೇರಿತು ಇದರ ಸಮಾಪ್ತಿಗೆ ಶ್ರೀ ಪ॥ ಪ್ರ॥ ಗುರುಶಾಂತ ಶಿವಾಚಾರ್ಯರು ಜೇವಲಗಿ ಶ್ರೀ ಪ॥ ಪ್ರ॥ ಗುರು ಸ್ವಾಮಿಗಳು ಜೈಪಾಪುರ ವೀ॥ ವೀರಯ್ಯಸ್ವಾ ಕ್ಷೇತ್ರನಕೇರಿಮಠ ಸೊಕೆಕೋಡ, ಜೇವರಿ ಭೂಪಾಸುಳಿಪೆವರು ಇವರೇ ಮೊದ ಲಾದವರು ಆಗಮಿಸಿದ್ದರು. ರವಿವಾರ ಬೆಳಿಗ್ಗೆ ಆರ್ಚಾರಾಧನ ಹೀಗೆ ಮಹಿ ಪಟ್ಟಿದ ಸ್ವಾಮಿಗಳ ಪಾದಪೂಜೆಯನ್ನು ವೀ॥ ಸಂಗಮೇಶ್ವರಯ್ಯನವರು ಲಿಂಗಪ್ಪಾಲೀಲ, ಕರಿಷ್ಟಪ್ಪಾತಾ, ಇವರೇ ಮೊದಲಾದವರು ಆಕ್ಕಂತ ವೈಭವದಿಂದ ನೆರವೇರಿಸಿದರು ಅಮೇಲೆ ವೀ॥ ವೀರಯ್ಯಸ್ವಾ ಕ್ಷೇತ್ರನಕೇರಿಮಠ ಸೊಕೆಕೋಡ ಇವರು ಮಲಯಾರಾಜನ ಕ್ಷೇತ್ರನವನ್ನು ಬಹಳ ಅತ್ಯಮವಾಗಿ ಹೇಳಿ ದರು ಅನಂತರ ಶ್ರೀ ಪ॥ ಪ್ರ॥ ಜೇವರಿಗಿ ಗುರುಪಾದ ಶಿವಾ ಚಾರ್ಯರು " ಅನುಜ್ಞಾನ " ವಿಷಯದಲ್ಲಿ ಭಾಷಣಮಾಡುತ್ತ ವೇಳೆ ಸಂಗಮೇಶ್ವರಯ್ಯನವರು ಅಂಗ್ಲಭಾಷೆಯನ್ನು ಅಭ್ಯಾಸ ಮಾಡಿದರೂ ಸಹ ತಮ್ಮ ಆಚಾರವನ್ನು ಕಾಪಾಡಿಕೊಂಡು, ಪೂಜೆ ಯಲ್ಲಿ ಅತ್ಯಂತ ಆಸಕ್ತಿಯುಳ್ಳವರಾಗಿಯೂ, ವೀರಶೈವ ಸಮಾ ಜದ ಬಗ್ಗೆ ಅತ್ಯಂತ ಕಳಕಳಿಯುಳ್ಳವರಾಗಿಯೂ, ಸದಾ ಸತ್ಕಾ ರ್ಯಪ್ರವರ್ತಕರಾಗಿಯೂ ಇರುವುದರಿಂದ ಇವರಿಗೆ ಜಗದ್ಗುರು ಯಿಂದ ಸನ್ಮಾನ್ಯರೆಂಬ ಬಿರುದನ್ನು ಕೊಡಿಸಲು ಹಿರಿಯರು, ಪಂಚಾಚಾರ್ಯ ಶ್ರೀ ಪ॥ ಪ್ರ॥ ಗುರುಸ್ವಾಮಿ ಜೈಪಾಪುರ ಇವರು " ವೀರಶೈವ ಮಹಿ ಪ್ರಾಕೃತ್ಯವನ್ನು " ಕುರಿತು ೧ ಘಂಟೆಯವರೆಗೆ ಅವೇಶ ಪೂರ್ಣವಾದ ಭಾಷಣವನ್ನು ಮಾಡಿದರು ಅನುಜ್ಞಾನಸಮಾಪ್ತಿ ಕಾರ್ಯಕ್ಕಾಗಿ ಉಡಿಪಿಚ್ಚಾಕ್ಷ, ಆಚಾರಾಗಿ, ಸಿಂಧೂರಿ, ಅಕ್ಷ ತೆಯೂ, ರುದ್ರಾಕ್ಷಿ, ಮುತ್ತಿನ, ಜೇವರಿ, ಮಿರಗಿ ಮುಂಜಾವ ಗ್ರಾಮಗಳಿಂದ ಅನೇಕ ಜನರು ಬಂದಿದ್ದರು ಅದೇ ದೇವಾ ಲಯದಲ್ಲಿ ಅನುಜ್ಞಾನ ಸಮಾಪ್ತಿಯ ದಿವಸವೇ ಬಳಸಲೆಂಗಚ್ಚ ಪರಿಷತ್ತಾ, ಇವರ ಚರಂಡೀದಿಗೆ ಗಿರಿಮಲ್ಲಿಕಾರ್ಜುನ ಪುಣ್ಯಾಶ್ರಮ ಶ್ರೀಮಾಲಲಿಯನ್ನು ಕೊಟ್ಟು ಲಗ್ನವನ್ನು ಮಾಡಿದರು. ಆ ಸಮಯದಲ್ಲಿ ಜೇವರಿಗಿ ಶ್ರೀಗಳ ಅಪ್ಪಣೆಯ ಮೇರೆಗೆ ಪ್ರಭಾ ಪೋಷಣಕ್ಕೋಸ್ಕರ ೧ ರುಪಾಯಿಯ ವಭೂವರಿಂದ ಸಮರ್ಪಣ ಲ್ಪಟ್ಟಿತು.

ಶಾಂಕವ್ಯ ಉಡಿಚ್ಚಾಣ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಅನುಜ್ಞಾಸಪ್ತಾರಂಭ, ಸೊಲ್ಲಾಪುರ.

ಇಲ್ಲಿಯ ಮಷ್ಟಕ್ಷತ್ರಿಯ ಧನಸಮುದಲಿಯವರು ತಾವು ಕಟ್ಟಿಸುತ್ತಿರುವ ಮನ್ಮಷ್ಟತ್ರಿಯರು ಮಂದಿರದಲ್ಲಿ ಲಿಂಗ ಸ್ಥಾಪನೆಯನ್ನು ಮಾಡಬೇಕೆಂತಲೂ, ಲಿಂಗಸ್ಥಾಪನೆಗಿಂತ ಪೂರ್ವ ದಲ್ಲಿ ಒಂದು ಕೋಟಿ ಪಂಚಾಕ್ಷರೀ ಮಹಾ ಮಂತ್ರಜಪವನ್ನು ಯಾರಾದರೊಬ್ಬ ಮಹನೀಯರಿಂದ ಅಠಂಥಾಪಿಸಬೇಕೆಂತಲು ಯೋಚಿಸಿ ದಾವರವನ್ನು ಹೊತ್ತುಗಿ ಬ್ಯಹ್ಮಶ್ರೀ ಪ್ರಾಣಲಿಂಗ ಶಿವಾಚಾರ್ಯ ಪ್ರ॥ ಪ॥ ಚನ್ನವೀರ ಶಿವಾಚಾರ್ಯಸ್ವಾಮಿಗಳಕರದಲ್ಲಿ ವಿಜ್ಞಾಪಿಸಿ ಕೊಳ್ಳಲು ಬಾಲಕಪ್ಪಿಗಳು ಅವಶ್ಯವೆಮಾದ ತಕ್ಕರಾಯಿ ನೆಯ ದೀರ್ಘಕಾಲವು ತಮ್ಮ ಪಾಲಿಗೆ ಬರುವುದೆಂದು ತಿಳಿದು ಆಜ್ಞಾನಂದದಿಂದ ಅವರ ವಿಜ್ಞಾಪನೆಯನ್ನು ಅಂಗೀಕರಿಸಿ ತಾ॥ 15 12 40 ನೇ ದಿನದಿಂದ ಅವ್ಯ ಶ್ರೀರಾಜಾಧಾನಿಗಳಾಗಿ ಅನುಜ್ಞಾನ ವನ್ನು ಪ್ರಾರಂಭಿಸಿರುವರು. ಒಂದು ಕೋಟಿ ಜಪ ಮುಗಿಯಲು ಒಂಬು ವರ್ಷಗಾಲವಾದರೂ ಹಿಡಿಯಬಹುದೆಂದು ತೋರುತ್ತಿದೆ. ಶ್ರೀಗಳು ಪ್ರತಿ ದಿನವೂ ಸಿಕ್ಕಿದಲ್ಲಿ ತಮ್ಮ ಪ್ರತಿದಿನದ ಜಪವನ್ನು ಪೂರ್ತಿಸಿಕೊಂಡು ಮುಂದು ಸಾಗಿದ ಪಂಚಾಕ್ಷರೀ ಜಪವನ್ನು ಪೂರ್ತಿಸುವುದು. ಶ್ರೀಗಳ ಅನುಜ್ಞಾನದ ಪಾರ್ಯವನ್ನು ಕೇಳಿ ಪರಕ್ಕಳ ಶ್ರೀಧರುಷ ರಣೀಳಿಂದ ಶ್ರೀಗಳ ಕರ್ಕಮಾರ್ಚನೆಯನ್ನು ಪಡೆಯಲು ಬರು ತ್ತಿರುವರು. ಈ ಅನುಜ್ಞಾನದಲ್ಲಿ ಮುತ್ತೈದ ಮೈಲಾಪುರ, ಮಾದಪ್ಪ ಮುದ್ದಾಪ್ಪ, ಚನ್ನವೀರಪ್ಪ ಗೊಟಿ, ಮಲ್ಲಪ್ಪ ಕೋಡಾಪುರ, ಶಂಕರಪ್ಪ ಗೋಟೂರಿ, ಗುರುಲಿಂಗಪ್ಪ ಕೋರಿ ಈ ಮುಖಂಡರುಗಳು ತಮ್ಮ ಸೇವೆಯನ್ನು ಅತ್ಯಂತ ಭಕ್ತಿಯಿಂದ ಸಲ್ಲಿಸುತ್ತಿರುವರು. ಈ ಮಹಾತಿಯ ಕಾರ್ಯವನ್ನು ನಿರ್ವಿಘ್ನವಾಗಿ ಪೂರೈಸಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ವಿಜಯಾಕ್ಷರಿಮಠ ರಾಮಯ್ಯಗಿರಿ
ಪಾರಿವ ಸಂಸ್ಕೃತ ಪಾಠಶಾಲಾ

ಶ್ರೀ ಜೊಳಲಿಂಗೇಶ್ವರಸ್ವಾಮಿಯ ರಥೋತ್ಸವಾಜ್ಞಾಪನಪತ್ರಿಕಾ

ಬಂಕಾಪುರ

ತಿವಸೊಗ್ಗ ಡಿಸ್ಟ್ರಿಕ್ಟ ಸೊರಬ ತಾ॥ ಅತಿಮೊಳಲ ಬಂಕಾಪುರ ಗ್ರಾಮದ ಸಮೀಪದಲ್ಲಿ ಬರುವ ಮತ್ತು ದೂರದ ಸೀಮೆಗಳಲ್ಲಿ ಸಂಗಮ ವಿರುವ ಶ್ರೀ ಜೊಳಲಿಂಗೇಶ್ವರ ಸ್ವಾಮಿಯ ಸ್ವಾಸಿಪ್ಪ ಪ್ರಾಣಲಿಂಗ ಪೆಸಿಕೊಂಡಿರುವ ಅತೀಶ ಪರ್ವಗಳಿಂದ ಮುಳಲ ಸಂಕ್ರಮಣದಲ್ಲಿ ನಡೆಯುವ ರಥೋತ್ಸವವನ್ನು ಈ ಪ್ರದೇಶದ ಪ್ರಮುಖರು ಜಾಸಿ ವಿಜ್ಞಾಪಿಸಿಕೊಂಡ ಪ್ರಕಾರ ಈ ಕಾಲದಲ್ಲಿ ನಡೆ ಯುವಕ್ಕ ಕಾರ್ಯಕ್ರಮಗಳು ಈ ಕೆಳಗೆ ಕಂಡಂತೆ ಇರುತ್ತವೆ

ಕಕ 1862 ನೇ ವಿಕ್ರಮಸಾಮ ಸಂವತ್ಸರದ ಫುಷ್ಯ ಶುಧ್ಧಾ ದಾರಿಯು 13-1 1941 ಸೋಮವಾರ ಉತ್ತರಾಯಣ ಪುಣ್ಯಕಾಲ, ಮಕರಸಂಕ್ರಮಣ, ಸ್ನಾನ, ಕಲಶಕ್ಕಾ ಪಸಿಲಿಂಗಪೂಜಾ ಉತ್ಸವ ಮೂರ್ತಾಜ್ಞಾ ಪನೆ ಮತ್ತು ಅಲಂಕಾರ, ರಥಾರ ಭಣ, ದೀಪೋ ತ್ಸವ

ತಾರೀಖು 14 1-1941 ಮಂಗಳವಾರ ಬೆಳಿಗ್ಗೆ ರಥಾರೋಪಣ ಮಹೋತ್ಸವ, ಪಾಯಂಕಾಲ ಉಚ್ಚಾಯ್ನಗಳು, ಭಜನೆ

ತಾರೀಖು 15 1 1941 ರಿಂದ 18-1-41 ಶ-ವಿ.ಗಳು ಮತ್ತು ಬಹುಮಾನವಿತರಣೆ, ಕೀರ್ತನೆ

ತಾರೀಖು 20-1 1941 ದನಗಳಕ್ಕಾಪರ್ಧೆ, ಬಹುಮಾನ ಹಂಚುವುದು.

ಸಂದರ್ಭಾನುಸಾರ ಆಚಾರ್ಯಕ್ಕಮಗಳು ಬದಲಾಯಿಸಲ್ಪಡ ಬಹುದು ಪ್ರತಿವರ್ಷ ದೆನಗಳ ವ್ಯಾಕಾರ ಚೆನ್ನಾಗಿ ನಡೆಯುತ್ತಾ ಇದೆ. ಜಾತ್ರೆಗೆ ಬರಕಕ್ಕೆ ಅಂಗಡಿಕಾರರು, ನಾಟಕದವರು ತಮ್ಮ ಕ್ಷಿಲ ವನ್ನೆ ಅನುಕೂಲಕ್ಕೆ ಬಗ್ಗೆ ಧರ್ಮದರ್ಶಿಗಳಿಗಾಗಲೀ ಆಚಾರ್ಯರಿಗಾಗಲೀ ಮೊದಲೇ ತಿಳಿಸಿಕಕ್ಕೆಯ್ದು. ಈ ಸಂಗತಿಯು ದೇವಕ್ಷ ಆಪಟ್ಟಿಗೆ 5 ಮೈಲು, ಅಲೂರಿಗೆ 10 ಮೈಲು, ಬನವಾಸಿಗೆ 9 ಮೈಲು ದೂರವಿದ್ದಿದೆ. ಷಷ್ಟಕ್ಷರು ಎಂದಿ ನಂತೆ ಇಂದು ಮಳರಂಕಮ್ಮಹಾಸ್ವಾಮಿಗಳಿಂದ ರಥೋತ್ಸವ ದೇಷದ ದರ್ಶನ ಮಾಡಿ ಫುಷ್ಯಾಗಿಗಳಾಗಬೇಕಾಗಿ ಕೋರುತ್ತೇವೆ.

ಶ್ರೀಗಳ ಎಸ್. ಡಿ. ಪೆಂಳಚಿಹುಪ್ಪಯ್ಯ,
ಬಿ ಎ., ಎಲ್.ಎಲ್ ಬಿ.
ಆಹ್ವಾರ್ಕ.

ಧರ್ಮದರ್ಶಿಗಳು—

1. ಶ್ರೀಗಳ ಫುಟ್ಟಪ್ಪಗೌಡರು, ಅ್ಯಾಸರ್
2. ಗಂಡಿ ಬಸಪ್ಪಗೌಡ್ರ ಕೋರಿಕೊಪ್ಪ
3. ಶ್ರೀಗಳ ಡಿ. ದೇವಪ್ಪ ಬಡಿಯರು.
4. ಶ್ರೀಗಳ ಪೆಂಪಪ್ಪ ವೀರಪ್ಪಗೌಡರು, ಜ್ಞಾನವಳ್ಳಿ.
5. ಶ್ರೀಗಳ ಪುಲ್ಲಕಾರ್ಜುನಪ್ಪಗೌಡರು, ಯಕ್ಕೆಕೊಪ್ಪ
6. ಶ್ರೀಗಳ ಪಿ ವೀರಭದ್ರಿಶಯ್ಯನವರು, ಕೆಬಳಿಹಿಂದು.
7. ಶ್ರೀಗಳ ಗುರುನಾಥ ಳ್ಳಕ್ಷ, ಸಾಡಿಗೇರ ಡಿ! ಮೋಳ ಮೊಲದ

ಕಾರ್ಯದರ್ಶಿಗಳು—

1. ಮಲಿ ರಾ॥ ಜಡವಾಸಿ ಗೊನ್ನಿಸಳ್ಳಿಮಠದ ಚನ್ನವೀರಸ್ವಾಮಿ
2. ಮಲಿ ರಾ॥ ಸಿದ್ಧನಗೌಡ್ರು ಪಟೇಲ್, ಜ್ಞಾನಳ್ಳಿ.
3. ಮಲಿ ರಾ॥ ಫುಂಗಾರಿಗೌಡರು, ಳಚಿಹಿ.
4. ಮಲಿ ರಾ॥ ಶಿವ್ಯನಗೌಡರು, ಶೆಲಗುದ.
5. ಮಲಿ ರಾ॥ ಶ್ರೀನಿವಾಸಾಚಾರ್ ಸಾಡಿಗೇರ ಕೆಳುಪಳ್ಳಿ

ಪಂಚಾಚಾರ್ಯಪ್ರಭಾ.

೧೯೪೧ನೆಯ ಜನವರಿ ತಾ|| ೬ನೇ ಸೋಮವಾರ

ಶ್ರೀಜಗದ್ಗುರುರೇಣುಕಾಚಾರ್ಯರ ಅವತಾರ.

ಶ್ರೀಸರಸೀಶ್ವರನು ಕೈಲಾಸವಲ್ಲಿ ಬ್ರಹ್ಮ ವಿಷ್ಣು ಮೊದಲಾದ ಸಮಸ್ತದೇವತೆಗಳಿಂದಲೂ, ವೀರ ನಂದಿ ಭೃಂಗಿ-ವೃಷಭ ಸ್ಕಂದ ರೇಣುಕ-ದಾರುಕ ಘಂಟಾಕರ್ಣ ಧೇನುಕರ್ಣ ವಿಶ್ವಕ್ಸೇನ ಮೊದಲಾದ ಪ್ರಮಥಗಣಂದಲೂ ಪರಿರೋಭಿತವಾದ ಸಭೆಯಲ್ಲಿ ದಿವ್ಯವಿರನನ್ನಲಂಕರಿಸಿ ಪರಮಾನಂದದಿಂದ ಸಪ್ತಲೋಕಗಳ ವಿಷಯವನ್ನು ವಿಚಾರಿಸುತ್ತಿರುವ ಸಮಯದಲ್ಲಿ, ಪ್ರವಚನಪ್ರಿಯನಾದ ರೇಣುಕಗಣಾಧಿಶ್ವರನನ್ನು ಕರೆದು — ಎಲ್ಲೆ ರೇಣುಕಗಣಾಧೀಶನೇ! ನೀನು ಭೂಲೋಕದಲ್ಲಿ ವೇದಮಾರ್ಗಾನುಸಾರವಾಗಿ ಶಿವಪ್ರತಿಷ್ಠೆಯನ್ನು ಪ್ರತಿಷ್ಠಿಸುವುದಕ್ಕಾಗಿ ಕಲ್ಯುಷ್ಕಾಕಕ್ಷೇತ್ರದಲ್ಲಿ ವಿಂಧಿಸುಕ್ಷೇತ್ರವ ಶ್ರೀಸೋಮೇಶ್ವರಾಖ್ಯಲಿಂಗದಿಂದ ತೇಜೋರೂಪ ಮಹಾಲಿಂಗವಾಗಿ ಲಿಪತರಿಸಿ, ಸಕಲಸಾಮಾನವರಿಗೂ ಪರಮ ಪ್ರತಿಷ್ಠಿಸಿದಂತಹ ವೇದಸಿದ್ಧಾಂತವನ್ನು ಉಪದೇಶಿಸಿ, ಪಶುಕುಲವೇ ಮೊದಲಾದ ತಿರ್ಯಗ್ಜಾತಿಗಳಿಗೂ ಮೋಕ್ಷವನ್ನು ಸಿಗುವಂತೆ ಮಾಡಿ ಪುನಃ ನೀನು ಸ್ವಸ್ಥಾನಕ್ಕೆ ಬರಬೇಕಾಗಿ ಅವಶ್ಯವೆಂದು ಪರಮೇಶ್ವರನು ಅಪ್ಪಣೆಯಾಗಿಸಿದನು ಶ್ರೀರೇಣುಕಗಣಾಧೀಶ್ವರರು ಬೀಳ್ಕೊಳ್ಳಲಾಗಿ ಶಿವಪ್ರೇತಸಿದ್ಧಾಂತವನ್ನು ಸ್ಥಾಪಿಸಲು ಪುಷ್ಕರಕ್ಷೇತ್ರಕ್ಕೆ ಉಪತಪಿಸಿದನು

ಅಥ ತ್ರಿಲೋಚನಯೋ ಕಲಶಾ ಜಾಯಂತೇ ಸ್ಥಲೇ ।
ಸೋಮೇಶ್ವರಮಹಾಲಿಂಗಾತ್ ಪ್ರಾದುರ್ಭೂತ್ ತ್ರಿಲೋಚನಃ ॥೧

ಪ್ರಾದುರ್ಭೂತಾಶ ತಸ್ಮಾಲ್ಲೋಕ್ಯೆ ಶಿವಲಿಂಗಾನ್ಯನೇಕಶಃ ।
ವಿಸ್ತೃತಾಃ ಪ್ರಾಣಿನಃ ಸರ್ವೇ ಬಭೂವುರ್ವಿತತೇಜಸಾ ॥೨

ಭೂಮ್ಯಾದ್ಯುದ್ಭವಿತಸರ್ವಾಂಶಾ ಸಾರವಿಪ್ರಾಕ್ಷಭೂಷಣಾ
ಜಟಾಮಾಲಾಕಟಕಯುಕ್ತಾ ತ್ರಿಪ್ರಶಾಂತ್ಯಂತಮಸ್ತಕಾ ॥೩

ಕಟೀತಟೀಪಟೀಭೂತಕಂಥಾಪಟಲಬಂಧುರಾ ।
ದಧಾನಾ ಯೋಗಪಟ್ಟಂ ಚ ಭೂಷ್ಣಾಧಾರಾ ಕಮಂಡಲುಂ ॥೪

ಶಿವಾಜ್ಞೆ ವೈತಪಜ್ಞಾ ಸಕಲಮಾನವಾನುದ್ಧರಿಸಿ ।
ನಿರ್ಧೂತಸರ್ವಸಂಸ್ಕಾರಾನಸಾನಾಪಿಸಂಜಕಂ ॥೫

ಶಿವಾಗಮಸುಧಾಸಿಂಧುಸಮುತ್ಪೇಸಿಮಾಕರಂ ।
ಚಿತ್ತಾರವಿಂದಸಂಗೂಢಶಿವಪಂಚಾಂಬುಜಾದ್ಭಯಂ ॥೬

ಯನಸಾವಿಯೋಗಚಂತ್ರಜ್ಞಂ ಸ್ವತಂತ್ರಂ ಸರ್ವಕರ್ಮಸು ।
ಶಮಸ್ತ ಸಿದ್ಧ ಸಂತಾತಸಮಾಪಾಯಿಪಿಪಾಮಲಂ ॥೭

ವೀರಶಿವಾಂತರಿಪಾರ್ಷದೈಕ್ಯಭಿಪ್ಪಿನಲಿಂಧನಂ ।
ಆಲೋಕಮಾತ್ರಸಿಧ್ಧಸ್ತ ಸಮಸ್ತ ಪ್ರಾಣಿಕಾತಕಂ ॥೮

ತಮಪ್ಪಶ್ಯನ್ ಜಗಾ ಸರ್ವೇ ನಮಾಂತಃ ಕೋ ಭವನಾಕಿ ।
ಇತಿ ಸೃಷ್ಟೀ ಮಹಾಮೋಘೀ ಜಜ್ಞೆ ವಿಸ್ಮಿತಭವನಸ್ಯ ॥೯

ಪ್ರತ್ಯುವಾಚೆ ಶಿವಾಜ್ಞೆ ತಮಹಾಸಂದೆಲಯಂಗಣಾ ।
ಸಿಪಾನಿಷಾ ಸಾರ್ವಕರ್ಮೀ ರೇಣುಕಾಖ್ಯೋ ಗಣೇಶ್ವರಃ ॥೧೦

ಶಿವಾಜೇಶಾಮಹಾದೇಶಾ ಶಿವಲಿಂಗಾದಿಹಾವತಂ ।
ನಾಮ್ನಾ ರೇಣುಕಸಿದ್ಧೋಽಪಂ ಸಿದ್ಧಸಂತಾಪನಾಯಕಃ ॥
ಸೃಷ್ಟಿಪ್ರಂಚಾರೀ ಲೋಕೇಷ್ವಿಸ್ಮಾ ಶಿವಸಿದ್ಧಾಂತವಾಚಕಃ ॥೧೧

ಇತ್ಯುಕ್ತ್ವಾ ಪಶ್ಯತಾಂ ತೇಷಾಂ ಸಿಷಯಂತ್ಸಿರುಕ್ತ್ವು ಪ್ರಭಾ ।
ಉಕ್ತಾಯಂ ಸ್ಥೋಮಮಾರ್ಗೇಣ ಮಲಯಾದ್ರಿಮಪಾಗಮತ್ ॥

(ಸಿದ್ಧಾಂತಶಿಖಾಮಣಿ, ಪರಿ ೪)

ಶ್ರೀರೇಣುಕಗಣಾಧೀಶ್ವರರು ಶಿವಾಜ್ಞಾನುಸಾರವಾಗಿ ಶ್ರೀಸೋಮೇಶ್ವರಲಿಂಗದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ, ಆ ಸಮಯದಲ್ಲಿ ಸೋಮೇಶ್ವರದೇವಾಲಯದಲ್ಲಿದ್ದಿಪ್ಪ ಭಕ್ತಮಂಡಳಿಯು ಪ್ರಾರ್ಥನಾನುಸಾರವಾಗಿ ಅವರಿಗೆ ತಾವು ಅವತಾರವಾಡಿದ ಕಾರಣವನ್ನು ಹೇಳಿ, ಸರ್ವರನ್ನೂ ಸಂತೋಷಗೊಳಿಸಿ, ಅಲ್ಲಿಂದ ಗಗನಮಾರ್ಗವಾಗಿ ಅಗಸ್ತ್ಯಮಹರ್ಷಿಗಳನ್ನು ಉದ್ಧರಿಸುವುದಕ್ಕೋಸ್ಕರ ಮಲಯಾಚಲವನ್ನು ಕುರಿತು ಪ್ರಯಾಣಮಾಡಿದರು ಇದೇ ವಿಷಯವನ್ನು ಮೇಲುದಾಹರಿಸಿರುವ ಸಿದ್ಧಾಂತ ಶಿಖಾಮಣಿಯ ಪದ್ಯಗಳಲ್ಲಿ ಪ್ರತಿಪಾದಿಸಿಲ್ಪಟ್ಟಿರುವುದು

ಶ್ರೀರೇಣುಕಾಚಾರ್ಯರು ಕಲ್ಯಾಣಕಕ್ಷೇತ್ರದಿಂದ ಮಲಯಪರ್ವತದಲ್ಲಿ ರಾರಾಜಿಸುತ್ತಿದ್ದ ಅಗಸ್ತ್ಯಾಶ್ರಮಕ್ಕೆ ಪ್ರಯಾಣ ಮಾಡಿಸಿದ ಕೂಡಲೆ, ಅಗಸ್ತ್ಯಮಹರ್ಷಿಗಳು ಅವಧಾರಣಭಕ್ತಿವಿನೀತವಿಂದ ಆ ಪ್ರಮಥಪುಂಗವನ ರನ್ನು ಎದುರ್ಗೊಂಡು, ಪರ್ಣಾಸನದಲ್ಲಿ ಕುಳ್ಳಿರಿಸಿ, ಪೋಡಶೋಪಚಾರಗಳಿಂದ ಪೂಜಿಸಿ—

ಶ್ರೀರಮಸ್ಮ ಶಿವಜ್ಞಾನ ಶ್ರೀಶಾ ಮೇ ವಾಸಕೆಸ್ಯಯಾ ।
ಭವದ್ದರ್ಶನಪುಣ್ಯೇನ ಸ್ಥಿರಂ ಮೇ ಮುನಿವಾಸಕ ॥೪೩

ಸಂಸಾರಸರ್ವವೈಷ್ಣವಾನಾಂ ನಾರ್ಥೀತಾಸ್ಮಾಂ ಕಿಂಚನಾ ।
ಕಟಾಕ್ಷಪ್ರವ ಕಲ್ಯಾಣ ಸಮುದ್ಭವಸಭೆಸಜಂ ॥೪೭

ಸಪ್ತಲೋಕೇಸಂವಾಸಹಜಪತ್ರಯ ಪಹ ನಲ ।
ಕೃತ್ಪಾಪಾಲುಕಾಸ್ಮಾಮಪದಾಮ್ಯಹಂ ಪೇಸಿನಾಂ ॥೪೮

ರೇಣುಕಾ ನ್ಯಾಂ ನಿಜನಾಮಾ ಗಣನಾಥಾ ಶಿವಸ್ಯಂ ।
ಅವತೀರ್ಣಾ ಪಾಪಾ ಭೂವಿ ಂ ಸಪ್ರಸ್ಯುಸಕಾಂಕ್ಷಯಾ ॥೪೯

ಭವಾದ್ಭವ ನಿಷ್ಠಾನಾಂ ಗತೌಭಭವ್ಯಸ್ಯಜನ್ಮನಾಂ ।
ಪ್ರವೃತ್ತಿರೈಷ್ಣ ಲೋಕೇ ಪರ ನ ಸ್ಪರಕಾರ್ಯೇ ॥೫೦

ಸ್ವಸ್ಯಾಂ ಸ್ಥಿತಿಪಿಷ್ಠಿನಿ ಸಿದ್ಧಾಂತೆ ಶ್ರುತಿಸಮ್ಮತೆ ।
ಸರ್ವಜ್ಞ ನವ ಮೇ ಉಕ್ತಾ ಸ್ಥಿತಿ ಸಾಧಾರ್ಥಸಾಧಕಂ ॥೫೦

(ಸಿದ್ಧಾಂತಶಿಖಾಮಣಿ, ಪರಿ ೪)

ಈ ರೀತಿಯಾಗಿ ಶ್ರೀರೇಣುಕಾಚಾರ್ಯರ ಮಹಿಮೆಯನ್ನು ಸನಾತನಿವಾಗಿ ಕೊಂಡಾಡಿ, ಶುಭ್ರಸಮ್ಮತವಾದ ವೀರಶೈವಸಿದ್ಧಾಂತವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಲು, ಆಗ್ಗೆ ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಾದ್ವೈತಸಿದ್ಧಾಂತವನ್ನು ವಿಶದವಾಗಿ ಉಪದೇಶಿಸಿದರು. ಶ್ರೀರೇಣುಕಾಚಾರ್ಯರ ಉಪದೇಶರೂಪವಾದ ಗ್ರಂಥವು 'ಸಿದ್ಧಾಂತ ಶಿಖಾಮಣಿ' ಅಥವಾ 'ರೇಣುಕಾಗಸ್ತ್ಯಸಂವಾದ' ಎಂಬ ಹೆಸರಿನಿಂದ ಲೋಕವಿಖ್ಯಾತವಾಗಿರುವುದು ಶ್ರೀರೇಣುಕಾಚಾರ್ಯರು ಈ ಭೂಮಂಡಲದಲ್ಲಿ ೧೯೦೦ ವರ್ಷಗಳ ವರೆಗೆ ಇದ್ದು ಭರತಖಂಡದಲ್ಲೆಲ್ಲ ಸಂಚರಿಸಿ ಜಾವಾ ಕಾದಿಮರ್ತಗಳನ್ನು ಖಂಡಿಸಿ, ಸರ್ವರ ಹೃದಯಭೂಮಿಯಲ್ಲಿ ಶಿವಭಕ್ತಿಬೀಜವನ್ನು ಬಿತ್ತಿ ಲೋಕದಲ್ಲಿ ಶಿವಭಕ್ತಿಯನ್ನು ಪ್ರತಿಷ್ಠಿಸಿದರು. ವೀರಶೈವಮತ ಪರಿಪಾಲನಕ್ಕಾಗಿ ರಂಭಾಪುರೀ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿ, ಭರತಖಂಡದ ನಾನಾಭಾಗಗಳಲ್ಲಿ ಶಾಖಾಮಠಗಳನ್ನು ಕಟ್ಟಿಸಿದರು ಈ ಮಹಾಚಾರ್ಯರ ಲೀಲಾತ್ಮಕ ಚರಿತ್ರವು ಅವರ ವಿಷಯಕವಾಗಿರುವ ಪುರಾಣಾದಿಗಳಲ್ಲಿ ವಿಶದವಾಗಿ ವರ್ಣಿಸಲ್ಪಟ್ಟಿರುವುದು. ವೀರಶೈವರೆಲ್ಲರೂ ಗುರುಸಾರ್ವಭೌಮರ ಲೀಲಾತ್ಮಕವಾಗಿರುವ ಚರಿತ್ರ ಗ್ರಂಥಗಳನ್ನು ಓದಿ ಅವರ ಲೀಲಾವೈಭವವನ್ನು ತಿಳಿದು ಧನ್ಯರಾಗಬೇಕೆಂದಾಶಿಸುತ್ತೇನೆ

ಯುದ್ಧವಾರ್ತೆ.

೬ ಸ್ಪೇನ್ ಹಡಗುಗಳು ಮುಳುಗಿದವು

ಸ್ಪೇನಿನ 6 ವ್ಯಾಪಾರ ಹಡಗುಗಳನ್ನು ಇಟಲಿ ಅಥವಾ ಜರ್ಮನಿಯ ಸಬ್‌ಮೇರಿನ್ ನೌಕೆಗಳು ಮುಳುಗಿಸಿವೆಯೆಂಬಾ, ಇನ್ನು ಕೆಲವು ಸ್ಪೇನ್ ನೌಕೆಗಳಮೇಲೆ ಇಟಾಲಿಯನ್ನರು ಕಣ್ಣಿಟ್ಟಿರುವರೆಂಬಂಥ ವರ್ತಮಾನವಿದೆ.

ಇಟಲಿಯ ಹಡಗುಗಳ ನಾಶ

ಕಳೆದ ಮೂರುಳವಾದ ಬ್ರಿಟನ್ನಿನ ಸಂಗ್ರಾಮನೌಕೆಗಳು ಇಟಲಿಯ 4 ಸಾವಿರನು ಹಡಗುಗಳನ್ನು ಎಡ್ರಿಯಾಟಿಕ್ ಸಮುದ್ರದಲ್ಲಿ ಮುಳುಗಿಸಿದವೆಂದು ಪ್ರಕಟವಾಗಿದೆ ಈ ಹಡಗುಗಳಲ್ಲಿ ದೊಡ್ಡ ದೊಡ್ಡ ಫಿರಂಗಿಗಳೂ ಮೋಟಾರುಲಾರಿಗಳೂ ಇದ್ದವಂತೆ! ಇಟಲಿಯ ಪ್ರಾವಿಕರಲ್ಲಿ ಬಹುಮಂದಿ ಬದುಕಿಕೊಂಡರು.

ಇಟಲಿ ಸೈನಿಕರ ಸೆರೆ.

ಆಲ್ಬೇನಿಯದಲ್ಲಿ ಗ್ರೀಕರು ನಡೆಯಿಸುತ್ತಿರುವ ಯುದ್ಧದಲ್ಲಿ ಇಟಲಿಯ ಒಂದು ಸೈನ್ಯಕಡೆಗೆ ಸೇರಿದ ಸೈನಿಕರು ಮತ್ತು ಅಧಿಕಾರಿಗಳು ಕಡಿಮೆ ಸುಮಾರು 1000 ಜನರು ಸೆರೆಹಿಡಿಯಲ್ಪಟ್ಟಿರುವರೆಂದು ಗ್ರೀಕ್ ಪ್ರಕಟನೆಯೊಂದರ ಗೊತ್ತಾಗುವದು.

ಇಟಲಿಯ ನೂತನಪ್ರಯತ್ನ

ಆಲ್ಬೇನಿಯದಲ್ಲಿ ಗ್ರೀಕರ ವಿರುದ್ಧ ಹೊಸ್ಮೈಟ್ಟುತ್ತಿರುವ ಇಟಾಲಿಯನ್ನರು ಗ್ರೀಕರನ್ನು ಪ್ರತಿಭಟಿಸಲು ಮಧ್ಯ ಆಲ್ಬೇನಿಯದಲ್ಲಿ ನೂತನ ವ್ಯೂಹರಚನೆಯಲ್ಲಿ ತೊಡಗಿರುವರೆಂದು ಗೊತ್ತಾಗುತ್ತದೆ. ವೆಲ್ಲೋನಿ, ಕ್ಲೈಸುರಾ ಮತ್ತು ವಲೋನಾಗಳನ್ನು ಈ ವ್ಯೂಹದೊಳಗೆ ಸೇರಿಸಿಲ್ಲ ಇವುಗಳು ಶೀಘ್ರ ಗ್ರೀಕರ ಹಸ್ತಗತವಾಗುವಂತಿರುವದರಿಂದ ಅವೆಗಳನ್ನು ಬಿಟ್ಟುರುತ್ತಾರೆ ವ್ಯೂಹವು ವಲೋನಾ ಉತ್ತರದಲ್ಲಿ ಆರಂಭವಾಗಿ ಟೋಮೋರ್ ಬೆಟ್ಟಗಳ ಮೂಲಕ ಯುಗೋಸ್ಲಾವಿಯಾ ಗಡಿಯ ವರೆಗೆ ಹರಡಿದೆ. ಈ ಪ್ರಯತ್ನದಿಂದ ಇಟಲಿಯವರು ಈಗಿನ ರಕ್ಷಣಾವ್ಯವಸ್ಥೆಯು ಮುರಿದುಬೀಳುವದೆಂದು ಖಂಡಿತ ಹೇಳುವಂತಿಲ್ಲ. ಆದರೆ ಉತ್ತರದಲ್ಲೂ ಈಶಾನ್ಯದಲ್ಲೂ ತಿರುಗಿಬಿದ್ದ ಇಟಾಲಿಯನರನ್ನು ಗ್ರೀಕರು ನೋಲಿಸಿ ಹಿಂದಕ್ಕಟ್ಟಿದ್ದಾರೆ; ಮತ್ತು ಅಲ್ಲೆಲ್ಲ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿದ್ದಾರೆ.

ಜರ್ಮನಿಗೆ ಜಯವು ಲಭಿಸಲಾರದು

ದಕ್ಷಿಣ ಆಫ್ರಿಕದಿಂದ ಜನರಲ್ ಸ್ಮಟ್ಸ್‌ರನರು ರೇಡಿಯೋ ಮೂಲಕ ಭಾಷಣಮಾಡುತ್ತ, "ಜರ್ಮನಿಗೆ ಜಯವು ಖಂಡಿತವೆಂದು ವಿಶ್ವವು ಈಗ ಭಾವಿಸುವುದಿಲ್ಲ 1941 ರಲ್ಲಿ ಹಿಟ್ಲರನು ತನ್ನ ಪ್ರಯತ್ನವನ್ನು ಕೊನೆಗಾಣಿಸಬೇಕಾಗಿದೆ. ಆತನು ಬ್ರಿಟನ್ನನ್ನು ಜಯಿಸುವ ಯೋಚನೆಯನ್ನು ಇಟ್ಟುಕೊಂಡಿದ್ದರೆ ಆ ಕಾರ್ಯವನ್ನು ಮುಂದೆ ಹಾಕುವುದರಲ್ಲಿ ಅಪಾಯಕಾರವೇನೂ ಆಗದಂತಿಲ್ಲ ಯಾಕೆಂದರೆ ಸಾವಕಾಶವಾದಷ್ಟೂ ಬ್ರಿಟನ್ನಿನ್ನ ರಕ್ಷಣಾಶಕ್ತಿಯು ಹೆಚ್ಚುತ್ತಿರುವುದು. ಈ ಹೊಸ ವರ್ಷದಲ್ಲಿ ಹಿಟ್ಲರನು ಬೇಗನೆ ಬ್ರಿಟನ್ನನ್ನು ಮುತ್ತಬಹುದು. ಹೇಗಾದರೂ ಈ ವರ್ಷದೊಳಗೇ ಅದು ನಡೆಯಬೇಕಾಗಿದೆ. ಜಯಪಡೆಯಲು ಅನೇಕರಿಕೆಯ ಸಹಾಯವು ಅಗತ್ಯವಾಗಿದೆ. ಬ್ರಿಟನ್ನು ಮತ್ತು ಅಮೆರಿಕೆಯು ಒಟ್ಟಿಗೆ ನಿಂತು ಪ್ರಬಂಧದ ಮಿತಿವನಕೆಯಿಟ್ಟಿಗೆ ಸುದಿನವೊದಗುವಂತೆ ಮಾಡಬೇಕು." ಎಂದು ಹೇಳಿದರು.

ಈಗ ಯುದ್ಧ ಪ್ರಾರಂಭವಾಗಿದೆ.

ಭಾರತದ ಕಾರ್ಯದರ್ಶಿಗಳಾದ ಶ್ರೀ ಅಮೆರಿಯವರು ರೇಡಿಯೋಮೂಲಕ ಭಾಷಣಮಾಡುತ್ತ—ಸಂಗ್ರಾಮದಲ್ಲಿ ಆಗಲೇ ತಮಗೆ ಜಯವು ಲಭಿಸಿರುವದಾಗಿ ತಪ್ಪು ನಾಯಕರು ಪ್ರತಾಪಕೊಚ್ಚಿಕೊಳ್ಳಹತ್ತಿದ್ದಾರೆ. ಆದರೆ ನಾವು ಈಗೀಗ ಸಂಗ್ರಾಮು ಪ್ರಾರಂಭವಾಗುವದಾಗಿ ಭಾವಿಸುತ್ತೇವೆ. ಬ್ರಿಟನ್ನುಗಳೆ ಯುದ್ಧ ಬೇಕಾಗಿರಲಿಲ್ಲವಾದುದರಿಂದ ಅದು ಮೊದಲು ಸಂಗ್ರಾಮ ಸಿದ್ಧತೆಗಳನ್ನು ಮಾಡಿಕೊಂಡಿರಲಿಲ್ಲ. ಈಗ ಅರ್ಧಮರ್ಧ ಕಶ್ಚ ಸಿದ್ಧತೆ ಮಾಡಿದೆವು. ಈ ವರ್ಷವು ಮುಗಿಯುವೇಳೆಗೆ ನಾವು ಪೂರ್ಣ ಸಿದ್ಧರಾಗುತ್ತೇವೆ. ಬ್ರಿಟನ್ನಿನಮೇಲೆ ನಡೆದ ವಿಮಾನ ಕದನದಲ್ಲಿ ಜರ್ಮನಿಗೆ ನೋಡಾದುದೇ ಈ ವರ್ಷದ ಮುಖ್ಯಘಟನೆ ಇದರಿಂದ ಹಿಟ್ಲರನು ಮತ್ತು ಅವನ ಅನುಯಾಯಿಗಳ ಮುಂದಿನ ಪರಿಣಾವನ್ನು ನಿರ್ಧರಿಸಿದಂತಾಯಿತು ಬ್ರಿಟನ್ನಿನೇ ಮುತ್ತಿಗೆ ನಡೆಯಿಸುವ ಸೆಲಸವು ದಿನದಿನಕ್ಕೂ ಹೆಚ್ಚು ಕಷ್ಟವಾಯಕವಾಗಹತ್ತಿದೆ. ಜರ್ಮನರು ಯಾವದೇ ವಿಧದಲ್ಲಿ ಮುಂದೆನುಗ್ಗಿ ನರೂ ಹೆಚ್ಚು ಪುಟಲರಾಗರನ್ನು ಪ್ರತಿಭಟಿಸಬೇಕಾಗಿದೆ. ಈ ವರೆಗೆ ಜರ್ಮನಿರಿಂದ ಜಯಸಲ್ಪಟ್ಟರುವ ದೇಶಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕಾದ ಕಾರ್ಯವು ಸಾಮಾನ್ಯವಾದುದಲ್ಲ. ಎಂದು ಹೇಳಿದರು.

ಜಪಾನಿಗೆ ಅಮೆರಿಕದ ಎಚ್ಚರಿಕೆ !

ಅಮೆರಿಕದೇಶದ ಸಾವಿಕರನ್ನು ಸೀಟಿಂಗ್‌ನಲ್ಲಿ ಕಳೆದ ಸೋಮವಾರ ಜಪಾನ್ ಪೋಲೀಸಿನವರು ಬಂಧಿಸಿದ್ದ ಕ್ಕಾಗಿ ಜಪಾನ್ ಪೋಲೀಸಿನವರು ಕ್ಷಮೆಯೇಡದೇಕೆಂದು ಮೆರೀನ್‌ಗಾರ್ಡುಗಳ ಕಮ್ಯಾಂಡಿಂಟ್‌ರಾದ ಕರ್ನಲ್ ಕೆಚ್. ಬ್ಲೆಡ್ಜ್‌ರವರು ತಿಳಿಸಿಸಿರುತ್ತಾರೆ.

ಅದೃಶ್ಯ ವಿಮಾನ ನಿರ್ಮಾಣ

2400 ಅಡಿಗಳ ಎತ್ತರದಲ್ಲಿ ಹಾರಾಡುತ್ತಿದ್ದರೂ ಮನುಷ್ಯನ ದೃಷ್ಟಿಗೆ ಗೋಚರವಾಗದೆ ಅದೃಶ್ಯವಾಗಿರಬಲ್ಲ ವಿಮಾನಗಳನ್ನು ಆಟ್ಲಾಯಾದಲ್ಲಿ ನಿರ್ಮಿಸಲಾಗಿದೆಯೆಂದು ಜರ್ಮನಿ ಗತಿಯಿಂದ ಸುದ್ದಿ ಬರುತ್ತಿದೆ. ಈ ವಿಮಾನಗಳು 1100 ಅಶ್ವಶಕ್ತಿಯಿಂದ ಕೂಡಿ ಘಂಟೆಗೆ 390 ಮೈಲು ವೇಗದಲ್ಲಿ ಚಲಿಸುವವಂತೆ !

ಕಳೆದ ವರ್ಷದಲ್ಲಾದ ವಿಮಾನ ನಷ್ಟ

ಕಳೆದ ವರ್ಷ ಬ್ರಿಟಿಷ್ ಫೈಟರ್ ವಿಮಾನಗಳು ಬ್ರಿಟನ್ನಿನ ಮೇಲೆ ಮುತ್ತಿಗೆ ನಡೆಯಿಸಿದ 3090 ಶತ್ರು ವಿಮಾನಗಳನ್ನು ಹೊಡೆದುರುಳಿಸಿದವು 147 ಬ್ರಿಟಿಷ್ ವಿಮಾನಗಳು ನಾಶವಾದವು ಸಕ್ಕಿಸು ರಣರಂಗದಲ್ಲೂ ಶತ್ರು ಫ್ರಾನ್ಸಿನಲ್ಲೂ 375 ಬ್ರಿಟಿಷ್ ವಿಮಾನಗಳು ನಾಶವಾದವು.

ಏರ್ಲೆಂಡ್‌ಮೇಲೆ ಬಾಂಬುಗಳು !

ಕಳೆದ ಗುರುವಾರ ಕ್ರಾತಃಕಾಲ ಏರ್ಲೆಂಡಿನಮೇಲೆ ಕೆಲವು ಬಾಂಬುಗಳು ಬಿದ್ದವು ಆಗ್ನಿವರ್ಧಕ ಬಾಂಬು ಗಳು ಬಿದ್ದ ಫಲವಾಗಿ ಅನೇಕ ಮಂದಿ ಪ್ರಜೆಗಳು ಸತ್ತರು ಒಂದು ಆಗ್ನಿವರ್ಧಕ ಬಾಂಬನ್ನು ಪರೀಕ್ಷಿಸಲಾಗಿ ಅದು ಜರ್ಮನ್ ಬಾಂಬೆಂದು ನಿರ್ಧರಿಸಲ್ಪಟ್ಟಿತು ಉಳಿದ ಬಾಂಬುಗಳನ್ನೂ ಸಹ ಪರೀಕ್ಷಿಸುತ್ತಿರಲಾಗಿದೆ.

ಇಟಲಿಯಲ್ಲಿ ಜರ್ಮ ವಿಮಾನಬಲ

ಜರ್ಮನಿಯ ಹಲವು ವಿಮಾನಪಡೆಗಳು ಇಟಲಿಗೆ ಒಂದಿರುವುದಾಗಿ ಸರ್ಕಾರಿ ವಾರ್ತಾಸಂಸ್ಥೆಯು ತಿಳಿಸಿ ಸುತ್ತದೆ. ಜರ್ಮನ್ ವಿಮಾನಪಡೆಗಳು ಬಂದಾಗ ಇಟಲಿ ವಾಯುಬಲದ ಮುಖ್ಯಾಧಿಕಾರಿಗಳು ಒಂದು ಪ್ರಕಟನೆ ಹೊರಡಿಸಿ, ಮೆಡಿಟೇರಿನಿಯ ಸಮುದ್ರದಲ್ಲಿ ಶತ್ರುಗಳು ಬಲವನ್ನು ಕೂಡಿಸಿರುವುದರಿಂದ ಅಲ್ಲಿ ನಡೆಯಲಿರುವ ವಿಮಾನ ಮತ್ತು ನೌಕಾಯುದ್ಧಗಳಲ್ಲಿ ಜರ್ಮನ್ ವಿಮಾನ ಪಡೆಯು ಭಾಗವಹಿಸುವುದೆಂಬ ತಿಳುಸಿರುತ್ತಾರೆ.

ಸ್ಟಾಲಿರವರ ಎಚ್ಚರಿಕೆ.

ರಷ್ಯದ ಸರ್ವಾಧಿಕಾರಿಗಳಾದ ಸ್ಟಾಲಿರವರ ಸಹಿ ಯಿಂದ ಕೂಡಿದ ಒಂದು ಎಚ್ಚರಿಕೆಯ ಲೇಖನವು "ರೆಡ್ ಸ್ಟಾರ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ ಆದ ರಲ್ಲಿ ಅವರು "ರಷ್ಯವನ್ನು ಶತ್ರುಗಳು ಯುದ್ಧಕ್ಕೆಳೆಯುವ ಭೀತಿ ಹೆಚ್ಚಿದೆ. ರಷ್ಯ ಜಪಾನಿನೆಲ್ಲ ಅದಕ್ಕೆ ಸಿದ್ಧವಾ ಗಿರಬೇಕು. ಶತ್ರುಗಳು ನಮ್ಮನ್ನು ಮುತ್ತುವ ಭೀತಿ ಇದೆ ಅವರ ಪ್ರಬಲಿ ತಿಳಿಯದಂತೆ ಅವರು ನಮ್ಮಮೇಲೆ ಬೀಳುವಂತೆ ನಾವು ಎಚ್ಚರಿಕೆ ವಹಿಸಬೇಕು. " ಎಂದು ತಿಳುಸಿಸಿದ್ದಾರೆ

ಬ್ರಿಟನ್ನಿನ ಆಹಾರ ಸಚಿವರ ಎಚ್ಚರಿಕೆ!

ಬ್ರಿಟನ್ನಿನ ಆಹಾರಕಾರ್ಯ ಸರಬರಾಯಿ ಸಚಿವರಾದ ಡಾರ್ಡ್‌ವೋಲ್ಟರವರು ಅಕಾಶವಾಣಿಯ ಮೂಲಕ ಘೋಷಣೆಮಾಡುತ್ತ " ಬ್ರಿಟನ್ನಿನಲ್ಲಿ ಆಹಾರ ಪದಾರ್ಥಗ ಗಿನ ಕಳೆದ ವರ್ಷಕ್ಕಿಂತ ಈ ವರ್ಷ ಕೊರತೆ ಹೆಚ್ಚಾಗಿ ಇವುದು. ಶತ್ರುಗಳು ನಮ್ಮ ಆಹಾರ ಸಾಮಗ್ರಿಗಳ ಕೆಪಗುಗಳಿಗೆ ಮುತ್ತಿಗೆ ಹಾಕಿ ಮುಳುಗಿಸುತ್ತಿದ್ದಾರೆ. ನಿನಿಲವತ್ತಕವಾದ ಆಹಾರ ಪದಾರ್ಥಗಳ ಮೇಲೆ ಈ ಯುದ್ಧವು ಭಯಂಕರ ರೂಪವನ್ನು ತಾಳಬಹುದು. ಪ್ರತಿಗಳು ಬ್ರಿಟನ್ನಿನಲ್ಲಿಯೇ ಬೆಳೆಯುವ ಪದಾರ್ಥಗ ಳನ್ನು ಉಪಯೋಗಿಸಿಕೊಂಡು ಜೀವಿಸಲ್ಲಿರುವ ಆಹಾರ ವಸ್ತುಗಳನ್ನು ಮಿತವಾಗಿ ಉಪಯೋಗಿಸಬೇಕು. 1939 ರಲ್ಲಿ ಉಪಯೋಗಿಸಿದಷ್ಟು ಮಾಂಸಾಹಾರವನ್ನೇ 1940 ರಲ್ಲೂ ಉಪಯೋಗಿಸಲಾಯಿತು. 1941 ನೆಯ ವರ್ಷ ದಲ್ಲಿ ಇದನ್ನು ಕಡಿಮೆ ಮಾಡಬೇಕು. ಮತ್ತು ಬ್ರಿಟನ್ನಿ ನಲ್ಲಿ ಬೆಳೆಯುವ ಆಲೂಗಡ್ಡೆಯನ್ನು ಹೆಚ್ಚಾಗಿ ಉಪ ಯೋಗಿಸಿ ರೊಟ್ಟಿ ತಿನ್ನುವುದನ್ನು ಕಡಿಮೆ ಮಾಡಬೇಕು. ಹಾಗೆ ಮಾಡುವುದರಿಂದ ಹೊರಗಿನಿಂದ ಗೋದಿಹಿಟ್ಟನ್ನು ತರುಸುವುದು ಕಡಮೆಯಾಗುವುದು." ಎಂದು ಎಚ್ಚರಿಸಿರು ವದು.

ಇಟಲಿಯ ದೊರೆಗಳಿಗೆ ರೂಜ್‌ವೆಲ್ಟರ ಶುಭಸಂದೇಶ

ಇಟಲಿಯ ದೊರೆಗಾದ ವಿಕ್ಟರ್‌ಎಮಾನ್ಯುಯಲ್ ರವರು ಹೊಸವರ್ಷದ ಶುಭಾಶಯದಿಂದ ಕೂಡಿದ ಸಂದೇಶವನ್ನು ಅಮೆರಿಕೆಯ ರಾಜ್ಯಾಧ್ಯಕ್ಷ ರೂಜ್‌ವೆಲ್ಟ ರಿಗೆ ಕಳುಹಿಸಿದ್ದರು. ಅದಕ್ಕೆ ಪ್ರತಿಯಾಗಿ ಶ್ರೀ ರೂಜ್ ವೆಲ್ಟರು ಶುಭಸಂದೇಶವನ್ನು ಕಳುಹಿಸುತ್ತ " ಸಾರ್ವ ಭೌಮರಾದ ನಿಮಗೆ ಸಮ್ಮುಮಂಗಲಗಳೂ ಉಂಟಾಗಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಮುಂದಿನ ವರ್ಷ ಇಟಲಿಯ ಪ್ರಜೆಗಳಿಗೆ ನ್ಯಾಯವಾದ ಶಾಂತಿಯು ಲಭಿಸಲೆಂದು ಕೋರುತ್ತೇನೆ " ಎಂದು ತಿಳಿಸಿಸಿದ್ದಾರೆ.

ಬ್ರಿಟಿಷ್ ವಿಮಾನಗಳ ಕಾರ್ಯ

ಬ್ರಿಟಿಷ್ ವಿಮಾನಗಳು ಬಾರ್ಡಿಯಾ ಮತ್ತು ಹೆಲ್ಸ ಮೇಲೆ ಮುತ್ತಿಗೆ ನಡೆಯಿಸಿದವು. ಬಾರ್ಡಿಯಾ ದಲ್ಲಿ ಗುರಿಯಿಟ್ಟ ಪ್ರದೇಶಗಳ ಮೇಲೆ ಸರಿಯಾಗಿ ಬಾಂಬುಗಳು ಬಿದ್ದುವು ಫ್ರೆಮೇನ್ ಮೇಲೆ ಬ್ರಿಟಿಷ್ ವಿಮಾನಗಳು ನಡೆಸಿದ ಮುತ್ತಿಗೆಯು ಬಹು ಉಗ್ರ ವಾಗಿದ್ದು 3॥ ಘಂಟೆಗಳ ಕಾಲ ನಡೆಯಿತೆಂದೂ ಹೆಡಗು ನಿರ್ಮಾಣ ಸ್ಥಾನಗಳು, ಡಾಕ್‌ಯಾರ್ಡುಗಳು ರೇಲ್ವೆ ಸ್ಟೇಷನ್‌ಗಳು ಇವುಗಳ ಮೇಲೆ ಆಗ್ನಿವರ್ಧಕ ಬಾಂಬು ಗಳನ್ನು ಸುರಿಸಿದವೆಂದೂ ಆಕ್ಸ್‌ಫರ್ಡ್ ಪ್ರೈಸ್ಸ್ ಮತ್ತು ಇತರ ಪ್ರವೇಶಗಳ ಮೇಲೂ ಸಹ ಬಾಂಬುಗಳನ್ನು ಸುರಿ ಎಲ್ಲ ವಿಮಾನಗಳೂ ಸುರಕ್ಷಿತವಾಗಿ ಹಿಂದಿರು ಗಿದವೆಂದೂ ಪ್ರಕಟವಾಗಿದೆ

ಅಗ್ನಿವರ್ಧಕ ಬಾಂಬುಗಳಿಂದ ರಕ್ಷಣಾ ಪ್ರಯತ್ನ

ಜರ್ಮನಿ ವಿಮಾನಗಳಿಂದ ಸುರಿಸಲಾಗುತ್ತಿರುವ ಆಗ್ನಿವರ್ಧಕ ಬಾಂಬುಗಳಿಂದ ಆಗುತ್ತಿರುವ ಮಹಾನರ್ಥ ಗಳಿಂದ ಅದಷ್ಟು ರಕ್ಷಣೆ ಕೊಡಲು ತಕ್ಕಕಾರ್ಯಕ್ರಮ ಗಳನ್ನು ತರ್ತಕ್ಷಣ ಕೈಗೊಳ್ಳಲಾಗುವಂದೆಂದು ಪ್ರಕಟ ವಾಗಿದೆ. ಇದಕ್ಕಾಗಿ "ಫೈರ್‌ಪ್ರಿವೆನ್ಷನ್‌ಎಕ್ಸ್‌ಟೆನ್ಷನ್" ಎಂಬ ಹೆಸರಿನ ಒಂದು ಪ್ರತ್ಯೇಕ ಶಾಖೆಯನ್ನು ರಚಿಸಲು ಬ್ರಿಟನ್ನಿನ ಮಹಾಪ್ರಧಾನರು ಒಪ್ಪಿಗೆ ಇತ್ತಿದ್ದಾರೆ. ಬೆಂಕಿ ಹತ್ತಿದೊಡನೆ ಅದನ್ನಾರಿಸಲು ತಕ್ಕ ಸಹಾಯಕೊಡಲು ಸೂಚನೆಗಳನ್ನು ಕೊಡಲಾಗಿದೆ ಮತ್ತು ತಕ್ಕ ಎಚ್ಚರಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀಮನ್ಮಹಾರಾಜರವರು ಸಕಲೇಶಪುರದಲ್ಲಿ ಈಚೆಲಿ ರುವ ಸೊತನೆ ಆಸ್ಪತ್ರೆಯ ಈಚೆಚಿನ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಲು ಈ ತಿಂಗಳು ಕೊನೆಯ ವಾರದಲ್ಲಿ ಅಲ್ಲಿಗೆ ದಯಮಾಡಿಸುವರೆಂದು ತಿಳಿದು ಬರುತ್ತದೆ

ಬೆಂಗಳೂರಿನಲ್ಲಿ ನಡೆದ ವಕೀಲ್ ಶ್ರೀ ನೋಕ್ಷಗುಂ ಡಂ ಕೃಷ್ಣಮೂರ್ತಿಯವರ ಕೊಲೆಯೊಕ್ಕದ ಮೆಯಿಲ್ಲಿ ನುರಣಿಕ್ಷೆಗೆ ಗುರಿಯಾದ ನಾರಾಯಣರಿಡ್ಡಿ, ಮುನಿಗೆ ಮತ್ತು ರಾಮ ಇವರುಗಳು ಶ್ರೀಮನ್ಮಹಾರಾಜರವರಲ್ಲಿ ಕೃಪಾಭಿಕ್ಷೆ ಬೇಡಿದ್ದರು ಶ್ರೀಮನ್ಮಹಾರಾಜರವರು ನಾರಾಯಣರೆಡ್ಡಿಗೆ ಮಾತ್ರ ಪರಾಜಂಚನೆಯನ್ನು ಸ್ಥಿರ ಪಡಿಸಿ ಉಳಿದ ಇಬ್ಬರಿಗೂ ಜೀವಾವಧಿ ಕಾರಾಗೃಹ ಶಿಕ್ಷೆ ವಿಧಿಸಿರುವರೆಂದು ತಿಳಿದುಬರುತ್ತದೆ

ರಷ್ಯಾ-ಜರ್ಮನಿಗಳ ಘರ್ಷಣವಾಗುವದೇ ?

ನ್ಯೂಯಾರ್ಕಿನ ' ಹೆಲ್ಡ್‌ಟ್ರಿಬ್ಯೂನ್ " ಪತ್ರಿಕೆಯಲ್ಲಿ 30000 ಜರ್ಮನ್‌ಸೈನಿಕರು ಹಂಗೇರಿಯಮೂಲಕ ರುಮೆ ನಿಯಕ್ಕೆ ಹೋದರೆಂದೂ, ಇದರಿಂದ ರಷ್ಯಕ್ಕೂ ಜರ್ಮ ನಿಗೂ ಘರ್ಷಣವುಂಟಾಗುವ ಪರಿಸ್ಥಿತಿಯೊದಗಬಹು ದೆಂದೂ ಪ್ರಕಟವಾಗಿದೆ.

ಇಟಲಿ ಸೆರೆಯಾಳುಗಳನ್ನು ಭಾರತಕ್ಕೆ ತಂದರು

ಸಿದಿಬರಾನಿ ಮೊದಲಾದ ಯುದ್ಧ ಕ್ಷೇತ್ರಗಳಲ್ಲಿ ಸೆರೆಹಿಡಿಯಲಾಗಿದ್ದ ೬೦೦೦ ಇಟಾಲಿಯನ್ನರ ಖೈದಿ ಪ್ರಥಮ ತಂಡವೊಂದನ್ನು ಕಳೆದ ಒಂದನೆಯ ಶಾರೀ ಖಿನ ದಿವಸ ಬೋಂಬಾಯಿಗೆ ತಂದು ಇಳಿಸಿದರು. ಅದರಲ್ಲಿ ೩ ಜನ ಇಟಲಿಯ ಜನರಲ್‌ಗಳೂ 300 ಅಧಿ ಕಾರಿಗಳೂ 627 ಜನ ಯುದ್ಧಳಿಟರೂ ಇದ್ದರು ಅವರು ಗಳನ್ನು ತತ್ಕ್ಷಣ ಸ್ಪೆಷಲ್ ರೈಲುಗಳಲ್ಲಿ ರಾಮಘಡಕ್ಕೆ ಸಾಗಿಸಿದರು ಇವರನ್ನು ತರುನಾಗ ಇವರ ಕಾವಲಿ ಗಾಗಿ ಭಾರತೀಯ ಸೈನಿಕರನ್ನು ನಿಯಮಿಸಿದ್ದರು.

ಕಾಂಗ್ರೆಸ್ ಅಧ್ಯಕ್ಷರ ಬಂಧನ !

ಆಪಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಅಬ್ದುಲ್ ಕಲಾಂ ಆಜಾದರವರು ದೆಹಲಿಯಿಂದ ಕಲ್ಕತ್ತೆಗೆ ಹೋಗುತ್ತಿದ್ದಾಗ ಆಒಹಾಬಾದ್ ರೈಲ್ವೆ ಸ್ಟೇಷನ್ನಿನಲ್ಲಿ ಬಂಧಿಸಲ್ಪಟ್ಟರು ಇಂಡಿಯಾ ರಕ್ಷಣಾ ಶಾಸನದ 38 ನೆಯ ವಿಧಿಯಪ್ರಕಾರ ಅಲಹಾಬಾದಿ ನಿಂದ ಹೊರಡಿಸಿದ್ದ ವಾರಂಟಿನ ಮೇಲೆ ಅಲಹಾಬಾದಿನ ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಎಸ್. ಎನ್. ಅಗಾರವರು ಅವರನ್ನು ಬಂಧಿಸಿ ಸೈನಿ ಟ್ರಾಲ್ ಜೈಲಿಗೆ ಕರೆದೊಯ್ದರು. ಡಿಸೆಂಬರ್ 13 ನೆಯ ತಾರೀಖಿನ ದಿವಸ ಶ್ರೀ ಆಜಾದರು ಪುರುಷೋತ್ತಮ ದಾಸ್ ಹಾರ್ಡಿನಲ್ಲಿ ಮಾಡಿದಧಾರಣಕ್ಕಾಗಿ ಅವರನ್ನು ಬಂಧಿಸಲಾಗಿದೆಯೆಂದು ಗೊತ್ತಾಗುತ್ತದೆ.

ರಂಭಾಪುರೀ ಪೀಠದ ಸಮಾಚಾರ

ಶ್ರೀವ.ಬ್ರ.ಗು.ಭಾವುರೀ ಜಗದ್ಗುರುಗಳವರು ಕಳೆದ ತಿಂಗಳು ೧೬ ನೆಯ ತಾರೀಖಿನ ದಿವಸ ಕೊಯಮತ್ತೂರು ಡಿ॥ ಕೊಳ್ಳೇಗಾಲ ತಾಲೂಕು ಮುಡಿಗುಂಡ ಗ್ರಾಮಕ್ಕೆ ದಯಮಾಡಿಸಿದರು ಅಷ್ಟಪಲ್ಲಕ್ಕಿ ಪಂಚಕಲಶ ಮೊದ ಲಾದ ಒಂ ಬಿರುದಾವಳಿಗಳೊಡನೆ ಮಹೋತ್ಸವವು ಅಭೂತಪೂರ್ವವಾಗಿ ನೆರವೇರಿತು ಅಲ್ಲಿಯ ಭಕ್ತರು ಅಸಾಧಾರಣಭಕ್ತಿ ಯೊಡನೆ ಜಗದ್ಗುರುಪೀಠದ ಸೇವೆಯ ನ್ನು ಮಾಹತ್ತರುವುದು ಸ್ತುತ್ಯವಾಗಿದೆ ಶ್ರೀಜಗದ್ಗುರು ಗಳವರ ಮೊಕ್ಕಾಂ ಇನ್ನೂ ಕೆಲವು ದಿವಸ ಅಲ್ಲಿಯೇ ಇರುವುದಾಗಿ ಗೊತ್ತಾಗುತ್ತದೆ.

ಉಜ್ಜಯಿನೀ ಪೀಠದ ಸಮಾಚಾರ

ಉಜ್ಜಯಿನೀ ಪೀಠದ ಶ್ರೀ ಜಗದ್ಗುರುಗಳವರು ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ ಸಂಚರಿಸುತ್ತಿದ್ದು ಮತದ ಕಟ್ಟಿಟ ಕ್ಕಾಗಿ ಶಿಕಾಸಾಂಗ್ಯಕವನ್ನು ಮಾಡುತ್ತಿದ್ದಾರೆ. ಇತ್ತೀಚೆಗೆ ಯೇ ಪೂರ್ವದ ಶ್ರೀಸಿದ್ಧಲಿಂಗ ಜಗದ್ಗುರುಗಳವರ ಸಂಕ ಲ್ಪದಂತೆ ಜ್ಞಾನಗುರುಕುಲಾಶ್ರಮವನ್ನು ಸ್ಥಾಪಿಸತಕ್ಕಹ ರಾಗಿದ್ದಾರೆಂದು ತಿಳಿದುಬರುತ್ತದೆ.

ಚಂದಾದಾರರಲ್ಲಿ ವಿಜ್ಞಾಪನೆ

ಕಾರ್ಯಾಧಿಕ್ಯದಿಂದ ಕಳೆದವಾರದ ಪತ್ರಿಕೆಯು ಹೊರಡಲು ಅಸಾಧ್ಯವಾಗಿರಲ್ಲಿದ್ದಕ್ಕೆಂಬ ವಿಷಯವನ್ನು ಈ ಮೂಲಕ ತಿಳುಸಿಸಿದೆ.

ವ್ಯವಸ್ಥಾಪಕರು

ಶ್ರೀ ಜಗದ್ಗುರು ರಾಜಕಾರ್ಯಾಯ ನಮಃ

ಆಸ್ತಿಕಧರ್ಮ

ಲೇಖಕರು—ಪಂ. ಎಂ. ಮಲ್ಲಿಕಾರ್ಜುನಾರಾಧ್ಯ, ತಿಪಟೂರು

ಬಹುಮತಭರಿತವಾದ ಭರತಖಂಡವು ಆರ್ಯಪುಣ್ಯ ಭೂಮಿಯೆನಿಸಿರುವುದರಲ್ಲೇನೂ ಆಶ್ಚರ್ಯವಿಲ್ಲ. ಏಕೆಂದರೆ ಅಲ್ಲಿಂದಿವ ಯಾವ ಮತದಲ್ಲಿಯೂ ಜೀವಿಗಳಿಗೆ ಆಹಿತವ ನ್ಮೆಂಟುಮಾಡತಕ್ಕಂತಹ ವಿಷಯಗಳು ಬೋಧಿಸಲ್ಪಡು ವುದಿಲ್ಲ. ಪರಮಾತ್ಮನನ್ನು ತಿಳಿಯತಕ್ಕ ವಿಷಯದ ಲ್ಲಿಯೂ ಪರಲೋಕಸಂಬಂಧವಾ ' ವಿಷಯಗಳಲ್ಲಿಯೂ ಪ್ರತಿಯೊಂದುಮತವು ಭಿನ್ನಭಿ ನಾದ ಅಭಿಪ್ರಾಯಗ ಳಿಂದ ಕೂಡಿದ್ದರೂ ಕೊನೆಗೆ ಎ ಲ್ಲಾ ನಿಶ್ಚಿನಿರಪೇಕ್ಷಯಾ ನಂದಸುಖಕ್ಕೆ ಹೇತುವಾಗಿಯೇ ಪರಿಣಮಿಸುವವು ಎಲ್ಲಾ ಮತಗಳಿಗೂ ಮೂಲಮತವಾದುದು ನಿಮ್ಮ ಆರ್ಯರ ವೇದಾಂತ ಸ.ತವೇ ಎಂಬುದು ಮತವಿಚಾರಜ್ಞ ರಿಗೆ ತಿಳಿಯದ ವಿಷಯವಲ್ಲ. ಏಕೆಂದರೆ ಇದು ಆಪಾದಿ ಸಿದ್ಧವಾದ ಸ.ತವಾಗಿರುವುದ. ಇದರಲ್ಲಿ ವೇದಾಂತ ವಿಷಯಗಳನ್ನು ವಿಮರ್ಶ ಮಾಡಿರುವಷ್ಟು ಬೇರೆ ಮತ ಗಳಲ್ಲಿ ಪ್ರತಿಪಾದಿಸಿರುವುದಿಲ್ಲ. ನಿಮ್ಮ ಆರ್ಯರ ಉತ್ಕೃಷ್ಟವಾದ ಈ ಮತವು ಅಂತಹ ಶ್ರೇಷ್ಠತೆಯಲ್ಲಿರುವುದಕ್ಕೆ ಆದರ ತತ್ವವು ಅತ್ಯಂತ ಶ್ರೇಷ್ಠವಾದ ದೇಹಶುದ್ಧಿ ಮತ್ತು ಮನಶ್ಶುದ್ಧಿಗಳೇ ಆಧಾರಸ್ತಂಭದಮೇಲೆ ನಿಂತಿರುವುದೇ ಕಾರಣವಾಗಿದೆ. ಈ ವಿಷಯವನ್ನು ಸಂಯಮಿಗಳು ಅಭ್ಯಾಸಮಾಡಿ ಪರಿಶೀಲಿಸಿದರೆ ಅರಿವು ಪೂಜ್ಯರಿಸಿಸಿರ ವರು. ಪರಮಪಾವನಸಾಧಕ ಪರಿಪಾಸು ದೇಹಕ್ಕಿದ್ದಿ ನ ನಕ್ಕಿದ್ದಿಗಳಲ್ಲದಿದವರನ್ನು ಎಂದಿಗೂ ಪ್ರೀತಿಸುವುದಿಲ್ಲ. ಇವುಗಳನ್ನುಸಂಪರಿಪಿಯೇ ಸಕಲಪ್ರಪ್ರ ಸೃಷ್ಟಿತೀತಿಹಾಸ ಪುರಾಣಾದಿಗಳೆಲ್ಲವೂ ನಿರ್ಮಾಣಲ್ಪಟ್ಟಿ ರುವುದು ಒಂದು ಭೂವಿಯನ್ನು ಬಹು ಚೆನ್ನಾಗಿ ಉತ್ತ ಬಿತ್ತು ಬೆಳೆಯನ್ನಿಟ್ಟುರೂ ತನ್ನದ್ಯೆಕಳಿಗೂ. ಬೆಳೆಯದೆ ಹೋಗುವುದಿಲ್ಲ ಅ ಕಳೆಗಳನ್ನು ಸಮ ಯವನಿತು ಕೆಲಿದು. ತನ್ನ ಫಸಲನ್ನು ಉತ್ಕೃಷ್ಟವಾಗಿ ಪಡೆಯ.ತಕ್ಕ ಕೃಷಿಕರ್ಮ ವ್ಯವಸಾಯ ಮಾಡ.ವುದರಲ್ಲಿ ಅತ್ಯತ್ತ ಮನಸಿನಸವನ್ನು ಇದರಂತೆಯೇ ತಿತಿಹಾಸಪುರಾಣಾದಿಗಳಲ್ಲಿ ನಡುಸಿಹ.ನೆ ಕಳೆಗಳಂತೆ ಕೆಲವು ಅನ ವಶ್ಯಕವಾದ ಇಲ್ಲಸೆ ನಿರುದ್ಯೂ ವಚನಗಳೂ ದೊರೆಯುಬಹುದು ಅದನ್ನು ವಿವಾರಿಸಿ ತತ್ವಸಂಗ್ರಹಮಾಡತಕ್ಕವನು ಬಹು ವಿವೇಕಿಯಾಗಿರಬೇ ಕಾಗುತ್ತದೆ ತಿತಿಹಾಸಪುರಾಣಾದಿಗಳು ಸೂತ್ರಗಳಂತೆ ಬರೆಯಲ್ಪಟ್ಟಿರತಕ್ಕವುಗಳಲ್ಲ, ಮಾನವನ ವಿವೇಕವು ಅಭಿ ವೃದ್ಧಿಯಾಗುವುದಕ್ಕೆ ಸಹಕಾರಿಗಳಾದ ನಡುವಳಿಕೆಗಳನ್ನು ಸ್ಥಿರಪಡಿಸಲು ಬಗೆಬಗೆಯಿಂದ ರಂಜಿಸತಕ್ಕವುಗಳಾಗಿವೆ ಆರ್ಯರ ಪ್ರತಿಯೊಂದು ಗ್ರಂಥಕ್ಕೂ ಪ್ರತಿಸ್ಪರ್ಧಿಗಳೇ ಮೂಲಾಧಾರವಾಗಿರುವುದರಿಂದ ಶ್ರುತೀತರಗಳಲ್ಲಿ ವಿರೋ ಧಗಳು ಬಂದರೆ ಶ್ರುತ್ಯಾಚರಣೆಯೇ ಸಿದ್ಧಾಂತವೆಂಬು ದನ್ನೂ ಸ್ಥಿರಪಡಿಸಿರುವೆ ಇರುವರು. ಆದಕಾರಣವೇ ವೇದಮತದ ಮೇಲೆ ಯಾರೂ ಟೀಕಿಸುವುದಕ್ಕೆ ಲೇಶವೂ ಅವಕಾಶವಿಲ್ಲ ಈ ಮೊದಲೇ ಹೇಳಿರುವಂತೆ ವೇದ ಮತವು ಅಂತರ್ಬಾಹ್ಯಶುದ್ಧಿಗಳನ್ನೇ ಮುಂದುಮಾಡಿರು ಬಹುಜನರಿಗೆ ಇದರ ಆಚರಣೆಯು ಬಹು ಕಠಿಣವಾಗಿ ತೋರುವುದು. ಕೆಲವಾಂಥಕಜನರು ಮನಶ್ಶುದ್ಧಿಯಿಲ್ಲದೆ ದಿವಸಕ್ಕೆ ಎರಡು ಮೂರುಸಾರೆ ಸ್ನಾನಮಾಡುತ್ತಾರೆ. ಇದರಿಂದ ಪಾರಮಾರ್ಥವು ಸಿದ್ಧಿಸುವುದಿಲ್ಲ.

ಮಾನವನು ಯಾವಾಗಲೂ ಇಹಲೌಕಿಕ (ನಿದ್ರಾ ಹಾರ ಮೈಥುನ) ಸುಖವನ್ನೇ ವ್ಯಾಧಾಸ್ಯವಾಗಿ ತಿಳಿದಿದ್ದರೆ ಜಡವಾದ ಹಣವನ್ನೇ ಪ್ರಾಮುಖ್ಯವಾದುದ ನ್ನಾಗಿ ತಿಳಿದಿದ್ದರೆ ಅಂಧವನಿಗೆ ವೇದಾಂತ ಮತವು ರುಚಿಸುವುದಿಲ್ಲ, ಹೆಚ್ಚೇಕ ಸತ್ಕಾರಕ ಮಾತುಕತೆಗಳೂ ಸಹವಾಸವೂ ಅಸಕ್ಯವೆನಿಸುವವು ಶ್ರಾತೀಸಕರ್ಮವು ಬಲ ಪತ್ತರ ಹಗಾಗಲು ಕಾರಣವೇನೆಂದರೆ, ಇಹ ಸುಖಕ್ಕು ಪಾರಮಾರ್ಥಿಕ ಸುಖಕ್ಕೂ ಭೂಮ್ಯಾಕಾಶದಷ್ಟು ಅಂತರ ವಿರುವು ನಾವು ಇಹದಲ್ಲಿ ಅನುಭವಿಸುವ ಸುಖವು ವೇದಾಂತ ನ್ಯೆ ಪರಮಸುಖವಾಗಿಯೇ ಪರಿಣಮಿಸು ವುದು. ಇಂ ಸುಖವು ಕ್ಷಣಕಾಲ ನಿಶ್ಚಿತಕ್ಕದ್ದು. ಪರ ಸುಖವು ನಿತ್ಯವಾದುದು. ಇಲ್ಲಿಯ ಸುಖವೆಂಬುದು ಅದಿ ಯಲ್ಲಿ ಆನಂದವನ್ನು ಹುಟ್ಟಿಸತಕ್ಕುದು. ಪರಸುಖವು ಅಂತ್ಯದಲ್ಲಿ ಆನಂದದಲ್ಲಿ ನಿಶ್ಚಿತಕ್ಕಾಗಿರುವುದು. ವಾಚ ಕರೇ! ಕಾಂತಾಲಿಂಗನದಿಂದುಂಟಾದ ಕ್ಷಣಿಕ ಸುಖವೇ ಅಲ್ಪಕಾಲ ಪ್ರಸಂಚವನ್ನೇ ಮರೆಯುವಂತೆ ಮಾಡು ತ್ತಿರುವಾಗ ಅಖಂಡ ಬ್ರಹ್ಮಾನಂದವು ಪರಿಪಂಡವನ್ನು ಮರೆಯಿಸುವುದರಲ್ಲಿ ಆಶ್ಚರ್ಯವಿಲ್ಲ ಸಂಸಾರದಲ್ಲಿ ತೊಳಲಿ ಬಳಲಿ ಧನಂಜಯನಿಗಾಗಿ ಸುಳ್ಳು, ಳಕ್ಕ ಳತನ, ಕೊಲೆ, ಮೋಸ, ಕುಯುಕ್ತಿ ಕುತಂತ್ರ ಇತ್ಯಾದಿ ಇನ್ನೂ ಅನೇಕ ಮಾಡಬಾರದ ಹೀನ ದಿನ ಕೃತ್ಯ ಗಳನ್ನು ನೀರು ಕುಡಿದಂತೆ ಮಾಡಿ ಸುಖವನ್ನವೇಕ್ಷಿ ಸುವ ಇಹಸ್ಥಿಮ್ಯನೆಲ್ಲಿ ? ಸತ್ಯತಿ-ಸರಳತನದಿಂದಿದ್ದು ಮಮತೆಯನ್ನು ಬಿಟ್ಟು ಪರಹಿತವನ್ನೇ ಬೋಧಿಸುವ ನೇದಾಂತವೆಲ್ಲಿ ? ಈ ಕಾರಣದಿಂದಲೇ ಪಾಶ್ಚಾತ್ಯಕ ಸುಖವು ಬಹು ಜನರಿಗೆ ಲಭಿಸುವುದಿಲ್ಲ ಹೀಗೆ ವೇದಾಂತ ಸುಖವು ಯಾರಿಗೂ ಲಭ್ಯವಾಗದಿದ್ದ ನೇಲೆ ಅಂತಹ ಅಲಭ್ಯವಾದ ಸುಖವು ಪ್ರಹಂಚಿದಲ್ಲಿದ್ದು ಫಲವೇನೆಂಬ ಶಂಕೆಯುಟಾಗಬಹುದು ಅವನ್ನು ನಿವಾರಣೆ ಮಾಡು ವುದಕ್ಕಾಗಿಯೇ ವಿವಿಧ ಕರ್ಮಗಳನ್ನೂ ವಿಚೇಗಳನ್ನೂ ಬೋಧಿಸಿ ಅವನ್ನು ಅಚ್ಚುಸಿಸಿದರೆ ಕ್ರಮಕ್ರಮವಾಗಿ ಅಂತರ್ಬಾಹ್ಯ ಶುದ್ಧಿಗಳು ನೆಲೆಯಾಗಿ ನಿಂತು ಪಾರ ಲೌಕಿಕಸುಖಕ್ಕೆ ಕಾರಣವಾಗಿ ಪರಿಣಮಿಸುವುದೆಂಬ ಆಶಯವುಳ್ಳ ನಾನಾ ಸ್ಮೃತೀತಿಹಾಸ ಪುರಾಣಾದಿಗಳು ಹುಟ್ಟಿದವು ಇವುಗಳಲ್ಲಿ ನಂಬಿಗೆಯನ್ನಿಟ್ಟು ಅನುಸರಿ ಸಿದ ಮನುಷ್ಯನೇ ಆಸ್ತಿಕನೆನಿಸುವನು ಇದಕ್ಕೆ ವಿರೋ ಧವಾದ ಅಭಿಪ್ರಾಯ ನಡತೆಗಳುಳ್ಳವನೇ ನಾಸ್ತಿಕನೆನಿಸು ವನು ಆಸ್ತಿಕ ಧರ್ಮಾವಲಂಬಿಯಾದ ಮಾನವನು ದೈವಜ್ಞಾನವನ್ನು ಸಂಪಾದಿಸಿ ಪರಲೋಕದ ನಿತ್ಯಸುಖ ವನ್ನು ಪಡೆಯುವುದಕ್ಕಾಗಿ ಅಂತರ್ಬಹ್ಯಶುದ್ಧಿಯಲ್ಲಿಯೇ ವರ್ತಿಸುವುದಕ್ಕಾಗಿಯವಶ್ಯಕವಾಗಿರು ... ಪ್ರಕೃಮತಃ ಬಾಹ್ಯ ರ ದ್ಧಿಯಾದ ಹೊರತು ಅಂತಶ್ಶುದ್ಧಿಯು ಸ್ಫುರಿ ಸುವುದಿಲ್ಲ ಆದಪ್ರಯುಕ್ತ ಪ್ರತಿಯೊಬ್ಬರೂ ಬಾಹ್ಯ ಶುದ್ಧಿಯನ್ನು ಆಸಾಖ್ಯನಿತ್ಯ ತರಲು ತಮ್ಮ ದೇಹ ನೈವ ರ್ಯವನ್ನು ಕಾಪಾಡಿಕೊಳ್ಳಬೇಕು

ಈ ಕಾರಣದಿಂದಲೇ ಯಾವ ದೇವತೋಪಾಸನೆಯನ್ನು ಮಾಡಬೇಕಾದರೂ ಯಾವ ಕರ್ಮವನ್ನು ಆಚರಿಸಬೇಕಾದರೂ ಯಾವ ವಿಷಯಗಳನ್ನು ಜೋಧಿ ಸಬೇಕಾದರೂ ತಿಳಿಯಬೇಕಾದರೂ ಸ್ನಾನವನ್ನು ಮಾಡಿದ ಹೊರತು ಅಂತಹ ಕಾರ್ಯವನ್ನು ನೆರವೇ ರಿಸಬಾರದೆಂದು ನಿರ್ಬಂಧಿಸಿರುವರು ಮತ್ತು ನಮ್ಮ ಪೂರ್ವಾಚಾರ್ಯರು ಆರೋಗ್ಯಕ್ಕನುಸಾರವಾಗಿಯೇ ಧರ್ಮಕಟ್ಟುಳೆಗಳನ್ನು ಸ್ಥಾಪಿಸಿರುವರು ವಿಜಾರಶೀಲ ನಾದವನು ಇವನ್ನೂ ದೀರ್ಘದೋಚಿಸಿಮಾಡಿರಿದೆ ನಮ್ಮ ಹಿರಿಯರು ಪೂರ್ವಕಾಲದಲ್ಲಿ ಎಷ್ಟು ಆರೋಗ್ಯ ಸಂಪನ್ನರಾ ಗಿ ದೃಢಕಾಯರಾಗಿದ್ದರೆಂಬುದು ಯಾರಿಗೆ ತಾನೆ ವೈದ್ಯವಾಗಿಲ್ಲಿಲ್ಲ! ಹಾಸಿಗೆಯಿಂದ ಏಳುವುದಕ್ಕೆ ಮುಂಚೆಯೇ ಬಾಯಿನ್ನು ಸಹ ಮುಕ್ಕಳಿಸದೆ ದುರ್ವಾ ಸನೆಯ ಬಾಯಿಗೆ ಚಹಾ-ಕಾಫಿ ಮುಂತಾದ ದ್ರವಗಳ ನ್ನು ಸುರಿಯುವ ಈಗಿನ ನಾಗರೀಕತತಕ್ಕೂ ಬೆಳಗಾದ ಕೂಡಲೇ ಸ್ನಾನಮಾಡಿಯೇ ಇರಬೇಕೆಂಬ ಹೀಥಿ ನಿಯ ವೇದಾಂತದ ಮತಕ್ಕೂ ಎಷ್ಟು ವ್ಯತ್ಯಾಸವಿದೆ? ಹೀಗೆ ಸ್ನಾನದ ಕಾಲವನ್ನು ಸೂಚಿಸುವುದಕ್ಕಾಗಿಯೇ " ಆಹೆರಹಸ್ಸಂಧ್ಯಾಮುಪಾಸೀತ " ಎಂದು ಸೂತ್ರಿಸ ಲ್ಪಟ್ಟಿತು ಪ್ರತಿ ನಿತ್ಯವೂ ಪ್ರತಿ ಸಂಧ್ಯೆಯೂ ಸ್ನಾನ ಮಾಡಬೇಕಾದುದು ಎನ್ನು ಉತ್ತಮ ತತ್ವವೆಂಬುದು ವಿಜಾರಜ್ಞರಿಗಲ್ಲವೆ ಗೊತ್ತು ! ಸಂಧ್ಯಾವಂದನೆಯಲ್ಲಿ ಪರ ತಿವನನ್ನು ಸ್ತೋತ್ರಮಾಡಿ, ಅವನಲ್ಲಿ ತನ್ನ ಪಾಪಕೃ ಮೆಯನ್ನು ಬೇಡಿಕೊಳ್ಳುವ ಉತ್ತಮ ತತ್ವವಿರುವು ದರಿಂದ. ಅದನ್ನು ಆಚರಿಸುವುದು ಮನುಷ್ಯನ ನಿವೇ ಕಕ್ಕೂ ಜ್ಞಾನಕ್ಕೂ ಎಷ್ಟು ಸಹಕಾರಿಯೆಂಬುದನ್ನು ಬಿಚಾರಮಾಡಬೇಕಾಗುವೆ? ಪ್ರತಿನಿತ್ಯವೂ ಪಾಪಕ್ಷ ಮೆಯನ್ನು ಬೇಡುವುದರಿಂದ ಕ್ರಮಕ್ರಮವಾಗಿ ಪಾಪ ಮಾಡದಂತಹ ವಿವೇಕವು ಜಪಿಸುವುದರಲ್ಲೇನೂ ಅಡ್ಡಿ ಇಲ್ಲ. ದೇವರ ಧ್ಯಾನದಿಂದ ವಿಧೇಯತೆಯೂ ಶಾಂತ ತೆಯೂ ನಿರ್ಮಮತೆಯೂ ಉಂಟಾಗುವವು. ಆದಕಾ ರಣ ಸ್ನಾನವೂ ಮಮಿಯೂ ಆಸ್ತಿಕ ಧರ್ಮದ ಮೊದ ಲನೆಯ ಮೆಟ್ಟಿಲಾಗಿವೆ ಇದನ್ನುಳ್ಳವಿಸಿದ ಹೊರತು ಮನಶ್ಶುದ್ಧಿಗೆ ಅವಕಾಶವಿರುವದಿಲ್ಲ. ಮನಶ್ಶುದ್ಧಿಯನ್ನು ಪಡೆಯಬೇಕಾದರೆ ಮನುಷ್ಯನು ಬಹು ಶ್ರಧ್ಧೆಗಳನ್ನು ಕುಭವಿಸಬೇಕಾಗಿದೆ. ಏಕೆಂದರೆ ಮನಶ್ಶುದ್ಧಿಗೆ ಕ್ರಮವೂ ಭ್ಯನಿವು ಸತ್ಯವನ್ನು ಚ್ಚರಿಸುವುದೇ! ಯಾರು ನಿಜಕ್ಕೆ ಬಾಹಿರರೋ ಅವರು ದೇವರಿಗೂ ಬಾಹಿರರು. " ಸತ್ಯೇನ ಧಾರ್ಯತೇ ಪೃಥ್ವೀ " " ಸತ್ಯಾಂವದ " " ಧರ್ಮಂ ಚರ " ಇತ್ಯಾದಿ ಮಹಾವಾಕ್ಯಗಳೆಲ್ಲವೂ ವೇದಾಂತ ಬೋಧರಿಗಳಾಗಿವೆ. " ನಾವು ಪ್ರಾತಃಕಾ ಲಕ್ಕೆ ಎದ್ದು ವರಿಗೆ ಮಲಗುವವರೆಗೂ ಮಾತನಾ ಡುವ ಮಾತುಗಳೆಷ್ಟು ? ಅದರಲ್ಲಿ ನಿಜವಾದುವೆಷ್ಟು ?" ಎಂಬುದನ್ನು ವಿಮರ್ಶಿಸಿದರೆ ನಮ್ಮ ನಿಜವು ತಿಳಿಯು ವದಲ್ಲವೆ ? ಮನಶ್ಶುದ್ಧಿಗೆ ಎರಡನೆಯ ಸಾಧನವು ಪರ ಹಿತವಾಗಿದೆ. ಎರಡನೆಯವರ ಮನಸ್ಸನ್ನು ಕ್ಲೇಶ ರಣಗಳಿಂದಲೂ ನೋಯಿಸದೆ ಸರ ವಿಧಿಂದಲೂ ಅವರಿಗೆ ಸಂತೋಷವನ್ನುಟ್ಟುಮಾಡುವದು ಆಸ್ತಿಕ ಮತದ ಸರ್ವಸಾರವಾಗಿರುವದು. ದುರಾಚಾರಗಳನ್ನು ನೀಗಿಸುವದೇ ಆಸ್ತಿಕ ಧರ್ಮದ ಮೂರನೆಯ ತತ್ವವು ಇದರಿಂದ ಆಪೇಯಪಾನಾದಿಗಳ ಅಭಕ್ಷ್ಯಭೋಜ ನಾದಿಗಳೂ ಅಗಮ್ಯ ಗಮನಾದಿಗಳೂ ಪರಸ್ವಾಪಹರ ಣಾದಿಗಳೂ ನಿಷೇಧಿಸಲ್ಪಡುತ್ತವೆ. ಪರಸ್ತ್ರೀವಶನಾಗು ವಿಕೆ-ಕಷಟ - ಕುಯುಕ್ತಿ - ಆಸೂಯೆ-ಮತ್ಸರ - ದುರಾಶೆ ಇತ್ಯಾದಿಹೀನಕೃತ್ಯಗಳನ್ನೆಲ್ಲಾ ದೂರಮಾಡಬೇಕಾದುದು ಅತ್ಯಾವಶ್ಯಕವೆಂಬುದು ಇದರ ತತ್ವವಾಗಿದೆ. ಅಲ್ಲದೆ ತತ್ವವು ನಮಗೆ ಆಗಾಗ್ಗೆ ಕೆಳಗೆ ಕಂಡಂತೆ ಎಚ್ಚರಿಕೆ ಕೊಡುತ್ತಿರುವುದು. ಆದೇನೆಂದರೆ-" ನಿಜವನ್ನು ಹೇಳು, ಸ್ವಾರ್ಥತೆಯನ್ನು ತ್ಯಜಿಸು, ಕಷ್ಟದಲ್ಲಿರುವ, ಧೈರ್ಯವನ್ನು ತಾಳು, ಪರಹಿತಕ್ಕೆ ಏಳು, ನಿತ್ಯಸುಖದಲ್ಲಿ ಬಾಳು, ಈ ತತ್ವ ರತ್ನಗಳ ಸಾರವನ್ನು ಕೇಳು, ಕೇಳಿದ್ದರೆ ನಿನ್ನ ಜನ್ಮ ಹಾಳು" ಎಂದು ಉಚ್ಚಸ್ವರದಲ್ಲಿ ಉಚ್ಚರಿಸು ವದೇ ಅದರ ಮುಖ್ಯ ಗುರಿಯಾಗಿದೆ.

ಆದುದರಿಂದ ಆಸ್ತಿಕಧರ್ಮಾವಲಂಬಿಗಳು ದೇಹ ಮನಸ್ಸುಗಳನ್ನೂ ನಿರ್ಮಲವಾಗಿಟ್ಟುಕೊಂಡು ಶ್ರುತ್ಯಪ್ರಮಾ ಧಾರಿಗಳಾಗಿ ದೇವರನ್ನು ಧ್ಯಾನಮಾಡಿ ಪಾಪವಿಮುಕ್ತ ರಾಗಿಯೂ, ಪಾಪಾಚರಣೆಗಳಿಗೆ ಭೀತರಾಗಿಯೂ ವರ್ತಿಸಿ ಸತ್ಯವಂತರೆಂದೂ ಧಾರ್ಮಿಕರೆಂದೂ ಪರೋಪಕಾರಿ ಳೆಂದೂ ಪದಾಚಾರಸಂಪನ್ನರೆಂದೂ ಪ್ರಖ್ಯಾತರಾಗಿ ಪರ ಸುಖಕ್ಕೆ ಭಾಗಿಗಳಾಗಬೇಕೆಂಬುದು ಆರ್ಯಮತಧರ್ಮ ವಾಗಿದೆ ಇಂತಹ ಮತವನ್ನು ವಿಚಾರಮಾಡದೆಯೂ ಅನುಷ್ಠಾನವಲ್ಲಿ ತರದೆಯೂ ಅನೇಕರು, ಪರಸುಖಕ್ಕೆ ವಿರುದ್ಧವಾದ ಎವಿವಾಗುತ್ತಿರುವುದನ್ನು ನೋಡಿದರೆ ವ್ಯಸನಪಡಬೇಕಾ ಗಿದೆ. ವಾಕಪ್ರಿಯರಿಗೆ—ಆಸ್ತಿಕಧರ್ಮಾವಲಂಬಿಯಾದ ಪ್ರತಿಯೆಬ್ಬನೂ ಪಂಚಭೂತಗಳೂ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಒಂದರ ಕಾರ್ಯವನ್ನು ಮತ್ತೊಂದು ಮಾಡದೆ ತಮ್ಮ ತಮ್ಮ ಕಾರ್ಯದಲ್ಲಿ ನಿರತವಾಗಿರು ವಂತೆ, ಅಂದರೆ ಹೆಸ್ತ್ರಮಾಡುವ ಕಾರ್ಯವನ್ನು ಪಾದವೂ ನೇತ್ರಮಾಡುವ ಕಾರ್ಯವನ್ನು ಕರ್ಣವೂ ಕರ್ಣವು ಮಾಡುವ ಕಾರ್ಯವನ್ನು ನಾಸಿಕವೂ ಮಾಡದೆ ಸ್ವಧರ್ಮ ನಿರತರಾಗಿರಬೇಕು. ಇನ್ನು ಮುಂದಾದರೂ ಸರ್ವರೂ ವಿವೇಕವನ್ನು ತಂದುಕೊಂಡು ಆಸ್ತಿಕಧರ್ಮಾ ನುಲಂಬಿಗಳಾಗಿ ಮನೋವಾಕ್ಕಾಯಕರ್ಮಶುದ್ಧಿಗಳಿಂದ ವರ್ತಿ ಇಹಪರಸುಖಗಳನ್ನು ಸೂರೆಗೊಳ್ಳಲೆಂದು ಭವತಾರ ನಾದ ಭಗವಂತನನ್ನು ಪ್ರಾರ್ಥಿಸುವೆನು.

ಲಿಂಗಧಾರಣ ವಿಧಿ

ಬಹುಜನರ ಪ್ರಾರ್ಥನೆಯನುಸರಿಸಿ ಲಿಂಗಧಾರಣ ವಿಧಿಯೂ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗ ವರಿಗೆ ಈ ವಿಧಿಯು ಸುಖ್ಯವಾಗಿರುವದು. ಈ ವಿಧಿಯು ಉಕ್ತವಾಗಿರುವ ಸನುತ್ತ ವೇದಮಂತ್ರಗಳಿಗೆ ವೈದಿ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗ ಮಹಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇನೆ

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಶತ್ರಿಯೊಂದು ಗುರುವರ್ಗದ ಮತ್ತೆಲ್ಲ ಸಾಧಿಯಾದು ಶಿಷ್ಯರ ಮನೆಗಳಿಂತಿದ್ದು, ಆ ಮಹಾಧಿಕಾರಿಗಳು ಏಮುಪರ್ಸ್‌ಕ್ಕೋ ಹತ್ತುವರ್ಷಕ್ಕೋ ಒಂದುಜರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುತೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕೆ ಸುಪರಿಂ ಶಿಷ್ಯರ ಯಾವತ್ತು ವಿಷಯ ಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಬಡವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇವನ್ನು ದೂರಮಾಡುವುದಕ್ಕೋಸ್ಕರ ಲೇಖಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಿಸಲಾಗಿದೆ. ಇದರಲ್ಲಿ ಬರೆಯಲು ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಅದುದರಿಂದ ಸದರಿ ಪುಸ್ತಕ ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರ್ಶಪ್ರಕಾರ ವಿಷಯವನ್ನೆಲ್ಲಾ ಬರೆದು ಪಂಚಾಚಾರ್ಯರ್ಕ್ಕಾಗಿ ಬಂದ ತಮ್ಮ ಶಿಷ್ಯರನ್ನು ಕಾಣಾಡಿಕೊಳ್ಳಬೇಕು. ಇವೆಲ್ಲಾ ಎಂದೂ ಕೆಡದಂಥ ಅಗದಗಳನ್ನು ಪಡೆಯಿಸಿರುವದಲ್ಲದೆ ಹಂಚಿ ದವರಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂನ್ಯಾಸಿಯ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಕೆಳಗಿನ ಕೋಷ್ಟಕದಲ್ಲಿ ಬೆಲೆಯೊಡನೆ ಕೊಡಲ್ಪಟ್ಟಿರುವುದು.

ಔಷಧಿ ಹೆಸರು	ತೊಲೆ	ಮೂಲ್ಯ
ಪೂರ್ಣಮಕರಧ್ವಜ	೧	೩೦—೦—೦
ಪೂರ್ಣಚಂದ್ರೋದಯ	೧	೧೦—೦—೦
,, ತಿನೇ ನಂಬರ್	೧	೯—೦—೦
ಸಸಿಂಧೂರ	೧	೩—೦—೦
ಬ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ವಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳಭಸ್ಮ	೧	೦—೪—೦
ಕಂಚಿಭಸ್ಮ	೧	೦—೪—೦
ಪಿತ್ತಭಸ್ಮ	೧	೦—೪—೦
ಮಂಡೂರಭಸ್ಮ	೧	೦—೪—೦
ಪೂರ್ಣಮಲ್ಲಿಕಾಭಸ್ಮ	೧	೦—೧೫—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೪—೦
ಸ್ಪೈಚಿಪ್ಪಿನ ಭಸ್ಮ	೧	೦—೪—೦
ಗಂಧಾಗದ ಕೋಡಿನ ಭಸ್ಮ	೧	೦—೪—೦
ಗಾದಂತಿಕರಾಲಭಸ್ಮ	೧	೦—೪—೦
ಸಿಪ್ಪೂರಿ (೧ನೇ ನಂಬರ್)	೧	೫೦—೦—೦
ಲಾಜಿಕ ಸೂರ್ಯಪುಟ	೧	೧—೦—೦
ಲಾಜಿಕ ಅಗ್ನಿಪುಟ	೧	೦—೪—೦

ಸೂಚನೆ:—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಗುಟಿಕ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಸರ್ವವಿಧ ಔಷಧಿಗಳು ಸರ್ವರೋಗಗಳಿಗೆ ದೊರೆಯುವುದು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಒಬಿಮತ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಮಪ್ರಕಾಶಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಉಪ್ಪಿದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚಾರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೇ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವನ್ನು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಅದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿ ಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳನ್ನಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ಮಿಕ್ಕಿದ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿತಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ಏಯೋಜಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪ಳಳ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥಕ್ಕವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಪಡಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ — ೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಅಗಸ್ತ್ಯ ಮಹರ್ಷಿಗಳು, ವ್ಯಾಸ ಸೂತ ಮುನಿಗಳು ಮತ್ತು ಸಕಲ ಋಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೮ ಬೆಲೆ ೦ — ೧೨ — ೦

ಸದ್ಯ: ಸಿಂಹಾಸನಾರೂಢರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಷ್ಟಕಾವರಣ ಫೋಟೋ ಸೈಜು ೧೪×೧೦ ಬೆಲೆ ೧೫ — ೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಷ್ಟಕಾವರಣ ಫೋಟೋ ಸೈಜು ೧೦×೮ ಬೆಲೆ ೦ — ೮ — ೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಷ್ಟಕಾವರಣದ ಫೋಟೋ ಸೈಜು ೧೦×೮ ಬೆಲೆ ೦ — ೮ — ೦

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸುವ ಫೋಟೋ ೦ — ೦ — ೪

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸುವ ಫೋಟೋ ೦ — ೦ — ೪

ಶ್ರೀ ರೇಣುಕಾಚಾರ್ಯರು ಸಿಂಹಾಸನಾರೂಢರಾಗಿ ಪಟ್ಟಾಭಿಷೇಕ ಮಾಡಿಸಿಕೊಂಡು ಸುತ್ತೂರಮಠದ ಗುರುಪೀಠವನ್ನು ಧರ್ಮ ಅಮಾಡಿ ಮೂರು ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಬೆಲೆ ೦ — ೦ — ೪

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಆನುಗ್ರಹಿಸುವ ಫೋಟೋ ೦ — ೦ — ೪

ಶ್ರೀಶಾಕ್ಷೇತ್ರಾಧಿನಿವಾಸಮೂರ್ತಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಸುಂದರಮೂರ್ತಿಯ ಫೋಟೋ ೦ — ೦ — ೪

ಶ್ರೀ ಶಾಕೇ ಸಿಂಹಾಸನಾರೂಢರಾದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦ — ೦ — ೪

ಶ್ರೀಮದ್ಗುರುಭ್ಯೋ ನಿಂಬಸಾಮೀಶ್ವರ ಶ್ರೀ ಜಗದ್ಗುರು ಶಿವಲಿಂಗೇಶ್ವರಾಚಾರ್ಯರ ಫೋಟೋ ೦ — ೦ — ೪

ಶ್ರೀಮದ್ರೇಣುಕಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦ — ೦ — ೪

ಶ್ರೀಮದ್ಗುರುಭ್ಯೋ ಜಗದ್ಗುರು-ಳಿಗಳವರ ಸ್ವಸ್ಥಿಯಲ್ಲಿ ಶ್ರೀ ಶಾಕೇನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦ — ೦ — ೪

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ ೦ — ೦ — ೪

ಶ್ರೀ ಜಗದ್ಗುರು ರುದ್ರಮುನಿಸ್ವಾಮಿಗಳವರ ಮುಖವಾಕ್ಯದ ಅಕ್ಷರ ಸುಂದರವಾದ ಫೋಟೋ ೧೫ ೦ — ೦ — ೪

ಶ್ರೀ ಜಗದ್ಗುರು ಉಜ್ಜಯಿನಿ ಎಳೆದ ಮುಹೂರ್ತದ ಅಕ್ಷರ ಸುಂದರವಾದ ಫೋಟೋ ೧೫ ೦ — ೦ — ೪

ಶ್ರೀ ಜಗದ್ಗುರು ಉಜ್ಜಯಿನಿ ಎಳೆದ ಅಕ್ಷರ ಪ್ರಾಚೀನ ಕಟ್ಟಿಡದ ಸುಂದರ ಫೋಟೋ ೧೫ ೦ — ೦ — ೪

ಶ್ರೀ ಜಗದ್ಗುರು ಕೇದಾರಿಂಡಾಸನದ ಅತ್ಯಂತ ಸುಂದರವಾದ ಗೋಲ್ಡರವ ಫೋಟೋ ೧೫ ೦ — ೦ — ೪

ಹಿಮವತ್ಪರ್ವತದ ಮಧ್ಯವರ್ತಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೧೫ ೦ — ೦ — ೪

ಶ್ರೀರಂಭಾಪುರೀ ಜಗದ್ಗುರುಗಳವರ ಸ್ವಸ್ಥಿಯಲ್ಲಿ ಶ್ರೀರೇಣುಕಾಹಾರಾಜವರು ವಿರಾಜಿಸುತ್ತಿರುವ ಫೋಟೋ ೧೫ ೦ — ೦ — ೪

ಬೆಂಗಳೂರು ಕಂಟೋನ್ಮೆಂಟಿಲಿರುವ ನೆಗೆಟಿವ್ ರಂಭಾಪುರೀ ಜಗದ್ಗುರುಗಳ ಅಪ್ಪಟ ಪಟ್ಟಕ್ಕೆ ಕೂತ್ತವಿದ ಫೋಟೋ ೧೫ ೦ — ೦ — ೪

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂಪಾಯಿಗಳ ಮೇಲೆ ತಗಿಸಿಕೊಳ್ಳುವವರಿಗೂ, ಫೋಟೋ ಮ್ಯಾಗಜೀನಿಗೂ ೧ ರೂಪಾಯಿಗೆ ೪ ಅಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೆ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾರ್ವಜನರುಮುಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸೃಷ್ಟವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಸ್ಥಿಮಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೬೬ ವ್ಯಾಧಿಗಳನ್ನು ಸೃಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಸರಿಯಾಗುವುದು ಇವನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾವರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಅಣೆ ಡಜನ್ ಒಂದಕ್ಕೆ ಕ್ರಯ ರೂ. ೩-೮-೦ ವಿ.ಪಿ. ೮ ಆಣೆ

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[34] ಪೋ ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	..	೧	ಆಣೆ
ಸಚ್ಯಾಸಿಶ್ರೀಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)		೧	ಆಣೆ
ಪಂಚವಿಂಶತಿ ಪ್ರಸ್ಥಪ್ರಕಾಶ (೩ನೆಯ ಆವೃತ್ತಿ)	..	೧	ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	.	೧	ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)		೧	ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)		೨	ಆಣೆ
ಬಸವಾದಿಪ್ರಥಿತತ್ವದರ್ಪಣ (೪ನೆಯ ಆವೃತ್ತಿ)	..	೨	ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	.	೨	ಆಣೆ
ಪಂಚಾಚಾರ್ಯಸ್ತುತಿಕರ	..	೨	ಆಣೆ
ಶ್ರೀಗುರುಶತ್ಕ್ಲೋಪದಗಳು	... ..	೨	ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	..	೨	ಆಣೆ
ವೀರಶೈವಮತಮಿಮಾಂಸಾ	.	೩	ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	೩	ಆಣೆ
ಲಿಂಗಧಾರಣವಿಧಿ	.	೪	ಆಣೆ
ವಿವಾಹವಿಧಿ (೩ನೆಯ ಆವೃತ್ತಿ)		೪	ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ		೪	ಆಣೆ
ಸಚ್ಯಾಸಿಶ್ರೀಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	..	೬	ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸೈಜು)		೬	ಆಣೆ
ವೀರಶೈವಮಹಾತ್ಮರು ...	...	೬	ಆಣೆ
ಬಸವಧ್ವಾಂತತಿವಾಕರ (೨ನೆಯ ಆವೃತ್ತಿ)	....	೮	ಆಣೆ
ಶಿವಾದ್ವೈತಮಂಜರಿ (ಸಂಸ್ಕೃತ) ...	.	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)		೮	ಆಣೆ
ಸದ್ಯೋಧರಶ್ಲಾವಳಿ ...	....	೮	ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರೀಯಂತ್ರವಾಲ ಆಕೃತಿ ಸುಂದರಮುದ್ರಣ)		೧೨	ಆಣೆ
ಸಿದ್ಧಾಂತಶಾಸ್ತ್ರಾವಳಿ (ತ್ರಿಲೋಚನಶಿವಾಚಾರ್ಯಕೃತ)	..	೧೨	ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	..	೧೨	ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ...	.	೧೨	ಆಣೆ
ಶಿಖಾಸೂತ್ರಸಿದ್ಧಾಂತವರ್ಪಣ	....	೧೨	ಆಣೆ
ಶ್ರೀಕರಭಾಷ್ಯಂ (ಚಕ್ಕುಸ್ಯೂಸ್ಪ್ರಿ)	....	೧	ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ..	....	೧	ರೂ
ವೀರಶೈವಮತ್ಸ (೩ನೆಯ ಆವೃತ್ತಿ, ೭೦ಮಹತ್ಪದ ಫೋಟೋಗಳುಸಹಿತ)	....	೧	ರೂ
ಸಿದ್ಧಾಂತಶಿಖಾಮಣಿಪನಿಷತ್ (ಕನ್ನಡ ಟೀಕಾಸಹಿತ)		೧	ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	...	೧	ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪದ್ಯದಿ)	....	೧	ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	...	೨	ರೂ
ವೀರಶೈವಸಿದ್ಧಾಂತಸುಧಾಕರ	....	೩	ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೫ ಪುಟ)	....	೮	ರೂ
A brief life-sketch of Pandit Sri Kashinatha Shastriji (*English*)		೪	A
The Philosophical Aspect of Virasaivism (*English*) ...		೮	A
Speeches by Pandit Shri Kashinatha Shastriji (*English*)		೧೨	A
ವೀರಶೈವಧರ್ಮ (ಮರಾಠಿ) ...		೧	೪
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ ಸಹಿತ)		೧	೪
ವೀರಶೈವಧೂಳಾರ (ಸಂಸ್ಕೃತ)		೧	೪
ನೀತಿಕೋಶಕಾರಿಕಾ (ಸಂಸ್ಕೃತ)		೨	೮
ಲಿಂಗಧಾರಣಚಂದ್ರಿಕಾ (ಸಂಸ್ಕೃತ)		೩	೪

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಂಸ್ಥಾನದ ರೀಜನಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಣಿ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಸಂಚಲಿಂಗೋದ್ಭವರ್ ॥
ಪಂಚಾಚಾರವಿಧಾಯಮಕರ್ ಪರಲಪಸ್ಪರ್ಶಾಕ್ಷರೋದ್ಧೋಕರ್ । ಪಂಚಾಚಾರ್ಯಜಗನ್ಮರೂತ್ಪಮರವರ್ ಹಾಲಿಪ್ಪುವೀಪೀಠಕಮ್ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ ನೇ ಜನವರಿ ೧೯೪೧ [ಸಂಚಿಕೆ ೩೬

ಅಮೇರಿಕಾ ರಾಷ್ಟ್ರಾಧ್ಯಕ್ಷರ ಭಾಷಣ

ಅಮೇರಿಕಾದಾಜ್ಯಾಧ್ಯಕ್ಷರಾದ ಶ್ರೀ ರೂಸ್‌ವೆಲ್ಟರವರು ಕಾಂಗ್ರೆಸ್ ಮಹಾಸಭೆಯ 77ನೆಯ ಅಧಿವೇಶನದಲ್ಲಿ ಈ ಕೆಳಗೆ ಕಂಡಂತೆ ಭಾಷಣಮಾಡಿದರು

"ಅಮೆರಿಕೆಯ ಇತಿಹಾಸದಲ್ಲಿಯೇ ಉದಾಹರಣೆಗಳಲ್ಲದೆ ಇರುವ ಇಂದಿನ ವಿಷಮ ಪರಿಸ್ಥಿತಿಯಲ್ಲಿ ನಾನು ಮಾತನಾಡುತ್ತಿರುವೆನೆಂದೂ ಈಗ ಅಮೇರಿಕಾಕ್ಕೆ ಹೊರಗಿನಿಂದ ಮಹಾ ವಿಪತ್ತು ಸ್ಪಷ್ಟಹಿತವಾಗುವ ಸ್ಥಿತಿಯುಂಟಾಗಿರುವುದೆಂದೂ, ಮ್ಯೂನಿಚ್ ಒಪ್ಪಂದವಾಗಿ ವು ವಕ್ಷೇಂತ ಮುಂಚಿತವಾಗಿಯೇ ನಡೆಯುತ್ತಿದ್ದ ಸಮಾಧಾನ ಪ್ರಯತ್ನವೂ ಅಲ್ಲಿಂದೀಚೆಗೆ ಎಲ್ಲ ದೇಶಗಳಲ್ಲೂ ಸ್ಥಾಪಿಸಲ್ಪಡುವ ಉಗ್ರವಿಜ್ಞಾಕೆಯ ಪ್ರಭುತ್ವದ ನೀತಿಯೂ 1919ನೇ ವರ್ಷದಲ್ಲಿ ಆದ ಶಾಂತಿ ಒಪ್ಪಂದ ಕ್ಕಿಂತಲೂ ಅನ್ಯಾಯವಾಗಿನೆಯೆಂದೂ, ಈ ಉಗ್ರವಿಜ್ಞಾಬಳಿಕೆಯ ಪ್ರಭುತ್ವವನ್ನು ಎದುರಿಸಲು ಅನೇಕ ಪ್ರಬೆಗಳು ಸಿದ್ಧರಾಗಿದ್ದಾರೆಂದೂ, ಡೆಮೋಕ್ರಾಟಿಕ್ ಪ್ರಭುತ್ವವು ಇಂದು ರಕ್ಷಣೆ ಪ್ರಚಾರದ ಮೂಲಕವಾಗಿಯೋ ಶಸ್ತ್ರಾಸ್ತ್ರಗಳ ಮೂಲಕವಾಗಿಯೋ ಇಂದು ವಿಪತ್ತಿಗೊಳಗಾಗಿದೆ ಯೆಂದೂ, ನಾಗರಿಕತೆಯನ್ನು ವಿನಾಶಮಾಡುವ ರಾಷ್ಟ್ರಗಳು, ಇಂದು ಆ ಪ್ರಯತ್ನಕ್ಕೆ ಕೈಹಾಕಿವೆಯೆಂದೂ, ಇಂದು ಅಮೇರಿಕದ ರಕ್ಷಣೆಯೂ ಪ್ರಜಾಪ್ರಭುತ್ವದ ಭದ್ರತೆಯೂ, ಅಮೇರಿಕಾ ಗಡಿಗಳಾದಾಚೆ ನಡೆಯುತ್ತಿರುವ ಘಟನೆಗಳನ್ನು ಅವಲಂಬಿಸಿವೆಯೆಂದೂ, ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಅದರ ಜೀವಿತಕ್ಕಾಗಿ, ನಾಲ್ಕು ಬೃಹತ್ತುಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಯೆಂದೂ, ಆ ರಕ್ಷಣ ಪ್ರಯತ್ನವು ವಿಫಲವಾದರೆ, ಯೂರೋಪ್, ಏಷ್ಯ, ಆಫ್ರಿಕ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿರುವ ಎಲ್ಲ ಸಾಧನ ಸಂಪತ್ತುಗಳೂ ಗೆದ್ದವರ ಅಧೀನವಾಗುವುವೆಂದೂ" ಸುಡಿದರು.

ಅಮೇರಿಕವೊಂದೇ ಜಗತ್ತನ್ನು ಎದುರಿಸುವುದಕ್ಕೆ ಸಮರ್ಥವಾಗಿಲ್ಲ. ಸರ್ವಾಧಿಕಾರಿಗಳು ಜೇಗ ಬರೆಯಿಸುವ ಶಾಂತಿಯಿಂದ ಜಗತ್ತಿನ ನಾನಾ ರಾಷ್ಟ್ರಗಳಿಗೆ ಸ್ವಾತಂತ್ರ್ಯ ದೊರೆಯುವುದೆಂಬುದೂ ಅಂತರ ರಾಷ್ಟ್ರೀಯ ವ್ಯಾಪಾರವು ಲಭ್ಯವಾಗುವುದೆಂಬುದೂ, ಜಗತ್ತಿನಲ್ಲಿ ಶಾಸ್ತ್ರ ವಿನ್ಯಾಸವಾಗುವುದೆಂಬುದೂ ಸಾಧ್ಯವಿಲ್ಲದ ಮಾತು. 'ಸಮಾಧಾನ' ಪಡಿಸಲೇಬೇಕು ಹೇಳುವವರ ಮಾತಿಗೆ ನಾವು ಹೆಚ್ಚು ಗಮನ ಕೊಡಬಾರದು ಸಮುದ್ರ ಮಾರ್ಗವನ್ನು ದಾಟಿ ಅಮೇರಿಕೆಯನ್ನು ಮುತ್ತಬಹುದೆಂಬ ಭೀತಿಯು ಅಮೇರಿಕಾಕ್ಕೆ ಇಲ್ಲವೆಂದು ಹೇಳುವವರು ಅನೇಕರಿದ್ದಾರೆ. ಬ್ರಿಟಿನ್ನಿನ ನೌಕಾ ಬಲವು ಹಿಟ್ಲರನ ಕೈಕಾಶಿಕೊಂಡು ಬರುವವರೆಗೂ ಆ ಭೀತಿ ಇರುವುದಿಲ್ಲ. ಒಂದು ವೇಳೆ ಬ್ರಿಟಿನ್ನಿನ ಬಲಯುತವಾದ ನೌಕಾಬಲ ಇಲ್ಲದೆಹೋದರೂ, ಸಾವಿರಾರು ವೈರಿಗಳ ಕೈಮುದ್ರವನ್ನು ದಾಟಿ ಅಮೇರಿಕದಲ್ಲಿ ಶತ್ರುಗಳ ಸೈನಿಕರನ್ನು ಇಳಿಸುವುದು ಸಾಧ್ಯವಿಲ್ಲದ ಮಾತು. ಮಾರ್ಗದಲ್ಲಿ ಕೆಲವು ಮುಖ್ಯ ಸ್ಥಳಗಳನ್ನು ನೌಪಡಿಸಿಕೊಂಡರೆ, ಈ ಪ್ರಯತ್ನವು ಸಾಧ್ಯವಾಗುವುದು ಅತ್ಯವಣ ನಡೆಸುತ್ತಿರುವ ರಾಷ್ಟ್ರಗಳು, ಆಕ್ರಮಣಕಾರ್ಯದಲ್ಲಿ ಕೈ ಮುಂದುಮಾಡಿವೆವರೆಗೂ, ಆ ಆಕ್ರಮಣ ಕಾರ್ಯವನ್ನು ನಡೆಸುವ ಸಮಯ, ಧಾಟಿ, ಮತ್ತು ಆಕ್ರಮಣ ರೀತಿ ಇವುಗಳನ್ನು ಆ ದೇಶಗಳೇ ಇತ್ಯರ್ಥ ಪಡಿಸಬೇಕಾಗಿದೆ ನಾವು ಇತ್ಯರ್ಥಪಡಿಸುವುದಕ್ಕೆ ಸಾಧ್ಯವಿಲ್ಲ ಅದುದರಿಂದಲೇ ಅಮೇರಿಕೆಯ 'ರಿಪಬ್ಲಿಕ್' ಪ್ರಭುತ್ವಗಳ ಭವಿಷ್ಯಕ್ಕೆ ಇಂದು ವಿಪತ್ತು ಸನ್ನಹಿತವಾಗಿರುವುದು ಅದುದರಿಂದಲೇ ಇಂದು ಅಮೇರಿಕಾದ ಪ್ರಭುತ್ವಾಧಿಕಾರಿಗಳ ಜವಾಬ್ದಾರಿಯು ಮಹತ್ತರವಾದುದು" ಎಂಬುದಾಗಿ ಹೇಳಿದರು

ಸಣ್ಣನಾಗಲೀ ದೊಡ್ಡವಾಗಲೀ ಎಲ್ಲ ರಾಜ್ಯಗಳ ಹಕ್ಕುಬಾಧ್ಯತೆಗಳನ್ನು ಮನ್ನಿಸುವ ಮತ್ತು ನ್ಯಾಯ ಪಾಲನೆ ಮಾಡುವ ನೀತಿಯೇ ಅಮೇರಿಕೆಯ ವಿದೇಶಾಂಗ ನೀತಿಯೆಂದೂ, ಕೊನೆಗೆ ನ್ಯಾಯಕ್ಕೂ ಧರ್ಮಕ್ಕೂ ಜಯವಾಗುವುದೆಂದೂ ಸೂಚಿಸಿ ತಮ್ಮ ನೀತಿಯೇನೆಂಬುದನ್ನು ಮರುಉಚ್ಚಾರಣ ವಿಂಗಡಿಸಿದರು

೧ ಅಮೇರಿಕೆಯ ರಕ್ಷಣ ಪ್ರಯತ್ನದ ವಿಷಯವಾಗಿ ಅಮೇರಿಕಾ ಪ್ರಜೆಗಳು ತಮ್ಮ ದೃಢ ಸಂಕಲ್ಪವನ್ನು ವ್ಯಕ್ತಪಡಿಸುವುದು

೨. ಆಕ್ರಮಣವನ್ನು ಪ್ರತಿಘಟಿಸುತ್ತಿರುವ ದೇಶಗಳಿಗೆಲ್ಲ ಬೆಂಬಲವನ್ನು ನೀಡುವುದು.

೩. ಆಕ್ರಮಣಕಾರರೂ ಸಮಾಧಾನ ಪ್ರಯತ್ನದಲ್ಲಿ ನಿರತರಾಗಿರುವವರೂ ಮುಂದಿಡುವ ಶಾಂತಿ ಪರತ್ತುಗಳನ್ನು ಒಪ್ಪಿಕೊಳ್ಳದೆ ಇರುವುದು.

ಅಮೇರಿಕೆಯಲ್ಲಿ ಆಗುತ್ತಿರುವ ವಸ್ತು ನಿರ್ಮಾಣ ಪ್ರಯತ್ನಗಳಿಂದ ತಮಗೆ ತೃಪ್ತಿಯಾಗಿಲ್ಲವೆಂದೂ ಬೇಗ ಬೇಗನೆ ಇನ್ನೂ ವಸ್ತುಗಳು ಹೆಚ್ಚು ಹೆಚ್ಚಾಗಿ ನಿರ್ಮಾಣವಾಗಬೇಕೆಂದೂ, ವಿಮಾನಗಳನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿ ಅಮೇರಿಕೆಯು ಹಿಂದೆ ಉಳಿದಿರುವುದೆಂದೂ, ಸಂಗ್ರಾಮ-ಸಾಮಗ್ರಿಗಳನ್ನು ನಿರ್ಮಾಣ ಮಾಡುವ ಕೆಲಸದಲ್ಲಿ ಮುಂದುವರಿದಿರುವೆಂದೂ, ಈ ಪ್ರಯತ್ನಗಳನ್ನು ಮತ್ತಷ್ಟು ವೇಗನೆ ನಡೆಸಿಕೊಂಡು ಬರುವುದಕ್ಕೆ ಹೆಚ್ಚು ಹಣಬೇಕೆಂದೂ, ಅಲ್ಲದೆ ಸಂಗ್ರಾಮ ನಡೆಸುತ್ತಿರುವ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ವಸ್ತು ಗಳ ಸಹಾಯ ಮಹುವುದಕ್ಕೆ ಕೂಡ ಹಣವನ್ನು ಕೇಳ ಲಾಗುವುದೆಂದೂ ಸೂಚಿಸಿದರು.

"ಸಂಗ್ರಾಮದಲ್ಲಿ ಭಾಗವಹಿಸಿರುವ ಪ್ರಜಾಪ್ರಭುತ್ವ ದೇಶಗಳಿಗೂ ನಮಗೂ, ನಮ್ಮದೇಶವು ದೊಡ್ಡ 'ಶಸ್ತ್ರಾಗಾರ' ವಾಗಿರಬೇಕೆಂಬುದೇ ನಮ್ಮ ಇಷ್ಟ ಆ ದೇಶಗಳಿಗೆ ಮಾನವಬಲ ಬೇಕಿಲ್ಲ. ರಕ್ಷಣೆಗೆ ಉಪಯೋಗಿಸುವ ಕೋಟ್ಯಂತರ ಡಾಲರುಗಳ ಬೆಲೆಬಾಳುವ ಆಯುಧ ಸಾಮಗ್ರಿಗಳು ಅವರಿಗೆ ಬೇಕಾಗಿವೆ ಆ ದೇಶಗಳವರು ಸಾಕಷ್ಟು ಆಯುಧಸಾಮಗ್ರಿಗಳನ್ನು ಕೊಂಡುಕೊಳ್ಳುವ ಶಾಲಿವು ಮುಗಿದುಹೋಗುತ್ತಿದೆ. ಬೇಕಾಗುವ ಆಯುಧ ಸಲಕರಣೆಗಳನ್ನು ಕೊಂಡುಕೊಳ್ಳಲು ಚೈತನ್ಯವಿಲ್ಲದ ಪ್ರಯುಕ್ತ 'ನೀವು ಶರಣಾಗತರಾಗಿರಿ' ಎಂದು ನಾವು ಅವರಿಗೆ ಹೇಳಲು ಸಾಧ್ಯವಿಲ್ಲ ಈ ಆಯುಧ ಸಲಕರಣೆಗಳನ್ನು ಕೊಂಡು ಕೊಳ್ಳಲು ಡಾಲರುಗಳನ್ನು ಕೊಡುತ್ತೇವೆಂದು ತಿಳಿದಾಸ್ ಮಾಡಬೇಕಾದುದಿಲ್ಲ ನಮ್ಮ ಕಾರ್ಯಕ್ರಮದಲ್ಲಿಯೇ ಇತರ ದೇಶಗಳ 'ಆರ್ಡರು' ಗಳನ್ನೂ ಸೇರಿಸಿ ಶಸ್ತ್ರಾಸ್ತ್ರಗಳ ನಿರ್ಮಾಣ ಮಾಡುತ್ತ ಹೋಗಬೇಕೆಂದು ನಾನು ಸೂಚನೆಮಾಡುತ್ತೇನೆ ಅವರಿಗಾಗಿ ಸಿದ್ಧಮಾಡುವ ಸಲಕರಣೆಗಳಲ್ಲವೂ ಸಮಯಬಂದಾಗ ಅಮೇರಿಕೆಯ ರಕ್ಷಣೆಗಾಗಿ ಉಪಯೋಗಿಸಲ್ಪಡುವುವು ನಾವು ಹೊರಗಡೆ ಕಳುಹಿಸುವ ವಸ್ತುಗಳೆಲ್ಲ, ಅವೇ ವಿಧವಾದ ಸಾಮಗ್ರಿಗಳನ್ನು ಸಂಗ್ರಾಮವು ಮುಗಿದುಹೋದ ತರುವಾಯ ನ್ಯಾಯವೆಂದು ತೋರಿಬರುವ ಅವಧಿಯಲ್ಲಿ, ಅಮೇರಿಕಾಕ್ಕೆ ಕೊಟ್ಟುಬಿಡಲಾಗುವುದು ಇಲ್ಲವೇ ನಾವೆ ಇತ್ತುಪಟ್ಟೆದೆ, ಆ ದೇಶಗಳಲ್ಲಿ ದೊರೆಯುವ ವಸ್ತುಗಳನ್ನು ನಮಗೆ ಕಳುಹಿಸಬಹುದು" ಎಂದರು.

ತಮ್ಮ ಭಾಷಣವನ್ನು ಮುಂದುವರಿಸುತ್ತ—

ಪ್ರಜಾಪ್ರಭುತ್ವರಾಷ್ಟ್ರಗಳನ್ನು ಕುರಿತು, ನಾವು ಹೀಗೆ ಹೇಳೋಣ. "ನಿಮ್ಮ ರಕ್ಷಣೆಯ ಪ್ರಯತ್ನದಲ್ಲಿ ಅಮೇರಿಕದ ಪ್ರಜೆಗಳಾದ ನಮಗೆ ಬಹಳ ಆಸಕ್ತಿ ಇರುವುದು. ಸ್ವತಂತ್ರವಾದ ಜಗತ್ತಿನ ರಕ್ಷಣೆಗಾಗಿ ನಾವು ನಿಮಗೆ ಎಲ್ಲಾ ವಿಧದಲ್ಲಿಯೂ ನೆರವಾಗುವೆವು. ಹೆಚ್ಚು ಹೆಚ್ಚಾಗಿ ನಾವು ನಿಮಗೆ, ಹಡಗುಗಳನ್ನೂ, ವಿಮಾನಗಳನ್ನೂ, ಟ್ಯಾಂಕುಗಳನ್ನೂ, ಫಿರಂಗಿಗಳನ್ನೂ, ಕಳುಹಿಸಿಕೊಡುತ್ತೇವೆ. ಇದು ನಮ್ಮ ಉದ್ದೇಶ ಮತ್ತು ಧರವಸೆ ಈ ಭರವಸೆಯನ್ನು ಪಾಲಿಸಿಕೊಂಡು ಬರುವಾಗ ಸರ್ವಾಧಿಕಾರಿಗಳ ಗೊತ್ತು ಬೆದರಿಕೆಗಳಿಗೆ ನಾವು ಸೊಪ್ಪುಹಾಕುವುದಿಲ್ಲ ಅಂತರಂಬ್ಯೀಯ ಕಾನೂನುಗಳನ್ನು ಮುರಿಯಲಾಗುವುದೆಂದು ಸರ್ವಾಧಿಕಾರಿಗಳು ಹೆದರಿಸುವುದಕ್ಕೆ ನಾವು ಬೆದರುವುದಿಲ್ಲ ಆ ರೀತಿ ಸಹಾಯಮಾಡಿದರೆ ಸಂಗ್ರಾಮದಲ್ಲಿ ಭಾಗವಹಿಸಿದಂತಾಯಿತೆಂದು ಏಕ ಪಕ್ಷವಾಗಿ ಸರ್ವಾಧಿಕಾರಿಗಳು ವೇಳುವುದಾದರೂ ನಾವು ಆ ರೀತಿ ಭಾವಿಸುವುದಿಲ್ಲ ನಮ್ಮ ಮೇಲೆ ಯುದ್ಧ ನಡೆಸಲು ಸರ್ವಾಧಿಕಾರಿಗಳು ಸಿದ್ಧವಾಗಿರುವಾಗ ನಾವು ಯುದ್ಧದಲ್ಲಿ ಭಾಗವಹಿಸುವವರೆವಿಗೂ ಅವರು ಕಾಯುವುದಿಲ್ಲ. ಸ್ಪೇನ್, ಬೆಲ್ಜಿಯಂ ಮತ್ತು ಹಾಲೆಂಡ್ ದೇಶಗಳು ಯುದ್ಧ ಹೂಡುವವರೆಗೂ ಅವರು ಕಾಯಲಿಲ್ಲ" ಎಂಬುದಾಗಿ ನುಡಿದರು.

ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ

ಮನೋನಿಗ್ರಹ

(ಲೇ—ಆರ್ ಎಂ ಮಲ್ಲಿಕಾರ್ಜುನಸ್ವಾಮಿ, ಕಿಬ್ಬಹಳ್ಳಿ)

ಒಂದಾನೊಂದು ಕಾಲವಲ್ಲಿ ರುಕಿಂಗೂ ವ್ಯಾಸನ ಹೆಸರಿಗೆಗೂ ಒಂದು ಶಾಶ್ವತೀಯ ಸಂಗತಿಯಲ್ಲಿ ಸಂಬಂಧ ಏರ್ಪಡಿಯಿತು. ಒಹುಕಾಲ ಉಭಯರಿಗೂ ಸಾಜಸಖ್ಯವು ಇತ್ತು. ಇವರಿಬ್ಬರು ಶರುವಾಯ ಪುತ್ರನಿಗೆ ಸಂಬಂಧವು ಇನ್ನೂ ನಿಲ್ಲಿಯಾಗಲಿಲ್ಲವೆಂಬಂಬವನ್ನು ಇಂಗಿತಜ್ಞರಿಗೆ ಇನ್ನು ಅರಿತರು. ಕೇವಲ ಸಮಸ್ಯೆಯಲ್ಲಿ ಸ್ವಾಸ್ಥವನ್ನು ಪಡೆದಿರುವುದನ್ನು ಅವರು ಗಮನಿಸಿದರು. ಆಗ ಅವ "ಎಲೈ ರುಕಿನ ಈಗ ನೀನು ಜನಕರಾಯನಲ್ಲಿ ! ಹೋಗುವವನಾಗು. ಇತನ ನಿನ್ನ ಸಂಶಯಗಳನ್ನು ಪರಿಹರಿಸುವನು ಎಂ ಎಲ್ಲರೂ ತಿಳಿಸಿದರು

ಜನಕನು ವಿದೇಹರಾಜ್ಯಕ್ಕೆ ಎಸಿಸಿಪಾರಾಣಿ ಮಾತಕರಿಗೆ ಸೊತ್ತಿರಬಹುದೆಂದು ಎಲ್ಲರಿಂಗಿಂತಲೂ ಹಕ್ಕೆ ವಿಜ್ಞಾನವಿರಬಹುದೆಂದು ಭಾವಿಸಿ ಅವನಲ್ಲಿಗೆ ನಿವೃತ್ತಿಮಾರ್ಗವನ್ನು ಕುರಿತು ಪ್ರಶ್ನೆಗಳನ್ನಲ್ಲಾ ನಿವೇದಿಸಿದ ಮೇಲೆ ಅವನು ಅವರಿಗೆ ಜ್ಞಾನೋಪದೇಶವನ್ನು ಮಾಡಿದನು. ಆಗ ಅವರು ಅವನಿಗೆ ಪಡಿಸಿಕೊಳ್ಳಬೇಕಾದ ಕೆಲವು ಸಾಧನಗಳನ್ನು ತಿಳಿಸಿದರು. ಅವುಗಳಲ್ಲಿ ಮನೋನಿಗ್ರಹವು ಒಂದು. ಇದು ಕಠಿಣವಾದ ಸಾಧನವಾಗಿರುವುದರಿಂದ ಅವರು ಅವನಿಗೆ ಸತ್ಸಂಗ ಸ್ವಾಧ್ಯಾಯಾದಿ ಮಾರ್ಗಗಳನ್ನು ಅವಲಂಬಿಸಿ ಆಕ್ರಮಿಸಿಕೊಳ್ಳಬೇಕಾದ ಕ್ರಮವನ್ನು ಸಹ ಅವರಿಗೆ ಉಪದೇಶಿಸಿದರು. ಅವರು ಅವನಿಗೆ ಮನೋನಿಗ್ರಹಕ್ಕೆ ಅವಶ್ಯಕವಾದ ಕೆಲವು ಸಾಧನಗಳನ್ನು ಸಹ ಅವನ

ನಿಶೆಗೊಳ್ಳುವದು. ಇದೇ ವಿಷಯವು ನಿಜಲಿಂಗಶರಣರ ದಲ್ಲಿ ಈ ರೀತಿಯಾಗಿ ಹೇಳಲ್ಪಟ್ಟಿದೆ—

ಆರಹತ್ತು ಪಾಲ್ವು ವಿದ್ಯೆಯಲಿ ಪರಂಜೆನಾಗಿ ಧುರಧೀರಧರ್ಮ ತ್ಯಾಗಿಯು ಭೋಗಿ ತಾಪಿಸಿ ಸರಲೋಳಲೊಳು ನರನಿನಡಿ ಯಿಂದಲಿ ನಡಿದುಮಿಡಿಗೊಂಡುಜಂಗಮ ಮೆರೆವ ನಿಂಜಾಂಡ ದೊಳು ಸೂತ್ರದಿಂದಡಗಿಪ್ಪ ಪರಬ್ರಹ್ಮನೊಳು ಪುನವ ನಂದು ಭವಜೆಲಯುತ್ತಿರುವಾಗಿನೆಯುಂಟೆ ನಿಜಲಿಂಗ ॥೨॥

ಬರಬರಿಲಾಯತಿ ಜಲಬಿಲ್ಲ ಹಾಯುಬ್ಬಿಲವು ಭವತಾಪಾಸ್ತ್ರವ ಸೂಪಪಾಸ್ತ್ರ ಮಸ್ತ್ರಶಾಸ್ತ್ರ ಮೆರೆವ ಜ್ಯೋತಿಷಾಸ್ತ್ರ ಶಬ್ದತರ್ಕಾದಿಶಲಕಾಸ್ತ್ರಗಳನ್ನೆಲ್ಲ ನಿರುತದಿಂ ಸಾಧಿಸಿವ ಬಿಡದೆ ಮಾಡಿಹೊರೇನು ಪರಂಜ್ಯೋತಿವಸ್ತುವನು ತನ್ನೊಳ ಗೆ ತಾ ತಿಳಿಯುಸುವ ವೀರವಿದ್ಯೆಕೈಯೆ ನಿಜಲಿಂಗ ॥೩॥

ಸತ್ತದಿಂಬಲಿ ಪುತ್ತಗಳಾಯಿಡೋದೇನು ಮತ್ತತೇನರಿಯೊ ಡನೆ ಇದಿ ಹೈಬಿದೊದೇನು ಬಿತ್ತಿರಿದ ಭಕ್ಷಸ್ಥ ಭಾಜಗಳ ಕಲಿಕಲಿ ತು ಪ್ರೌಢನಾಗಿದ್ದೋದೇನು ಸತ್ತು ಮರೆ ಮರೆಂ ಹುಟ್ಟುವ ದೇಹ ವನು ಳಿಕಲು ನಿತ್ಯಕರ್ಮಾನಷ್ಠಾನಾನಂದನಾಗಿರುವ ಆಧ್ಯಾತ್ಮವಿದ್ಯೆಗೆ ಹೆಯೆ ನಿಜಲಿಂಗ ॥೪॥

ಮೇಲಿನ ಪದ್ಯಗಳಿಂದ ಆಧ್ಯಾತ್ಮಿಕ ವಿದ್ಯೆಯು ಎಷ್ಟು ಮಹತ್ವಪೂರ್ಣವೆಂಬುದು ಸ್ಪಷ್ಟವಾಗಿ ತಿಳಿಯುವಂತಿದೆ. ಈ ವಿದ್ಯೆಯೇ ನಿಜವಾದ ಶಾಶ್ವತ ಸುಖವನ್ನು ಕೊಡುವಂಥದಾಗಿದೆ. ಇಂಥಹ ಸುಖವನ್ನು ಪ್ರತಿಯೊಬ್ಬ ಮನುಷ್ಯನು ಹೊಂದಬೇಕೆಂಬುದೇ ಪರಮಾತ್ಮನ ಸಂಕಲ್ಪವಾಗಿದೆ. ನಿಧಿಯನ್ನು ಕಾಣುವುದಕ್ಕೆ ಅಂಜನವೂ, ಕತ್ತಲೆಯನ್ನು ಪರಿಹರಿಸುವುದಕ್ಕೆ ಸೂರ್ಯನೂ, ಹೇಗೆ ಬೇಕೋ ಹಾಗೆಯೇ ಈ ಆಧ್ಯಾತ್ಮಿಕ ವಿದ್ಯೆಯ ಪ್ರಾಪ್ತಿಗೆ ಗುರುವು ಮುಖ್ಯ ಬೇಕು

ದಮಾತೇಂದ್ರಿಯವರ್ಗಾಯ ಸತ್ಕ್ಷಾಚಾರದಯಾಯ ತ । ಸಂಸರಕಾಲೇ ಸತ್ಯವಚೇ ಶುದ್ಧತೇಜಸೇ ।
ಶರಪ್ರಾಪ್ತಾಲಾಯುಬ್ಬಗ್ರಹಣೇನಾತ್ಮತೇಜಸೇ ॥೪॥

ಎಂಬ ತಾಸ್ತ್ರೋಕ್ತಿಯಂತೆ ಗುರುವು ಈ ಲಕ್ಷಣಗಳಿಂದ ಕೂಡಿದವನಾಗಿರಬೇಕು. ಅದುದರಿಂದ ಸರ್ವರೂ ಇಂಥ ಬ್ರಹ್ಮನಿಷ್ಠನಿಪ್ಪನನ್ನು ಅಶ್ರಯಿಸಿ ಆತ್ಮೋದ್ಧಾರಕವಾದ ವಿದ್ಯೆಯನ್ನು ಕಲಿತು ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಅಪ್ಪಂತ ಆಗ್ರಹದಿಂದ ಸೂಚಿಸುತ್ತೇವೆ

ಆಹಾರ ಗುಣದೋಷಗಳು

ಯಾವ ಪದಾರ್ಥವನ್ನೇ ಆಗಲಿ ಸೇವಿಸುವಾಗ ಅದರ ಗುಣದೋಷಗಳನ್ನರಿಯುವುದವಶ್ಯಕವಾಗಿದೆ ಮುಂದೆ ಒದಗಬಹುದಾದ ತೊಂದರೆಗಳಲ್ಲಿ ಜಾಗರೂಕತೆಯಿಂದಿರುತ್ತದೆ ಈ ಜಾಗರೂಕತೆಯಿಂದ ಮನುಷ್ಯರಿಗೆ ಹಿತಕರವಸ್ತುಗಳ ಸೇವನೆಯಲ್ಲಿ ಪ್ರವೃತ್ತಿಯುಂಟಾಗುತ್ತದೆ. ಆದುದರಿಂದ ಸರ್ವಸಾಧಾರಣವಾಗಿ ನಿತ್ಯದಲ್ಲಿಯೂ ಮತ್ತು ಅಗಿಂದಾಗ ಉಪಯೋಗಿಸಲ್ಪಡುವ ಕೆಲವು ವಸ್ತುಗಳ ಗುಣದೋಷಗಳನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸುವುದಾಗುತ್ತದೆ.

ಅಕ್ಕಿ—ಹೊಸದಾಗಿರುವ ಅಕ್ಕಿಯು ಸಿಹಿಯಾಗಿದ್ದು ಪುಷ್ಟಿಕರವಾಗಿರುವುದಾದರೂ ಬೇಗನೆ ಜೀರ್ಣವಾಗುವದಿಲ್ಲ ಹಳೆಯ ಅಕ್ಕಿಯು ಶರೀರದ ಸಂಧಿಗಳನ್ನು ಬಲಪಡಿಸುವುದು ಮತ್ತು ಮೇಹರೋಗವನ್ನು ಶಾಂತಗೊಳಿಸುವುದಾಗಿದೆ. ಯಾವಾಗಲೂ ಹಳೆಯ ಅಕ್ಕಿಯೇ ಹಿತಕರವಾಗಿರುತ್ತದೆ. ಆದರೆ ಎರಡು ವರುಷಗಳ ಮೇಲೆ ಶಕ್ತಿಯಲ್ಲಿ ಸತ್ವವು ಕಡಿಮೆಯಾಗುವುದು. ಆದುದರಿಂದ ಬಹಳ ಹಳೆಯ ಅಕ್ಕಿಯು ಪುಷ್ಟಿಕರವಾಗಿರುವದಿಲ್ಲ. ತೀಗಗಳಿಗೆ ಮಾತ್ರ ಅತ್ಯಂತ ಹಿತವಾಗಿರುತ್ತದೆ. ಅಕ್ಕಿಯನ್ನು ತೊಳೆದು ನಿರ್ಮಲವಾದ ನೀರಿನಲ್ಲಿ ಹದ ವಾಗಿ ಬೇಯಿಸಿ ಗಂಜಿಯನ್ನು ಬಸಿದು ಉಣ್ಣುವುದರಿಂದ ತೀಗನೆ ಪಚನವಾಗುವುದು ಮತ್ತು ಶರೀರವು ಹಗುರವಾಗಿರುವುದು ನೀರನ್ನು ಇಂಗಿಸಿ ಮಾಡಿದ ಅನ್ನವು ರೀರಕ್ಕೆ ಹಿತಕರವಾದುದು

ಹುರಿಹಕ್ಕಿಯ ಅಕ್ಕಿ—ಅಕ್ಕಿಯನ್ನು ಹೊತ್ತಬಂತೆ ನ್ನಾಗಿ ಹುರಿದು ನೀರಿನಲ್ಲಿ ಬೇಯಿಸಿ ಬಸಿದ ಅನ್ನವು ಅತ್ಯಂತ ಲಘುವಾಗಿಯೂ, ಕಫನಾಶಕವಾಗಿಯೂ ಇರುತ್ತದೆ. ಮತ್ತು ವಿಷ ವಿಕಾರದಲ್ಲಿಯೂ, ಕಫಸಂಬಂಧವಾದ ರೋಗಗಳಲ್ಲಿಯೂ ಹುರಿದಕ್ಕಿಯ ಅನ್ನವೇ ಹಿತಕರವೆಂದು ಚರಕಸಂಹಿತೆಯು ಬೋಧಿಸುತ್ತದೆ. ಮತ್ತು ಭಾವಪ್ರಕಾಶಕರನಾದರೂ ಹುರಿದಕ್ಕಿಯ ಅನ್ನವನ್ನು ಲಘುವೆಂತಲೂ, ರುಚಿಕರವೆಂತಲೂ ಕಫ ಮತ್ತು ವಾತ ಗಳನ್ನು ನಾಶಗೊಳಿಸುತ್ತವೆಂತಲೂ, ಅಗ್ನಿಮಾಂದ್ಯವುಳ್ಳ ವರಿಗೂ, ಬಸ್ತಿಕ್ರಿಯೆಯಮತ್ತು (ಎನಿಮಾ) ಮಾಡಿಕೊಂಡ ವರಿಗೂ, ವಿರೇಚನೌಷಧವನ್ನು (ಭೇದಿಯ ಔಷಧ) ಸೇವಿಸಿದವರಿಗೂ ಬಹಳ ಹಿತವಾಗಿರುವುದೆಂದು ಹೇಳಿರುವನು.

ನಾಲ್ಕು ವಿಧವಾದ ಗಂಜಿ—ಅಕ್ಕಿಯ ಅಗುಳುಗಳಿಲ್ಲದ ಗಂಜಿಯು 'ಮಂಡ' ವೆಂತಲೂ, ಸ್ವಲ್ಪ ಅಗುಳು ಗಳಿಂದ ಕೂಡಿ ಗಂಜಿಯೇ ಹೆಚ್ಚಾಗಿರುವುದು 'ಪೇಯ' ಎಂತಲೂ, ಅಗುಳುಗಳು ಹೆಚ್ಚಾಗಿದ್ದು ನೀರು ಸ್ವಲ್ಪ ವಾಗಿರುವ ಗಂಜಿಯು 'ವಿಲೇಪಿ' ಎಂತಲೂ, ಅಗುಳು ಗಳೂ ನೀರೂ ಸಮಭಾಗದಿಂದಿದ್ದು ಬಹಳ ಗಟ್ಟಿಯಾಗಿ ದಿರುವ ಗಂಜಿಯು 'ಯವಾಗೂ' ಎಂತಲೂ ಸುಶ್ರುತ ಸಂಹಿತೆಯಲ್ಲಿ ನಿರ್ದೇಶಿಸಲ್ಪಟ್ಟಿದೆ.

ಮಂಡದ ಗುಣ—ಮಂಡವೆಂಬ ತಿಳಿಯಾದ ಗಂಜಿಯು ಮಲವನ್ನು ಬಂಧಿಸಕಕ್ಕದ್ದು. ಹಗುರ. ಶೈತ್ಯ ಗುಣವುಳ್ಳದ್ದು ಅಗ್ನಿಯನ್ನು ವೃದ್ಧಿಗೊಳಿಸುವುದು ಬಲ ಮತ್ತು ಸಂತೃಪ್ತಿಯನ್ನುಂಟುಮಾಡಿ ಸಪ್ತ ಧಾತು ಗಳನ್ನು ಸಮಗೊಳಿಸಿ ಜ್ವರ, ಪಿತ್ತ ಶ್ಲೇಷ್ಮಗಳನ್ನೂ, ಆಯಾಸವನ್ನೂ ನಾಶಗೊಳಿಸುವುದು.

ಪೇಯದ ಗುಣ—ಪೇಯವೆಂಬ ಗಂಜಿಯು ಬಹಳ ಹಗುರವಾದುದು ಮಲವನ್ನು ಬಂಧಿಸುವುದು ಧಾತು ಪುಷ್ಟಿಯನ್ನುಂಟುಮಾಡಿ ಬಾಯಾರಿಕೆ, ಜ್ವರ, ವಾಕ, ಆಶಕ್ತತೆ, ಉದರರೋಗ ಇವುಗಳನ್ನು ನಾಶಗೊಳಿಸಿ ಬೆವರನ್ನುಂಟುಮಾಡಿ ಒಕ್ಕರಾಗ್ನಿಯನ್ನು ವೃದ್ಧಿಗೊಳಿಸಿ ವಾಯು ಮತ್ತು ಮಲವನ್ನು ಸಡಲಿಸುತ್ತದೆ. ಈ ಗಂಜಿ ಯಲ್ಲಿಶುಂಠಿ ಸೈಂಧವಲವಣಗಳನ್ನು ಕೂಡಿಸಿ ಕುಡಿಯು ವುದರಿಂದ ಅಗ್ನಿಯು ವೃದ್ಧಿಯಾಗಿ ಪಚನ ಶಕ್ತಿಯು ಬೆಳೆದು ಅಮಶೂಲೆಯು ಶಾಂತವಾಗುತ್ತದೆ ಮತ್ತು ಮಲಮೂತ್ರಗಳ ಒದ್ದತೆಯನ್ನು ಹೋಗಲಾಡಿಸಿ ನಾಲ ಗೆಯ ಅರೋಚಕತೆಯನ್ನು ನಾಶಗೊಳಿಸುವುದು.

ಯವಾಗೂ—ಯವಾಗೂ ಎಂಬ ಗಂಜಿಯು ಬಹಳ ಹಗುರವಾದುದು ಅಗ್ನಿಯನ್ನು ವೃದ್ಧಿಗೊಳಿಸಿ ಬಾಯಾ ರಿಕೆಯನ್ನು ಶಾಂತಗೊಳಿಸಿ ಬಸ್ತಿಯನ್ನು ಶುದ್ಧಗೊಳಿಸು ವುದು. ಮತ್ತು ಆಯಾಸವನ್ನು ನಿವಾರಿಸಿ ಜ್ವರ ಮತ್ತು ಅತಿಸಾರವನ್ನು ನಾಶಗೊಳಿಸುವುದು

ವಿಲೇಪಿ—ವಿಲೇಪಿಯೆಂಬ ಗಂಜಿಯು ಅಗ್ನಿ ಯನ್ನು ವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಹೃದಯ ದಲ್ಲಿ ಕಾಂತಿಯನ್ನು ಸ್ಥಿರಗೊಳಿಸುವುದು. ಬಾಯಾರಿಕೆ, ಜ್ವರ ಇವುಗಳನ್ನು ದೂರಮಾಡಿ ಶೈತ್ಯವನ್ನುಂಟು ಮಾಡತಕ್ಕದ್ದು. ಗಾಯಹೊಂದಿದವರಿಗೂ, ಕಣ್ಣು ಬೇನೆಯವರಿಗೂ ಬಹಳ ಪಥ್ಯವಾದುದು

ಅರಳಿಕ ಮಂಡ—ಹಪ್ಪಲಿ, ಶುಂಠಿಗಳ ಚೂರ್ಣಗ ಳಿಂದ ಮಿಶ್ರಿತವಾದೀ ಗಂಜಿಯು ವಿರೇಚನೌಷಧವನ್ನು ಸೇವಿಸಿದವರಿಗೆ ಅತ್ಯಂತ ಹಿತವಾಗಿರುವುದಾಗಿದೆ ಮತ್ತು ಅಗ್ನಿಯಮ್ಲ ವೃದ್ಧಿಗೊಳಿಸಿ ವಾಯುವನ್ನು ಅನುಲೋ ಮನ (ತೇಲಮುಖವಾಗುವದು) ಗೊಳಿಸುತ್ತದೆ.

ಈ ಗಂಜಿಗಳು ನಿತ್ಯೋಪಯೋಗಿಗಳಲ್ಲದಿದ್ದರೂ ಇವು ಸಂದರ್ಭಾನುಸಾರವಾಗಿ ಅತ್ಯಂತ ಲಾಭಕರಗಳಾಗಿ ರುವುದರಿಂದ ಇಲ್ಲಿ ಬರೆಯಲ್ಪಟ್ಟಿವೆ.

ಗೋಧಿ—ಸಿಹಿ, ಅತ್ಯಂತ ರುಚಿಕರ, ಬಲ, ಶೈರ್ಯ, ವೀರ್ಯಗಳನ್ನು ವೃದ್ಧಿಗೊಳಿಸುವುದು. ಬಹಳ ಸಾವಕಾಶ ದಿಂದ ಜೀರ್ಣವಾಗುವುದು. ಬಹಳ ತಂಪಾದುದು ವಾತ ಪಿತ್ತಗಳನ್ನು ಶಾಂತಗೊಳಿಸುವುದು. ಶರೀರದ ಸಂಧಿ ಗಳನ್ನು ಬಲಪಡಿಸುವದು (ಹೊಸ ಗೋಧಿಯು ವಾತಕ್ಕೆ) ಕಾಂತಿಯನ್ನು ಹೆಚ್ಚಿಸುವುದು ಅತಿ ಸ್ನಿಗ್ಧವಾದುದು.

ಜವೆ—ಒಗರು ಮತ್ತು ಸಿಹಿ, ಶೀತಗುಣವು ಳ್ಳದು, ಮಲವನ್ನು ಸಡಿಲಿಸುವುದು, ಬುದ್ಧಿವರ್ಧಕ, ಕಫ ಪಿತ್ತಗಳನ್ನು ಶಾಂತಗೊಳಿಸುವುದು, ಎಳ್ಳಿನಂತೆ ಯಾವಾಗಲೂ ವ್ಯಣಗಳಿಗೆ ಹಿತಕರವಾಗಿದೆ. ಸ್ಥಿರತೆ-ಅಗ್ನಿ ಸ್ವರ-ವರ್ಣ ಇವುಗಳನ್ನು ವೃದ್ಧಿಗೊಳಿಸುವುದು, ಸ್ಥೂಲತೆಯನ್ನು ತಗ್ಗಿಸುವುದು, ಮೇಧಸ್ಸಿನ ವಿಕಾರ ಬಾಯಾರಿಕೆ ವಾತರೋಗ ಇವುಗಳನ್ನು ನಿವಾರಿಸುವುದು. ಮೂತ್ರರೋಗ-ಚರ್ಮರೋಗ-ಕಂಠರೋಗ ಇವುಗಳಿಂದ ಪೀಡಿತರಾದವರಿಗೆ ಹಿತಕರವಾಗಿರುತ್ತದೆ.

ರಾಗಿ—ಸಿಹಿ ಮತ್ತು ಒಗರು ರಸಗಳ ಮಿಶ್ರರುಚಿ ಯಿಂದ ಕೂಡಿರುವುದು, ತಂಪು, ಪಿತ್ತವಿಕಾರಗಳನ್ನು ನಿವಾರಿಸುವುದು, ಬಲವನ್ನುಂಟುಮಾಡುವುದು; ಇದು ನಿಧಕ್ಟುರತ್ವಾಕರದಲ್ಲಿ ಹಗುರಾಗಿರುವುದೆಂತಲೂ, ಶ್ರಿ ದೋಷನಾಶಕವೆಂತಲೂ ವರ್ಣಿಸಲ್ಪಟ್ಟಿರುತ್ತದೆ.

ಬಿಳಿ ಜೋಳ—ಸಿಹಿ ಮತ್ತು ಒಗರು; ಕಫ ಪಿತ್ತ ಗಳನ್ನು ಶಮನಗೊಳಿಸುವುದು, ಬಲಕಾರಿ, ಮೂಲ ವ್ಯಾಧಿ-ಗುಲ್ಮ-ವ್ರಣಗಳಲ್ಲಿ ಹಿತಕರವಾದುದು; ಕಣ್ಣಿಗೆ ಗಳಿಗೆ ಹಿತಕರವಲ್ಲ ಜೋಳದ ಹಗುರಾಯಿಯಲ್ಲಿ ಬೀಜೋ ತ್ಪತ್ತಿ ಆಯ್ತಪ್ರಮವಾಗಿರುತ್ತದೆ.

ಸಜ್ಜೆ—ಉಷ್ಣ, ಹೃದಯಕ್ಕೆ ಹಿತಕರ, ಬಲಕರ, ಕಾಂತಿವರ್ಧಕ, ಪಿತ್ತವನ್ನು ಹೆಚ್ಚಿಸುವುದು, ಮತ್ತು ಅಗ್ನಿಯನ್ನು ವೃದ್ಧಿಮಾಡುವುದು, ವೀರ್ಯಕ್ಕೆ ಹಿತಕರ ವಾದುದಲ್ಲ ಕಫ ಮತ್ತು ವಾಯುವನ್ನು ಕಡಿಮೆ ಮಾಡುತ್ತದೆ.

ಬೇಳೆಗಳ ಸಾಮಾನ್ಯ ಗುಣ—ಸಕಲ ವಿದ ಬೇಳೆ ಗಳೂ ಸಾವಕಾಶವಾಗಿ ಜೀರ್ಣವಾಗತಕ್ಕುವಾಗಿವೆ. ಬೇಳೆ ಗಳಲ್ಲಿ ಶರೀರಪೋಷಕತ್ವವು ವಿೀಪವಾಗಿರುವುದು. ಸಾರು ಅಥವಾ ತೋವೆಯನ್ನು ಮಾಡುವಾಗ ಬೇಳೆಗಳನ್ನು ನೀರಿನೊಡನೆ ಕೂಡಿ ಹೋಗುವಂತೆ ಬೀಯಿಸುವುದವಶ್ಯಕ ತ್ಯಕವಾದುದು ಇಲ್ಲವಾದರೆ ಬೇಗನೆ ಪಚನವಾಗುವದಿಲ್ಲ. ಪಂಜಾಬ್ ಮತ್ತು ಬಂಗಾಲ ಪ್ರಾಂತ್ಯಗಳಲ್ಲಿ ಉಪ್ಪು ವಿಶೇಷವಾಗಿ ನಿತ್ಯೋಪಯೋಗಿಯಾಗಿದೆ. ದಕ್ಷಿಣ ದೇಶ ದಲ್ಲಿ ಹೊಗರು ಬೇಳೆಯು ನಿತ್ಯೋಪಯೋಗಿಯಾಗಿರುತ್ತದೆ ಆದರೆ ಹೆಸರು ಬೇಳೆಯೇ ರೋಗಿಗಳಿಗೆ ಅತ್ಯಂತ ಹಿತಕರವಾಗಿರ ವುದೆಂದು ವೈದ್ಯಶಾಸ್ತ್ರವು ವಿಧಿಸುತ್ತದೆ.

ಹೆಸರು—ಸಕಲವಿಧ ಬೇಳೆಗಳಿಗಿಂತಲೂ ಇದರಲ್ಲಿ ವಾತಪ್ರಕೋಪಗುಣವು ಕಡಿಮೆಯಾಗಿರುವುದರಿಂದಲೇ ಇದು ಚರಕಸಂಹಿತೆಯಲ್ಲಿ "ಮುದ್ಗಃ ಸೂಪೇಷ್ವತ್ಯಮೋ ಮತಃ' ಎಂಬ ತೋವೆಗೆ ಅತ್ಯಂತ ಶ್ರೇಷ್ಠವಾಗಿ ಪರಿ ಗಣಿಸಲ್ಪಟ್ಟಿದೆ ಇದು ಕಣ್ಣುಗಳಿಗೆ ಅತ್ಯಂತ ಹಿತಕರ ವಾದುದು ಸಿಹಿ ಮತ್ತು ಒಗರಿನಿಂದ ಕೂಡಿರುವುದು, ಒರಟಾದುದು, ಶೈತ್ಯಗುಣವುಳ್ಳದ್ದು, ಪಾಕವಾದನಂತರ (ಜೀರ್ಣಿಯಲ್ಲಿ) ಕಟುರಸದಿಂದ ಕೂಡುವುದು, ಹಗುರ ವಾದುದು, ಕಫ ಪಿತ್ತಗಳನ್ನು ಶಮನಗೊಳಿಸುವುದು, ಇದರಲ್ಲಿ ಹೆಸರು ಬಣ್ಣವುಳ್ಳದ್ದೇ ಅತ್ಯುತ್ತಮ ಗುಣ ವುಳ್ಳದಾಗಿದೆ ಕಾಡು ಜೆಸರಿನಲ್ಲಿಯೂ ಇವೇ ಗುಣ ಗಳಿರುತ್ತವೆ.

ತೊಗರಿ—ಒಗರು, ಸಿಹಿ, ಶೈತ್ಯ ಗುಣವುಳ್ಳದ್ದು, ಹಗುರ, ಮಲವನ್ನು ಬಂಧಿಸುವುದು, ವಾತಗುಣವು ಳ್ಳುದು ಕಾಂತಿಯನ್ನುಂಟುಮಾಡುವುದು ಪಿತ್ತ ಕಫ ರಕ್ತ, ಇವುಗಳ ವಿಕಾರವನ್ನು ನಾಶಗೊಳಿಸುವುದು.

ಕಡಲೆ—ಸಿಹಿ, ಒಗರು ರಸಗಳಿಂದ ಕೂಡಿದೆ. ತೀತ, ಬಹಳ ಒರಟಾದುದು ಕಫ ರಕ್ತ ಪಿತ್ತವಿಕಾರ ಗಳನ್ನೂ ಪುರುಷತ್ವವನ್ನೂ ನಾಶಗೊಳಿಸುವುದು. ವಾ ಯುವನ್ನು ನೃತ್ತಿಮಾಡುವುದು. ಆದರೆ ಶಾಸ್ತ್ರದೊಡನೆ ಸೇರಿತ್ರಿದೋಷಗಳನ್ನು ಶಾಂತಗೊಳಿಸುವುದು. ಕೆಂಡದಲ್ಲಿ ಮತ್ತು ಎಣ್ಣೆಯಲ್ಲಿ ಹುರಿದ ಕಡಲೆಯಲ್ಲಿಯೂ ಮೇಲಿನ ಗುಣಗಳೇ ಇರುವುವು. ನೆನೆಸಿ ಅಥವಾ ಹಸಿಪಾಗಿಯೇ ಹುರಿದ ಕಡಲೆಯು ಬಲಕರವೂ, ರುಚಿಕರವೂ ಆಗಿರು ವುದು ಒಣಗಿದ ಕಡಲೆಯನ್ನು ಹುರಿದುದರಲ್ಲಿ ವಿಶೇಷ ರುಕ್ಷ (ಒರಟು) ಗುಣವಿರುತ್ತದೆ. ಬೀಯಿಸಿದ ಕಡಲೆ ಯು ಪಿತ್ತಕಫಗಳನ್ನು ನಾಶಗೊಳಿಸುವುದು. ಕಡಲೆಯ ತೋಲೆಯಿಂದ ಹೊಟ್ಟೆಯಲ್ಲಿ ಕ್ಷೋಭ (ಗುಹುಗುಹು ಎಂಬ ಶಬ್ದ ನೋವು ಮುಂತಾದ ವಿಕಾರಗಳು) ಹುಟ್ಟಾ ಗುವುದು. ಹಸಿಯ ಕಡಲೆಯು ಬಹಳ ಮೃದು, ರುಚಿ ಕರ, ಒಗರು, ಮಲವನ್ನು ಬಂಧಿಸುವುದು. ಹಗುರ,

[೬ ನೆಯ ಪುಟವನ್ನು ನೋಡಿ.

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ.

ಪುಷ್ಪ ಬಾಲ ಪುಷ್ಕಾರ (ಸೈಕಲಾಜಿಸ್ಟ್)

ಯಾವ ಗುರು ಸಾರ್ವಭೌಮನ ಸನ್ನಿಧಾನಕ್ಕೆ ಸಮಸ್ತ ಜಗದ್ಗುರು ದೇಶೀಕೇಂದ್ರರುಗಳು ಪ್ರಕಾಶಕೆ ಬಂದರೋ, ಯಾವ ಮಹಾತ್ಮನ ಪವಿತ್ರವಾದವಿನ್ಯಾಸದಿಂದ ವೀರ ಶೈವ ತಪಸ್ಸು ವೈಭವವು ಕರ್ನಾಟಕ ಆಂಧ್ರ ಮಹಾರಾಷ್ಟ್ರಾದಿದೇಶಗಳಲ್ಲಿ ಪ್ರಕಾಶಿತ ವಾಯಿತೋ ಯಾವ ಧರ್ಮಪ್ರಭಾವದ ದಿವ್ಯಸ್ಪರ್ಶೆಯಿಂದ ವೀರಶೈವಗುರು ವರ್ಗವು ಎಚ್ಚತ್ತು ತನ್ನ ಕರ್ತವ್ಯಕರ್ಮದಲ್ಲಿ ನಿರತವಾಯಿತೋ ಯಾವ ಸಂಕಲ್ಪಾವತಾರಿಯು ಪಾದಾರವಿಂದವನ್ನು ಭಕ್ತವೃಂದವು ಪೂಜಿಸಿ ಭಜಿಸಿ ಧ್ಯಾನಿಸಿ ಸವಿಸಿ ಸಕಲೈಶ್ವರ್ಯಾಧಿಷ್ಠಿರಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯನ ಧರ್ಮಬೋಧಾಮೃತವನ್ನು ಪಾನಮಾಡಿ ಸಮಸ್ತಪ್ರಾಣಿವರು ಸದ್ಧರ್ಮ ಶೀಲರಾದರೋ, ಯಾವ ಯತಿಪುಂಗವನ ನೈಜವಾದ ವಿರತಿಧರ್ಮವನ್ನು ನೋಡಿ ಸಮಸ್ತ ಪ್ರತೀಯ ಯತಿತತಿಯು ಮುಕ್ತಕಂಠದಿಂದ ಸ್ತುತಿಸಿತೋ, ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣದಿಂದ ಕಪ್ಪವದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆ ಯಿಂದ ದೀನರ ಪಾಲಿಗೆ ದೂರವಾದವೋ, ಯಾವ ಪುಣ್ಯಮೂರ್ತಿಯ ಪಾದದರ್ಶನದಿಂದ ಪಾಪಿಗಳು ಪಾಪದಿಂದ ಸೂರಾಗಿ ಪುಣ್ಯಮಯ ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯವರ್ಗವು ಮಂತ್ರಮಯವಾಗಿ ವಿರಾಜಿಸಿತೋ, ಯಾವ ಮಹಿಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಾಭಿಧಾನವು ಪ್ರತಿಯೊಬ್ಬರ ಮುಖಮಂಟಪದಲ್ಲಿ ನರ್ತನಮಾಡಲು ಪ್ರಾರಂಭಿಸಿತೋ, ಯಾವ ಧರ್ಮಾವತಾರಿಯ ತಪಃಪ್ರಭಾವದಿಂದ ಉಜ್ಜಯಿನೀ ಸದ್ಧರ್ಮ ಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವ ವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ತಿಪ್ಪೈಕ್ಯರಾಗಿ ಪ್ರಸ್ತೆ ಬರಿ ೪ ಮಿತಿಗೆ ೫ ವರ್ಷಗಳ ಪೂರ್ತಿ ಯಾಗುವವು ಆ ದಿವಸ ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರೂ ಶ್ರೀಜಗದ್ಗುರುಗಳವರ ಪುಣ್ಯದಿನವನ್ನು ವಿಶೇಷ ಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ

ಅಮೆರಿಕೆಯಲ್ಲಿ ರಕ್ಷಣ ಸಿದ್ಧತೆ

ರೂಜವೆಲ್ಟರು ಈಗ ಅಮೆರಿಕೆಯ ಪ್ರಜಾಪ್ರಭುತ್ವ ರಕ್ಷಣೆಗಾಗಿ ಎಷ್ಟು ವೆಚ್ಚಮಾಡುವುದೆಂಬುದನ್ನು ಹೊರ ಗೆಡಹಿದ್ದಾರೆ ಅಮೆರಿಕೆಯ ರಕ್ಷಣೆಗಾಗಿ ಇನ್ನು ಮೂರು ವರ್ಷಗಳಲ್ಲಿ ೨೫೦೦ ಕೋಟಿ ಡಾಲರುಗಳನ್ನು ವೆಚ್ಚಮಾಡಲಾಗುವುದೆಂದೂ, ಇನ್ನೂ ಹೆಚ್ಚು ಹಣವನ್ನು ವಚ್ಚ ಮಾಡಬೇಕಾದ ಅವಶ್ಯಕತೆಯು ಕಂಡುಬಂದರೆ ಹೆಚ್ಚು ಹಣವನ್ನು ವೆಚ್ಚ ಮಾಡಲಾಗುವುದೆಂದೂ, ಎಂತಹ ಕಠಿನ ಪರಿಸ್ಥಿತಿ ಬಂದರೂ ಭೂ, ಜಲ ಮತ್ತು ವಾಯುಮಾರ್ಗಗಳಲ್ಲಿ ಶತ್ರುಗಳನ್ನು ಸಂಪಾದಿಸಿ ವಿಪತ್ತುಗಳನ್ನು ಎದುರಿಸುವುದಕ್ಕೆ ಅಮೆರಿಕೆಯು ಸಿದ್ಧವಾಗಿರ ಬೇಕೆಂದೂ ಅಲ್ಲದೆ ಪ್ರಜಾತ್ರಭುತ್ವ ರಕ್ಷಣೆಗಾಗಿ ಹೋರಾಡುತ್ತಿರುವ ಇತರ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿ ಕೊಡುತ್ತ ಹೋಗಲಾಗುವುದೆಂದೂ, ೧೫ ಲಕ್ಷ ಜನ ರುಳ್ಳ ಸೈನ್ಯ ಬಲವು ಮುಂದಿನ ವರ್ಷದಲ್ಲಿ ಸ್ಥಾಪಿಸಲ್ಪಡುವುದೆಂದೂ, ನೌಕಾಬಲವು ಮುಂದಿನ ವರ್ಷ ದ್ವಿಗುಣವಾಗುವುದೆಂದೂ, ವಿಮಾನಗಳ ಸೈನಿಕರ ಸಂಖ್ಯೆಯು ಅಪಾರವಾಗಿ ಹೆಚ್ಚುವುದೆಂದೂ, ಆಯುಧ ಪಲಕರಣೆಗಳ ಉತ್ಪತ್ತಿಯು ಆತ್ಯಾಶ್ಚರ್ಯಕರ ವಾದ ರೀತಿಯಲ್ಲಿ ಹೆಚ್ಚುವುದೆಂದೂ, ಅಲ್ಲದೆ ೧೦ ಲಕ್ಷ ಮಂದಿ ಸಿವಿಲ್ ಪ್ರಜೆಗಳಿಗೆ ಶಿಕ್ಷಣ ಕೊಡುವ ಟ್ರೈನಿಂಗ್ ಸೀಮನ್ನು ಆಚರಣೆಗೆ ತರಲಾಗುವುದೆಂದೂ ಸೂಚಿಸಿದರು ಈ ತದ್ರೂಪ ಸ್ಕೀಮನ್ನು ಆಚರಣೆಗೆ ತರುವ ಪ್ರಯತ್ನದಲ್ಲಿ ರೂಸ್‌ವೆಲ್ಟರು ರಾಷ್ಟ್ರ ವ್ಯವಸ್ಥೆಯ ಸಾಮಾಜಿಕ ತಕ್ಕ ಗಳನ್ನು ಉಪೇಕ್ಷಿಸಿಮಿಲ್ಲ ರಾಷ್ಟ್ರದ ರಕ್ಷಣೆಗೆ ಅತ್ಯಾವಶ್ಯಕವಾಗಿ ಬೇಕಾದ ಮಾನವ ಬಲವನ್ನೂ ನಮ್ಮು ಗುಣನ್ನು ಬೇರೆ ರೀತಿಯಲ್ಲಿ ವಿನಿಯೋಗಿಸುವುದಕ್ಕೆ ಅವಕಾಶವಿರದಂತೆ ಖಾಸಗೀ ಉದ್ಯಮಗಳ ಮೇಲೆ ತಕ್ಕ ಹತೋಟಿಯನ್ನು ಇಟ್ಟುಕೊಳ್ಳುವುದಾಗಿ ಸೂಚಿಸಿದ್ದಾರೆ ೧೯೪೧ನೇ ಜೂನ್ ತಿಂಗಳೆಂದೆ ೧೯೪೨ನೇ ಜೂನ್ ತಿಂಗಳವರೆಗೆ ಅಮೆರಿಕೆಯ ವೆಚ್ಚವು ೧೭೮೪೫೦ ಲಕ್ಷ ಡಾಲರ ಗಳು ಅಂದರ ಕಳೆದ ವರ್ಷಕ್ಕಿಂತ ೯೯ ರಷ್ಟು ಹೆಚ್ಚುವದು ಇದರಲ್ಲಿ ೬೯೫೩೦ ರಷ್ಟು ಹೆಚ್ಚುವದು ಇದರಲ್ಲಿ ೬೭೦೦ ರಷ್ಟು ಎಂದರೆ ೧೦೪೧೧೧೦ ಲಕ್ಷ ಡಾಲರುಗಳು ರಾಷ್ಟ್ರ ರಕ್ಷಣೆಗಾಗಿ ವಿನಿಯೋಗಿಸಲ್ಪಡುವುವು ಅಂದರೆ ಕಳೆದ ವರ್ಷಕ್ಕಿಂತ ೬೭ ಶೇಕಡಾ ೬೭ ಹೆಚ್ಚುವದು ಕಳೆದ ವರ್ಷ ಆದಾಯ ಕ್ಕಿಂತ ಹೆಚ್ಚುವ ೬೪೪೯೦೦ಲಕ್ಷ ಡಾಲರುಗಳಷ್ಟು ಹೆಚ್ಚಾಗಿ ದ್ದುದು ಈ ವರ್ಷ ೯೨೧೦೦ ಲಕ್ಷ ಡಾಲರುಗಳಿಗೆ ವಿರುವುದು ರಾಷ್ಟ್ರದ ಸಾಲವು ಹೆಚ್ಚುವ ವಿಚಾರದಲ್ಲಿ ಜನರು ಕಳವಳವನ್ನು ಬೆಳೆಸಿಕೊಳ್ಳುವುದಕ್ಕೆ ಕಾರಣವಿಲ್ಲವೆಂದೂ, ಪ್ರತಕ್ಷ ತೆರಿಗೆಗಳನ್ನು ಹೆಚ್ಚಿಸಬೇಕೆಂದೂ, ಆರ್ಥಿಕ ಚಟುವಟಿಕೆಗಳಿಂದ ರಾಷ್ಟ್ರದ ಉತ್ಪತ್ತಿಯು ಹಿಂದೆಂದೂ ಕಾಣದ ಮಟ್ಟಕ್ಕೇರುವುದೆಂದೂ ಸೂಚಿಸಿದರು

ಯುದ್ಧದಲ್ಲಿ ೯೦೦೦ ಇಟಾಲಿಯನ್ನರು ಭಾಗವಹಿಸಿದ್ದರು

ಈಜಿಪ್ಟಿನ ಪಶ್ಚಿಮಸರಳುಗಾಡಿನಲ್ಲಿ ನಡೆದಯುದ್ಧದಲ್ಲಿ ಫಾಸಿಸಲು ೯೦೦೦ ಸೈನಿಕರನ್ನು ಇಟಲಿಯು ಕಳುಹಿಸಿದ್ದಿತು. ಅವರಲ್ಲಿ ಸುಮಾರು ೭೦೦೦ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ ೩ ಇಟಲಿ ವಿಮಾನಗಳು ೪ ಲಿಬ್ಯ ವಿಮಾನಗಳೂ ನಾಶಮಾಡಲ್ಪಟ್ಟವು

ಅಬ್ಸೀನಿಯವನ್ನು ಮುತ್ತುವ ಸಿದ್ಧತೆ

ಅಬ್ಸೀನಿಯವನ್ನು ಮುತ್ತಲು ಕೆನಿಯಾ ಅಬ್ಸೀನಿಯಾ ಗಡಿಯಲ್ಲಿ ಒಂದುಲಕ್ಷ ಬ್ರಿಟಿಷ್ ಸೈನಿಕರು ಸಿದ್ಧವಾಗಿ ನಿಂತಿರುವರೆಂದೂ, ಮುತ್ತಿಗೆಯ-ಕಾರ್ಯಾರಂಭಿಸಲು ಮಳೆಗಾಲವು ಕಳೆಯುವವರೆಗೂ ಎದುರುನೋಡುತ್ತಿದ್ದಾರೆಂದೂ, ಸುದ್ದಿಯಿದೆ ದಕ್ಷಿಣ ಅಬ್ಸಿನಿಯದ ಪಟಿಯನ್ನು ತಮ್ಮ ಹೇಳಿಕೆಯಲ್ಲಿ ಅಬ್ಸೀನಿಯದಲ್ಲಿ ಶತ್ರುಗಳ ತಲೆಯೆಲ್ಲದಂತೆ ಮಾಡಿದನಂತರ ದಕ್ಷಿಣ ಅಬ್ಸಿನಿಯದ ಯೋಧರು ಬೇರೆ ರಣಾಂಗಣಗಳಿಗೆ ತೆರಳಲಿರುವರೆಂಬು ಹೇಳಿತ್ತಿದ್ದಾರೆ ಇಟಲಿಗೆ ಸುತ್ತಲೂ ಕಷ್ಟಕಾಟವು ಪ್ರಾರಂಭವಾಗಿದೆ

ಬ್ರಿಟಿಷ್ ಮಹಾಪ್ರಧಾನರ ಭಾಷಣ

ಬ್ರಿಟನ್ನಿನ ಮಹಾಪ್ರಧಾನರು ಇಂಗ್ಲೆಂಡ್ ಅಮೇರಿಕಾ ಬಾಂಧವ್ಯವನ್ನು ಉತ್ತಮಗೊಳಿಸಲು ಲಂಡನ್ನಿನಲ್ಲಿ ಸ್ಥಾಪಿಸಿರುವ ಸಂಘದವರು ಲಾರ್ಡ್ ಹ್ಯಾಲಿಫಾಕ್ಸ್‌ರವರ ಸೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭಾಷಣಮಾಡುತ್ತ—

"ಇಂಗ್ಲೀಷ್ ಭಾಷೆಯನ್ನು ಮಾತನಾಡುವ ದೇಶಗಳಲ್ಲಿರುವ ಜನರಲ್ಲಿ ನೆಲೆಸಿರುವ ವಿಕೋದ್ವೇಗವೂ ದೃಢ ಸಂಕಲ್ಪವೂ, ಅನೇಕ ಶತಮಾನಗಳನ್ನು ಹಿಂ ಬುಲಿಸುವುದೆಂದೂ, ಬ್ರಿಟನ್ ಮತ್ತು ಅಮೇರಿಕಾ ಸಹಕಾರದಿಂದ ಸರ್ವಾಧಿಕಾರ ಪ್ರಭುತ್ವಗಳ ಭಾವನೆಯನ್ನೂ ಅಪಜಯಮನೋಭಾವವನ್ನೂ ಮುರಿದು ಆ ಪ್ರಭುತ್ವಗಳನ್ನು ತಾತ್ಕಾಲಿಕವಾಗಿ ನೂಡುವುದಕ್ಕೆ ಸಾಧ್ಯವಾಗದೆ ಹೋದರೆ, ಬ್ರಿಟಿಷ್ ಸಾಮ್ರಾಜ್ಯವು ನೆಮ್ಮದಿ ಇಲ್ಲದೆ ಕೆಲವು ಕಾಲ ಶಸ್ತ್ರಾಸ್ತ್ರಗಳನ್ನು ತೆಳಕ್ಕೆ ಇಳಿಸಿ ಇನ್ನೂ ಭಯಂಕರವಾದ ಯುದ್ಧವನ್ನು ನಡೆಸುವುದಕ್ಕೆ ತಕ್ಕ ಶಕ್ತಿಯನ್ನು ಹೇಗೋ ಹಾಡಿಕೊಂಡು ಒರಲು ಸಮರ್ಥವಾಗುವುದೆಂದೂ, ಆದರೆ ಜಗತ್ತಿನ ಪ್ರಗತಿಗಾಗಿ, ಸಂಯಾವ ಮಾನವ ಬಲ್ಲಿ ಮಾನವಕೋಟಿಯನ್ನು ಒಮ್ಮುಖವ ಆವಕಾಶವು ವ್ಯರ್ಥವಾಗುವುದೆಂದೂ, ಧೈರ್ಯಸಾಧಿಸಿಗಾಗಿ ಮಹಾ ಕಷ್ಟಸಹನೆಗಳನ್ನು ಅನೆ ಭವಿಸುವುದಕ್ಕೂ ಆಪಾರ ತ್ಯಾಗ ಸೂಹುವುದಕ್ಕೂ ಬಹಳ ತಮೋಭ್ಯಾಸದ ಅವಕಾಶಗಳು ಇದಗಿಂದು ಹೊರತಿನಿಯೆಂದೂ, ಜಗತ್ತಿನ ಇಂದಿನ ಭಯಂಕರ ಸ್ಥಿತಿಯಲ್ಲಿ ಅಮೇರಿಕಾ ಪ್ರಜಾಪ್ರಭುತ್ವ ಪೂತ್ರಗಳನ್ನು ಮಹಿಸಿರುವರೆ, ರಾಜ್ಯಾಡಳಿತವು ಆನು ಜವನ್ನು ಪಡೆದವರೂ, ಆಕ್ರಮಣ ಪ್ರಯತ್ನವನ್ನು ಎಗ್ರವಾಗಿ ನಿರೋಧಿಸುವ ಸ್ಫೂರ್ತಿವದರೂ, ನ್ಯಾಯ ವತ್ತು ಧರ್ಮಪಾಲನೆಯ ಪ್ರಯತ್ನಗಳಿಗೆ ಜೆಬಲ ಕೂಬ್ಯ ಅವುಗಳ ಘೋಷಿಸಿ ನಾ" ಎನಿಸಿಕೊಂಡವರೂ ಆಗುವುದು ಹುಟ್ಟೋಗವೆಂದೂ, ಮೂರನೆಯುಸಾರಿ ಅಧಿಕಾರಿಯರು (ಶ್ರೀ ರೂಸವೆಲ್ಟರು) ಅಮೆರಿಕೆಯ ಅಧ್ಯಕ್ಷರಾಗಿ, ಪ್ರಜಾಪ್ರಭುತ್ವಕ್ಕೆ ಮಾರ್ಗದರ್ಶಕರಾಗಿರಲು ಅವಕಾಶ ದೊರೆತದುಕ್ಕಾಗಿ, ನನಗೆ ಬಹಳ ಸಂತೋಷವುಂಟಾಗಿದೆ" ಎಂದೂ ನುಡಿದರು

ಲಾರ್ಡ್ ಲೋಥಿಯನ್‌ರವರು ಅನಿರೀಕ್ಷಿತವಾಗಿ ಮರಣಕ್ಕೀಡಾಗಲು, ಅಮೇರಿಕಾಕ್ಕೂ, ಬ್ರಿಟನ್ನಿಗೂ ಇದ್ದ ಬಾಂಧವ್ಯಕ್ಕೆ ಮಧ್ಯೆ ಬಿರುಕು ಬಿಟ್ಟುಹೋಯಿತು ಇನ್ನಾವುದಕ್ಕೂ ಗಮನ ಕೊಡದೆ, ಆ ಬಿರುಕನ್ನು ಸರಿಪಡಿಸಿ, ಬಾಂಧವ್ಯಕ್ಕೆ ಜಜ್ಜಕ ಬರದಂತೆ ಮಾಡಲು ಅತ್ಯತ್ಸುಸಾಹಿದವರೆಲ್ಲ ಕಳಿಸಿ ಕೊಡುವುದು ನಮ್ಮ ಕರ್ತವ್ಯವಾಗಿತ್ತು ಲಾರ್ಡ್ ಹ್ಯಾಲಿಫಾಕ್ಸ್‌ರು ಜ್ಞಾನಿಗಳು ಅವರ ಸ್ನೇಹವನ್ನು ಸಂಪಾದಿಸುವುದೇ ಒಂದು ತಪಂದ ೩೦ ವರ್ಷಗಳಂದ ನಾನು ಅವರನ್ನು ಬಲ್ಲವನಾಗಿದ್ದೇನೆ ಈ ೨೦ ವರ್ಷಗಳಲ್ಲಿ ಅನೇಕಾರಿ ನಾವು ಎರಡೊತೆ ಭಿನ್ನ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇನೆ ಆದರೆ ಸದಾ ನಾನು ಅವರನ್ನು ಗೌರವದಿಂದ ಕಾಣುತ್ತಿದ್ದೇನೆ ಏಕೆಂದರೆ ಅವರು ಧೈರ್ಯ ಮತ್ತು ನ ಎಳೆ ಇವುಗಳ ಮೂರ್ತಿಯಂತಿದ್ದಾರೆ ಯೋಧರಾಗಿದ್ದ ತರುಣಾಯದಲ್ಲಿಯಾಗಲೀ ಇಲ್ಲವೇ ಧಾಮಿಕರು ಕೋಟಿ ಪ್ರಜೆಗಳನ್ನು ಆಳುತ್ತಿದ್ದ ಸಮಯದಲ್ಲಿ ಆಗಲಿ ಅವರು ವಿಶೇಷ ಕರ್ತವ್ಯದಿಂದ ವಿಮುಖರಾಗಿಲ್ಲ ಇಂದಿನ ನಾಜಿಸಲ್ ಸರ್ಕಾರದ ಎಲ್ಲ ಸಚಿವರಂತೆ ಅಂಜಿಗಳ ಜಜ್ಯಾಳಿಕೆಯನ್ನು ಎದುರಿಸಲು ಯದ್ಧ ಹೂಡಿ ಅವನ್ನು ಯಶಸ್ವಿಯಾಗುವಂತೆ ನಡೆಸಿಕೊಂಡು ಬರುವ ಪ್ರತಿ ಪ್ರತಿಜ್ಞೆಮಾಡಿ ಅದರಂತೆ ನಡೆದುಕೊಂಡು ಬರುವ ಶ್ರಿದ್ಧಾರೆ ನಮ್ಮ ಮಂತ್ರಾಲೋಚನೆಗೆ ಸಭೆಗಳಲ್ಲಿ ಭಾಗವಹಿಸಿ, ನಮ್ಮ ಸಂಕಷ್ಟಗಳಲ್ಲಿ ಸಲಹೆಗಳನ್ನು ತಿಳಿದವರಾದ ಇವರನ್ನು ಅಧಿಕಾರಿಯಾಗಿ ಪಡೆದೆನೆಂಬುದಕ್ಕೆ ಕಳಿಸಿಕೊಡುತ್ತೇನೆ ಈಗಲೂ ಸಹ ಅವರು ನನ್ನ ಮಂತ್ರಿ ಮಂಡಲದ ಸಭೆಗಳಲ್ಲಿಕ್ಕೂ ಬರುತ್ತಿದ್ದಾರೆ ಅಮೇರಿಕದ ರಾಯಭಾರಿಗಳಾದ ಮೇಲೆ ಇರುವ ಕೆಲಸಿಗೆಕಾಲದಲ್ಲಿ ಅವರು ನನ್ನೊಡನೆ ಸಮಾಲೋಚನೆ ನಡೆಸಲು ಬ್ರಿಟನ್ನಿಗೆ ಹಿಂದಿರುಗಬೇಕು ಇಲ್ಲಿರಿದಿರುವವರಲ್ಲಿ ವಯಸ್ಸಿ ನಲ್ಲಿ ದೊಡ್ಡವರಾಗಿರುವವರ ಜೀವಮಾನಕಾಲದಲ್ಲಿ ಎಂದೂ ಇಷ್ಟು ಮಹತ್ತರವಾದ ಜವಾಬ್ದಾರಿಯನ್ನು ಒಬ್ಬೊಬ್ಬರಿಗೆ ದೊರೆಗು ನಹಿಸಿರಲಿಲ್ಲ ಇಂದು ಲಾರ್ಡ್ ಹ್ಯಾಲಿಫಾಕ್ಸ್‌ರವರಿಗೆ ಅತ್ಯುನ್ನತ ಮಹತ್ತರವಾದ ಜವಾಬ್ದಾರಿಯನ್ನು ಸಹಿಸಲಾಗಿದೆ ಅವರು ತಮ್ಮ ಪ್ರಯತ್ನದಲ್ಲಿ ಜಯಶೀಲರಾಗಲೆಂದು ನಾವೆಲ್ಲ ಹಾರೈಸೋಣ" ಎಂದು ಹೇಳಿದರು

ಲಾರ್ಡ್ ಹ್ಯಾಲಿಫಾಕ್ಸ್‌ರವರ ಉತ್ತರ

ಅನಂತರ ಲಾರ್ಡ್ ಹ್ಯಾಲಿಫಾಕ್ಸ್‌ರವರು ಉತ್ತರ ಕೂಡುತ್ತ "ಅಮೇರಿಕಾದ ಪ್ರಜೆಗಳ ಆಲೋಚನಾ ಪರಂಪರೆಗಳನ್ನು ಬ್ರಿಟಿಷ್ ಸರ್ಕಾರಕ್ಕೂ ಪ್ರಜೆಗಳಿಗೂ ತಿಳುಹಿಸುತ್ತಾ ಹೋಗುವುದು ಮಾತ್ರವೇ ತಮ್ಮ ಕರ್ತವ್ಯವೆಂದು ತಾವು ಭಾವಿಸುವುದಿಲ್ಲವೆಂದೂ, ಬ್ರಿಟಿಷ್ ಸರ್ಕಾರದ ಮತ್ತು ಪ್ರಜೆಗಳ ಆಲೋಚನೆಗಳನ್ನೂ ಭಾವನೆಗಳನ್ನೂ ಅಮೇರಿಕಾ ಸರ್ಕಾರಕ್ಕೂ ಮತ್ತು ಅವರ ಪ್ರಜೆಗಳಿಗೂ ತಾವು ತಿಳಿಸುತ್ತ ಬರುವೆನೆಂದೂ ಆದ ಬಹಳ ಮುಖ್ಯವಾದ ವಿಚಾರ ನೆಂದೂ ರಾಯಭಾರಿಗಳ ಕೆಲಸವು ನಡೆಯುವ ಘಟನಾವಳಿಗಳನ್ನು ಹೊಂದಿಕೊಂಡಿರುವುದೆಂದೂ ಇಂದು ನಡೆಯುತ್ತಿರುವ ಘಟನಾವಳಿಗಳನ್ನು ಅಮೇರಿಕಾ ಪ್ರಜೆಗಳು ಕಂಡು ಬಹುಮಟ್ಟಿಗೆ ಜಾಗೃತರಾಗಿರುವರೆಂದೂ, ಇತ್ತೀಚಿನ ಪ್ರಗತಿಗಳಿಂದ ಬ್ರಿಟನ್ನಿಗೆ ಆನುಕೂಲವಾದ ಸನ್ನಿವೇಶ ಬಂದಿದಾದಿದ್ದರೂ ಅದನ್ನು ನಾವು ಉತ್ಪ್ರೇಕ್ಷೆ ಮಾಡುವುದಿಲ್ಲವೆಂದೂ, ಈ ಅನುಕೂಲವು ಬಹಳ ಬೇಗ ಳ್ಳುತಾದರೂ, ಅಕ್ಷಿಸ್ ರಾಷ್ಟ್ರಗಳ ಶಸ್ತ್ರಾಸ್ತ್ರಗಳನ್ನು ಮುರಿಯಲು ಸಾಧ್ಯವಿಲ್ಲವೆಂಬ ಕಟ್ಟು ಕತೆಯು ಇಂದು ಬದಲಾಗಿದೆಯೆಂದೂ, ಭವಿಷ್ಯವನ್ನು ಇಂದು ನಾವು ಎಚ್ಚರಿಕೆಯಿಂದ ಕೂಡಿದ ನಂಬಿಕೆಯಿಂದ ನಿರೀಕ್ಷಿಸುತ್ತಿದ್ದೇನೆಂದೂ, ನಮ್ಮ ಮುಖ್ಯ ಶತ್ರುವಿನ ಬಲದ ವಿಚಾರದಲ್ಲಿ ನಾವು ಯಾವ ಭ್ರಾಂತಿಯಿಂದಲೂ ಕೂಡಿಲ್ಲವೆಂದೂ, ಅಲ್ಲದೆ ಬಂದೊದಗಿರುವ ಪರಿಸ್ಥಿತಿಯ ದೆಸೆಯಿಂದ ಬೇಗನೆ ಯುದ್ಧವನ್ನು ಕೊನೆಗೊಳಿಸಲು ನಮ್ಮ ಶತ್ರುವು ಕೈಗೊಳ್ಳಬಹುದಾದ ಉಗ್ರ ಕಾರ್ಯಕ್ರಮದ ವಿಚಾರವಾಗಿ ನಾವು ಉಪೇಕ್ಷೆಮಾಡುವುದಿಲ್ಲವೆಂದೂ, ದೊಡ್ಡ ದೊಡ್ಡ ನಗರಗಳಲ್ಲಿರುವ ಮನೆಗಳನ್ನೂ ವ್ಯಾಪಾರ ಕೇಂದ್ರಗಳನ್ನೂ, ಚರ್ಚುಗಳನ್ನೂ, ಆಸ್ಪತ್ರೆಗಳನ್ನೂ ಉದ್ದೇಶ ಪೂರ್ವಕವಾಗಿ ನಾಶಮಾಡಿ, ನಮ್ಮ ಧೃಢ ಮನಸ್ಸನ್ನೂ ಮುರಿಯಬಲೆಂದು ಜರ್ಮನಿಯು ನಂಬಿರುವುದಾದರೆ ಜರ್ಮನಿಯು ತನ್ನ ಪ್ರಜೆಗಳ ಹೊರತು ಇನ್ನುಳಿದ ಜನಾಂಗಗಳವರ ಮನಸ್ಸಿನ ಭಾವನೆಗಳನ್ನು ಎಷ್ಟು ಹೀನವಾಗಿ ತಿಳಿದಿರುವುದೆಂಬುದು ಇದರಿಂದ ವ್ಯಕ್ತವಾಗುವುದೆಂದೂ ಬ್ರಿಟನ್ನಿನ ಎಲ್ಲ ಭಾಗಗಳಲ್ಲಿಯೂ ಸಂಗ್ರಾಮ ಪಸ್ತುಗಳ ನಿರ್ಮಾಣವು ಹೆಚ್ಚು ಹೆಚ್ಚಾಗಿ ಆಗುತ್ತಿರುವುದಲ್ಲದೆ ಅಮೇರಿಕೆಯ ಅತ್ಯಂತ ಮಹತ್ತರವಾದ ಕೈಗಾರಿಕೆ ಉದ್ಯಮದ ಬೆಂಬಲವು ನಮಗಿದೆಯೆಂದೂ, ಅದಷ್ಟು ಅಳತೆಮಾಡುವುದೆಕ್ಕೆ ಸಾಧ್ಯವಿಲ್ಲವೆಂದೂ" ನುಡಿದರು

ಹೊಸ ಮಾದರಿ ವಿಮಾನ

ಏವರ್ ಜೆಗೋರಸ್ಕಿ ಎಂಬ ರಷ್ಯದೇಶದವನು ಒಂದು ಹೊಸ ಮಾದರಿಯ ವಿಮಾನವನ್ನು ನಿರ್ಮಿಸಿದ್ದಾನೆ. ಇವನು ರಷ್ಯದಲ್ಲಿ ಹುಟ್ಟಿದ್ದರೂ ಈಗ ಅಮೇರಿಕೆಯ ಪ್ರಜೆಯಾಗಿದ್ದಾನೆ ಈಗ ಈತನು ತಯಾರಿಸಿರುವ ವಿಮಾನವನ್ನು ಅಂತರಿಕ್ಷದಲ್ಲಿ ಎಲ್ಲಿ ದೇಶಾದರೂ ಒಂದೇ ಕಡೆ ನಿಲ್ಲಿಸಬಹುದೆಂದೂ ಮತ್ತು ಅದು ಹಿಂದು ಮುಂದಾಗಿ ಹಾರಾಡಬಲ್ಲದೆಂದೂ ಹೇಳಲಾಗಿದೆ ಭೂಮಿಯ ಮೇಲೆ ಮೋಟಾರನ್ನು ಉಪಯೋಗಿಸುವಂತೆ ಈ ವಿಮಾನವನ್ನು ಅಂತರಿಕ್ಷದಲ್ಲಿ ಸುಲಭವಾಗಿ ಉಯೋಗಿಸಬಹುದಾದ್ದರಿಂದ ಇದನ್ನು ಆಕಾಶದ ಮೋಟಾರ್ ಎಂದು ಕರೆಯಲಾಗಿದೆ ಈ ವಿಮಾನಗಳ ಸಹಾಯದಿಂದ ಬಾಂಬುಗಳನ್ನು ಶತ್ರುಗಳಮೇಲೆ ಹಾಕಲಬಹುದಾದ್ದರಿಂದ ಈ ಯಂತ್ರಗಳು ಹೆಚ್ಚು ಬಳಕೆಯಲ್ಲಿ ಬಂದರೆ ಈಗಿನ ಯುದ್ಧದ ರೀತಿಯೇ ಬದಲಾಗುವುದೆಂದು ಹೇಳಲಾಗಿದೆ ಈ ವಿಮಾನದ ವಿಶೇಷ ಗುಣಗಳ ಪ್ರದರ್ಶನವು ಈ ಜೀಗೆ ಅಮೇರಿಕಾ ದೇಶದಲ್ಲಿ ನಡೆಯಿತು.

ಇಟಲಿ ಪ್ರಜೆಗಳಲ್ಲಿ ಕಳವಳ

ಇಟಲಿಯಲ್ಲಿ ಸಶ್ಯಾರದ ಪರಿಸ್ಥಿತಿಯು ದಿನದಿನಕ್ಕೆ ಕೆಡಹತ್ತಿದೆ ಬಾರ್ಡಿಯಾ ಮತ್ತು ಆಲ್ಬೇನಿಯಗಳಲ್ಲಿ ಸಂಭವಿಸಿರುವ ನಷ್ಟಗಳಂದ ಪ್ರಜೆಗಳು ಕಳವಳಗೊಂಡಿದ್ದಾರೆ ಗಾಯಗೊಂಡ ಸೈನಿಕರು ಅಧಿಕಸಂಖ್ಯೆಯಲ್ಲಿ ನಿಕ್ಕುವ ರಾಜಧಾನಿಗೆ ಕರೆತರಲ್ಪಡುತ್ತಿದ್ದಾರೆ ಗಾಬರಿಗೊಳ್ಳಲು ಕಾರಣವಿಲ್ಲವೆಂದು ಪ್ರಜೆಗಳಲ್ಲಿ ಧೈರ್ಯವನ್ನುಂಟುಮಾಡಿಕೊಡಲು ಅಲ್ಲಿಯ ಸರ್ಕಾರಕ್ಕೆ ಸಾಕಾಗಿಹೋಗಿದೆ

೭೦ ಸಾವಿರ ಇಟಲಿ ಸೈನಿಕರ ಸೆರೆ

ಕಳೆದ 4 ನೆಯ ತಾರೀಖು ಶನಿವಾರ ಮಧ್ಯಾಹ್ನ ಬಾರ್ಡಿಯಾ ನಗರವು ಬ್ರಿಟಿಷರ ವಶವಾಯಿತು. ಟೆಗ್ಟಲೆ ಸಂಗ್ರಾಮ ಸಾಂಘ್ಯಗಳು ಬ್ರಿಟಿಷರಿಗೆ ದೊರೆತವು ಅಪಾರ ಸಾಮಗ್ರಿಗಳು ಸಾಕಾವಾವು ಬಾರ್ಡಿಯ ದಲ್ಲಿದ್ದ ಇಟಲಿ ಸೇನೆಯ ದಂಡನಾಯಕರಾದ ಜನರಲ್ ಬರ್ಗಂಜೋಲಿಯವರೂ, ಇನ್ನೊಬ್ಬ ಕಮ್ಯಾಂಡರೂ, ನಾಲ್ಕು ಜನ ಜನರಲ್‌ಗಳೂ ಸೆರೆಸಿಕ್ಕಿರು ಬಾರ್ಡಿಯ ಕೋಟೆಯ ಸೈನ್ಯಾಧಿಕಾರಿಗಳಲ್ಲದೆ ಇತರ ಸೈನ್ಯರು ಸೈನ್ಯಾಧಿಕಾರಿಗಳೂ 25000 ಸ್ಪಂತ ಹೆಚ್ಚು ಸೈನಿಕರೂ ಸೆರೆಯಾದರು ಲಿಬ್ಯಾದ ಮೇಲೆ ಬ್ರಿಟಿಷ್ ಮುತ್ತಿಗೆಯಾರ ಭೀಮದಂದಿನಿಂದ ಇಲ್ಲಿಯವರೆಗೆ ಅಂದರೆ ಒಂದು ತಿಂಗಳ ಅವಧಿಯಲ್ಲಿ 0000 ಸ್ಪಂತ ಹೆಚ್ಚು ಜನ ಇಟಲಿ ಸೈನಿಕರು ಸರೆ ಸಿಕ್ಕಿರುತ್ತಾರೆಂದು ಪ್ರಕಟವಾಗಿದೆ

ಶ್ರೀಮನ್ಮಹಾರಾಜರವರು ಇಂಗ್ಲೆಂಡಿನಲ್ಲಿ ವಿಮಾನ ಧಾಳಗಳಿಗೆ ಗುರಿಯಾಗಿ ಸಂಕಟಗಳಿಗೊಳಗಾಗುತ್ತಿರುವ ಪ್ರಜೆಗಳ ಸಹಾಯಾರ್ಥವಾಗಿ ಲಂಡನ್ ಪಟ್ಟಣದ ಪೌರ ಸಭಾಧ್ಯಕ್ಷರ ನಿಧಿಗೆ ಒಂದು ಲಕ್ಷ ರೂಸ ಯಿಗಳನ್ನೂ, ಯುದ್ಧ ವಿಮಾನಗಳನ್ನು ಕೊಳ್ಳಲು ಲಾರ್ಡ್ ಬೀವರ್ ಬ್ರೂಕ್‌ರವರಿಗೆ ೩ ಲಕ್ಷ ರೂಪಾಯಿಗಳನ್ನೂ ಕಳುಹಿಸಿ ಕೊಟ್ಟು ಬ್ರಿಟಿಷರಿಗೆ ಪರಮಾತ್ಮನು ವಿಜಯವನ್ನೆನುಗ್ರಹಿಸಲೆಂದೂ, ಈ ಹೊಸ ವರ್ಷವು ಪ್ರಪಂಚಕ್ಕೆ ಶಾಂತಿ ಸಮಾಧಾನಗಳನ್ನುಂಟುಮಾಡಲೆಂದೂ ಹಾರೈಸಿರುವರು.

ಬೆಂಗಳೂರಿನ ವಕೀಲ್ ಮೋಕ್ಷಗುಂಡ ಕೃಷ್ಣಮೂರ್ತಿಯವರ ಕೊಲೆಮೊಕದ್ದಮೆಯಲ್ಲಿ ಆಪರಾಧಿಯಾಗಿ ಮರಣದಂಡನೆಗೊಳಗಾಗಿದ್ದ ಎಂ ನಾರಾಯಣರಡ್ಡಿಯು ಮಹಾರಾಜರಲ್ಲಿ ಸೆರೆದಲಸಿಸಿರಿ ಕ್ಷಮಾಭ್ಯರ್ಥನೆಯನ್ನು ಯಾಚಿಸಿದ್ದು ನಿರಾಕರಿಸಲ್ಪಟ್ಟು ಎರಡನೆಯಸಾರಿ ಸಶ್ಯಾರಕ್ಕೆ ತನ್ನ ಮರಣದಂಡನೆಯನ್ನು ಪೂರ್ವಮಿ ತಿಸಬೇಕೆಂದು ಕೇಳಿಕೊಂಡಿದ್ದನು ಸಶ್ಯಾರವರು ಆತನ ಬೇಡಿಕೆಯನ್ನು ನಿರಾಕರಿಸಿದ್ದರಿಂದ 7 ನೆಯ ತಾರೀಖು ಮಂಗಳವಾರ ಬೆಳಿಗ್ಗೆ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಆತನನ್ನು ಗಲ್ಲಿಗೇರಿಸಿದರು ವ್ಯಕ್ತನ ಶರೀರವು ಆತನ ಬಂಧುಗಳಿಗೆ ಕೊಡಲ್ಪಟ್ಟು ಉತ್ತರಕ್ರಿಯಾದಿಗಳಿಕ್ಕಲ್ಲವೂ ಅವೆರಿಸಿ ಮಧ್ಯಾಹ್ನ ನೆರವೇರಿದವು ವ್ಯಕ್ತನಿಗೆ 27 ವರುಷ ವಯಸ್ಸಾಗಿತ್ತು ಆತನಿಗೆ ಇಬ್ಬರು ಹೆಂಡರೂ ೪ ಜನ ಮಕ್ಕಳೂ ಇದ್ದಾರೆ

ಸ್ವೀಕಾರ.

ಬಳ್ಳಾರಿ ಡಿ|| ಕೊಟ್ಟೂರು ಕಚ್ಚೆಮನೆ ಗೌಡರ ಆರೇ ಕೊಟ್ರುಗೌಡರ ಕೆ ಬಸವಲಿಂಗನಗೌಡರ ಪುತ್ರ ಚಿ|| ಕೆ|| ದಾಕ್ಷಾಯಣಮ್ಮನವನ್ನು ಮಿ|| ರಾ|| ರಾಣಿವೆನ್ನೂರು ಬುಕ್ಕ ಶೆಟ್ರ ಶರ್ವಾತಪ್ಪನವರ ಪುತ್ರ ಹೊಳಗುಂದಿ ಶ್ಯಾವೆಭೋಗರ ಗಿಸಿಕಿದ್ದಪ್ಪನವರ ಪುತ್ರ ಚಿ|| ಸಿ|| ವರ್ಷಕ್ಕಪ್ಪನಿಗೆ ಕೊಟ್ಟು ವಿವಾಹ ಮಾಡಿದ ಸಮಯದಲ್ಲಿ ಪ್ರಭಾವೋತ್ಪನ್ನಕ್ಕಾಗಿ ತೆಗೆಯುವ ‖ ರೂಪಾಯಿಯು, ಕೊಟ್ಟೂರು ಆಳ್ವಮನೆ ಹಿರೇಮಕದ ಶ್ರೀ|| ಪಿ|| ಬ್ರಿ|| ಭೂತಭುಜಂಗಾಚ್ಚಾಮಿಗಳವನ ದ್ವಾರಾ ತಲ್ಲಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಶಂಚಾಚಾರ್ಯರು ನಿತ್ಯಮಂಗಲವಪ್ಪಿಸಿಯೆಂದು ಹಾರೈಸುತ್ತೇವೆ

[೬ ನೆಯ ಪುಟದಿಂದ ಮುಂದುವರೆದಿದೆ.]

ತಂಪು, ವಾಯುವನ್ನು ಹೆಚ್ಚಿಸುವುದು ಪಿತ್ತ ಕಫ ವೀರ್ಯ, ಇವುಗಳನ್ನು ನಾಶಮಾಡುವುದು

ಉಷ್ಣ—ಸಿಹಿ, ಗುರು, ಉಷ್ಣ, ಬಲಕಾರಿ, ವಾತ ನಾಶಕ, ಕಫ ಮತ್ತು ವೀರ್ಯವನ್ನು ವೃದ್ಧಿಗೊಳಿಸುವುದು, ಮಲಮೂತ್ರಗಳನ್ನು ಸಡಲಿಸುವುದು. ಎದೆ ಹಾಲನ್ನು ಹೆಚ್ಚಿಸುವುದು

ಅಲಸಂದೆ—ಒಗರು, ಒರಟು, ಮಾಯುವನ್ನು ಹೆಚ್ಚಿಸುವುದು, ಕಫ ಪಿತ್ತಗಳನ್ನು ಶಾಂತಗೊಳಿಸುವುದು, ಸ್ತೈಭನವನ್ನುಂಟುಮಾಡುವುದು, ಬಲಕರವಾದುದಲ್ಲ, ಇದರಲ್ಲಿ ಒಗರು ರುಚಿಯುವುದರಿಂದ ಮಲವನ್ನು ಸಡಿಲಿಸುವ ಗುಣವಿರುವುದಿ; ಮೂತ್ರವನ್ನು ಹೆಚ್ಚಿಸುವುದಿಲ್ಲ, ವಿಷಾಕರವಲ್ಲ ಸಿಹಿಯಾಗಿರುವುದು, ಎದೆಹಾಲನ್ನು ಹೆಚ್ಚಿಸುವುದು, ಇದು ಬಳುವು, ಕೆಂಪ ಕಪ್ಪು ಬಣ್ಣಗಳಿಂದ ಮೂರು ವಿಧವಾಗಿದೆ ತಿನ್ನಲಲ್ಲಿ ಯಾವುದೂ ದೊಡ್ಡದಾಗಿ ಬೆಳೆಯುವುದೋ ಆದರಲ್ಲಿಯೇ ಮೇಲಿನ ಗುಣಗಳು ವಿಶೇಷವಾಗಿರುತ್ತವೆ

ಹುರುಳಿ—ಒಗರು, ಉಷ್ಣ, ವಿಷಾಕರವಲ್ಲಿ ಕಾರವಾಗಿರುವುದು ಕಫ, ವಾತಗಳನ್ನು ನಿವಾರಿಸುವುದು ಶುಕ್ರಾಶ್ಮರೀ (ವೀರ್ಯವು ಜಿಗಿ ಕಲ್ಲು. ಹರ್ಸಾಣ ತೆಗೆಟ್ಟುಯಿಗಿ.ವುದು) ಗುಲ್ಮ ಪೀನಸ ಕಫವ್ಯ ಇವುಗಳನ್ನು ನಿವಾರಿಸುತ್ತದೆ

ಆವರೆ—ಸಿಹಿ ಮತ್ತು ಒಗರು, ರುಚಿಕರ, ವಿಷಾಕರದಲ್ಲಿ ಹುಳಿಯಾಗುವುದು ಗುರು ವಿಶೇಷವಾಹಗುರುವುದು ಉಷ್ಣ, ರಕ್ತಪಿತ್ತ ವಾತ ಹೊಟ್ಟೆಯ ಬಿಗಿತ ಇವುಗಳನ್ನುಂಟುಮಾಡವುದು ಎದೆಹಾಲನ್ನು ಹೆಚ್ಚಿಸುವುದು, ವಿಷ ಕಫ ಕೋಥ, ಇವುಗಳನ್ನು ನಿವಾರಿಸುವುದು, ವಿರೇಚಕ ಮೂತ್ರವನ್ನುಂಟುಮಾಡುವುದಲ್ಲದೆ ವೀರ್ಯವನ್ನು ನಷ್ಟಗೊಳಿಸುತ್ತದೆ ಸಕಲವಿದ ಬೇಳೆಗಳನ್ನು ಸ್ವಲ್ಪ ಹುರಿದು ಉಪಯೋಗಿಸಿದಾರೆ, ತೋಗಸು ಗುಸಯೋಗಿಸುವುದು ಹಿತಕರವಾದೆ.ವಾಗಿದೆ

ಮೊಳಕೆಬಂದ ಧಾನ್ಯಗಳು— ಪಲಮೂತ್ರಗಳನ್ನು ಬಂಧಿಸುವುದು. ಜೀರ್ಣಕ್ಕೆ ಸಹಕಾರಿಯಾಗಿರುವಲ್ಲದೆ ವಿಶೇಷ ದಾಹವನ್ನುಂಟುಮಾಡುವುದಲ್ಲದೆ ಕಣ್ಣಾಳಿಗೆ ವಿಶೇಷ ಹಾನಿಯನ್ನುಂಟುಮಾಡುತ್ತವೆ

ಹೀರೆಕಾಯಿ—ಸಿಹಿ, ಕಪ ಪಿತ್ತಗಳನ್ನು ಶಮನಗೊಳಿಸುವುದು, ರುಚಿಕರ ಬಲ ವೀರ್ಯಗಳನ್ನುಂಟು ಮಾಡುವುದ, ಸ್ನಿಗ್ಧವಾದುದು, ವಾತವನ್ನು ಸ್ವಲ್ಪ ಹೆಚ್ಚಿಸುವುದು ಇದೇ ಜಾತಿಯ ತುಪ್ಪಹೀರೆಕಾಯಿ ಪಿತ್ತ ಮತ್ತು ವಾಯುವನ್ನು ನಷ್ಟಗೊಳಿಸುತ್ತದೆ

ಬೂದಿಗುಂಬಳಕಾಯಿ—ಎಳೆಯದು ಪಿತ್ತವನ್ನು ನಾಶಗೊಳಿಸುತ್ತದೆ, ಅರ್ಧ ಬಲಿತಿರುವುದು ಕಫವನ್ನು ಹೆಚ್ಚಿಸುವುದು, ಹಣ್ಣಾಗಿರುವುದು ಕೆಸರು, ಉಷ್ಣ ಕ್ಷಾರ ವುಳ್ಳದು, ಅಗ್ನಿದೀಪಕ, ಮೂತ್ರಾಶಯವನ್ನು ಶೋಧಿಸುವುದು, ಸರ್ವದೋಷಹರ, ಹೃದಯಕ್ಕೆ ಹಿತಕರ, ಮನೋರೋಗವುಳ್ಳವರಿಗೆ ಪಥ್ಯವಾಗಿರುತ್ತದೆ

ಸೋರೆಕಾಯಿ—ಇದರಲ್ಲಿ ಸಿಹಿ, ವಿಷಗಳೆಂದೆ ಕಡು ಭೇದಗಳಿರುತ್ತವೆ. ಸಿಹಿಯಾದ ಸೋರೆಕಾಯಿ ರೂಕ್ಷಗುಣವುಳ್ಳದು, ಗುರು, ಶೀತ, ಮಲವನ್ನು ಸಡಲಿಸುವುದು ಕಹಿಸೋರೆಕಾಯಿ ವಾಂತಿಮಾಡಿಸುತ್ತದೆ ವಾತಪಿತ್ತಗಳನ್ನು ಜಯಿಸುವುದಾಗಿರುವುದಾದರೂ ಹೃದಯಕ್ಕೆ ಹಿತಕರವಾದುದಲ್ಲ

ಸವುತೆಕಾಯಿ—ಪಿತ್ತನಾಶಕ, ಬಹಳ ಶೀತ, ಸಿಹಿ, ಗುರು, ರುಚಿಕರ, ತೃಪ್ತಿಕರ, ಮೂತ್ರರೋಗ, ಸಂತಾಪ ಮೂರ್ಛೆ ಇವುಗಳನ್ನು ನಿವಾರಿಸುತ್ತದೆ ಇದರಲ್ಲಿ ಅನೇಕ ಜಾತಿಗಳಿವೆ ದೊಡ್ಡ ಜಾತಿಯಲ್ಲಿ ಎಳೆಯದು, ಶೀತ, ಹಗುರ, ರೂಕ್ಷಗುಣವುಳ್ಳದ್ದು, ಅತಿಶಯ ಮೂತ್ರಕಾರಿ ರಕ್ತಪಿತ್ತ, ಮೂತ್ರಕೃಚ್ಛ್ರ-ರಕ್ತವಿಕಾರ ಇವುಗಳನ್ನು ನಿವಾರಿಸುತ್ತದೆ· ಹಣ್ಣಾಗಿರುವುದು ಉಷ್ಣ, ಅಗ್ನಿದೀಪನಕಾರಿ, ತ್ರಿದೋಷನಾಶಕ; ಇದರಲ್ಲಿಯೇ ಹಳೆಯದು ಉಷ್ಣ, ಪಿತ್ತಕರ, ಕಫವಾತಗಳನ್ನು ನಿವಾರಿಸುತ್ತದೆ. ಸಣ್ಣಜಾತಿಯದು ಶೀತ ದಮ್ಮು ಪುತ್ತು ಪೀನಸ ವನ್ನುಂಟುಮಾಡುವುದು, ಪಿತ್ತಹರ, ಪಚನಕರ, ಉದರದಲ್ಲಿರುವ ವಾತವನ್ನು ಶಮನಗೊಳಿಸುವುದು, ಮಳೆಗಾಲದಲ್ಲಿಬೆಳೆದ ಸವುತೆಕಾಯಿಯು ಹಿತಕರವಲ್ಲ.

ಹಾಗಲಕಾಯಿ—ಶೀತ, ಹಗುರಾದುದು (ಬೇಗನೆ ಪಚನವಾಗುವುದು) ವಿಶೇಷ ವಾತಕರವಾದುದಲ್ಲ ಭೇದಿಯನ್ನು ಸಿಯಗಾಗಿ ಮಾಡಿಸುವುದು ಜ್ವರ ಪಿತ್ತ ಕಫ ರಕ್ತನಿಕಾರ ಪಾಂಡ ಮೇಹ ಕೃಮಿ ಈ ರೋಗಗಳನ್ನು ನಾಶಮಾಡುತ್ತದೆ

ಬದನೆಕಾಯಿ—ಉಷ್ಣ, ರುಚಿಕರ ವಿಷಾಕದಲ್ಲಿ ಕಾರವಾಗಿರುವ ಪಿತ್ತನಾಶಕ ಬಲ ವೀರ್ಯಕರ, ವೀರ್ಯವೃದ್ಧಿಕರ ಜ್ವರ ವಾತ ಕಫ ಇವುಗಳನ್ನು ನಿವಾರಿಸುವ ಒಲಿತಕಾಯಿ ಸ್ವಲ್ಪ ಪಿತ್ತವನ್ನುಂಟು ಮಾಡುತ್ತದೆ ಕಾಡದಲ್ಲಿ ಸುಟ್ಟಕಾಯಿ. ಕಫ ವಾತ ಆವ ನೋವನ್ನು ಇವುಗಳನ್ನು ನಾರಿಗೊಳಿಸುವುದು, ಹಗರಾದುದ ಅಗ್ನಿಯನ್ನು ವೃದ್ಧಿಗೊಳಿಸುವುದು ಇದರೊಡನೆ ಎಳ್ಳೆಣ್ಣೆ ಮತ್ತು ಉಪ್ಪು ಸೇರಿದರೆ ಬಿಗಿಯ ಮತ್ತು ಸ್ನಿಗ್ಧಗುಣವುಳ್ಳ ದಾಗುತ್ತದೆ

ಗುಳ್ಳದಕಾಯಿ—ಸಿಹಿ ವತ್ತ ಕಾರವಾದುದು ರುಚಿಕರ ಪಿತ್ತನ್ನು ಶಾಂತಗೊಳಿಸುವುದು. ಮತ್ತು ಬಲ ಪುಷ್ಟಿಗಳನ್ನುಂಟು ಮಾಡತ್ತದೆ ವಾತರೋಗನಲ್ಲಿ ಹಿತಕರವಾದುದಲ್ಲ

ಪಡನಲಕಾಯಿ—ಸಿಹಿ, ಪಿತ್ತನಾಶಕ, ರುಚಿಕರ, ಜಠರಾಗ್ನಿಯನ್ನು ವೃದ್ಧಿಗೊಳಿಸಿ ಪಚನಶಕ್ತಿಯನ್ನು ಬೆಳಸುವುದ ಮತ್ತು ಬಲ ಪುಷ್ಟಿಗಳನ್ನುಂಟುಮಾಡುವುದು ಪಥ್ಯವಾದದು. ಇದರ ಎಲೆಯು ವಿರೇಚನಾಗಿ ಪಿತ್ತ ನಾಶಕವಾದದು ಇವರೆ ದಂಟು, ಕಫನಾಶಕವಾದುದು ಬೇರು ಭೇದಿಕಾರಿಯಾಗಿರುವುದು ಈ ಗುಣಗಳೆಲ್ಲವೂ ಗಿಡ್ಡವಾಗಿ ಬೆಳೆಯುವ ಕಾಯಿಗಳಲ್ಲಿ ಮಾತ್ರ ಇರುತ್ತವೆ ಉದ್ದವಾಗಿ ಬೆಳೆಯುವ ಕಾಯಿಗಳಲ್ಲಿ ಪಲಬದ್ಧತೆಯನ್ನುಂಟುಮಾಡುವುದು ವಾತವನ್ನು ವೃದ್ಧಿಗೊಳಿಸುವುದು, ಕಫವನ್ನು ಕೋಪಗೊಳಿಸುವುದು, ಶೀತ ಮತ್ತು ಬೇದಿಕಾರಿಯಾಗಿರುತ್ತದೆ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವಿವಾಹಮಹೋತ್ಸವ, ಕೊಟ್ಟೂರು.

ಇದೇ ವಿಶ್ವಾವಸು ಸಂ| ಮಾರ್ಗಶಿರ ಬ|| ಪ ಭಾನುವಾರ (೨೫ನೆ ತಾ|| ೧೩ ೧೨ ೪೦) ಶ್ರೀವ ಮಹಾಪ್ರಭು ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಮಠಾಧಿಪತಿಗಳೆಂದು ಕಟ್ಟಳೆಗೆ ಕರೆತೊಟ್ಟ ಗಣ್ಯರ ಸಮಕ್ಷದಲ್ಲಿ ಸಕಲ ವಾದ್ಯಗಳಿಂದ ಮೆರವಣಿಗೆಯಲ್ಲಿ ಕರೆತಂದು ಪಟ್ಟಾಭಿಷೇಕ ಮಾಡಿಸಿ ಸಿಂಹಾಸನಾರೂಢರನ್ನಾಗಿ ಮಾಡಿಸಿದ ಸಂಭ್ರಮವನ್ನು ಕಣ್ಣಾರೆ ಕಂಡು ಆನಂದಿಸಿದ ಸಹೃದಯರಿಗೆ ಮತ್ತು ಆ ಸಮಯದಲ್ಲಿ ಸಕಲ ಭಕ್ತಜನರಿಗೆ ಮತ್ತು ಶ್ರೀಮಠಕ್ಕೆ ಹಿತಾಸಕ್ತರಾದ ಸಮಸ್ತ ಗಣ್ಯರಿಗೆ ಮತ್ತು ಸಾರ್ವಜನಿಕರಿಗೆ ಶ್ರೀಮಠದ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

---

೩ ದಿನಗಳಲ್ಲಿ ೭ ಮಕ್ಕಳನ್ನು ಹಡೆದ ಮಹಾತಾಯಿ

ನಿಜಾಂ ಸ್ಟೇಟ್ ಬಿದರಜಿಲ್ಲಾ ತೋರಣಗಾಂವ ಎಂಬ ಗ್ರಾಮದಲ್ಲಿರುವ ಒಬ್ಬ ಸ್ತ್ರೀಯಳು ಮೂರು ದಿನಗಳಲ್ಲಿ ೭ ಮಕ್ಕಳನ್ನು ಹಡೆದಳು ಮೊದಲನೆಯ ದಿವಸ ೩ ಮಕ್ಕಳನ್ನೂ ಎರಡನೆಯ ದಿವಸ ೨ ಮಕ್ಕಳನ್ನೂ, ಮೂರನೆಯ ದಿವಸ ೨ ಮಕ್ಕಳನ್ನೂ ಹಡೆದಳು. ಆದರೆ ಯಾವ ಮಕ್ಕಳೂ ಬದುಕಲಿಲ್ಲವೆಂದು ಪ್ರಕಟವಾಗಿದೆ. ದೈವಲೀಲೆಯು ವಿಚಿತ್ರವಾದುದು. ಆ ಸ್ತ್ರೀಯಳುಮಾತ್ರ ಸುಖವಾಗಿದ್ದಾಳೆ.

ಶತ್ರು ಮತ್ತು ಮಿತ್ರರಾಷ್ಟ್ರಗಳ ಬಲಾಬಲಗಳ ವಿವರ

ಯಾರ್ಕ್‌ಷೈರ್ ಪೋಸ್ಟ್ ಪತ್ರಿಕೆಯ ಮಿಲಟರಿ ಸುದ್ದಿಗಾರರು, ೧೯೪೧ ನೆಯ ವರ್ಷದಲ್ಲಿ ಶತ್ರುಗಳ ಮತ್ತು ಮಿತ್ರರಾಷ್ಟ್ರಗಳ ಬಲಾಬಲಗಳನ್ನು ಈ ರೀತಿ ವಿವರಿಸಿದ್ದಾರೆ

(೧) ಜರ್ಮನಿಯು ನೌಕಾಬಲದಲ್ಲಿ ಇನ್ನೂ ಹೆಚ್ಚು ಶಕ್ತಿಯನ್ನು ಸಂಪಾದಿಸಿಲ್ಲ.

(೨) ಜರ್ಮನಿಯ ವಿಮಾನಬಲದ ಕೈ ಮೇಲಾಗಿಲ್ಲ

(೩) ನೌಕಾಬಲವು ಬ್ರಿಟನ್ನಿನ ಕಡೆಗೇ ಹೆಚ್ಚಾಗಿದೆ

(೪) ಹತಗು ಸಂಚಾರ ಮಾರ್ಗಗಳು ಬ್ರಿಟನ್ನಿನ ಆಧೀನದಲ್ಲಿಯೇ ಇವೆ

(೫) ೧೯೪೧ ನೇ ವರ್ಷದಲ್ಲಿ ಬ್ರಿಟನ್ನಿಗೆ ಸಾಮಗ್ರಿಗಳ ತೊಂದರೆ ಇಲ್ಲ

(೬) ಪೂರ್ವ ಮೆಡಿಟರೇನಿಯನ್ ಕ್ಷೇತ್ರದಿಂದ ಇಟಲಿಯನ್ನು ಓಡಿಸಲಾಗಿದೆ

(೭) ಬ್ರಿಟನ್ನು ಸೃಷ್ಟಿಸಿರುವ ನೂತನ ಪರಿಸ್ಥಿತಿಯನ್ನು ವಿಮರ್ಶಮಾಡಿ, ಜರ್ಮನಿಯು ಹೊಸ ಪ್ಲಾನನ್ನು ಸಿದ್ಧಗೊಳಿಸಬೇಕಾಗಿದೆ

(೮) ಒಳನಾಡಿನ ರಂಗದಲ್ಲಿ ಬ್ರಿಟನ್ನು ೧೦೦ ಕ್ಕೆ ೧೦೦ ರಷ್ಟು ಬಲಯುತವಾಗಿದೆ

(೯) ಬ್ರಿಟನ್ನಿನಲ್ಲಿ ಹೊಸ ಸೈನ್ಯದ ಸಜ್ಜೆಯಾಗುತ್ತಿದೆ

(೧೦) ಇಟಲಿಯ ಆಫ್ರಿಕಾಸಾಮ್ರಾಜ್ಯವು ಇಟಲಿಯಿಂದ ಪ್ರತ್ಯೇಕಿಸಲ್ಪಟ್ಟಿದೆ

(೧೧) ಬ್ರಿಟನ್ನಿನ ಸಮುದ್ರಡಾಡಿಗಿರುವ ಪ್ರದೇಶಗಳೆಲ್ಲವೂ ಸುರಕ್ಷಿತವಾಗಿವೆ

(೧೨ ಬ್ರಿಟನ್ನಿನ ಹೊಸ ನೌಕಾಬಲವು ಈ ವರ್ಷ ಸಮುದ್ರಕ್ಕೆ ಇಳಿಯಲಿದೆ

(೧೩) ಬ್ರಿಟನ್ನಿನ ವಿಮಾನ ಬಲವು ೧೯೪೧ ರಲ್ಲಿ ದ್ವಿಗುಣಿತವಾಗುವುದು

(೧೪) ಶತ್ರುಗಳ ವಿಮಾನ ಮತ್ತು ನೌಕಾಮೂಲಗಳಲ್ಲಿ ೧೦೦ ಕ್ಕೆ ೫೦ ರಷ್ಟು ನಷ್ಟವಾಗಿದೆ

(೧೫) ಬ್ರಿಟನ್ನಿನ 'ಬ್ಲಾಕೇಡ್' ವ್ಯವಸ್ಥೆಯು ಜರ್ಮನಿಗೆ ಆಪಾರ ತೊಂದರೆಯನ್ನುಂಟುಮಾಡಹತ್ತಿದೆ

(೧೬) ಜರ್ಮನಿಯು ತಾನು ಮೊದಲು ಹಾಕಿಕೊಂಡಿದ್ದ ಕಾರ್ಯಕ್ರಮವನ್ನು ಬಿಟ್ಟು ಹೊಸ ಕಾರ್ಯಕ್ರಮವನ್ನು ಸಿದ್ಧಗೊಳಿಸಿಕೊಳ್ಳಬೇಕಾಗಿದೆ

ಬಾರ್ಡಿಯವು ಬ್ರಿಟಿಷರ ವಶವಾಯಿತು

ಉತ್ತರ ಆಫ್ರಿಕೆಯಲ್ಲಿರುವ ಇಟಲಿಯ ಮುಖ್ಯ ಮುಖ್ಯ ಪ್ರದೇಶಗಳು ಒಂದರಮೇಲೊಂದರಂತೆ ಬ್ರಿಟಿಷರ ಕೈಸೇರುತ್ತಿವೆ ಈಚೆಗೆ ಇಟಲಿಯ ಬಲದ ಮೂಲ ಸ್ಥಾನವೆನಿಸಿದ ಬಾರ್ಡಿಯವು ಬ್ರಿಟಿಷರಿಗೆ ಶರಣಾಗತವಾಯಿತು ಅಲ್ಲಿದ್ದ ಇಟಲಿ ಧ್ವಜದ ಬದಲು ಬ್ರಿಟಿಷ್ ಧ್ವಜವು ಏರಿಸಲ್ಪಟ್ಟಿತು. ಆಫ್ರಿಕೆಯದ ಕಾಲಾಳ ಸೈನ್ಯ, ಬ್ರಿಟಿಷ್ ಶಸ್ತ್ರ ಬಂಡಿಗಳ ಪಡೆ, ಬ್ರಿಟಿಷ್ ಬಾಂಬರ್ ವಿಮಾನಪಡೆ, ಬ್ರಿಟಿಷ್ ನೌಕಾಪಡೆ ಇವಗಳಿಲ್ಲವೂ ಅದ್ಭುತ ರೀತಿಯಲ್ಲಿ ಸಹಕರಿಸಿ ೨೬ ಘಂಟೆಗಳ ಕಾಲ ಹೊಡೆದಾಡಿ ಬಾರ್ಡಿಯಾ ವ್ಯೂಹವನ್ನು ಧ್ವಂಸಮಾಡಿ ಪಟ್ಟಣವನ್ನಾಕ್ರಮಿಸಿದವು. ಈ ಆಕ್ರಮಣದಿಂದ ಇಟಲಿಯ ಗರ್ವವು ನಾಶವಾಯಿತೆಂದು ಹೇಳಬಹುದಾಗಿದೆ

ಅಬ್ಸೀನಿಯದಲ್ಲಿ ದಂಗೆ

ಇಟಲಿಯ ಮೇಲೆ ಕಮ್ಮ ಸೇಡು ತೀರಿಸಿಕೊಳ್ಳಲು ಸಮಯಕಾಯುತ್ತಿದ್ದ ಅಬ್ಸೀನಿಯಾ ಸೈನಿಕರು ತಮ್ಮ ಆಕ್ರಮಣಕಾರ್ಯವನ್ನು ಪ್ರಾರಂಭಿಸಿರುವರು. ಅವರು ಬ್ರಿಟಿಷ್ ವಿಮಾನಗಳ ದೆಂಬಲವನ್ನು ಸಡೆದು ಬ್ಯೂನೈರ್ ನದಿಯ ಬಳಿ ಇರುವ ಗುಜ್ ಎಂಬ ಪ್ರದೇಶದಿಂದ ಇಟಲಿಯವರನ್ನು ಹೊಡೆದಟ್ಟಿದ್ದಲ್ಲದೆ ಅವರನ್ನು ಅಟ್ಟಿಕೊಂಡು ಹೋಗುತ್ತಿದ್ದಾರೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ಏಜುವರ್ಷಕ್ಕೊಮ್ಮೆ ಹತ್ತು ವರ್ಷಕ್ಕೊಮ್ಮೆ ಹಿಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಗತಿಪ್ರತ್ಯಕ್ಷಾನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿರುವುದು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ ಇವನ್ನು ದೂರವಾಗುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರಾಗಿ ಮುದ್ರಿಸಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚಿತ್ರಾಗಿ ತೋರಿಸಲ್ಪಟ್ಟಿದೆ ಅದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವಶ್ಯವಿದ್ದಲ್ಲಿ ವಿಷಯವನ್ನೆಲ್ಲಾ ಬರೆದು ಪಂಕ್ತಿಕಾರಂಭರ್ಪಣಾಗಿ ಬಾಂಧವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಕಡೆಗೂ ಸಿಗುವಷ್ಟಿದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪೀಠಾನಂದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಾಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತ್ರಿನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವೇಗ	೧	೩—೦—೦
ತ್ರಿವೇಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿಪ್ಪಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಪಚ್ಚಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಲ್ಲಿಕಾಭಸ್ಮ	೧	೦—೧೫—೦
ಮುಕ್ತಾಭಸ್ಮ	೧	೪೦—೦—೦
ಶ್ರುವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಡಸಿನ ಭಸ್ಮ	೧	೦—೮—೧
ಗೋದಂತಿಹರಿತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ:—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಶೀತ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವದೋಷಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರರು,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಬಿಮಕ, ಜಿಲ್ಲಾ. ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಹಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಪ್ರವರ್ಧಕಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಷ್ಟಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೇ ಇಷ್ಟಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಧಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಸಂಚಕ್ಕೆ ಮಹೋಪಕಾರವನ್ನು ನೂಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ನೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವನ್ನು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀಸಹಸ್ರನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀಸಹಸ್ರನಾಮಾವಳಿ, ಪಣ್ಣುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವತಾಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ** ವಿ ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನವೆಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನೆಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೬೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಸಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪೋಷಕರಾಗಿ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಮೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಜೆ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೨೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗ್‌ಡೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನೆಕದೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೨೪ ಬೆಲೆ ೧೯೪ ೦—೧—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಆವಿರ್ಭವಿಸಿದ ದಕ್ಷಿಣ ನ್ಯಾಸ ಸಾಲದ ಮೂರ್ತಿ ಮಹರ್ಷಿಗಳಿಗೆ ಶಿವಮಹಾತ್ಮೆಯನ್ನು ಪದೇಶಿಸುವ ಫೋಟೋ ಸೈಜು ೨೧×೧೪ ಬೆಲೆ ೦—೧—೬

ಸಚ್ಚಿ ವೀರಶೈವೋಪಾಸಮಾದಿರತಕ್ಕ ಐದರು ಅವಾಸ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೨೧×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗೋಳವನ್ನು ಆಳುತ್ತಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ವಿಕ್ರಾಲದೈತ್ಯನ ಮುಖಲೋಮ ಸುರುಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಸೃಷ್ಟಿಸಿರುವ ಫೋಟೋ ಬೆಲೆ ೦—೦—೯

ಶ್ರೀ ಜಗದಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಷಡಕ್ಷರೀಮಂತ್ರದ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀ ಶಿಕ್ಷೇಶ್ವರವಿರಾಜಮಾನ ಶ್ರೀ ಜಗದ್ಗುರು ವಿದ್ಯಾಶಂಕರ ಮೂಲಪೀಠಾಧಿಪತಿ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮಮ್ಮಡಿಯಿಂದ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಷಡಕ್ಷರಿಲಿಂಗಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾರಾಧಕಸಿಂಹಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮಮ್ಮಡಿಯಿಂದ ಜಗದ್ಗುರುವರ ಸ್ಥಿರಾಧಿಷ್ಠಿತ ಶ್ರೀ ಶಾಶ್ವತಸಾರ್ವಭೌಮರ ಸಂಗಡ ಸೊಗಲೆಯಿಂದ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠ ಮಹಾವಾದ ಅಶ್ವಾರೂಢ ಸುಂದರವಾದ ಫೋಟೋ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠ ಅಶ್ವಾರೂಢ ವ್ಯಾಘ್ರಚರ್ಮವಿಷ್ಟರ ಸುಂದರ ಫೋಟೋ ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರಾದಿ ಅಷ್ಟ ಶಿವಕ್ಷೇತ್ರದ ಗೋದರ ಫೋಟೋ ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರಾದಿ ಅಷ್ಟ ಶಿವಕ್ಷೇತ್ರದ ಗೋದರ ಫೋಟೋ ೦—೦—೯

ಹಿಮವತ್ಕೇದಾರದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರೇಶ್ವರಾಮಿಯ ಮಂದಿರದ ಸುಂದರ ಫೋಟೋ ೦—೦—೯

ಶ್ರೀರಂಭಾಪುರೀ ಜಗದ್ಗುರು ೧೦೮ ಸ್ವರೂಪಿ ಶ್ರೀಲಕ್ಷ್ಮೀನಾರಾಯಣರವರು ವಿರಾಜಿಸುತ್ತಿರುವ ಫೋಟೋ ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಿರ್ಮಿಸಿರುವ ಶ್ರೀ ಪಂಚಾಚಾರ್ಯರ ಮೂರ್ತಿಗಳ ಆಕರ್ಷಕವಾದ ಮೂರ್ತಿಯುಳ್ಳ ಸುಂದರವಾದ ಫೋಟೋ ೦—೦—೯

ಸೂಚನೆ—ಮೇಲೆ ಹೇಳಿರುವ ಫೋಟೋಗಳಲ್ಲಿ ಯಾವುದಾದರೂ ೨ ಫೋಟೋಗಳಿಗೆ ಕಡಿಮೆ ಹಣವನ್ನು ಕಳುಹಿಸಿದಲ್ಲಿ ಅಂಚೆ ಖರ್ಚನ್ನು ಹೆಚ್ಚಾಗಿ ಕೇಳಲಾಗುವುದು.

ಮೇಲೆ ತಿಳಿಸಿಕೊಳ್ಳುವವರು, ಕೇಳಿದ ಸ್ಥಳಕ್ಕೆ ಕಳುಹಿಸಿಕೊಡಲಾಗುವುದು. ಹೊಸ ಆರ್ಡರುಗಳಿಗೆ ಈ ಅಡ್ರೆಸ್ಸಿಗೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇವನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸ, ಒಂಟೆ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುನಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇವನ್ನು ಆನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೪-೦. ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ಓಲಯುಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[35] ಪೋ. ಬಾ ನಂ೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ	ಸೂಚೇತ್ಪರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಚ್ಚಾಸ್ತ್ರಮಂಜರಿ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ಶಿವಾಸೂತ್ರವಿದ್ಯಾಂತದರ್ಪಣ	೧೨ ಆಣೆ
ಪಂಚವಿಂತಿತ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ..	೧ ಆಣೆ	ಶ್ರೀಕರಭಾಷ್ಯಂ (ಚತುರ್ಥಾಧ್ಯಾ)	೧ ರೂ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ	ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ	ವೀರಶೈವರತ್ನ (೩ನೆಯ ಆವೃತ್ತಿ, ೪೦ಮತಸ್ಥಪ ಫೋಟೋಗಳಿರುವುದು) ...	೧೫ ರೂ
ಶ್ರೀಜಗದ್ಗುರು ಪಂಚಾಚಾರ್ಯರ ೨೫ ಪಾವಲೆ (೩ನೆಯ ಆವೃತ್ತಿ)	೩ ಆಣೆ	ಸಿದ್ಧಾಂತಶಿಖಾಮಣಿಸಹಿತ (ಕನ್ನಡ ಟೀಕಾಸಹಿತ)	೧ ರೂ
ಭಸವಾದಿಷಿಷಿತತ್ವದರ್ಪಣ (೧ನೆಯ ಆವೃತ್ತಿ) ..	೩ ಆಣೆ	ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀರೇಣುಕಾಚಾರ್ಯರತಕ (೩ನೆಯ ಆವೃತ್ತಿ)	೩ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನಿಷಟ್ಪದಿ)	೧ ರೂ
ಪಂಚಾಚಾರ್ಯಪ್ರಭಾಕರ ..	೩ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶ್ರೀಗುರುತತ್ತ್ವಪದಗಳು	೩ ಆಣೆ	ವೀರಶೈವಮಿದ್ಧಾಂತಸುಧಾಕರ	೨ ರೂ
ಶ್ರೀಗುರುಮುಖಿತಿಪಾರ್ಯತಕ	೩ ಆಣೆ	ಶಿವಾದ್ವೈತಕಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೪ ರೂ
ವೀರಶೈವಮತಮಿಮಾಂಸಾ	೩ ಆಣೆ	**A brief life-sketch of Pandit Sri Kashinatha Shastriji** (*English*)	**4 As.**
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ	**The Philosophical Aspect of Virasaivism** (*English*) ...	**8 As.**
ಲಿಂಗಧಾರಣವಿಧಿ	೪ ಆಣೆ	**Speeches by Pandit Shri Kashinatha Shastriji** *English*)	**12 As**
ವಿವಾಹವಿಧಿ (೩ನೆಯ ಆವೃತ್ತಿ) . .	೪ ಆಣೆ	ವೀರಶೈವರತ್ನ (ಕಾವಡಿ)	೧ ರೂ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	ಮಹಾನಾರಾಯಣೋಪನಿಷದ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ಸಚ್ಚಾಸ್ತ್ರಮಿಮರ್ಶತತ್ತ್ವತ್ರಿಶರೀಕರಣ (೩ನೆಯ ಆವೃತ್ತಿ)	೬ ಆಣೆ	ವೀರಶೈವತ್ತುಶೇಖರ (ಸಂಸ್ಕೃತ)	೧ ರೂ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ	ಸದ್ವಿದ್ಯೋಪಾಸಕಾರಿಕಾ (ಸಂಸ್ಕೃತ)	೨ ಆಣೆ
ವೀರಶೈವಮಹಾತ್ಮರು	೮ ಆಣೆ	ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ರೂ
ಉಪವಧ್ಯಾಂತವಿವಾಕರ (೨ನೆಯ ಆವೃತ್ತಿ)	೮ ಆಣೆ		
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ		
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (ತೆಲುಗು)	**೮ ಆಣೆ**		
ಸದ್ಯೋಧರತ್ನಾವಳಿ	೮ ಆಣೆ		
ವೈದಿಕಶಿವಪೂಜಾವಿಧಿ (ಸ್ವದಿಕಸ್ವರಯುಕ್ತವಾದ ಅಕ್ಕಂತ ಸುಂದರಮುದ್ರೆಗಳು)	೧೨ ಆಣೆ		
ಸಿದ್ಧಾಂತಸಾರಾವಳಿ (ತ್ರಿರೋಚನಶಿವಾಚಾರ್ಯಕೃತ)	೧೨ ಆಣೆ		
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ		

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನ ಸಂಚಾಲಕರಾದ ವೇದಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTFRED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಸೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಸಂಚಲಿಂಗೋದ್ಭವರ್ ॥
ಪಂಚಾಚಾರಪಥಿಯಾಮಕರ್ ಪರಿಲಸತ್ಪಂಚಾಕ್ಷರೀಮೌಧರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ ನೇ ಜನವರಿ ೧೯೪೧ [ಸಂಚಿಕೆ ೩೭

ಫ್ರಾನ್ಸು ಜರ್ಮನಿಗೆ ಶರಣಾಗತವಾಗಲು ಕಾರಣವೇನು ?

ಫ್ರಾನ್ಸಿನ ದೇಶದ್ರೋಹಿಗಳ ಒಳಸಂಚೇ ಕಾರಣ !

ಫ್ರಾನ್ಸಿನಲ್ಲಿದ್ದ ಶ್ರೀಮಂತರು ಜರ್ಮನಿ ಪಕ್ಷಪಾತಿಗಳಾಗಿದ್ದು, ಕೆಲಜನ ಕುಬೇರರು ತಮ್ಮ ಹುಡಿಯಂತೆ ನಡೆಯುವ ಸರ್ವಾಧಿಕಾರಪರಕಾರಕ್ಕಾಗಿ ಹೊಂಚುಹಾಕುತ್ತಿದ್ದರು ಪ್ರಜಾಪ್ರಭುತ್ವದ ರಾಷ್ಟ್ರ ಪದ್ಧತಿಯನ್ನು ದ್ವೇಷಮಾಡಿ ಸರ್ವಾಧಿಕಾರಿ ಸಾಮ್ರಾಜ್ಯಶಾಹಿಯನ್ನು ಅಪೇಕ್ಷಿಸುತ್ತಿದ್ದರು ಈ ಕೋಟೀಶ್ವರರು ಜರ್ಮನ್ ರ. ಕೇಳಿದಷ್ಟು ಕಜ್ಜಾಮಾಲುಗಳನ್ನು ಜರ್ಮನಿಗೆ ಕಳುಹಿಸುತ್ತಿದ್ದರು ದೇಶದ್ರೋಹಾತ್ಮಕವಾದ ಈ ವ್ಯಾಪಾರವು ಫ್ರಾನ್ಸು ಸಾಯುವವರೆಗೂ ಸಾಗುತ್ತಿತ್ತು ಜೆಕ್ಕಿಯ ಸ್ಕಿನ ಮೂಲಕ ಜರ್ಮನಿಗೆ ಫ್ರೆಂಚ್ ಗನಿಗಳಿಂದ ಕಬ್ಬಿಣ ಕಲ್ಲಿದ್ದಲುಗಳು ವಿಶೇಷವಾಗಿ ಹೋಗುತ್ತಿದ್ದವು.

ಪಸಿಕಂದಿ ಹಿಂಸಿಸಲ್ಪಡುತ್ತಿದ್ದ ಕೂಲಿಜನರು ಎಚ್ಚೆತ್ತು ಸಂಘಟಿತರಾಗಿ, ಫ್ರಾನ್ಸಿನಲ್ಲಿ ಸಾಮಾನ್ಯರೀತಿಯ ಪ್ರಜಾಸತ್ತೆಯು ನೆಲೆಸಿತ್ತು ಕಳೆದ ಏಳು ವರ್ಷಗಳಿಂದ "ಧನಿಕರು ಹಣ ತೆರಲಿ" ಎಂದು ಕೂಲಿಗಾರರು ಬೊಬ್ಬೆಯಿಡುತ್ತಿದ್ದರು ಇದರಿಂದ ಹೆದರಿದ ಈ ಧನಿಕರು, ಅಸಮಾನ ಶಕ್ತಿಯ ಫ್ರಾನ್ಸನ್ನು ಜೀವನಗಳ್ಳ ರಾಷ್ಟ್ರವನ್ನಾಗಿಮಾಡಿ ನಾಜಿ ಗುಂಡಿಗೆ ತಲೆತಗ್ಗಿಸುವಂತೆ ಮಾಡಿದರು

ಪ್ರಜಾಸರಕಾರವನ್ನು ತೆಗೆಸುಹಾಕಿ. ನಾಜಿಪಕ್ಷಪಾತದ ಸರ್ವಾಧಿಕಾರಿ ಸರಕಾರವನ್ನು ಫ್ರಾನ್ಸಿನಲ್ಲಿ ಸ್ಥಾಪಿಸಬೇಕೆಂದು ಕೆಲ ವರ್ಷಗಳಿಂದ ನಡೆಯುತ್ತಿದ್ದ ಕುತಂತ್ರಗಳಿಗೆಲ್ಲ ಇವರೇ ಕಾರಣರು ಸರಕಾರಿ ಅಧಿಕಾರಿಗಳೂ, ಮಂತ್ರಿಗಳೂ ಇವರ ಮಾತಿನಂತೆ ನಡೆಯುತ್ತಿದ್ದರು. ಈ ಘಾತುಕ ಯುದ್ಧದಲ್ಲಿ, ಫ್ರಾನ್ಸು ಹೀನಸ್ಥಿತಿಗಳಿಯುವಂತೆ ಮಾಡಿದವರು ಈ ಶ್ರೀಮಂತರೇ !

ದೇಶದ್ರೋಹಿ ಫ್ಲೆಂಡಿನ್

ಫ್ರಾನ್ಸಿನ ಮಾಜಿ ಪ್ರಧಾನನಾಗಿದ್ದ ಟಾರ್ಡ್ಯು ಎಂಬವನು ಅಧಿಕಾರಿಯಾಗಿದ್ದಾಗಲೇ, ಸರಕಾರದ ಹಣದಿಂದ ದೇಶಕ್ಕೆ ದ್ರೋಹವನ್ನು ಮಾಡಲು ಪ್ರಾರಂಭಿಸಿದನು. ಅಲ್ಲದೆ ಕುಬೇರಕಂತಿದ್ದ ಫ್ಲೆಂಡಿನ್ ಎಂಬ ಬೇರೊಬ್ಬ ಮಂತ್ರಿಯು ಜರ್ಮನಿಗೆ ಸಹಾಯಕನಾಗಿದ್ದನು ಇವನು ೧೯೩೭ ರಲ್ಲಿ ಜರ್ಮನಿಗೆ ತೆರಳಿ, ಗೋರಿಂಗ್ ಮತ್ತು ಹರ್ ವಾನ್ ರಿಬ್ಬ್ರಾಪ್ಪರ್ ಪರಮ ಮಿತ್ರನಾದನು ಅಲ್ಲಸಿ ಫ್ರೆಂಚ್-ಜರ್ಮನ್ ಮಿತ್ರತ್ವದ ಪ್ರಚಾರಕನಾಗಿ ಕೆಲಸ ನಡೆಸಿದನು. ಜರ್ಮನಿಯ ಆಕಾಂಕ್ಷೆಯು ಪೂರ್ತಿ ಯಾಗಬೇಕೆಂಬ ಇವನ ಆಶಯವನ್ನು ಇವನ ಪ್ರತಿಯೊಂದು ಕಾರ್ಯವೂ ಪ್ರದರ್ಶಿಸುತ್ತಿತ್ತು

೧೯೩೯ ನೆಯ ಜನವರಿಯಲ್ಲಿ ಸರಕಾರವನ್ನು ರುಳಿಸಿ, ಜರ್ಮನಿಯ ಸಹಾನುಭೂತಿಯ ಮಂತ್ರಿಮಂಡಲವನ್ನು ಸ್ಥಾಪಿಸಲು ನಡೆದ ಒಂದು ಕುತಂತ್ರವನ್ನು ಪ್ಯಾರಿಸಿನ ಪತ್ರಿಕೆಯು ಪ್ರಕಟಿಸಿತು ಆದರೆ, ಫ್ರಾನ್ಸಿನೊಳಗೆ ಈ ವಿಚಾರವು ಹರಡದಂತೆ ಸರಕಾರವು ನೋಡಿಕೊಂಡಿತು ಆದರೆ ಆಗ್ಗೆ ಪ್ರಧಾನನಾಗಿದ್ದ ಡಲಾಡಿಯರನು ಇಂತಹ ಕುತಂತ್ರ ನಡೆಯುತ್ತಿದೆಯೆಂದು ಒಪ್ಪಿದನು ಈ ತಂತ್ರವನ್ನು ಹೂಡಿದವನು ಫ್ಲೆಂಡಿನ್

ಡಲಾಡಿಯರನು ಫ್ಲೆಂಡಿನ್ನಿನ ಈ ಕುತಂತ್ರವನ್ನೂ ಒಪ್ಪಿ, ಈ ವಿಚಾರದಲ್ಲಿ ಪೋಲೀಸ್ ತಪಿಸಿ ನಡೆಸಲು ಗುವುದೆಂಬ ಭರವಸೆಯಿತ್ತನು ಆದರೆ ತನ್ನಿಪೆಯಾಗಲಿ, ಕ ತಂತ್ರಗಳು ನೆರೆಯಾಗಲಿ ನಡೆಯಲಿಲ್ಲ.

೧೯೪೦ ಮೇ ೬ ರಲ್ಲಿ ಹಿಟ್ಲರನ ತಾಂಡವನ್ನು ತಡೆಯಲು ಬ್ರಿಟಿಷ್ ಸಾಮ್ರಾಜ್ಯವು ಯತ್ನಿಸುತ್ತಿದ್ದಾಗ, ಇನ್ನೊಂದು ಒಳಸಂಚು ಬಯಲಿಗೆ ಬಂದಿತು ಇದಕ್ಕಾಗಿ "ಸೀಗ್ರೋರ್ಟ್ ಮಾಸಿಯಲ್" ನಲ್ಲಿ ತಿಪ್ಪರ ವಿಚಾರಣೆಯಾಯಿತು ಫ್ರೆಂಚ್ ಸರಕಾರದ ಪತ್ರಿಕೆಯೊಂದರ ವಾರ್ತಾಸಂಪಾದಕನಾದ ಎಲೋರ್ ಸಿವಿನ್ ಮತ್ತು ಮಿಲಿಟರಿ ರಿಕಾರ್ಡುಗಳನ್ನೂ, ಗೂಢ ಪತ್ರಗಳನ್ನೂ ಬೈಪ್ ಮಾಡುವ ಗಾಸ್ಟನ್ ಎಮೊರೆಲ್ಲೆ ಇವರಿಬ್ಬರೇ ಆಪರಾಧಿಗಳು ವಿಚಾರಣೆಯಲ್ಲಿ ಈ ಇಬ್ಬರೂ ಅಪರಾಧಿಗಳಲ್ಲವೆಂದು ತೀರ್ಮಾನವಾಯಿತು

ಜೋನೆಟ್ಟಿನ ಆಟಗಳು

ಪ್ರಜಾಪ್ರತಿನಿಧಿಯೊಬ್ಬನು ಜರ್ಮನಿಯಲ್ಲಿ ಫ್ರೆಂಚ್ ರಾಯಭಾರಿಯಾಗಿದ್ದ ಹರ್ ಎಬೆಜ್ಞನು ಜರ್ಮನಿ ಗೂಢಚಾರನೆಂದು ಸರಕಾರಕ್ಕೆ ಎಚ್ಚರಿಕೆಯಿತ್ತು ವಿರೋಧಿಸಿದನು ಆದರೆ ಜೋನೆಟ್ಟಿನು ಎಬೆಜ್ಞನನ್ನು ತನ್ನ ರಕ್ಷಣೆಗೆ ತೆಗೆದುಕೊಂಡು, ದೇಶ ಪ್ರೇಮಿಗಳ ಕ್ಯೋಧಕ್ಕೆ ಪಾತ್ರನಾಗದಂತೆ ಮಾಡಿದನು ಸರಿ ! ಮುಂದೆ ಗುಟ್ಟು ಬಯಲಾಯಿತು ಜೋನೆಟ್ಟಿನ ಆಂತೆಯಲ್ಲಿದ್ದಾಗಲೇ ಎಬೆಜ್ಞನು ಫ್ರಾನ್ಸಿನ ವಿವಿಧ ಪತ್ರಿಕೆಗಳಿಗೆ, ಲಂಚದ ರೂಪದಿಂದ ಸುಮಾರು ೧೦ ಮಿಲಿಯನ್ ಹಾಲುಗಳನ್ನು ಸುರಿಸಿದ್ದಾನೆಂದು ತಿಳಿದುಬಂದಿತು. ಜೋನೆಟ್ ಕೂಡ ಬೇಕಾದಷ್ಟು ಲಂಚ ತಿಂದಿರುವನೆಂದು ಗೊತ್ತಾಯಿತು.

ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ನಾಜಿ ವಿಜಯದಿಂದ ಪುಷ್ಟೀಕರಿಸಿ, ಸಕಲ ಸವಲತ್ತುಗಳನ್ನೂ ಒದಗಿಸುತ್ತಿದ್ದ ಜೋನೆಟ್ಟಿನು ಹಲವು ವರ್ಷಗಳಿಂದಲೂ ನಾಜಿ ಪಕ್ಷಪಾತಿಯಾಗಿದ್ದನು. ಫ್ರೆಂಚ್ ಕೈದಾರಿಕೆಗಳ ಕುಬೇರರು ಹೇಳಿದಂತೆ ನಡೆದು ಕೊಂಡು ಬರುತ್ತಿದ್ದನು. ಮ್ಯೂನೀಚ್ ಒಪ್ಪಂದದಲ್ಲಿದ್ದ ಇವನು ಯುದ್ಧಾರಂಭಕ್ಕೆ ಎರಡು ತಿಂಗಳ ಮೊದಲು, ಜರ್ಮನ್ ಮತ್ತು ಫ್ರಾನ್ಸುಗಳ ರಾಜಕೀಯ ಮತಭೇದವನ್ನು ನಿವಾರಿಸಬಹುದೆಂದೂ, ತನ್ಮೂಲಕ ತಾವು ಒಂದಾಗಬಹುದೆಂದೂ ಜರ್ಮನ್ ರಾಯಭಾರಿಗೆ ಆಶ್ವಾಸನೆಯಿತ್ತಿದ್ದನು.

ಹೊಲಕಾಯಲು ಪನವನ್ನೇ ಮೇಯಿಸಿದರು

ಯುದ್ಧಾರಂಭದ ದಿನ, ಅಂದರೆ೧೯೩೯ರ ಸೆಪ್ಟಂಬರ್ ೩ ನೇ ತಾರೀಖಿನ ದಿನ, ಡಲಾಡಿಯರ್ ಮಂತ್ರಿಮಂಡಲದಲ್ಲಿ ಜೋನೆಟ್ಟಿನು ಯುದ್ಧಮಂತ್ರಿಮಂಡಲದ ನ್ಯಾಯ ಶಾಖೆಯ ಮಂತ್ರಿಯಾಗಿ ನೇಮಿಸಲ್ಪಟ್ಟನು. ಸೈನ್ಯದ ಅಧಿಕಾರವನ್ನು ಇವನ ಕೈಗೆ ಕೊಡಲಾಯಿತು.

ಯುದ್ಧಾರಂಭವಾದ ಎಂಟು ತಿಂಗಳ ವರೆಗೆ ಪಶ್ಚಿಮ ಗಡಿಯಲ್ಲಿ ಯಾವ ಕಾದಾಟವೂ ನಡೆಯಲೇ ಇಲ್ಲ ಯುದ್ಧಭೂಮಿಬಾಲ್ಲಿ, ಈ ರೀತಿ ಶಾಂತಿ ನೆಲಸಿದ್ದಾಗ, ರಾಷ್ಟ್ರದೊಳಗೆ ಘೋರ ಕೃತ್ಯ ನಡೆಯಿತು ನಾಜಿ ತಸ್ಕರ್ಕೆ ಸರಿಯಾ ವೈರಿಗಳಾದ ಕೂಲಿಕಾರರ ಸೆರೆ ಡಿಫೆನ್ಸ್ ಕಾನೂನಿನ ಮೂಲಕ ನಡೆಯಿತು. ಪೆಲ್ಪ್ರೇಮಿಗಳಾದ ಕೂಲಿಕಾರರ ಮೇಲೆ ಧನಿಕರೂ, ಸರಕಾರವೂ ಗದಾಪ್ರಹಾರ ನಡೆಯಿಸಿ, ನಿತ್ಯ ಸಾವರಗಟ್ಟಲೆ ದೇಶ ಪ್ರೇಮಿಗಳನ್ನು ಸೆರೆ ಹಿಡಿದು, ದೆವೊಕ್ರೆಸಿಯ ಬುಡಕ್ಕೆ ಕೊಡಲಿ ಇಡಲಾಯಿತು

ಯಾವ ಸಂದರ್ಭದಲ್ಲಿ ರಾಷ್ಟ್ರದಲ್ಲಿ ದೇಶಪ್ರೇಮದ ಹೊಳೆ ಹರಿಯಬೇಕೋ, ಶಾಂತಿ ನೆಲಸಬೇಕೋ, ಮಹಾ ಜನರ ಬೆಂಬಲ ಅಧಿಕವಾಗಬೇಕೋ, ಆ ಸಂದರ್ಭದ ಲ್ಲಿಯೇ ಸರಕಾರ ಹಾಗೂ ಧನಿಕರ ದಬ್ಬಾಳಿಕೆಯು ಬೆಳೆದು, ಯುದ್ಧಕ್ಕೆ ಸಹಾಯಕರಾಗುವವರೂ ಸಹ ವಿರೋಧಿಗಳಾಗುವಂತಾಯಿತು ಫ್ರಾನ್ಸಿನ ಕೋಟೀಶ್ವರರು ೩೦೦ ಶ್ರೀಮಂತಕುಟುಂಬಗಳ ಪ್ರತಿನಿಧಿಗಳೊಡನೆ ಸೇರಿ, ಸರ್ವಾಧಿಕಾರಿ ಸರಕಾರವನ್ನು ಸ್ಥಾಪಿಸಿದರು. ಮಹಾಜನರ ಬೆಂಬಲವನ್ನು ಸರಕಾರವು ಕಳೆದುಕೊಂಡಿತು.

ಜೋನೆಟ್ಟಾ ಆಶ್ವಾಸನೆಯಂತೆ, ಫ್ರಾನ್ಸಿನಲ್ಲಿ ಸರ್ವಾಧಿಕಾರವು ಸ್ಥಾಪನೆಯಾಯಿತಾದರೆ, ಸಭೆಗಳು ಫಿಲೀ ಫಿಸಲ್ಪಟ್ಟವು; ೬೨೦ ಕೂಲಿಗಾರರ ಸಂಘಗಳು ತೆಗೆದು ಹಾಕಲ್ಪಟ್ಟವು. ಪ್ರಜೆಗಳಿಂದ ಚುನಾಯಿತರಾದ ಸಚಿವರು ಜನ ಪ್ರತಿನಿಧಿಗಳು ಸೆರೆಹಿಡಿಯಲ್ಪಟ್ಟರು. ಜನರ ಬಾಯಿಗೆ ಬೀಗ ಬಿತ್ತು ಈ ರೀತಿಯ ಸರ್ಕಾರದ ವರ್ತನೆಯನ್ನು ಫ್ರೆಂಚ್ ಸೇನಾಧಿಕಾರಿ ಗಾಮೆಲಿನ್‌ನು ವಿರೋಧಿಸಿದನು. ಸೈನ್ಯದ ಸ್ಥೈರ್ಯವು ಅಳಿವುಯುವೆಂದು ತಿಳಿಸಿದನು ಅದರೆನು ? ಆತನ ವಿರುದ್ಧವಾದ ಟೀಕೆಗಳೇ ಹೆಚ್ಚಾದವು.

೧೯೪೦ ಮೇ ೧೫ ರಲ್ಲಿ ಫಿಲವಾದ ಯುದ್ಧಮಾರಂಭವಾಯಿತು. ಜರ್ಮನಿಸೈನ್ಯಗಳು ಮುಂದೆ ಬಂದವು. ದೇಶದ್ರೋಹಕ್ಕೊಳಗಾದ ಈ ಕಲುಷಿತ ವಾತಾವರಣ ವಿಂದ ವೀರ ಫ್ರೆಂಚ್ ಸೈನಿಕರು ಸೋತರು. ಫ್ರಾನ್ಸಿನ ಸೋಲಿಗೆ ಈ ರೀತಿ ನಡೆದ ಪಿತೂರಿಯೇ ಮೂಲಕಾರಣವಾಯಿತು.

ಉಜ್ಜಯಿನೀ ಜಗದ್ಗುರುಗಳ ಸಂಚಾರ

ಶ್ರೀಮದುಜ್ಜಯಿನೀ ಸದ್ಧರ್ಮ ಪೀಠದ ಪೂರ್ವದ ಜಗದ್ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸದುದ್ದೇಶಗಳು ಅನೇಕವಿದ್ದು ಅವುಗಳನ್ನು ಅವರು ನೆರವೇರಿಸಿದ ಕ್ಷೇತ್ರದಲ್ಲಿಯೆ ಕೈಲಾಸಗಮನವನ್ನೂ ಮಾಡಿದ ನಿಮಿಯವು ಸರ್ವರಿಗೂ ವೇದ್ಯವೇಅಲಿ ಆ ಮಹಾ ಜಗದ್ಗುರುವಿನ ಸಚ್ಛಂಕಲ್ಪಗಳನ್ನು ನೆರವೇರಿಸಲು ಬದ್ಧಕಂಕಣರಾಗಿರುವ ಈಗಿನ ಜಗದ್ಗುರುಗಳವರ ಕಾರ್ಯದಕ್ಷತೆಯನ್ನು ಎನ್ನಲು ಹೊಗಳಿದರೂ ತೀರದಾಗಿದೆ. ಸೂತನ ಜಗದ್ಗುರುಗಳಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು, ಪೂರ್ವದ ಜಗದ್ಗುರುಗಳವರ ಜನ್ಮ ಸಂಕಲ್ಪಗಳೆಲ್ಲವೂ ದಾದ ೧೯೩೦ ನೇ ಇಸ್ವಿಯಲ್ಲಿ ಲೌಕಿಕಾತೀತ "ಜ್ಞಾನ ಗುರುಕಲುಪ್ರಮೆ" ಎನ್ನು ಪೂರ್ತಿಸಲು ಪ್ರಯತ್ನಪಟ್ಟು ಈಗಾಗಲೇ ಹಲವು ಕಾರ್ಯಗಳು ಪೂರ್ಣಗಿವಿಗೆ ಪ ಂದ ಬರುವ ಶ್ರೀ ಮಲಬಸಿದ್ಧೇಶ್ವರ ರಥೋತ್ಸವ (ಸೌರಾಷ್ಟ್ರ ಶು|| ೫) ಕಾಲಕ್ಕೆ ಸಂಪೂರ್ಣವಾಗಿ ಸಿದ್ಧವಾಗುವುದು ಸದ್ಯಃ ಜಗದ್ಗುರುಗಳವರ ಶಿಲಾಸಂಗ್ರಹಕಾರ್ಯವೂ, ಇತರ ಸಲಕರಣೆಗಳ ಸಿದ್ಧತೆಯ ಗುಮ್ಮಟ ಬಳ್ಳಾರಿಜಿಲ್ಲೆಯ ಪಟ್ಟಣಸೂಲೂರಿಕ್ಕಲ್ಲಿ ಸ ಚಿರಸ್ಥಾಪಕ ತ್ರಿರುವರು ಆದುತೆಂಬಿದೆ ತಪ್ಪ ಗ್ರಾವಳಿ ಅನಾಮಿಯ ಮಹಾಕಾರ್ಯನ್ನಿರಿಯ ಕಾರ್ಯಕ್ಕೆ ಸ ಛಧವಿಂದಲೂ ನೀವೆಯೆನ್ನ ಸಲ್ಲಿಸಿ ಪೂರ್ವದ ಜಗದ್ಗುರುಗಳವರ ಕೃಪೆಗೆಳಾತ್ರರಾಗಿ ದಸ್ಯರಾಗಬೇಕೆಂದು ಕೋರಿ ತ್ತೇನೆ

ಗರ್ಭಸೇವಾಸಕ್ತ ರೂಪಿಸಿದೆಶಿವಲಿ

।। ಜಯ ಶ್ರೀಶೈಲ ।।

ಶಿವಲಿಂಗ ಪ್ರತಿಷ್ಠಾಪನೆ

ರಿಯಚೂರು ಜಿಲ್ಲೆಗೆ ಸೇರಿದ ಸಜ್ಜಗುಡ್ಡವು ಗ್ರಾಮದಲ್ಲಿ ಬ ಲ್ಯದಾಪಟ್ಯ ಶಿವಭಕ್ತನೆ ಒಬ್ಬನಿದ್ದನು ರಾದಿ ಕಾರ್ಯಾನಿಕ್ಕಲಾದ ರಣಜಿಸ್ಯನವರ ಇಚ್ಛಾನ ಸಾರವಾಗಿ ನೇಗಿ ಮಹಾಂತಯ್ಯ ಮುದೇನೂರಿನ ರ ನಂದವಾಡಿಗಿ ಇವರು ಒಳ್ಳೆ ವಿಶ್ವಾಸದಿಂದ ನೂತನ ಲಿಂಗ ವನ್ನು ತರಿಸಿ ಮತ್ತು ಪೂಜಾ ಸಮಾರಂಭಕ್ಕೆ ಬೇಕಾ ದ ೨೦೧ ರೂಪಾಯಿಗಳನ್ನು ಆತ್ಯತ್ಸಾಹದಿಂದ ಒಪ್ಪಿ ಕೊಂಡು ಇದೇ ಕಾರ್ತಿಕ ಶುದ್ಧ ದ್ವಾದಶಿ ಸೋಮವಾರ ಕುಭಮುಹೂರ್ತದಲ್ಲಿ ಶ್ರೀ ಷ|| ಬ್ರ|| ಚಿರಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯ ಹಿರೇಮಠ ದಿಗ್ವಿಜಯ ಶ್ರೀಪಟ್ಟದೇವರು ಸಂತಿಕೆಲೂರು, ಶ್ರೀ ಪಟ್ಟದಸ್ವಾಮಿಗಳು ದೋಟಿಹಾಳ ಇವರ ಗುರುತ್ವದಲ್ಲಿ ಲಿಂಗಸ್ಥಾಪನೆಯನ್ನು ನೆರವೇರಿಸಿದರು ಸಾಸ್ತ್ರಕಾಂತಿ ಹೋವಾದಿಗಳ ಮುಗಿದ ಬಳಿಕ ಸೂತನ ಶಿವಲಿಂಗಕ್ಕೆ ಶ್ರೀ ರುದ್ರಾಭಿಷೇಕವು ನೆರವೇರಿತು ಅನಂತರ ಸ್ಥಳಿಕರು ಅಗಲಿದರಿಂದ ಬಂದಿರತಕ್ಕ ಪಠ್ಯಮಾಹೇಶ್ವರ ಸಮೂಹಕ್ಕೆ ಅನ್ನಸಂತರ್ಪಣೆಯಾಯಿತು ಆಮೇಲೆ ಸಾಯಂಕಾಲ ಆ ಫೆಂಟಿಯಿಂದ ಧಾರ್ಮಿಕ ಸಭೆಯು ಕೂಡಿತು. ನೊದಲು ವೇ|| ಅನ್ನದಾನಯ್ಯ ಹಿರೇಮಠ ಜಾಪುರ ಇವರು ಮಂಜುಳವಾದ ಸ್ವರದಿಂದ ಗಾಸನಮಾಡಿದನಂತರ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯ ಹಿರೇಮಠ ದಿಗ್ವಿಜಯ ಇವರು ಧರ್ಮ ಮತ್ತು ಆಚ್ಯಾವರಣ ವಿಷಯಗಳನ್ನು ಕುರಿತು ಲೌಕಿಕ ಪಾರಮಾರ್ಥಿಕ ಉದಾಹರಣೆಗಳಿಂದ ಸಭಿಕರ ಮನಸ್ಸಿಗೆ ಆನಂದವಾಗುವ ಹಾಗೆ ಅಪ್ಪಣೆಕೊಡಿಸಿದರು. ಸರ್ವರ ಅಪೇಕ್ಷೆಯಂತೆ ಶಿವಲಿಂಗಕ್ಕೆ ಶ್ರೀ ಸಂಗಮೇಶ್ವರವೆಂಬ ನಾಮಕರಣವು ಮಾಡಲ್ಪಟ್ಟಿತು ಈ ಮಹೋತ್ಸವಕ್ಕೆ ಸುಮಾರು ೩೦೦೦ಕ್ಕೆ ಮೇಲ್ಪಟ್ಟು ಜನಗಳು ಕೂಡಿದ್ದರು. ಶ್ರೀ ಶಿವದೇವಾಶ್ರಿಗಳು ಸಿಂಧನೂರು, ಶ್ರೀ ಬಸಯ್ಯ ಗುಡದೂರು, ವೇ|| ಗುರುಬಸಯ್ಯನವರು ಸಾಗಕಾಲ, ವೀರಯ್ಯ ಮಂಟಗೇರಿ, ಮಾ|| ರಾ|| ತಿಮ್ಮಸೆಗೌಡರು ಕೇಲಬಹಾಳ, ಮಾ|| ರಾ|| ಅಯ್ಯನಗೌಡರು ಪೋ|| ಹಾ|| ರಾಮತನಾಳ, ಶ್ರೀ ವೀರಭದ್ರಗೌಡರು, ಶ್ರೀಯುತ ವಿರುಪಾಕ್ಷಗೌಡರು ರೇವಡಿಹಾಳ, ರಾಜಸಗೌಡರು ಕೋಡಿಹಾಳ, ಶ್ರೀಯುತ ಯಮಸಗೌಡರು ಪೋ|| ಹಾ|| ಮುದಗಲ್ಲಿ, ಮಾ|| ರಾ|| ಸಂಗನಗೌಡರು ಪೋ|| ಹಾ|| ಚಿತಾಪೂರ, ಶ್ರೀಯುತ ಸಜ್ಜನುಸೇವಕ ಸಂಪಣ್ಣನವರು ಹಿರೇಅಂತಕಲ್ಲು. ಶ್ರೀಯುತ ಸಂಗನಗೌಡರು ಮತ್ತು ಸಾರ್ವಜನಿಕರು ಶಾಂತಪ್ಪನವರು, ಮಾ|| ರಾ|| ವಿಶ್ವೇಶಪ್ಪ ಇವರೇ ನೊದಲಾದ ನಂದವಾಡಿಗ ಭಕ್ತಾದಿಗಳು ಮತ್ತು ಶ್ರೀಮತ ಕಾಶೀರಾಪ ದೇಶಪಾಂಡೆ ಹನುಮಂತ ಗೌಡರು ಬಸಪ್ಪಾ ಹೊಸಳ್ಳಿರವರು ಸಜ್ಜನಗಡ್ಡ ಇವರ ಪ್ರೀತಿಯಿಂದ ಸನಾತನಸಧರ್ಮ ಪ್ರೇಮವನ್ನು ನೋಡಿ ಪರಮಾನಂದವಾಯಿತು ಸಮಾಜದಲ್ಲಿ ನಾಸ್ತಿಕ ವೃತ್ತಿಯು ಬಿಗಿಯುತ್ತಿರುವ ಧರ್ಮಘಾತುಕರು ಸ್ವಾರ್ಥಾಂಧರಾಗಿ ಸ್ವಾಮಿದ್ರೋಹಿಗಳಾಗುತ್ತಿರುವ ಈ ದೋಷವಿರುವಿಲ್ಲ ನಿಜವಾದ ಧರ್ಮಮಾರ್ಗವನ್ನು ತೋರಿಸಿಕ್ಕೆ ಜನ್ಮಪತ್ರಿರವ ವೇ|| ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳು ಶ್ರೀಜಗದ್ಗುರು ಸಂಜಾತಾಯರ ಸ್ವಾತಂತ್ರವನ್ನು ಪ್ರಚಾರ ಮಾಡುತ್ತ ಜನಾಂಗವನ್ನು ಎಚ್ಚರಿಸಿ ತ್ರಿವಿಧ ಸಂತೋಷಕರವಾಗಿದೆ ಆ ಪುಣ್ಯಾತ್ಮರಿಗೆ ಪೂರ್ಣಾಯುರಾರೋಗ್ಯವು ಪ್ರಯತ್ನ ಪಡಬೇಕೆಂದು ಲಿಂಗಾರ್ಚನೆಯನ್ನು ಮಾಡಿ ಪೂರ್ತಿಗೊಂಡ ಮೇಲೆ ಸ್ವಾಮಿಗಳವರಿಗೆ ಜಗದ್ಗುರುಗಳವರ ಜಯಘೋಷ ಮಾಡಿ ಸಲಿಸಿದ ಗೌರವವನ್ನು ಹೊಂದಿ ಧನ್ಯರಾದರು

ಎಲ್ಲರ ಕೃತ್ಯಕ್ಷರ್ದೆ

ಶ್ರೀಮದ್ವೀರಶೈವಧರ್ಮೋಜ್ಜೀವನ ಸಭೆ

ವೀರಶೈವಾಸ್ಪೋರಂಭಿಕ ಸ್ಥಾಪನೆ

ಶ್ರೀಮದ್ವೀರಶೈವಧರ್ಮೋಜ್ಜೀವನ ಸಭೆಯ ಸರ್ವಾಧಿಕಾರಿಗಳಾದ [illegible] ದಿವಂಗತ ಹನುಗುಂದ [illegible] ಸ್ಮರಣಾರ್ಥವಾಗಿ ವೀರಶೈವ ಸಂಸ್ಕೃತ ಪಾಠಶಾಲೆಯೊಂದನ್ನು ಪ್ರತಿ ವರ್ಷ [illegible] ಶಾಲೆಯನ್ನು ಸಂಸ್ಥಾಪಿಸಿ ಅದಕ್ಕೆ ಶ್ರೀ ಗುರು ನಾಗಭೂಷಣಶಾಸ್ತ್ರಿ ಗುರು ಶಿಲಾಗಿ [illegible] ಸಂಸ್ಕೃತ ಪಂಡಿತರನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಕಾಗದ ಪೆನ್ಸಿಲ್ ಮೊದಲಾದ ಸಾಮಗ್ರಿಗಳನ್ನು ಕೊಟ್ಟು ಅವರಿಗೆ ಉಚಿತ ಭೋಜನ ಸೌಕರ್ಯವನ್ನು ಏರ್ಪಡಿಸಿ ಅವರಿಗೆ ಸರ್ವಾಧಿಕಾರಿಗಳಾದ ಶ್ರೀಯುತ ಬಿ. ಗುರುಲಿಂಗಪ್ಪ ಇವರ ಪುತ್ರರಾದ ಶಿವಸೇವಯ ಮತ್ತು ಜಪವಯ್ಯ ಈ ಉಭಯಗುರು ಪೂಜ್ಯರ ದಿವ್ಯಾನುಸ್ಮರಣೆಯಲ್ಲಿ ಸೇವೆಗೈಯುವ ಪ್ರಯತ್ನವನ್ನು ಮಾಡಿದ್ದಾರೆ. ಈ ಕಾರ್ಯದಲ್ಲಿ ಸಹಾಯ ಬಯಸುವ ಸಹೃದಯರು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಯುತ ಸಂಗನಗೌಡರು ಪೋ|| ಹಾ|| ಮುದಗಲ್ಲಿ ಇವರಿಗೆ ಕಾಗದ ಬರೆದು ತಿಳಿಸಿ ಅವರ ಸಲಹೆಯಂತೆ ನಡೆಯಬೇಕೆಂದು ಕೋರಿದೆ.

ಲಿಂಗಾಯತ ಸಮಾಜಬಂಧು

ಆಯಾರಗುಣದೋಷಗಳು

ನುಗ್ಗೆಕಾಯಿ ಸಿಹಿ ಮತ್ತು ಒಗರು ಕಸ ಪಿತ್ತ ಗಳನ್ನು ನಾಶಗೊಳಿಸುವುದು, ಜಠರಾಗ್ನಿಯನ್ನು ಅತಿಶಯವಾಗಿ ವೃದ್ಧಿಗೊಳಿಸುವುದು; ರೂಲ ಕಫ ಪ್ರಧಾನ ಉಬ್ಬಸ -ಗುಲ್ಮ ಈ ರೋಗಗಳನ್ನು ನಾಶಪಡಿಸುತ್ತದೆ

ಬೆಂಡೇಕಾಯಿ—ಶೀತ, ಪೊಟ್ಯೆಯಲ್ಲಿ ನೋವ ನ್ನುಂಟುಮಾಡುವುದು, ವಾತವನ್ನು ಕೋಪಗೊಳಿಸು ವುದು, ಮೇಹಕೋಪಗಳನ್ನು ಶಾಂತಗೊಳಿಸುವುದು ಮತ್ತು ಕರುಳುಗಳ ದುಸ್ಸಂತೆಯನ್ನು ಹೋಗಲಾಡಿಸು ವುದು, ಉಚ್ಚಪ್ರಕೃತಿಯವರಿಗೆ ಹಿತಕರವೂ ವಾತಪ್ರಕೃತಿಯವರಿಗೆ ಹಾನಿಕರವೂ ಆಗಿರುವುದ , ಎಲೆಸ ಮಲ ಬದ್ಧತೆಯನ್ನುಂಟುಮಾಡುವುದು. ಮತ್ತು ಕೆಮ್ಮು-ಏಸಿನ ಮಂದಾಗ್ನಿಗಳಲ್ಲಿ ಹಿತಕರವಲ್ಲ

ಗೋರಿಕಾಯಿ ಅಥವಾ ಚಿವಕೆಕಾಯಿ—ವಿಶೇಷ ಪಿತ್ತಕಾರಿ, ಅಗ್ನಿಮಾಂದ್ಯ ಮತ್ತು ಹೊಟ್ಟೆಯು ಬ್ಬರವನ್ನುಂಟುಮಾಡುವುದು, ಮೊದಲು ತಂಪನ್ನುಂಟು ಮಾಡಿ ಅನಂತರ ಉಷ್ಣವನ್ನುಂಟುಮಾಡುತ್ತದೆ.

ಅಲುಗಡ್ಡೆ—ಸಿಹಿ, ಬಲಕಾರಿ, ವಾಯುವನ್ನು ಹೆಚ್ಚಿಸುವುದು, ಎದೆ ಮತ್ತು ಹೊಟ್ಟೆಯಲ್ಲಿ ವಿಕಾರವನ್ನುಂಟುಮಾಡುವುದು ಮತ್ತು ವಿಶೇಷವಾಗಿ ಆಜೀರ್ಣ ವನ್ನುಂಟುಮಾಡುತ್ತದೆ.

ಬಾಳೆದಿಂಡು—ಶೀತ, ಬಲಕಾರಿ ಕೂದಲಿಗೆ ಹಿತ ಕರವಾದುದು, ಆಮ್ಲಪಿತ್ತವನ್ನು ಶಾಂತಗೊಳಿಸುವುದು, ದಾಹನಾಶಕ, ಅಗ್ನಿಕಾರಕ ಬಹಳ ರುಚಿಕರವಾಗಿರುತ್ತದೆ.

ಸೂರಣ ಗೆಡ್ಡೆ—ಕಾರ, ಒಗರು ಅಗ್ನಿದೀಪಕ, ನವೆಯನ್ನುಂಟುಮಾಡುವುದು, ಬೆಳಿಗೆ ಬಹಳವಾಗು ವುದು, ಹೊಟ್ಟೆಯನ್ನು ಬಿಗಿಯುವುದು, ಕಫ-ಮೂಲ ವ್ಯಾಧಿ-ಗುಲ್ಮ ಇವುಗಳನ್ನು ನಾಶಮಾಡುವುದು, ವಿಶೇಷ ವಾಗಿ ಮೂಲವ್ಯಾದಿಗೆ ಅತ್ಯಂತ ಹಿತಕರವಾಗಿರುತ್ತದೆ ಆದರೆ ತಮ್ಮು, ಕುಷ್ಠ, ರಕ್ತಪಿತ್ತ, ಈ ರೋಗಗಳಿಂದ ಪೀಡಿತರಾದವರಿಗೆ ಹಿತಕರವಾಗಿರುವುದಿಲ್ಲ.

ಚಿಕ್ಕೂತಿ ಸೊಪ್ಪು (ಚಿಕ್ಕವರ್ಸೆ)—ಉಷ್ಣ, ಸಿಹಿ, ಖಾರವಿಳ್ಳುದು, ವಿಷಾಕದಲ್ಲಿ ಕಾರವಾಗುವುದು, ಅಗ್ನಿದೀಪಕ, ಆವುಪಿಕಾರ, ವಿಷವಿಕಾರಗಳನ್ನು ನಾಶ ಗೊಳಿಸುವುದು, ಶ್ರಿಮೋಷ ನಾಶಕ, ಮೂಲವ್ಯಾಧಿ ಕುಷ್ಠ ಹೊಟ್ಟೆಯಲ್ಲಿನ ಗಂಟು ರಕ್ತಪಿತ್ತ-ಸಂಗ್ರಹಣಿ-ಪ್ರಿಸಿರೋಗ ಇವುಗಳಲ್ಲಿ ಅತ್ಯಂತ ಹಿತಕರವಾಗಿರುತ್ತದೆ

ಕೀರೆ ಸೊಪ್ಪು—ಶೀತ, ಸರಿಯಾಗಿ ಮಲಮೂತ್ರ ವಿಸರ್ಜನೆಗೆಳನ್ನು ಮಾಡಿಸುವುದು, ಅಗ್ನಿದೀಪಕ, ರುಚಿಕರ, ವಿಷನಾಶಕ, ಪಿತ್ತ ಕಫ-ರಕ್ತವಿಕಾರ ಇವುಗಳನ್ನು ಶಾಂತಗೊಳಿಸುವುದು, ವಿಷಾಕದಲ್ಲಿ ಮತ್ತು ರುಚಿಯಲ್ಲಿ ಸಿಹಿಯಾಗಿರುತ್ತದೆ

ಹೊನಗೊನೆ ಸೊಪ್ಪು—ಸಿಹಿ ಮತ್ತು ಒಗರು, ಶ್ರಿಮೋಷನಾಶಕ, ರುಚಿಯನ್ನುಂಟುಮಾಡುವುದು, ಸಕಲವಿಧ ನೇತ್ರರೋಗಗಳಿಗೆ ಅತ್ಯಂತ ಹಿತಕರವಾದುದು ವೀರ್ಯವನ್ನು ವೃದ್ಧಿಗೊಳಿಸುವುದು, ರಕ್ತಪಿತ್ತ ಕೆಮ್ಮು, ದಮ್ಮು ಜ್ವರ ಪೂಲವ್ಯಾಧಿ ಮೂತ್ರಕೃಚ್ಛ್ರ-ಶ್ರಮನೀಕ-ಕೃಮಿರೋಗ ಇವುಗಳನ್ನು ನಾಶಗೊಳಿಸುವುದು ಮತ್ತು ಅತ್ಯಂತ ಪಥ್ಯವಾಗಿರುತ್ತದೆ

ನಿಷೊಹಾಲೆ ಸೊಪ್ಪು (ಜೀವಂತಿ)—ಸಿಹಿ ಮತ್ತು ಒಗರು, ರುಚಿಕರ, ಬಲಕರ, ಕಫಪಿತ್ತಗಳನ್ನೂ, ಗ್ರಹಣೀದೋಷವನ್ನೂ ನಿವಾರಿಸುವುದಲ್ಲದೆ ವಿಶೇಷ ಪಥ್ಯವಾಗಿರುವುದು ಮತ್ತು ಬೇಗನೆ ಪಚನವಾಗುತ್ತದೆ

ನಿಪ್ಪು ಕ್ರಾಂತಿ—ಕಾರ, ಕಫಜ್ವರ-ಪಿತ್ತಜ್ವರ-ಹಳೆ ಯಜ್ವರ ಉಬ್ಬಸ ಅರಿಸಾರ ಈ ರೋಗಗಳನ್ನು ನಿವಾರಿ ಸುವುದು ಮತ್ತು ವಿಶೇಷ ಪಥ್ಯವಾಗಿರುತ್ತದೆ

ಹಾಲಅಂಕೆ ಸೊಪ್ಪು—ಶೀತ, ಸಿಹಿ, ಮಲವನ್ನು ತಡೆಯುವುದು, ತೃಪ್ತಿಯನ್ನುಂಟುಮಾಡುವುದು, ಬೇಗ ಜೀರ್ಣಿಸುವುದಲ್ಲ, ವಾತವನ್ನುಂಟುಮಾಡುವುದು, ಕಫ ವನ್ನು ನಾಶಗೊಳಿಸುವುದು, ವಿಷ-ಕ್ರಾಸ ಪಿತ್ತ-ರಕ್ತವಿ ಕಾರ ಇವುಗಳನ್ನು ನಿವಾರಿಸುತ್ತದೆ.

ಪುಳ್ಳಿಂಸ್ಸರಿಚಿ ಸೊಪ್ಪು—ಕುಳಿ, ಉಷ್ಣ, ಅಗ್ನಿ ದೀಪಕ, ಕಫ ಮತ್ತು ವಾತವಿಕಾರಗಳಲ್ಲಿ ಹಿತಕರವಾ ದುದು, ಗ್ರಹಣಿ ಮತ್ತು ಮೂಲವ್ಯಾಧಿಗ್ರಸ್ತರಿಗೆ ಅದರಲ್ಲಿ ವಿಶೇಷ ಗುಣಕಾರಿಯಾಗಿರುತ್ತದೆ

ಕಾತೇ ಸೊಪ್ಪು—ಸವ-ತೀಕ್ಷ್ಣವಾದುದು ಶ್ರಿಮೋಷನಾಶಕ, ವೀರ್ಯವರ್ಧಕ, ರಸಾಯನ, ಭೇದಿ ಯನ್ನು ಮಾಡಿಸುವುದು ಮತ್ತು ಕುಷ್ಠನಿವಾರಕವಾಗಿರುತ್ತದೆ, ಆದರೆ ತಂಗಳ ಸಪ್ಪೆಯು ವಿಶೇಷ ಹಾನಿಕರವಾಗಿರುತ್ತದೆ

ನೆಂಚತ್ತದ ಸೊಪ್ಪು—ಸ್ವಲ್ಪ ಕಹಿ, ವಾತನಾಶಕ ರುಚಿಕರ, ಅಗ್ನಿಯನ್ನು ದೀಪಸಗೊಳಿಸುವುದು; ಆದ ಸ್ವಲ್ಪ ಪಿತ್ತವನ್ನುಂಟುಮಾಡುತ್ತದೆ.

ಸಬ್ಬಸಿಗೆಸೊಪ್ಪು—ಉಷ್ಣ, ಸಿಹಿ, ಅಗ್ನಿಯನ್ನ ವೃದ್ಧಿಗೊಳಿಸುವುದು, ಕೂಲ ಮತ್ತು ವಾತವನ್ನು ನಾ ಮಾಡುವುದು, ರುಚಿಕರ, ಪಿತ್ತವನ್ನು ಹೆಚ್ಚಿಸುವುದು ಮತ್ತು ಪಥ್ಯವಾಗಿರುತ್ತದೆ.

ನುಗ್ಗೆಸೊಪ್ಪು—ಸ್ವಲ್ಪ ಕಾರ, ಉಷ್ಣ, ಅಗ್ನಿದೀಪಕ, ಕೃಮಿನಾಶಕ, ವಾತ ಮತ್ತು ಕಫವನ್ನು ಸಮಾರಿಸುವುದು ಮತ್ತು ಅತ್ಯಂತ ಪಾಚಕಾಗಿರುತ್ತದೆ.

ಸಕಲವಿಧ ಶಾಕಗಳ ತಾರತಮ್ಯ—ಹೂವಿಗಿಂತಲೂ ಸೊಪ್ಪು, ಸೊಪ್ಪಿಗಿಂತಲೂ ಕಾಯಿ, ಕಾಯಿಗಿಂತಲೂ ದಂಟು, ದಂಟಿಗಿಂತಲೂ ಗಡ್ಡೆಗಳು ಕ್ರಮದಿಂದ ವಿಶೇಷ ಗುಣವಾದುವೆಂದರಿಯಬೇಕು

ಬಾಳೀಬದ ಹಣ್ಣು—ಹುಳಿ, ಒಗರು, ಸಿಹಿ ರಸಗಳುಳ್ಳದ್ದು, ಅತ್ಯಲ್ಪವಾದ ಉಷ್ಣದಿಂದ ಕೂಡಿರುವುದು, ವಾತನಾಶಕ, ಅಗ್ನಿದೀಪಕ, ಶ್ರದ್ಧೆಯಕ್ಕೆ ಹಿತಕರವಾದುದು, ಪಿತ್ತ, ಕಫಗಳನ್ನು ಕೋಪಗೊಳಿಸದಿರುವುದು, ವಿಶೇಷ ಹುಳಿಯಾಗಿರುವ ಹಣ್ಣು ಪಿತ್ತ, ಮಾತವನ್ನು ಕೋಪಗೊಳಿಸುತ್ತದೆ ಸಿಹಿಯಾಗಿರುವಹಣ್ಣು ಪಿತ್ತನಾಶಕವಾಗಿರುತ್ತದೆ; ಇದೇ ಶ್ರೇಷ್ಠವಾದುದಾಗಿದೆ

ಖರ್ಜೂರ—ಶೀತ, ಗುರು, ಪಾಕದಲ್ಲಿಯೂ ರುಚಿಯಲ್ಲಿಯೂ, ಸಿಹಿಯಾದುದು, ಪುಷ್ಟಿಕರ, ಕೃಪ್ತಿಕರ, ಕ್ಷಯ ಮತ್ತು ರಕ್ತಪಿತ್ತವನ್ನು ನಿವಾರಿಸುವುದರಲ್ಲದೆ ಗಾಯಹೊಂದಿದವರಿಗೆ ಹಿತವಾಗಿರುತ್ತದೆ.

ನೆಲ್ಲಿ—ಹುಳಿ, ಸಿಹಿ, ಕಹಿ, ಒಗರು, ಕಾರಗಳೆಂಬ ಏಮು ರಸಗಳಿಂದ ಕೂಡಿರುವುದು, ಅದುಕಾರಣವೇ ಬೆವರು, ಮೇದಸ್ಸು, ಕಫ, ಅನ್ನದಲ್ಲಿನ ಅರುಚಿ, ಪಿತ್ತ ರೋಗಗಳನ್ನು ನಾಶಗೊಳಿಸುವ ಗುಣವುಳ್ಳದಾಗಿದೆ ಕಣ್ಣುಗಳಿಗೆ ಹಿತಕರವಾದುದು, ಸಕಲ ದೋಷಗಳನ್ನು ನಾಶಗೊಳಿಸುವುದು, ಹುಳಿಯಾಗಿರುವುದೆಂದು ವಾತವನ್ನೂ, ಸಿಹಿ, ಮತ್ತು ಶೀತಲವಾಗಿರುವುದರಿಂದ ಪಿತ್ತವನ್ನೂ, ಬಿರುಸು, (ರೂಕ್ಷ)ವೆಮ್ದು ಒಗರುಗಳಿಂದ ಕೂಡಿರುವಕಾರಣ ಕಫವನ್ನೂ, ನಾಶಮಾಡುವುದಾಗಿದೆ. ಇವು ಸಕಲ ಫಲಗಳಲ್ಲಿಯೂ ಶ್ರೇಷ್ಠವಾಗಿದ್ದು ಅಧಿಕ ಗುಣಗಳಿಂದ ಕೂಡಿರುತ್ತದೆ

ದ್ರಾಕ್ಷೆ—ಸಿಹಿ, ಸ್ವಲ್ಪ ಶೀತಲವಾದುದು, ಮಲವನ್ನು ಸಡಿಲಿಸುವುದು, ಸ್ವರವನ್ನು ಉತ್ತಮಗೊಳಿಸುವುದು. ಮತ್ತು ರಕ್ತಪಿತ್ತ ಜ್ವರ-ಉರ್ಬುದ -ಬಾಯಾರಿಕೆ ಉರಿ ಕ್ಷಯ ಇವುಗಳನ್ನು ನಿವಾರಿಸುವುದು ಮತ್ತು ಶರೀರಕ್ಕೆ ಬಲವನ್ನೂ ಕಾಂತಿಯನ್ನೂ ಉಂಟುಮಾಡುತ್ತದೆ ಹುಳಿಯಾಗಿರುವ ಹಣ್ಣು ರಕ್ತಪಿತ್ತ, ದಾಹ, ಕಫ ಇವುಗಳನ್ನುಂಟುಮಾಡುತ್ತದೆ

ಬಾಳೆಹಣ್ಣು—ಶೀತ ರುಚಿಯಲ್ಲಿ ಮತ್ತು ವಾಕದಲ್ಲಿ ಸಿಹಿ, ಬಲಕರ, ಪುಷ್ಟಿಕರ, ಹಸಿವನ್ನು ಕಡಿಮೆ ಮಾಡುವುದು. ಬಾಯಾರಿಕೆ ಕಣ್ಣಿನರೋಗ ನೋಹ ರೋಗ-ಇವುಗಳನ್ನು ನಿವಾರಿಸಿ ಮಾಂಸವನ್ನು ಬೆಳೆಯಿಸುತ್ತದೆ ಕಾಯಿಯು ಸಿಹಿ, ಶೀತ, ಹೊಟ್ಟೆಯನ್ನು ಹಿಡಿಯುವುದು, ಬೇಗನೆ ಪಚನವಾಗದಿರುವುದು, ಕಫ ನಾಶಕ ಮತ್ತು ರಕ್ತಪಿತ್ತ-ಬಾಯಾರಿಕೆ ಉರಿ ಇವುಗಳನ್ನು ಜಯಿಸುವುದಲ್ಲದೆ, ಗಾಯ ಹೊಂದಿದವರಿಗೆ ಹಿತಕರವಾಗಿರುತ್ತದೆ

ಮಾವಿನಹಣ್ಣು—ಸಿಹಿ, ಪುಷ್ಟಿಕರ, ರುಚಿಕರ, ವಾಯುನಾಶಕ, ಹೃದಯಕ್ಕೆ ಹಿತಕರ, ಬೇಗ ಜೀರ್ಣಿಸುವುದಿಲ್ಲ. ಮಲವನ್ನು ತಡೆಯುವುದು, ಪ್ರಮೇಹನಾಶಕ, ಶರೀರದ ವರ್ಣವನ್ನು ಉತ್ತಮಗೊಳಿಸುವುದಲ್ಲದೆ ವ್ರಣ-ಕಫ ರಕ್ತವಿಕಾರ ಇವುಗಳನ್ನು ದೂರಮಾಡುವುದು ಚಾಕುವಿನಿಂದ ಹೆಚ್ಚಿದ ಹಾಗೆಯೇ ಬಾಯಿಂದಲೇ ರಸವನ್ನು ಹೀರಿ ಸೇವಿಸಲ್ಪಟ್ಟ ಹಣ್ಣು ಹುರುವೂ, ವೀರ್ಯವರ್ಧಕವೂ, ಶೀತಲವೂ, ವಾತ ಪಿತ್ತನಾಶಕವೂ, ಮಲವನ್ನು ತಡೆಯದಿರುವುದೂ, ಅಗಿಯಿತ್ತದೆ, ಚಾಕುವಿನಿಂದ ಹೆಚ್ಚಿ ಸೇವಿಸಲ್ಪಟ್ಟ ಹಣ್ಣು ಬೇಗ ಜೀರ್ಣವಾಗುವುದಿಲ್ಲ. ಧಾತುಪುಷ್ಟಿಯನ್ನೂ, ಬಲವರ್ಧನವನ್ನೂ ಮಾಡಿ ವಾಯುವನ್ನು ಶಾಂತಗೊಳಿಸುತ್ತದೆ. ಹಣ್ಣಿನ ರಸವು ಬಲದಾಯಕ, ಗುರು, ವಾತ ನಾಶಕ, ಭೇದಿಕರ, ಕಫವರ್ಧಕ ಮತ್ತು ವಿಶೇಷ ಪುಷ್ಟಿಕರವಾಗಿರುವುದಾದರೂ ಹೃದಯಕ್ಕೆ ಅತ್ಯಂತ ಹಿತಕರವಾಗಿರುವುದಿಲ್ಲ. ಹಾಲಿನೊಡನೆ ಸೇವಿಸಲ್ಪಟ್ಟ ಹಣ್ಣು ವಾತಪಿತ್ತನಾಶಕ, ರುಚಿಕರ, ಪುಷ್ಟಿಕರ ಮತ್ತು ಬಲವೀರ್ಯಗಳನ್ನು ವೃದ್ಧಿಗೊಳಿಸುವುದಾಗಿದೆಯಲ್ಲದೆ ಸಾನಾಕಾದಿಂದ ಹಜಿತವಾಗುತ್ತದೆ. ಹಣ್ಣಿನ ರಸವನ್ನು ಜೇನುತುಪ್ಪದೊಡನೆ ಸೇವಿಸುವುದು ಧಾತುಗತಜ್ವರದವರಿಗೆ ಹಿತಕರವಾಗಿದೆ. ಮಾಗಿದ ಹಣ್ಣುಗಳನ್ನು ವೀಕ್ಷಣವಾಗಿ ತಿನ್ನುವುದರಿಂದ ವಂದಾಗ್ನಿ ವಿಷಮಜ್ವರ-ರಕ್ತವಿಕಾರ, ಅಜೀರ್ಣ ಮತ್ತು ನೇತ್ರರೋಗ ಮುಂತಾದ ಉಪದ್ರವಗಳುಂಟಾಗುವುವು. ಮೇಲಿನ ಗುಣಗಳು ಗಿಡದಲ್ಲಿಯೇ ಪಕ್ವವಾದ ಹಣ್ಣುಗಳಲ್ಲಿ ಅಧಿಕಪ್ರಮಾಣದಿರುವುವು. ಹೆಚ್ಚಾಗಿ ಹಣ್ಣುಗಳನ್ನು ತಿನ್ನುವುದರಿಂದ ಕೊಂದರೆಯುಂಟಾದಾಗ ಶುಂಠಿಯ ಕಷಾಯ ವನ್ನಾಗಲಿ, ಶುಂಠಿಯ ಜೀರ್ಣವನ್ನು ಹಾಲಿನೊಡನೆ ಯಾಗಲಿ ಸೇವಿಸುವುದು ಹಿತಕರವಾಗಿರುತ್ತದೆ. ಎಳ ದಾಗಿರುವ ಮಾವಿನಕಾಯಿಯು ಒಗರು ಮತ್ತು ಹುಳಿಯಿಂದ ಕೂಡಿದ್ದು ರುಚಿಕರ ಮತ್ತು ಪಿತ್ತವನ್ನುಂಟು ಮಾಡುವುದಾಗಿದೆ. ಬಲಿತಿರುವ ಕಾಯಿಯು ಹುಳಿಯಾಗಿದ್ದು ಕ್ರಿಮಿದೋಷಗಳನ್ನುಂಟುಮಾಡಿ ರಕ್ತವನ್ನು ಕೆಡಿಸಿ ಶರೀರವನ್ನು ಒಣಗಿಸುತ್ತದೆ. ಮಾವಿನಹಣ್ಣುಗಳೊಳಗೆ ಕಮಿಡದ ಹಣ್ಣುಗಳೇ ಸರ್ವೋತ್ಕೃಷ್ಟವಾಗಿಯೂ, ರುಚಿಕರವಾಗಿಯೂ ಇರುತ್ತವೆ.

ನಿಂಬೇ ಹಣ್ಣು—ಹುಳಿ, ಜೀರ್ಣಶಕ್ತಿವರ್ಧಕ, ಕ್ರಿಮಿದೋಷನಾಶಕ, ಬುದ್ಧಿಭ್ರಮೆ-ಕಣ್ಣಿನರೋಗ ಅಯಾಸ-ಸಕಲವಿಧವಿಷ-ಆರೋಚಕ- ದಾಹ-ಶೂಲ-ಬಿಕ್ಕಳಿಕೆ-ವಾಂತಿ ದಮ್ಮು-ಗುಲ್ಮ-ಕಾಮಾಲೆ ಮಲಬದ್ಧ ಮಿತಿಮಿರಿದ ಪಿತ್ತ ಇವುಗಳನ್ನು ನಾಶಗೊಳಿಸುವುದಲ್ಲದೆ ಮುಗುಳಿ ಬಾಯಿ-ಗಂಟಲಿಲು ಇವುಗಳಲ್ಲುಂಟಾಗುವ ವಿಕಾರಗಳನ್ನು ಶಾಂತಗೊಳಿಸುವುದು ಮತ್ತು ಶರೀರದೊಳಗಿನ ಕೆಟ್ಟ ಪದಾರ್ಥಗಳನ್ನು ಹೊರಗೆ ಹಾಕುವುದು, ಸಕಲವಿಧ ಮಾದಕ ವಸ್ತುಗಳಿಂದುಂಟಾಗುವ ಉಪದ್ರವಗಳನ್ನು ನಿವಾರ್ಮೂಲಗೊಳಿಸುವುದುಮತ್ತು ಸಕಲವಿಧವಾದ ಉದರ ರೋಗಗಳನ್ನು ಶಾಂತಗೊಳಿಸುತ್ತದೆ.

ಹಲಸಿನ ಹಣ್ಣು—ಸಿಹಿ, ರುಚಿಕರ, ಪಿತ್ತನಾಶಕ, ವಾತಶ್ಲೇಷ್ಮಕಾರಕ, ಬಲ-ಪುಷ್ಟಿ-ಮಾಂಸ ವೀರ್ಯ ಇವುಗಳನ್ನು ವೃದ್ಧಿಗೊಳಿಸುವುದಲ್ಲದೆ ನರಗಳಿಗೆ ಬಲವನ್ನು ನ್ಪಿಯುವುದು ಮತ್ತು ಅಜೀರ್ಣ ಆಜಮ್ಪದ್ವಿರೋಗ-ಅಗ್ನಿಮಾಂದ್ಯ ಹೊಟ್ಟೆನೋವು ಶೀತಪಿತ್ತ ರೋಗ-ದಾಹ ಇವುಗಳನ್ನುಟುಮಾಡುತ್ತದೆ ಎಳೆಹಲಸು ಬಲಕರ, ರುಚಿಕರ, ವೀರ್ಯಪುಷ್ಟಿಕರವಾಗಿರುವುದಾದರೂ ಅತಿರಯವಾದ ಮಲಬದ್ಧತೆಯನ್ನುಂಟುಮಾಡಿ ಹೊಟ್ಟೆಯನ್ನು ಕೆಡಿಸುತ್ತದೆ. ಹಲಸಿನ ಹಣ್ಣು ಮತ್ತು ಕಾಯಿಯು ಗುಲ್ಮ-ಕ್ಷೀಣ್ಯ-ಅಗ್ನಿಮಾಂದ್ಯ ಇವುಗಳಿಂದ ಪೀಡಿತರಾದವರಿಗೆ ಹಾನಿಯನ್ನುಂಟುಮಾಡುವುದಾಗಿದೆ.

ಬೇಲದ ಹಣ್ಣು—ಒಗರು, ಹುಳಿ, ಸಿಹಿ, ರಸಗಳಿಂದ ಕೂಡಿರುವುದು. ಕ್ರಿದೋಷನಾಶಕ ಮತ್ತು ಕಫ ಸಂಬಂಧವಾದ, ಪಿತ್ತಸಂಬಂಧವಾದ ರೋಗಗಳನ್ನು ನಿವಾರಿಸುವುದು., ದಮ್ಮು-ಕೆಮ್ಮು-ಗ್ರಹಣಿ-ಶೂಲ ಬಿಕ್ಕಳಿಕೆ-ವಾಂತಿ-ಅಗ್ನಿ-ಮಾಂದ್ಯ ಮೂಲವ್ಯಾಧಿ ಅರೋಚಕ ಆಯಾಸ-ವಿಷ-ದಾಹ ಇವುಗಳನ್ನು ಶಾಂತಗೊಳಿಸುವುದು, ಮೇಹನಿವಾರಣೆಯಲ್ಲಿ ಹೆಸರುಗೊಂಡಿದೆ ಅತ್ಯಂತ ಪಥ್ಯವಾಗಿರುವುದರಿಂದಲೇ ಕವಿಪುಂಗವ ಸರ್ವದಾ ಪಥ್ಯಂ' ಎಂಬ ಪ್ರಾಶಸ್ತ್ಯವು ಬೇಲದ ಹಣ್ಣಿಗೆ ಬಂದಿರುತ್ತದೆ.

ಹುಣಸೆಹಣ್ಣು—ಹೊಸದು ಬಹಳ ಹುಳಿಯಾಗಿರುತ್ತದೆ; ಭೇದಿಯನ್ನು ಮಾಡಿಸುವುದು, ವಾಯುವನ್ನು ಕಡಿಮೆನೂಡುವುದು, ಶ್ಲೇಷ್ಮವನ್ನುಂಟುಮಾಡುವುದು, ಕಣ್ಣುಗಳಿಗೆ ಹಿತಕರವಲ್ಲ, ಅಪಸ್ಮಾರಾಗುತ್ತದೆ. ಹಳೆಯ ಹುಣಸೆಹಣ್ಣು ಹುಳಿ ಕಡಿಮೆಯಾಗಿರುತ್ತದೆ; ವಾತ, ಪಿತ್ತ, ಶ್ಲೇಷ್ಮ ರೋಗಗಳನ್ನು ಶಾಂತಗೊಳಿಸುವುದು, ಮತ್ತು ಹೃದಯಕ್ಕೆ ಬಲವನ್ನುಂಟುಮಾಡುವುದು, ಭೇದಿಯನ್ನು ಮಾಡಿಸುವುದು, ಮೇಹವನ್ನು ಕಗ್ಗಿಸುವುದು, ಆದರೆ ಹುಣಸೇಹಣ್ಣು ಹಳೆಯದಾಗಲಿ ಹೊಸದಾಗಲಿ ಹೆಚ್ಚಾಗಿ ಸೇವಿಸಲ್ಪಟ್ಟಿರೆ ರಕ್ತವನ್ನು ಕೆಡಿಸುತ್ತದೆ.

ತೆಂಗಿನಕಾಯಿ—ಶೀತಲ, ಬೆಗೆಡೆ ಜೀರ್ಣವಾಗದಿರುವುದು, ಮೂತ್ರಾಶಯವನ್ನು ಶೋಧಿಸುವುದು, ಪುಷ್ಟಿಕರ, ಬಲದಾಯಕ ಮತ್ತು ವಾತ, ಪಿತ್ತ, ರಕ್ತ ವಿಕಾರ, ದಾಹವನ್ನು ಶಾಂತಗೊಳಿಸುವುದು, ಎಳೆಗಾಯಿಯು ವಿಶೇಷವಾಗಿ ಪಿತ್ತಜ್ವರ ಮತ್ತು ಪಿತ್ತನೆಬಂಧವಾದ ವಿಕಾರದನ್ನು ದೂರಮಾಡುತ್ತದೆ. ಎಳೆನೀರು ಶೀತಲ,ಹೃದಯಕ್ಕೆ ಹಿತಕರವಾದುದು, ಅಗ್ನಿದೀಪಕ, ವೀರ್ಯವರ್ಧಕ, ಬಾಯಾರಿಕೆ ನುತ್ತು ಪಿತ್ತವನ್ನು ನಿವಾರಿಸುವುದು ಸಿಹಿ, ಮೂತ್ರಾಶಯ ಸಂಬಂಧವಾದ ವಿಕಾರವನ್ನು ನಾಶಮಾಡುತ್ತದೆ.



॥ ಶ್ರೀಗುರುಭ್ಯೋ ನಮಃ ॥

ಹುಲಿ ಮತ್ತು ನುರದ ಪಕ್ಕದಲ್ಲಿ

X ಈ ರೀತಿ ಗುರ್ತು ಮಾಡಿ X



ಕೃಷ್ಣರಾಜನಗರದ ತಾಲೂಕಿನ ಪ್ರಜಾಪ್ರತಿನಿಧಿಸಭೆಯ ಓಟುದಾರ ಮಹಶೀಯರುಗಳಲ್ಲಿ ವಿಜ್ಞಾಪನೆ.

ಕೃಷ್ಣರಾಜನಗರದಲ್ಲಿರುವ ಲೋಕಸೇವಾನಿರತ ಬಿ. ಸಿದ್ಧಲಿಂಗಶೆಟ್ಟಿಯು ಮತ್ತು ಇದೇ ತಾಲೂಕು ಲಾಳನಹಳ್ಳಿಯಲ್ಲಿರುವ ಬಿ. ಚನ್ನಪ್ಪನು ಸಹ ಮಾಡುವ ವಿಜ್ಞಾಪನೆಗಳು.

ಮಹಶೀಯರೇ! ತಾ॥ **8—2—1941** ನೆಯ ತನಿವಾರದಿವಸ ನಡೆಯುವ ಮೈಸೂರು ಪ್ರಜಾಪ್ರತಿನಿಧಿಸಭೆಯ ಚುನಾವಣೆಗೆ ನಾವಿಬ್ಬರೂ ಉಮೇದುವಾರರಾಗಿ ನಿಂತಿರುತ್ತೇವೆ.

ನಾವು ಈಗ್ಗೆ 25 ವರುಷಗಳಿಂದ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳಾಗಿಯೂ ಮತ್ತು 14 ವರ್ಷಗಳಿಂದ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುಗಳಾಗಿಯೂ, ಸ್ಯೂಲ್ ಬೋರ್ಡ್ ಮೆಂಬರುಗಳಾಗಿಯೂ ಇದ್ದುಕೊಂಡು ಪ್ರಜಾಸೇವೆಯನ್ನು ಮಾಡುತ್ತಿರುವ ವಿಷಯವು ತಮ್ಮುಗಳಿಗೆ ಗೊತ್ತೇ ಇದೆ

ನಾವು ಈವರೆಗೆ ಈ ತಾಲೂಕಿಗೆ ಆಗಬೇಕಾಗಿದ್ದ ಅನೇಕ ವಿಧವಾದ ಪ್ರಜಾಸೌಖ್ಯ ಕೆಲಸಗಳನ್ನು ಕೈಲಾದಮಟ್ಟಿಗೂ ಮಾಡಿರುತ್ತೇವೆ ಮುಂದೆಯೂ ಕೂಡ ಈ ತಾಲೂಕಿಗೆ ಆಗಬೇಕಾಗಿರುವ ಪ್ರಜೋಪಯುಕ್ತ ಕೆಲಸಗಳನ್ನು ಛಲಸಕಾರದವರೆಗೆ ಸಹಾಯವನ್ನು ಪಡೆದು ಧೈರ್ಯವಾಗಿ ನಿಂತುಮಾಡಲು ಉತ್ಸಾಹವುಳ್ಳವರಾಗಿರುತ್ತೇವೆ

ಆದುದರಿಂದ ತಾವು ದಯವಿಟ್ಟು ಆ ದಿವಸ ತಮ್ಮ ತಮ್ಮ ಗ್ರಾಮಗಳಿಗೆ ಸಂಬಂಧಪಟ್ಟ ಪೋಲಿಂಗ್ ಸೆಂಟರುಗಳಿಗೆ ದಯಮಾಡಿಸಿ ಈ ಸೀಲ್ಕಂಡ **ಹುಲಿಯ** ಚಿಹ್ನೆ ಪಡೆದಿರುವ ಬಿ. ಸಿದ್ಧಲಿಂಗಶೆಟ್ಟಿಯಾದ ನನಗೂ, ಮತ್ತು **ಮರದ** ಚಿಹ್ನೆಯನ್ನು ಪಡೆದಿರುವ ಬಿ. ಚನ್ನಪ್ಪನಾದ ನನಗೂ, ತಮ್ಮ ಘನವಾವ ಎರಡು ಓಟುಗಳನ್ನು ಕೊಟ್ಟು ನಮ್ಮನ್ನು ಉತ್ತೀರ್ಣರನ್ನಾಗಿಮಾಡಿ ಪ್ರಜಾಸೇವೆಮಾಡಲು ಅವಕಾಶಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ತಮ್ಮ ವಿಧೇಯರು,

ಲೋಕಸೇವಾನಿರತ,

ಬಿ. ಸಿದ್ಧಲಿಂಗಶೆಟ್ಟಿ,

ಬಿ. ಚೆನ್ನಪ್ಪ.

ತಾ॥ 16—1—1941

ಪಂಚಾಚಾರ್ಯಪ್ರಭಾ.

೧೯೪೧ ನೆಯ ಜನವರಿ ತಾ॥ ೨೦ನೇ ಸೋಮವಾರ

ಓಹಿಲಾರಾಧ್ಯ.

ಈ ಮಹಾತ್ಮನು ಕ್ರಿ.ಶ ೧೧೧೯ನೆಯ ಶತಮಾನದಲ್ಲಿ ಗುಜರಾತಿನ ಪ್ರದೇಶದಲ್ಲಿರುವ ವೀರಶೈವಬ್ರಾಹ್ಮಣವಂಶದಲ್ಲಿ ಜನ್ಮವೆತ್ತಿದನು. ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಂದಾದ ಸೌರಾಷ್ಟ್ರದಲ್ಲಿರುವ ಸೋಮೇಶ್ವರ ಪ್ರಭುವಿಗೆ ಪ್ರತಿದಿನವೂ ತನ್ನ ಶರೀರದ ತೂಕದಷ್ಟು ಧೂಪವನ್ನು ಅತ್ಯಂತ ಭಕ್ತಿಯಿಂದ ಸಮರ್ಪಿಸುವ ಮಹಾವ್ರತವನ್ನು ಕೈಕೊಂಡಿದ್ದನು. ಈ ಮಹಾತ್ಮನ ಈ ವಿಧವಾದ ವ್ರತವನ್ನು ನೋಡಿ ಶ್ರೀಶೈಲಿಗರು ಸಂತುಷ್ಟರಾಗಿ ಈತನನ್ನು ಧ್ಯಾನಿಸುತ್ತ ಈತನಿಗೆ ಪಟ್ಟಣದಲ್ಲಿ ಬಿಜ್ಜಳನಿಂದ ಮಹಾಮರ್ಯಾದೆಗಳನ್ನು ಮಾಡಿದರು. ಆಗ ಈತನು ಕೇವಲ ವಿಶ್ವಾಸದಿಂದ ಅನ್ನವನ್ನು ಸಹ ಸೇವಿಸುತ್ತ ತನ್ನ ವ್ರತವನ್ನು ಸಾಗಿಸುತ್ತಿದ್ದನು. ಆಗ ಈ ಧೂರ್ತಪೂಜಾರಿಗಳು ಇವನ್ನೆಲ್ಲ ಸಹಿಸದೆ ಅಸೂಯೆಯಿಂದ ಆ ಬಿಲ್ವಪತ್ರೆಗಳನ್ನು ಭಕ್ಷಿಸುವ ಭಕ್ಷ್ಯಮಾಡಲಿಕ್ಕೆ ಹಚ್ಚಿದರು. ಆಗ ಈತನು ತನ್ನ ಮಹಾ ವ್ರತವನ್ನು ಬಿಡದೆ ಶ್ರೀಶೈಲದಲ್ಲಿ ಮಲ್ಲಿಕಾರ್ಜುನನ ಸೇವಿಸುತ್ತ ಸುಖಿಯಾಗಿದ್ದನು. ಈತನು ಒರಯ್ಯನಿಂದ ಪ್ರಸಾದವನ್ನು ಪಡೆದು ಬರುತ್ತಿರುವ ಸಮಯದಲ್ಲಿ ಮುಳ್ಳು ಸಟ್ಟಿತು. ಆಗ ಈತನು ತೆಗಯಬಾರದೆಂದು ಮಾಡಿ ವೃಷಭೇಶ್ವರನ ಬಳಿಗೆ ತೋಪಿನ ಪ್ರಾಸ್ತ್ರವಾಹನ ಪ್ರಸನ್ನನಾಗಿ ನಡೆದು ಈತನ ಮುಳ್ಳನ್ನು ತೆಗೆದು ಒಂದು ಮುಳ್ಳನ್ನು ತೀರ್ಥದಲ್ಲಿ ಹಾಕಿದನು. ಈ ಪ್ರಕಾರವಾಗಿ ಈತನ ಮಹತ್ವವನ್ನು ಬಯಲಿಗೆ ತಂದು ಸೋಮೇಶ್ವರನ ಪ್ರಸಾದವನ್ನು ಕೊಟ್ಟನು. ಆಗ ಈತನು ಬಿಲ್ವವನ್ನು ಪಾತಾಳಕ್ಕೆ ತಳ್ಳಿದ ಜಾಗದಲ್ಲಿ ಪೂಜೆಗೋಸ್ಕರ ಬಿಲ್ವವೃಕ್ಷವು ಬೆಳೆಯಿತು. ಆಗ ಈತನು ಪೂಜೆಗೆ ಬಂದಂಥ ಪೂಜಾರಿಗಳಿಗೆ ಬುದ್ಧಿ ಹೇಳಿ ಈತನ ಪ್ರಸಾದವನ್ನು ಕೊಟ್ಟು ಪುರೋಹಿತಿಕೆಯನ್ನು ಮಾಡಿದರು. ಇದನ್ನೆಲ್ಲ ಕಂಡು ಪೂಜಾರಿಗಳು ಈತನನ್ನು ಪೂಜೆಗೆ ಕರೆಯಲಿಲ್ಲ. ಆಗ ಈತನು ಅರ್ಧರಾತ್ರಿಯಲ್ಲಿ ಪೂಜೆಗೆ ಬೇಕಾದ ಸಾಮಾನುಗಳನ್ನು ತಂದಿಟ್ಟು ಪೂಜೆಯನ್ನು ಮಾಡಿದನು. ಆಗ ಸೋಮನಾಥನು ಈತನ ಭಕ್ತಿಯನ್ನು ಮೆಚ್ಚಿ ಪ್ರಸನ್ನನಾಗಿ ತನ್ನ ಪೂಜೆಗೆ ಬೇಕಾದ ಪುಷ್ಪಗಳನ್ನು ಕೊಡುವ ಪುಷ್ಪವಾಟಿಕೆಯನ್ನು ಈತನಿಗೆ ಕೊಟ್ಟನು. ಆಗ ಈತನು ಪೂಜೆಗೆ ಬೇಕಾದ ಪುಷ್ಪಗಳನ್ನು ತಂದು ಪೂಜೆಯನ್ನು ಮಾಡಿದನು. ಆಗ ಸೋಮನಾಥನು ಈತನಿಗೆ ಪ್ರತ್ಯಕ್ಷನಾಗಿ ಈತನಿಗೆ ಧೂಪಸಮರ್ಪಣೆಯ ವ್ರತವನ್ನು ಸೆರವೇರಿಸಿದ್ದಕ್ಕಾಗಿ ಪೂಜಾರಿಗಳು ಬೆಳಿಗ್ಗೆ ಎದ್ದು ಈತನು ಪೂಜೆಯನ್ನು ನೋಡಿ ಆಶ್ಚರ್ಯಗೊಳ್ಳುತ್ತಿದ್ದರು. ಹೀಗಿರುತ್ತಿರಲು, ಒಂದಾನೊಂದು ದಿವಸ ಆ ಧೂಪದ ಪೂಜಾರಿಗಳು ಈತನು ದೂಪವನ್ನು ಸಮರ್ಪಿಸುವ ಸಮಯದಲ್ಲಿಯೇ ಧೂಪವಟ್ಟಿಲವನ್ನು ಎತ್ತಿಕೊಂಡು ಹೋಗಿ ಬಿಟ್ಟರು. ಆಗ ಈ ಮಹಾತ್ಮನು ನಿರುತ್ಸಾಹನಾಗಿ ತನ್ನ ವ್ರತಕ್ಕೆ ಭಂಗವನ್ನು ತಂದುಕೊಳ್ಳಬಾರದೆಂದು ಯೋಚಿಸಿ ಶ್ರೀಸೋಮನಾಥನನ್ನು ಧ್ಯಾನಿಸುತ್ತ ತನ್ನ ದೇಹವನ್ನೇ ಧೂಪರೂಪವಾಗಿ ಅಗ್ನಿಯಲ್ಲಿ ಸಮರ್ಪಿಸಿದನು.

ತಸ್ಮಿನ್ ಕ್ಷಣೇ ದೇವವರಃ ಪ್ರಸನ್ನಃ
ಸೌರಾಷ್ಟ್ರನಾಥಃ ಕರುಣಾಸಮೇತಃ।
ತದ್ಭೂಪಸಾತ್ಕೃತ್ಯ ಸಹ ಸ್ವದೇಹಂ
ನಿನಾಯ ಕೈಲಾಸಮಹೋಹಲೀಕಂ॥

(ವೈವಲ್ಯಾಕರ ಅ ೧)

ಅಗ್ನಿ ಶ್ರೀಸೋಮನಾಥನು ಈತನ ಅದ್ಭುತಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ, ಕೈಲಾಸಕ್ಕೆ ಕರಸೊಯ್ದು ಈತನಿಗೆ ಗಣಪದವಿಯನ್ನಿತ್ತನು

ಈ ಮಹಾವಿಭೂತಿಯಾದ ಪಂಚಾಚಾರ್ಯಪ್ರಭಾಪತ್ರಿಕೆಯು ಇಂದಿನವರೆಗೂ ನೀರಯ್ಯನವರ ಸಾಮ್ರಾಜ್ಯದಲ್ಲಿ ಬೆಳಗುತ್ತಿರುವದು ಅನ್ಯಾಯವಲ್ಲವೆಂದು ಪ್ರಾಚೀನ ವೀರಶೈವಕವಿಗಳೂ, ಪಂಡಿತರೂ ಈ ಮಹಾತ್ಮನನ್ನು ತಮ್ಮ ತಮ್ಮ ಗ್ರಂಥಗಳಲ್ಲಿ ಒಳ್ಳೆಭಾವದಿಂದ ಸ್ತುತಿಸಿದ್ದಾರೆ. ಶೈವಶಾಸ್ತ್ರಾಕರ ಪಿಟ ಪ್ರಸಿದ್ಧ ವೀರಶೈವಧರ್ಮಗ್ರಂಥದಲ್ಲಿ ಬರುವ ಜಗದ್ಗುರ್ಯಾಷ್ಟಕ ಗದ್ಯದ ಜ್ಯೋತಿರ್ನಾಥನು ಈ ಮಹಾತ್ಮನ ಅವತಾರಪುರುಷನೇ ಎಂದು ಸ್ಪಷ್ಟವಾಗಿ ಹೇಳಿರುವದು ಅತ್ಯಂತ ಆದರ ಆದರಣೆಯಲ್ಲಿ ನಿರಪಾಯವಾಗಿ ಪ್ರಕಟಿಸಲ್ಪಟ್ಟಿರುವದು

ಒಕ್ಕಲೇರಿಸಿದ ವ್ಯತ್ಯಾಸಂತಗಳು

[illegible] ಸಮಯ ನಾಯಕರಿಂದ ತಾ॥ ಬಿ [illegible] ತೆಮಿಳರ ಕಳೆನಲ್ಲರ ರಾಜನಿಗೆ ದೊಡ್ಡ ಮಾಡಿಸಿದ್ದ ವೀರಮ್ಮರಾಜರ ಆದರಿಗೆ ಆರ [illegible] ಸ್ಥಾಪಿಸಿದ್ದ [illegible] ಪಡೆಸಿದರು.

[illegible] ದಿವಸದಿಂದ ವಿಜಿ [illegible] ಜರುಪಿ ನಯ ತರಿಸಿ [illegible] ಬರನ್ನು ಪಡೆದು ಉತ್ತರ [illegible] ಇವರ ರಜಾ ಕಾಲ [illegible] ಸ್ಥಳಿಕ ಸಂಘ [illegible] ನವರಿಗೆ ರಜಮಂತ್ರ [illegible] ನಹಿಂ ಕರಗಿಸ್ಸಿ

[illegible] ಬಿಟ್ಟು ಜ [illegible] ಲಿ 01 ಪೌಂಡ್ [illegible] ಲಿಂಬರ್ ಬಂದಿರು [illegible] ಸೂರಿ [illegible] ಪ್ರತಿಮೆಯ ಬಿಗಿದ [illegible] ಪ್ರಾಣಿಯ ಬಾಲ [illegible] ಲಿಂಬ [illegible] ಮೆಂಟ್ ಸಿಮೆಂಟ್

ರುಮೇನಿಯಾದಲ್ಲಿ ಅಸಂಖ್ಯ ಜರ್ಮನ್ ಸೈನಿಕರು ಸೇರಿದ್ದಾರೆ

ರುಮೇನಿಯಾಕ್ಕೆ ಪ್ರತಿದಿನ ೨೦ ೫೫ ರೈಲುಗಳ ತುಂಬ ಜರ್ಮನ್ ಸೈನಿಕರು ಬರುತ್ತಿದ್ದಾರೆಂದೂ, ಈ ವರೆಗೆ ಸುಮಾರು ೧೫ ಲಕ್ಷ ಜನರು ಬಂದಿದ್ದಾರೆಂದೂ, ಇನ್ನೂ ಅಸಂಖ್ಯ ಸೈನಿಕರು ಬರುವವರಾಗಿದ್ದಾರೆಂದೂ ತುರ್ಕೀ ರೇಡಿಯೋ ಯಂತ್ರವು ತಿಳಿಸುತ್ತದೆ

ಇಟಲಿ ಸೈನ್ಯದ ಪುನರ್ವ್ಯವಸ್ಥೆ

ಇಟಲಿಯ ಹೊಸದಂಡನಾಯಕರಾದ ಕೆವೆಲೆರೋ ರವರು ಅಲ್ಬೇನಿಯದಲ್ಲಿರುವ ಇಟಲಿಯ ಸೈನ್ಯವನ್ನು ಪುನರ್ವ್ಯವಸ್ಥೆಗೊಳಿಸುವ ಕಾರ್ಯವನ್ನು ಕೈಗೊಂಡಿದ್ದಾರೆ ಇಟಲಿಯ ಸೈನ್ಯಗಳ ಪರಿಸ್ಥಿತಿಯು ದಿನೆದಿನೇ ಕೆಡುತ್ತಿದೆಯೆಂದು ಗ್ರೀಕ್ ಅಧಿಕಾರಿಗಳೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ ಗ್ರೀಕರು ಇಟಲಿ ಸೈನ್ಯಗಳ ಪುನರ್ವ್ಯವಸ್ಥೆಗೆ ಅವಕಾಶವನ್ನೇ ಕೊಡುವುದಿಲ್ಲವೆಂದು ಹೇಳಲಾಗಿದೆ

ಸೂಲ್ಲಾದ ಮೇಲೆ ಮುತ್ತಿಗೆ

ಸೂಲ್ಲಾ ದ್ವೀಪದ ಮೇಲೆ ಶತ್ರುಗಳು ಬಾಂಬು ಗಳನ್ನು ಸುರಿಸಲು ಪ್ರಯತ್ನ ನಡೆಸಿದರು ಇದರಿಂದ ಜನರಿಗೆ ವಿಶೇಷ ನಷ್ಟ ಸಂಭವಿಸಿತು ಕಳೆದ 15 ನೆಯ ತಾರೀಖು ಮಧ್ಯಾಹ್ನ ಮತ್ತು ಸಂಜೆ ಅನೇಕ ಶತ್ರು ವಿಮಾನಗಳು ಬಂದು ಮುತ್ತಿಗೆ ನಡೆಸಿವೆ ಬ್ರಿಟಿಷ್ ಘಾತಾಸಡೆಗೆ ಯಾವ ನಷ್ಟವೂ ಸಂಭವಿಸಿಲ್ಲಿ ವಾಸ ಗೃಹಗಳ ಸಾಲಿಗೆ ಏಟುಬಿದ್ದ ನಷ್ಟನಾಯಿರು ಜನರು ಅಪಾಯಕ್ಕೊಳಗಾದರು ಶತ್ರುಗಳ ಅನೇಕ ವಿಮಾನ ಗಳು ನಾಶಮಾಡಲ್ಪಟ್ಟಿವು

ನುಡಿಟೆರೇನಿಯನ್ ಕಾರ್ಯಕ್ರಮದಲ್ಲಿ ಅಮೆರಿಕೆಯ ಆಸಕ್ತಿ

ನುಡಿಟೆರೇನಿಯನ್ ಸಮುದ್ರದಲ್ಲಿ ಬ್ರಿಟಿಷರು ನಡೆಸು ತ್ತಿರುವ ಕಾರ್ಯಕ್ರಮದಲ್ಲಿ ಅಮೆರಿಕನ್ನರು ತಮ್ಮ ಆಸಕ್ತಿ ಯನ್ನು ತೋರಿಸುತ್ತಿರುವರು ಅವರು ಈ ಪ್ರದೇಶದಲ್ಲಿ ತಮ್ಮ ಕಛೇರಿಯನ್ನು ಪ್ರೇಕ್ಷಕರನ್ನೂ ಹೆಚ್ಚಿಸಿದ್ದಾರೆ ಈಗಾಗಲೇ ಜನರು ಈ ಕೆಲಸದಲ್ಲಿ ನಿಯೋಜಿಸಲ್ಪಟ್ಟಿದ್ದಾರೆ ೨ ನಯಪರೋಬ್ಬರು ಇಪ್ಪರಲ್ಲೇ ಬರಲಿದ್ದಾರೆ

ಸೊಲ್ಲಾಪುರದಲ್ಲಿ ಭಯಂಕರ ಹೊಡೆದಾಟ

ಸೂಲ್ಲಾಪುರದಲ್ಲಿ ಹಿಂದೂ ಮುಸಲ್ಮಾನ ವೈಷಮ್ಯ ವಿದ ಕಳೆದ 1೨ ನೆಯ ಶುಕ್ರವಾರದಿನವೆ ಗಲಭೆ ಹೆದು 24 ಗಂಟೆಗಳ ಕಾಲವಲ್ಲಿ 7 ಜನರು ಆಯುಧ ರಿ ವ ತಿವಿಯಲ್ಪಟ್ಟು ಮೃತರಾದರು 8 ಜನರಿಗೆ ಾರ್ಯಲಂದವು ಜಿಲ್ಲಾ ಮ್ಯಾಜಿಸ್ಟ್ರೇಟರು ಹಿಂದೂ ನತ್ತ ಮುಸ್ಲಿಂ ಮುಖಂಡರ ಸಭೆಯೊಂದನ್ನು ಕರೆದು ಪರಿಸ್ಥಿತಿಯನ್ನು ವಿವರಿಸಿ ಸಿತ್ತನ್ನು ಕಾಪಾಡಲು ಅವರು ಸಹಾಯವನ್ನು ಕೋರಿದರು ರಾತ್ರಿ 7 ಘಂಟೆ ೨ ವಿ ಬೆಳಿಗ್ಗೆ ೬೫೦ ಘಂಟೆಯವರೆಗೆ ಕರ್ಫ್ಯೂ ಜ್ಞೆಯು ಜಾರಿಯಲ್ಲಿದೆ

ಬ್ರಿಟಿಷ್ ನೌಕೆಯನ್ನು ನಾವಿಕರೇ ನುಳುಗಿಸಿದರು

ನೆ ಡಿಟರೇನಿಯನ್ ಸಮುದ್ರದಲ್ಲಿ ಜರ್ಮನ್ ಬಾಂಬರ ಮಾನಗಳು ಮುತ್ತಿಗೆ ನಡೆಸಿದಾಗ ಬ್ರಿಟಿಷ್ ಕ್ರೂಯ ರ್ ಆದ ಕೌಂಡಾಲ್ಸ್ಟ್ ಎಂಬ ನೌಕೆಗೆ ಆಪಾಯ ಟ್ಟಿತು ಆದರ ಫಲವಾಗಿ ಆ ನೌಕೆಯನ್ನು ಬಂದರಿಗೆ ಗಿಸಿಕೊಂಡುಹೋಗಲು ಆಸಾಧ್ಯವಾದಕಾರಣ ಆದರ ನಿಕರೇ ಆದನ್ನು ಮುಳುಗಿಸಿಬಿಡುವ ಕಾರ್ಯವನ್ನು ೈಗೊಳ್ಳಬೇಕಾಯಿತು 9000 ಟ್ ತೂಕದ ಈ ೌಕೆಯು ಯುದ್ಧಕ್ಕೆ ಮೊದಲು ಚಕ್ರವರ್ತಿ ಾಂಪತಿ ಳನ್ನು ಕೆನಡಾ ದೇಶಕ್ಕೆ ಸುರಕ್ಷಿತವಾಗಿ ಕರೆದುಕೊಂಡು ಹೋಗಿತ್ತು. ಶತ್ರುಗಳ ದಾಳಿಯಿಂದ ಉಂಟಾದ ಬೆಂಕಿಯನ್ನು ಆರಿಸಲು ಅಸಾಧ್ಯವಾದುದರಿಂದ ನಾವಿಕರು ಟಾರ್ಪೆಡೋ ಮಾಡಿ ಅದನ್ನು ಮುಳುಗಿಸಿಬಿಟ್ಟರು

೪೦೦ ನೌಕೆಗಳ ನಿರ್ಮಾಣಕ್ಕೆ ಒಪ್ಪಿಗೆ

ಅಮೆರಿಕಾ ನೌಕಾ ಸಮಿತಿಯವರು 400 ಡಿಸ್ಟ್ರಾಯರುಗಳನ್ನೂ, ಸಬ್‌ಮೆರಿನುಗಳನ್ನೂ ನಾಶಮಾಡುವ ಮತ್ತು ಮೈನುಗಳನ್ನೂ ಗುಡಿಸುವ ನೌಕೆಗಳನ್ನೂ ನಿರ್ಮಿಸಲು ಆಸಮಿತಿಯನ್ನು ಕೇಳಿದ್ದಾರೆ ಇದಲ್ಲದೆ 200 ವ್ಯಾಪಾರ ಹಡಗುಗಳನ್ನು ಕಟ್ಟಲು ಬೇಕಾಗುವ ವೆಚ್ಚಕ್ಕೆ ಒಪ್ಪಿಗೆಯನ್ನು ಶ್ರೀ ರೂಜ್‌ವೆಲ್ಟರು ರಿಪ್ರೆಜೆಂಟೇಟಿವ್ಸ್ ಸಭೆಯನ್ನು ಕೇಳಲಿದ್ದಾರೆ ರಿಪ್ರೆಜೆಂಟೇಟಿವ್ಸ್ ಸಭೆಯು 400 ನೌಕೆಗಳಗಾಗಿಯೂ 900 ಸಿಲಿಗಾರ್ ಡಾಲರುಗಳ ವೆಚ್ಚಕ್ಕೆ ಆನ ಮತಿ ಕೊಟ್ಟಿತು

ಅಮೇರಿಕೆಯು ನೂರಕ್ಕೆಂಂ ರಷ್ಟು ವಿಮಾನಗಳನ್ನು ಬ್ರಿಟನ್ನಿಗೆ ಕೊಡುವುದು

ಅಮೇರಿಕೆಯಲ್ಲಿ ನಿರ್ಮಿಸಲಾಗುವ ವಿಮಾನಗಳಲ್ಲಿ ಅರ್ಧವನ್ನು ಅಮೆರಿಕಾಕ್ಕೆ ಇಟ್ಟುಕೊಂಡು ಉಳಿದ ವುಗಳನ್ನು ಬ್ರಿಟನ್ನಿಗೆ ಕೊಡುವುದಾಗಿ ಶ್ರೀ ರೂಜ್ ವೆಲ್ಟರು ಹಿಂದಿನ ದಿವಸ ಆದರೆ ಈಗ ಆ ಪ್ರಮಾಣ ಕ್ಕಿಂತ ಹೆಚ್ಚು ಅಂದರೆ ತಯಾರಿಸಿದ ವಿಮಾನಗಳಲ್ಲಿ ನೂರಕ್ಕೆ 90 ವಿಮಾನಗಳನ್ನು ಬ್ರಿಟನ್ನಿಗೆ ಕೊಡಿಸಲು ಯುಗುತ್ತಿದೆ ಕಳೆದ ನವೆಂಬರ್ ತಿಂಗಳಲ್ಲಿ ನಿರ್ಮಿಸ ಲುವ ಎಲ್ಲಾ ವಿಮಾನಗಳನ್ನೂ ಹೊರಕ್ಕೆ ಕಳುಹಿಸ ಲಾಗಿದೆ 1940 ನೆಯ ಸಪ್ಟೆಂಬರ್ ತಿಂಗಳು ಗಳಲ್ಲಿ ಅಮೆರಿಕೆಯು ನ್ಯೂಸ್ಟೈ ಲೇಸಲು 10 ವಿಮಾನ ಗಳನ್ನು ಮಾತ್ರ ಹೊಸದಾಗಿ ನಿರ್ಮಿಸಿದ್ದಾರೆ

ನೂಜಿ ಅಬ್ಬೀನಿಯಾ ಚಕ್ರವರ್ತಿಯ ಸಿಂಹನಾದ

'ಆಡಿಸ್ ಅಬಾಬದಲ್ಲಿ ಇಟಲಿಯನ್ನರು ನಿಲ್ಲಿಸಿ ರುವ ತೋಳಿನ ವಿಗ್ರಹವನ್ನು ಒಬೆದ ರಕ್ಷಿಸಿ ಆವರ ಸ್ಥಾನದಲ್ಲಿ ಅನ್ಯತಲೆಯ ಸಿಂಹವಿಗ್ರಹವನ್ನು ನಿಲ್ಲಿಸು ತ್ತೇನೆ" ಎಂಬುವಾಗಿ ಅಬ್ಬೀನಿಯಾ ಚಕ್ರವರ್ತಿ ಗಾಜಾದ ಹೈಲಿಸಾಲಾಸಿಯವರು ಪತ್ರಿಕಾ ಸುದ್ದಿಗಾರರಿಗೆ ತಿಳಿಸು ಸುತ್ತ 'ನಾನು ಅಬಿಸೀನಿಯವನ್ನು ಪ್ರವೇಶಿಸಿ ಇದಿ ಯೋಜಿಸಿದ ದೇಶಭಕ್ತರ ಸೇನೆಯನ್ನು ತತ್ಪಾರ್ಶಗಳಾಗಿ ಮುಖವಾಗಿ ನಡೆಸುವ ವಿಧಗಳು ಸಮಾಪ್ತಿಸಿ ತ್ತಿವೆ ನಮ್ಮ ಸೈನ್ಯಕ್ಕೆ ತರಬೇತು ಕೊಡುತ್ತಿರುವ ಕಾರ್ಯವು ಸಮರ್ಪಕವಾಗಿ ನಡೆಯುತ್ತಿದೆ ಇಟಲಿ ಸ್ಪರ್ಧುತ್ವದ ಮೇಲೆ ಜನರು ದಂಗೆ ಏಳುತ್ತಿದ್ದಾರೆ ಎಂದು ಹೇಳಿ ದರು ಚಕ್ರವರ್ತಿಗಳು ಬಂದಿದ್ದಾರೆಂದು ರಾತ್ರಿಯಲ್ಲಿ ಅಬ್ಬೀನಿಯನ್ನರು ಗಡಿಪ್ರದೇಶದಲ್ಲಿ ಜೂಗೂರ ಹಾಕಿಸು ತ್ತಿದ್ದಾರೆ ಇಟಾಲಿಯನ್ನರ ಕಡೆಗೆ ಸೇರಿದ್ದ ಅನೇಕ ಅಬ್ಬೀನಿಯಾ ಸೈನಿಕರು ಹೈಲಿಸಲಾಸಿಯವರ ಸೇನೆಗೆ ಬಂದು ಸೇರುತ್ತಲಿದ್ದಾರೆ ತಾವು ಇತ್ತೀಚೆಗೆ ಅಬ್ಬೀ ನಿಯಾ ಗಡಿಗೆ ಹೋಗಿದ್ದುದಾಗಿಯೂ ಒಳಗಾಡಿಂದ ಅಬಿಸೀನಿಯಾ ನಾಯಕರು ಒಂದು ತಮ್ಮನ್ನು ಕಂಡು, ಪ್ರಾಣಹೋದರೂ ಸರಿಯೆ ಇಟಲಿಯ ರಕ್ಷಣನ್ನು ತ್ಯಜಿ ಸುವದಾಗಿ ಭರವಸೆ ಇತ್ತರೆಂದೂ ಚಕ್ರವರ್ತಿಗಳು ತಿಳುಹಿಸಿದರು

ಜಪಾನಿನ ಉದ್ಧಾರ

ಆಗ್ನೇಯ ಏಷ್ಯಾದಲ್ಲಿರುವ ೨೦ ಕೋಟಿ ಜನರನ್ನು ಬಿಳಿಯ ಕಿಂದ ಉದ್ಧಾರಮಾಡಲಿಕ್ಕಾಗಿ "ಜಪಾನಿನ್ ಲೀಗ್" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗಿದೆ ಈ ಸಂಬಂಧವಾಗಿ ಜನವರಿ ೨೪ನೇ ತಾರೀ ದಿನೇ ಟೋಕಿಯೋ ನಗರದಲ್ಲಿ ಮಹಾಸಭೆಯೊಂದು ನಡೆಯಲಿದೆ

ಜಪಾನಿನ ಪೀರ್ಸ್ ಸಭೆಯ ೯ ಮಂದಿ ಸದಸ್ಯರೂ, ರಿಪ್ರೆಜೆಂಟೇಟಿವ್ಸ್ ಸಭೆಯ ೩ ಮಂದಿ ಸದಸ್ಯರೂ, ಮತ್ತು ಹಲವು ನಿವೃತ್ತ ಸೈನ್ಯ ಮತ್ತು ನೌಕಾ ಅಧಿಕಾರಿಗಳೂ ಈ ಲೀಗಿಗೆ ಬೆಂಬಲ ಕೊಡುತ್ತಿದ್ದಾರೆ

ಈ ಲೀಗು ಒಂದು ಪ್ರಕಟನೆಯನ್ನು ಹೊರಡಿಸಿದ್ದು ಈಗ ಆನ್ಗ್ಲೊ, ಚೀನಾ, ಪೂರ್ವ ಇಂಡೀಸ್, ಮಲಯಾ, ಬರ್ಮಾ, ಇಂಡಿಯಾ ಮೊದಲಾದ ದೇಶಗಳಲ್ಲಿ ೫೦ ಕೋಟಿ ಜನರು ಆಕ್ರಮಣಕ್ಕೆ ಸಿಕ್ಕಿ ನರಳುತ್ತಿದ್ದಾರೆಂದು ತಿಳುಹಿಸಿದೆ

ಕಾರ್ಡೆಲ್ ಹಲ್‌ರವರ ಹೇಳಿಕೆ

ಅಮೆರಿಕೆಯ ವಿದೇಶ ವ್ಯವಹಾರ ಸಮಿತಿಯಲ್ಲಿ ಶ್ರೀ ಕಾರ್ಡೆಲ್‌ಹಲ್‌ರವರು ಮಾತನಾಡುತ್ತ—ನಾಗರೀಕ ಪ್ರಪಂಚದ ಅತಿಗಣ್ಯನ್ನೇ ಕೆತ್ತಿಹಾಕಿಯುವುದು ತಮ್ಮ ಉದ್ದೇಶ ಶವಾಗಿದೆಯೆಂಬುದನ್ನು ಜರ್ಮನಿ ಇಟಲಿ ಜಪಾನಗಳು ಸ್ಪಷ್ಟವಾಗಿ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟಪಡಿ ಸಿವೆಯೆಂದೂ, ನ್ಯಾಯಬದ್ಧವಾದ ನೂತನ ವ್ಯವಸ್ಥೆಯನ್ನೆಲ್ಲ ಧ್ವಂಸಮಾಡಿ, ಇತರ ದೇಶಗಳ ವೆಚ್ಚಲ್ಲಿ ದಾಳಿ ನಡಿಸಿ, ಅವುಗಳನ್ನು ಪಾರಾಕ್ರಾಂತವನ್ನಾಗಿ ಮಾಡಿಕೊಳ್ಳಬೇ ಕೆಂಬ ಆಸೆಯನ್ನಿಟ್ಟಿದೆಯೆಂದೂ, ಸಮುದ್ರದ ಮೇಲಿನ ಸರ್ವಾಧಿಕಾರವು ಬಹಳ ಮುಖ್ಯವಾದುದೆಂದೂ, ಈ ಅಧಿ ಕಾರವು ತೈತ್ರರಾಷ್ಟ್ರ ಒಪ್ಪಂದಕ್ಕೆ ಸಹಿ ಹಾಕಿರುವವರ ಕೈಗೆ ಬಿದ್ದಪಕ್ಷದಲ್ಲಿ ನವ್ಯ ದೇಶಕ್ಕೆ ವಿಪತ್ತು ಹೆಚ್ಚುವು ದೆಂದೂ, ಬ್ರಿಟನ್ನು ಸೋತರೆ ಮತ್ತು ಈಗ ಅದು ಸಮು ದ್ರದ ಮೇಲೆ ತನಗಿರುವ ಅಧಿಕಾರವನ್ನು ಕಳೆದುಕೊಂಡರೆ ಜರ್ಮನಿಯ ಸುಲಭವಾಗಿ ಅಟ್ಲಾಂಟಿಕ್ ಸಾಗರವನ್ನೂ ದಾಟುವುದೆಂದೂ, ಬ್ರಿಟನ್ನೂ ಈಗ ಏನುಮಾಡುತ್ತಿದೆ ಯೋ ಅದೇ ಕೆಲಸವನ್ನು ನಾವು ಆಗ ಮಾಡಲು ಶಕ್ತ ರಾದರೆ ಪಾಪ್ರ ಶತ್ರುಗಳನ್ನು ತಡೆಯಬಹುದೆಂದೂ, ಅಟ್ಲಾಂಟಿಕ್ ಸಾಗರವು ಜರ್ಮನಿಯ ಅಧಿಕಾರಕ್ಕೆ ಒಳ ಪಟ್ಟಿತೆಂದರೆ ಅನಂತರದ ನಮಗೆ ಸ್ವಲ್ಪವೂ ರಕ್ಷಣೆ ಮೊರೆ ಯದೇತಾನೆಯುವುದೆ ದೂ, ಆದ್ದರಿಂದ ಬ್ರಿಟನ್ನಿಗೂ ಮತ್ತು ಡಿಕ್ಟೇಟರ್ ರಾಷ್ಟ್ರಗಳನ್ನು ಎದರಿಸುತ್ತಿರುವ ಇತರ ದೇಶ ಗಳಿಗೂ ಪರಿಯಾಯವಾಡುವುದು ನವ್ಯ ಮುಖ್ಯ ಕರ್ತವ್ಯ ವೆಂದೂ ಹೇಳಿದರು

ಇದ್ದವರಲ್ಲಿ ಬಾಗಿಸಿರುವ ದೇಶಗಳ ನೌಕೆಗಳು ಅಮೇರಿಕಾ ಬಂದರುಗಳಿಗೆ ಬಂದು ರಿಪೇರಿ ಕಾರ್ಯವನ್ನು ನಡೆಸಲು ಅನುಕಾಶಕೊಟ್ಟರೆ ಅಂತರರಾಷ್ಟ್ರೀಯ ಶಾಸನ ವನ್ನು ಮಾರಿದಂತಾಗುವುದಿಲ್ಲವೇ ? ಎಂದು ಕೇಳಿದ್ದಕ್ಕೆ ಕಾರ್ಡೆಲ್ ಹಲ್‌ರವರು "ಈಗ ನವ್ಯ ಮುಂದಿರುವುದು ಒಂದೇ ಪ್ರಶ್ನೆ ಶಾಂತಿಯುತವಾದ ದೇಶಗಳಿಗೆಲ್ಲ ಮುತ್ತಿಗೆ ಹಾಕಿ, ಜಯಭೇರಿಯಲು ಉಗಿದ ಯುದ್ಧವು ಅರಂಭವಾಗದೆ ಇನ್ನೂ ಆರಿರು ಶತ್ರುಗಳು ನವ್ಯ ಸಮುದ್ರದ ತೀರವನ್ನು ದಾಟುವವರೆಗೆ ನಾವ್ಯಾವಬೇಕೇ ಅಧಿವಾ ಕಾಲ ವಿಾರ ವುದರೊಳಗಾಗಿ ಅತ್ಯ ರಕ್ಷಣೆಗನುಕೂಲ ವಾದ ರೀತಿಯಲ್ಲಿ ನರ್ವಸಜ್ಜರಾಗಿ ಎಂಬುದನ್ನೇ ನಾವಿರಿ ಸಬೇಕಾಗಿದೆ" ಎಂದು ಹೇಳಿದರು

ಜಪಾನಿನ ಘೀತಿಯನ್ನೆಂತೂ ಉಗ್ರವಾಗಿ ಖಂಡಿಸಿ ದರು ಜಪಾನು ಸ್ಥಾಪಿಸುವ ವ್ಯವಸ್ಥೆಯಲ್ಲಿ ಆಕ್ರಮಣ ಮಾತಲ್ಪಟ್ಟ ಪ್ರದೇಶಗಳ ಘೋರ ಜಡತನಕ್ಕೆ ಗ ರಿಯಾ ಗುವುದು ಸಾಮಾಜಿಕವಾಗಿ ವ್ಯಕ್ತಿಗಳಿಗೆ ಸ್ವಾತಂತ್ರ್ಯ ವಿಲ್ಲದಂತಾಗುವುದು ನೋಡ ಜನರು ಕೀಳು ತರಗತಿಗೆ ತಳ್ಳಲ್ಪಡುವರು " ಎಂದು ನ ದಿದರು

ಯುದ್ಧಕ್ಕೆ ಹಿಂದೂಸ್ಥಾನದ ಸಹಾಯ

ಹಿಂದೂಸ್ಥಾನವು ಬ್ರಿಟನ್ನಿಗೆ ಬೇಕಾಗಿರುವ ವಿಮಾನ ಯಂತ್ರಗಳ ಶೈಲಿ ನೋರಾರು 'ಸ್ಪಿಟ್‌ಫೈರ್' ಜಾತಿ ಯ ವಿಮಾನಗಳನ್ನು ಕೊಂಡುಕೊಳ್ಳುವುದ್ದು ಹೆಣ ನ್ನು ಅಂದರೆ ೨,೫೦,೦೦೦ ಪೌಂಡುಗಳಿಗಂತಲೂ ಹೆಚ್ಚು ಹಣವನ್ನು ಒದಗಿಸಿಸಿದ್ದಾಗಿದೆ ಹಿಂದೂಸ್ಥಾನವ ನೈಸ ರ್ಯಾ ರವರು ಯುದ್ಧೋದ್ಯೋಗಗಳ ನಿಧಿಯಿಂದ ಇದು ವರೆಗೆ ಬ್ರಿಟನ್ನಿಗೆ 8,೮೦ ೦೦೦ ಪೌಂಡುಗಳನ್ನು ಕಳುಹಿಸಿ ಕೊಟ್ಟಿದ್ದಾರೆ ಬ್ರಿಟನ್ನಿನ ಯುದ್ಧಸಹಾಯಕ್ಕಾಗಿ ವೈಸ್ರಾ ವಿಸ್ತಿರುವ ಯುದ್ಧನಿಧಿಯು ಈಗ 20,00, 000ಪೌಂಡು ಗಳಿಗೆ ಏರಿರುತ್ತದೆ ಈ ಹಣವ ಪೈಕಿ 80,000 ಪೌಂಡು ಗಳನ್ನ ಬ್ರಿಟನ್ನಿನ ಬಜಾನಾ ಸಚಿವರಿಗೂ, 50,000 ಪೌಂಡುಗಳನ್ನು ಕೆಂಗ್ ಜಾರ್ಜರವರ ನಿಧಿಗೂ, 90,000 ಪೌಂಡುಗಳನ್ನು ಬ್ರಿಟಿಷ್ ರೆಡ್-ಕ್ರಾಸ್ ಸಂಸ್ಥೆಗೂ ಕೊಟ್ಟಿರುತ್ತಾರೆ.

ಶುಸ್ಪಷ್ಟೇಶ್ವರ ಜ್ಯೋತಿರ್ಲಿಂಗ

ಜ್ಯೋತಿರ್ಲಿಂಗವು ಶುಸ್ಪಷ್ಟೇಶ್ವರ, ಶುಸ್ಪಷ್ಟೇಶ್ವರ, ಎಂಬ ಹೆಸರುಗಳಿಂದ ವರ್ಣಿಸಲ್ಪಟ್ಟಿದೆ. ನಾಗರ ದಾಸ್ಥಾನ ತರ್ಗತ ವಿಜಾಪ ಜಿಲ್ಲೆಯಲ್ಲಿ ಮುಸ್ಲಿಮರ ಕಿ ಸೈಲಿಗೆ ದೂರದಲ್ಲಿ ಹಸ್ಸಿರವು ಸೈಲಿಗಳು ಇರುತ್ತವೆ. ಅಲ್ಲಿಂದ ಹಸ್ಸಿರವು ಸೈಲಿಗಳ ಮೂರಮಲ್ಲಿ ಕೆರೆಗಳಿ ಎಂಬ ಗ್ರಾಮವಿದೆ. ಈ ಗ್ರಾಮದ ಸಮೀಪವಿದ್ದಲ್ಲಿ ಈ ಕ್ಷೇತ್ರವಿರುತ್ತದೆ. ಕೈಪ್ಪಸಿಂಹ ಎತ್ತರವಾಗಿರ ಪ್ರಯಾಣಕರಿಗೆ ಬೆಟ್ಟಕ್ಕೆ ಮೂರು ಸಾಲು ಗಣಪತಿ ಶ್ರೀಧರವಾಗಿ ಸ್ವಯಂಭೂ ಲಿಂಗವಿರುತ್ತದೆ. ಇಲ್ಲಿ ಮಾಣಿಕ್ಯ ಶಿವಲಿಂಗಾಕಾರದಲ್ಲಿ ಮತ್ತು ಶ್ರೀ ಜಕಣಾಚಾರ್ಯರು ಗುರುವರ್ಯರಾದ ಶ್ರೀ ಜಕಣಾಚಾ ಮರ್ಜಕರಿಂದ ಸಮಾರಾಧನೆಯನ್ನು ಇಲ್ಲಿಂದ ಹೊರಬಿ ಮೇಲೆ ಮುಂದೆ ದರ್ಶನಾರ್ಥಿಗಳಿಗೂ, ಸಂಪ್ರದಾಯಿಗಳಿಗೂ ಅವಿ ಎಲ್ಲೂ ಇರು ಗುವುದಿಲ್ಲ. ಎಲ್ಲೂ ಇದ್ದಲ್ಲಿ ಪೂಜಾರಿಯ ಮೈಮಲ ಗುಹೆಯ ಅವುಗಳಲ್ಲಿಲ್ಲ ಶ್ರೇಷ್ಠವಾಗಿ ಸಮಪದಾಗಿರುತ್ತದೆ ಇವುಗಳಿಂ ಒಂಬೆಗಳನ್ನೇ ತೋರಿ ನಿರ್ಮಿಸಲ್ಪಿಸಿ ಶಿಲ್ಪಕಲಾಸ್ಪೃಗ್ ಪ್ರತಿಷ್ಠಿಯಿದು ಪಾಠಕ್ಕಿದೆ. ಅತ್ಯಂತ ಸುಂದರ ಮಾಣಿಯೇ ಇದೆ ಇವು ಕೇವಲ ಪಿಶಾಚಿಗಳಲ್ಲಿ ತಮ್ಮ ಕಾ ಅತಿಶಿಸುವವುಗಳಾಗಿವೆ. ಅನ್ಯ ಮಾನವರಿಲ್ಲಿ ಸಂಚರಿಸಲಿ ಮಾಣಿಗಳನ್ನೂ, ತಮ್ಮ ಅಲ್ಪಾಕಾರ ಶಿಲ್ಪ ಕಲಾ ಕೌಶಲ್ಯ ಮೂಲಕ ಆಳವಿಸಿ, ಮೋಡಿಸಿ ಪಾಠಕಾರ್ಥವಾಗಿ ಸ್ಥಾಪಿಸಿದ್ದಾರೆ. ಇಲ್ಲಿ ಪ್ರಾಚೀನ ಶಿಲ್ಪ ಕಲಾ ಕೌಶಲ್ಯ ಮೂಲಕ ಆಳವಿಸಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮುಕ್ಕೆ ಸಾಮಾನು ಶಿಷ್ಯರ ಮನೆಗಳಿಗೆ ಹತ್ತು ವರ್ಷಕ್ಕೊಮ್ಮೆ ಒಂದುಸಾರಿ ಹೋಗಿ ಶಿಷ್ಯರಿಂದ ಇಷ್ಟಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳಲಿಕೆ ಇಷ್ಟಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಶಿಕ್ಷವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರವಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಅಮವರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆವಶ್ಯಕತೆಯಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇವಕ್ಕಾಗಿ ಎಂಥ ಕೆಡಪಕ್ಷ ಕಾಗದಗಳನ್ನು ಶಯೋಗಿಸುವಷಲ್ಲಿ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭದ್ರವ್ಯದಲ್ಲಿ ದೊರೆಯುವುವು.

ಹೆಸರು	ತೊಲೆ	ಮೂಲ್ಯ
ಸ್ವರ್ಣಾಮಕರಧ್ವಜ	೧	೩೦—೦—೦
ಸ್ವರ್ಣಾಹಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಸುಲ್ಲಸಿಂಧೂರ	೧	೪—೦—೦
ಪ್ರಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ವಜ್ರಭಸ್ಮ	೧	೩—೦—೦
ಹಿತ್ತಾಳೆಭಸ್ಮ	೧	೦—೮—೦
ಕಾಚಭಸ್ಮ	೧	೦—೮—೦
ಜಸ್ಪಭಸ್ಮ	೧	೦—೮—೦
ಸುಂಗೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಭಸ್ಮ	೧	೦—೧೫—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಸ್ತೂರಿಸಿನ ಭಸ್ಮ	೧	೦—೮—೦
ಗಂಧಕದ ಕೋಡಿನ ಭಸ್ಮ	೧	೦—೮—೦
ಸೋದಂತಿಪೆರಶಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿ ಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಪ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವದೇಶಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲೆ,
ಸೋಸ್ವ ಓಪಿಮಕ, ಜಿಲ್ಲಾ ಗಢನಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಬಿಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಹರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಕುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪರಿಶುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸದೇಕಲ್ಲದೆ ಸ್ವರಕುಸ್ಯವಾಗಿ ಉಚ್ಚರಿಸಬಾರದೆಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಗಾಗಲಿ, ಶ್ರೀರುದ್ರಾಧ್ಯಾಯು-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹುಕಲ್ಪಟ್ಟಿಲ್ಲ ಮತ್ತು ಪವಭಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ಮಹಿಮಿಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ತಿಳಿಯದಿರುವುದೆ? ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಮನ್ಯುಸೂಕ್ತಾಮಿನಾಮಾವಳಿ, ಶ್ರೀ ಪಂಚಾಚಾರ್ಯರೆ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಯ ಹೈವಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘೇಟಾಘೋಷವಾಗಿ ಹೇಳುಹುದಾಗಿದೆ. ಸವ್ಯಸ್ಥಾಳದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ನುಡಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪ್ರಿತೀತರಾಗಿ ಆಶ್ರಿತರಿಗೆ ಆಶ್ರಯವನ್ನು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರು ಒಳ್ಳೆಯ ಅಮೃತಶಿಲೆಯಲ್ಲಿ ಪ ಕಾಡಿದ ಫೋಟೋ ಸೈಜು ೨೦×೧೫ ಬೆಲೆ ಒಂದಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರ ಬೆಲೆಯಾದ ಅತ್ಯುತ್ತಮ ಪಟ್ಟಿ ಇನ್ನೂ ಹಾಗೂ ಪೂರ್ಣ ಮಹತ್ವಗಳಲ್ಲಿ ಪ್ರತಿಷ್ಠಾಪಿಸಿರುವ ಫೋಟೋ ಸೈಜು ೨೪×೨೦ ಬೆಲೆ ೦—೧೨—೦

ಸದ್ಗುರು ಸೀತಾರಾಮಶಾಸ್ತ್ರಿಗಳ ಜಂಗಮಲಿಂಗ ಪೂಜಾ ಪ್ರತಿಷ್ಠಾಪನಾ ಸಮಯದಲ್ಲಿ ತೆಗೆದ ಫೋಟೋ ಸೈಜು ೧೪×೧೦ ಬೆಲೆ ೦—೧೨—೦

ಶ್ರೀ ಜಗದ್ಗುರು ಸಂಚಾರ್ಯರ ಲಿಂಗಪ್ರತಿಷ್ಠಾಪನಾ ಸಮಯದಲ್ಲಿ ತೆಗೆದ ಫೋಟೋ ಸೈಜು ೨೪×೨೦ ಬೆಲೆ ೦—೧೨—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಪ್ರತಿಷ್ಠಾಪನಾ ಸಮಯದಲ್ಲಿ ತೆಗೆದ ಫೋಟೋ ಸೈಜು ೦×೮ ಬೆಲೆ ೦—೦—೮

ಶ್ರೀ ಜಗದ್ಗುರು ಪಂಚಮುಖೇಶ್ವರ ಶಿವಾಚಾರ್ಯರು ಮಾರ್ಗದರ್ಶನದಿಂದ ಅವತರಿಸಿಬಂದ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ವಿಧಿವತ್ತಾಗಿ ಪ್ರಾರ್ಥನಾಸುತ್ರ ಪಠಿಸಿ ಪಟ್ಟಾಭಿಷೇಕ ಮಾಡಿಸಿದ ಮೂಲಪೀಠದ ಕುರುಪಾಸನ ಧಾರಣಮಾಡಿ ಮಹಾ ಕೋಪ ತಾಳಿದ ಸಮಯದ ಪ್ರತಿಷ್ಠಿಸುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ಶ್ರೀ ಪಂಡಿತಾರ್ಯರಿಗೆ ಜಂಗಮಲಿಂಗೇಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೮

ಶ್ರೀ ಕಾಶೀಕ್ಷೇತ್ರದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಕುಲಧರ್ಮಾಚಾರ್ಯರ ಫೋಟೋ ೦—೦—೮

ಶ್ರೀ ಕಾಶೀ ನಿರ್ಯಾಸನಾಧೀಶ್ವರ ಶ್ರೀ ಜಗದ್ಗುರು ಪಂಚಮುಖೇಶ್ವರ ಶಿವಾಚಾರ್ಯರ ಫೋಟೋ ೦—೦—೮

ಶ್ರೀ ಮದುಜ್ಜಯಿನೀ ಸಿಂಹಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಫೋಟೋ ೦—೦—೮

ಶ್ರೀ ಮದ್ರಂಭಾಪುರೀ ಪೀಠ ಧೀರ ವೀರ ಜಗದ್ಗುರು ಶ್ರೀ ವೀರಸೋಮೇಶ್ವರ ಸಾರ್ವಭೌಮ ಮಹಾಸ್ವಾಮಿಗಳವರ ಫೋಟೋ ೦—೦—೮

ಶ್ರೀ ಮದುಜ್ಜಯಿನೀ ಜಗದ್ಗುರುಗಳವರ ಸ್ವಾಮಿಪಟ್ಟ ಅಲಂಕಾರಾತ್ಮಗಳನ್ನು ಸೂಚಿಸುವ ಫೋಟೋ ೦—೦—೮

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳ ಫೋಟೋ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠ ಮತ್ತಾರ್ಚಾ ಅಲಂಕಾರವಾದ ಫೋಟೋ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠ ಅಲ್ಲಿನ ಸ್ವಾಮಿಗಳ ಪಟ ಫೋಟೋ ೦—೦—೮

ಶ್ರೀ ಜಗದ್ಗುರು ಕೇದಾರಿಯಾಸಾರಿ ಅತ್ಯಾಕರ್ಷಕ ಫೋಟೋ ೦—೦—೮

ಹಿಮವತ್ಪರ್ವತದ ಮಧ್ಯದಲ್ಲಿ ಕೇದಾರನಾಥ ದೇವಾಲಯವಿರುವ ಸುಂದರ ಫೋಟೋ ೦—೦—೮

ಶ್ರೀಶೈಲಾಪುರ ಜಗದ್ಗುರುಗಳವರ ಸಮಾಧಿಸ್ಥಳ ಹಾಗೂ ಅಲ್ಲಿನ ವಿಶಾಲವಾದ ಮಂಟಪದ ಫೋಟೋ ೦—೦—೮

ಬೆಂಗಳೂರು ಕಂಪೆನಿಗಳಿಂದ ಕೆಲವು ಜಾತಿಯ ಅತ್ಯಪೂರ್ವವಾದ ಫೋಟೋಗಳು ಲಭ್ಯವಿವೆ

ಸೂಚನೆ—ಮೇಲೆ ತಿಳಿಸಿರುವ ಫೋಟೋಗಳಲ್ಲಿ ಯಾವುದಾದರೂ ಒಂದನ್ನು ಕಳುಹಿಸುವ ಪ್ರಕಟಣೆಗಳಲ್ಲಿ ೫ ರೂಪಾಯಿಗಳ ಮೇಲೆ ತಿಳಿಸಿಕೊಳ್ಳುವವರು ಫೋಟೋ ಕ್ಯಾಟಲಾಗ್ ಕೂಡಲಾಗಿ ತರಿಸಿಕೊಳ್ಳಬಹುದು. ಕ್ಯಾಟಲಾಗ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂತುಪಿತಿಯಲ್ಲಬ್ಬುನ್ನು, ಸಾವಿರಾರುಮಂದಿಗಳು ಇವನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯವ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ದೋಷಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವನಲ್ಲದೆ ಕರಿಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬಿಟ್ಟೆನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇವನ್ನು ಆನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿಪಿ ಆಗಿ ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ

(Registered Trade Mark)

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,

[36] ಪೋ ಬಾ ನಂ೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಗಳು (ಪ್ರಥಮ ಆವೃತ್ತಿ)	೧ ಆಣೆ
ಸನ್ಯಾಸಾಶ್ರವ ವಿಧಿ (ದ್ವಿತೀಯ ಆವೃತ್ತಿ)	೧ ಆಣೆ
ಪಂಚವಿಂಶತಿ ಪ್ರಸ್ಥಪ್ರಶ್ನ (ದ್ವಿತೀಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯರ ಗಲಸ್ತೋತ್ರ (ಪ್ರಥಮ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ದ್ವಿತೀಯ ಆವೃತ್ತಿ)	೧ ಆಣೆ
ಶ್ರೀಜಗನ್ಗುರು ಸಾಹಿತ್ಯ ಸಂಗ್ರಹ (ತೃತೀಯ ಆವೃತ್ತಿ)	೨ ಆಣೆ
ಬಸವಾದಿಪ್ರಮಥಸ್ತವರತ್ನ (ಅನೇಕ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೩ನೇಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿವಿರಚಿತ ವೀರಶೈವಮಾಹಾಚಾರ್ಯಶತಕ	೨ ಆಣೆ
ವೀರಶೈವಮತಮಾಮಾಂಸಾ .	೩ ಆಣೆ
ವೀರಶೈವಾಚಾರವಿಧಿ (೩ನೇಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ .	೪ ಆಣೆ
ವಿವಾಹವಿಧಿ (೩ನೇಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸತ್ಯಾಸಾಶ್ರಮವಿಮರ್ಶತತ್ತ್ವನಿಶ್ಚಯೀಕರಣ (೩ನೇಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಆಕೃತಿಯಲ್ಲಿ)	೬ ಆಣೆ
ವೀರಶೈವಮಹಾತ್ಮರು ..	೮ ಆಣೆ
ಬಸವಧರ್ಮಾಂತನಿವಾಸಕರ (೨ನೇಯ ಆವೃತ್ತಿ)	೮ ಆಣೆ
ತಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾತ್ಮಪಾಮು (ತೆಲುಗು)	೮ ಆಣೆ
ಸದ್ವೀಧರಕ್ಕಾವಳಿ . ..	೮ ಆಣೆ
ವೈದಿಕತಿವಪೂಜಾವಿಧಿ (ನೃತ್ಯಸ್ವರಲಿಪಿಸಹಿತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ..	೧೨ ಆಣೆ
ಸಾಯೇಶ್ವರ ದೀಕ್ಷಾವಿಧಿ (೩ನೇಯ ಆವೃತ್ತಿ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೩ನೇಯ ಆವೃತ್ತಿ)	೧ ರೂ
ವೀರಶೈವರತ್ನ (೩ನೆಯ ಆವೃತ್ತಿ, ೪೦ಮಹತ್ವದ ಫೋಟೋಗಳುಳ್ಳದ್ದು) .	೧| ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ಪುಟ)	೪ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
ವೀರಶೈವರತ್ನ (ಸಚಿತ್ರ)	೧ ಕ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಹಿತ)	೧ ಕ
ವೀರಶೈವೇಶ್ವರೇಶ್ವರ (ಸಚಿತ್ರ) .	೧ ಕ
ನಂದಿಕೇಶ್ವರಕಾರಿಕಾ (ಸಚಿತ್ರ)	೨ ಆಣೆ
ಲಿಂಗಧಾರಣಚಂದ್ರಿಕಾ (ಸಚಿತ್ರ)	೩ ಕ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಸ್ಥಾನದ ರೋಗಿನಿವಾರಿಯೂ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಸಂಜಾಜಪಡಿಸಿ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 22

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನವಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಸರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ ನೇ ಜನವರಿ ೧೯೪೧ [ಸಂಚಿಕೆ ೩೮

ಬ್ರಿಟಿಷ್ ಮಹಾಪ್ರಧಾನರ ಭಾಷಣ.

೪೦ ಲಕ್ಷ ಜನ ಸೈನಿಕರು ಸಿದ್ಧರಾಗಿದ್ದಾರೆ.

೭೩ ನೆಯ ತಾರೀಖಿನ ದಿವಸ ನಡೆದ ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಮಹಾಪ್ರಧಾನರು ಭಾಷಣ ಮಾಡುತ್ತ—

"ಪಾರ್ಲಿಮೆಂಟ್‌ನಲ್ಲಿ ದೀರ್ಘಕಾಲ ಚರ್ಚೆಗಳನ್ನು ನಡೆಸುವುದರಿಂದಲೂ ಟೀಕೆಗಳನ್ನು ಮಾಡುವುದರಿಂದಲೂ ಸರ್ಕಾರಕ್ಕೆ ಅಡಚಣೆಯೇ ಹೊರತು ಆದರ ಕಾರ್ಯಗಳು ಸುಸೂತ್ರವಾಗಿ ನಡೆಯುವುದಕ್ಕೆ ಅನುಕೂಲವಾಗವು ದಿಲ್ಲವೆಂಬ ಅಭಿಪ್ರಾಯವನ್ನು ತಾವು ಅನುಮೋದಿಸುವು ದಿಲ್ಲವೆಂದೂ, ದೊಡ್ಡ ದೊಡ್ಡ ಸಮಸ್ಯೆಗಳ ಮೇಲೆ ಚರ್ಚೆಗಳನ್ನು ಶಾಸನ ಸಭೆಯಲ್ಲಿ ನಡೆಸುವುದರಿಂದ ರಾಷ್ಟ್ರ ಜೀವನಕ್ಕೆ ಬಹಳ ಅನುಕೂಲವಾಗುವುದೆಂದೂ, ಇದರಿಂದ ಸರ್ಕಾರಕ್ಕೆ ಬಹಳ ಪ್ರಯೋಜನವಾಗುವು ದೆಂದೂ, ಇಂದಿನ ಪರಿಸ್ಥಿತಿಯಲ್ಲಿ, ನಾನಾ ಶಾಖೆಗಳ ಸಂಬಂಧವಿಲ್ಲದೆ ಇರುವ 5 ಮಂದಿ ಸದಸ್ಯರುಗಳನ್ನೊಳಗೊಂಡ ಸಂಗ್ರಾಮ ಮಂತ್ರಿಮಂಡಲವನ್ನು ರಚಿಸಿ ಕೆಲಸಮಾಡುವುದು ಹಿತಕಾರಿಯಲ್ಲವೆಂದೂ, ಇಂದಿನ ಸಂಗ್ರಾಮ ಮಂತ್ರಿಮಂಡಲದಲ್ಲಿ 9 ಮಂದಿ ಸದಸ್ಯರು ಇರುವರೆಂದೂ, ಅವರಲ್ಲಿ ಅನೇಕರು ಸರ್ಕಾರದ ಬಹಳ ಮುಖ್ಯ ಅಡಳಿತ ಸೂತ್ರಗಳನ್ನು ವಹಿಸಿರುವರೆಂದೂ, ಈರೀತಿ ರಚಿತವಾಗಿರುವ ಸಂಗ್ರಾಮ ಮಂತ್ರಿಮಂಡಲವೇ ನಾನಾ ಶಾಖೆಗಳ ಸಂಬಂಧವನ್ನು ಇಟ್ಟುಕೊಳ್ಳದೆ ಇರುವ ಮಂತ್ರಿಮಂಡಲಕ್ಕಿಂತ ಉತ್ತಮವಾದುದೆಂದೂ, ಈ ನಾನಾ ಶಾಖೆಗಳ ಅಧಿಕಾರವೂ ಬಲವೂ ಅನೇಕ ಸಂದರ್ಭಗಳಲ್ಲಿ ಉಪೇಕ್ಷೆಮಾಡಲ್ಪಡಲು ಸಾಧ್ಯವಿಲ್ಲ ವೆಂದೂ, ಮಹಾಪ್ರಧಾನರೇ ರಕ್ಷಣ ಶಾಖೆಯ ಸಚಿವ ರಾಗಿರಬೇಕೆಂದೂ ಪ್ರತ್ಯೇಕವಾಗಿ ಬೇರೊಬ್ಬ ರಕ್ಷಣ ಸಚಿವರಷ್ಟು ನಿಯಮಿಸಲೇಕಾದ ಸಂದರ್ಭವು ಬಂದೊದಗಿದರೆ ಅಂತಹ ಸಚಿವರು ನೌಕಾ ಶಾಖೆ, ವಿಮಾನ ಶಾಖೆ ಮತ್ತು ಸಂಗ್ರಾಮ ಶಾಖೆಯ ಅಡಳಿತ ಸೂತ್ರಗಳನ್ನು ವಹಿಸಿರ ಬೇಕೆಂದೂ, ಪ್ರಜೆಗಳ ಇಚ್ಛೆಯನ್ನು ತಿರಸ್ಕರಿಸಿ ಅಳವ ನ್ನೊಂದಿಕಾರಿಗಳ ಪ್ರಭುತ್ವವಿರುವ ದೇಶದಲ್ಲಿ ನಾವಿಲ್ಲಿ ಪಾರ್ಲಿಮೆಂಟಿನ ಕರ್ತೃಭೂತವಿದ್ದೇವೆ, ಆದರ ಸ ಲ್ಲಿಚಾರಗಳಿಗೆ ಒಳಪಟ್ಟಿರುವ ಪ್ರಭುತ್ವದ ಅಶ್ರಯ ದಲ್ಲಿ ನಾವು ಜೀವಿಸಿದ್ದೇವೆಂದೂ" ನುಡಿದರು

ಅನಂತರ ಸರ್ಕಾರದ ನಾನಾ ಶಾಖೆಗಳ ಸಂಯುಕ್ತ ಸಚಿವರುಗಳನ್ನು ವಿಷದೀಕರಿಸಿದರು ಆ ಸಮಿತಿಗಳಲ್ಲಿ ವಿಶೇಷದ್ವೇಷ ಸಾಧನೆಗಾಗಿ ಕೆಲಸಮಾಡುವ ಗೌರವಾರ್ಹ ಸದಸ್ಯರಿರ ವೆಂದೂ, ತಾವು ತೆಗೆದುಕೊಳ್ಳುವ ನಿರ್ಧಾರಗಳನ್ನು ತಮ್ಮ ತಮ್ಮ ಪಿಪಿಯೆ ವರು ಬೇಗನೆ ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವ ರೆಂದೂ, ಅಮಿತ ಸಮಿತಿಯಲ್ಲಿ ಸರಬರಾಯಿ, ವಿಮಾನಶಾಖೆ, ಉತ್ಪತ್ತಿ, ನೌಕೆ, ಆಹಾರ ಮತ್ತು ವ್ಯಾಪಾರ ಈ ಸದಸ್ಯರನ್ನೊಳಗೊಂಡ ಸಮಿತಿಯವರು ಅಮದು ಪದಾರ್ಥಗಳನ್ನು ಅತ್ಯಧಿಕ ಪ್ರಮಾಣದಲ್ಲಿ ತರಿಸದೆ ಹೋದರೆ ತಮಗೆ ಬಹು ನಿರಾಶೆಯೂ ಆಶ್ಚರ್ಯವೂ ಆಗುವುದೆಂದೂ, ಹಾಗೆಯೇ ಉತ್ಪತ್ತಿ ಸಮಿತಿಯಲ್ಲಿಯೂ ಸಹ ಮೂರು ಶಾಖೆಗಳ ಪ್ರತಿನಿಧಿಗಳಿರುವರೆಂದೂ, ಅಮೇರಿಕೆಯಲ್ಲಿ ಕೊಳ್ಳಬೇಕಾದ ವಸ್ತುಗಳ ವಿಚಾರವನ್ನು ಕೂಡ ಈ ಸಮಿತಿಯವರೇ ಪರಿಶೀಲಿಸುವರೆಂದೂ, ಇದುವರೆಗೂ ಈ ಸಮಿತಿಗಳವರು ತೃಪ್ತಿಕರವಾಗಿ ಕೆಲಸಮಾಡಿರುವರೆಂದೂ, ಅನುಭವ ಪೂರ್ಣವಾದ ಅನೇಕ ನಿರ್ಧಾರಗಳನ್ನು ತೆಗೆದುಕೊಂಡಿರುವರೆಂದೂ ಸೂಚಿಸಿದರು

ಬ್ರಿಟನ್ನಿನ ಜನಬಲದ ವಿಚಾರವೆತ್ತಿ "ಬ್ರಿಟನ್ನಿನ ರಕ್ಷಣೆಗಾಗಿ, ೪೦ ಲಕ್ಷ ಮಂದಿ ಯೋಧರು ಶಸ್ತ್ರ ಪ್ರಾಣಿಗೆ ಆಗಿ ಯೂನಿಫಾರಂ ಧರಿಸಿರುವರೆಂದೂ, ಬ್ರಿಟನ್ನಿನಲ್ಲಿ ಎಷ್ಟು ಸೈನ್ಯವಿರಬೇಕೆಂಬುದನ್ನು ಗರ್ಹರ್ ರಲ್ಲಿ ಇತ್ಯರ್ಥ ಮಾಡಿದಾಗ, ಆ ಸೈನ್ಯ ಪಡೆಗಳಿಗೆ ಬೇಕಾಗುವ ವಸ್ತುಗ ಳನ್ನು ನಿರ್ಮಾಣ ಮಾಡುವುದಕ್ಕೂ, ತಕ್ಕ ಆಯುಧಗ ಳನ್ನು ತಯಾರು ಮಾಡುವುದಕ್ಕೂ ಅನೇಕಕಾರ್ಖಾನೆಗಳು ಹುಟ್ಟಿಕೊಂಡಿವೆಂದೂ, ಆ ಕಾರ್ಖಾನೆಗಳಿಂದ ಈಗಲೀಗ ಪೂರ್ಣ ಪ್ರಯೋಜನಗಳನ್ನು ಪಡೆಯುತ್ತಿರಲಾಗಿಡೆ ಯೆಂದೂ, ಇನ್ನೂ ಕೆಲವು ಕಾರ್ಖಾನೆಗಳಿಂದ ಪೂರ್ಣ ಪ್ರಯೋಜನವನ್ನು ಪಡೆಯುತ್ತಿಲ್ಲವೆಂದೂ, ಹೊಸ ಹೊಸ ಫ್ಯಾಕ್ಟರಿಗಳಲ್ಲಿ ಹೆಚ್ಚು ಹೆಚ್ಚು ಜನರು ಕೆಲಸ ಮಾಡು ತ್ತಿರುವುದರಿಂದ ಮುಂದಿನ ಆರು ತಿಂಗಳಲ್ಲಿ, ಉತ್ಪತ್ತಿಯು ಹೆಚ್ಚುವುದೆಂದೂ" ಹೇಳಿದರು

ಜನಬಲದ ವಿಚಾರದಲ್ಲಿ, ಕೊರತೆಯುಂಟಾಗುವುದೆಂದು ಪ್ರಥಮ ಸನ್ನಿವೇಶವು ಸದ್ಯದಲ್ಲಿಯೇ ಉಂಟಾಗಬಹು ಸೂಚಿಸುತ್ತ ಜನಬಲದಲ್ಲಿ ಮಿತವ್ಯಯವನ್ನುಂಟುಮಾಡ ಭಿಪ್ರಾಯಪಡಿಸಿದ ಹಲವು ಸಲಹೆಗಳನ್ನು ಮಾಡಿದರು ಳಿಳಿದ ವರ್ಷ ನಡೆದಂತೆ, ಸೈನಿಕರ ಕೊರೆಯಾಗದೆ ಇರ ವುದರಿಂದ ಸೈನ್ಯ ಜನಬಲ ಸಮನ್ವಯ ಅವಶ್ಯ ಉಗ್ರವಾಗಿಲ್ಲವೆಂದೂ, ಅತ್ಯಂತ ಒಲಯುತವಾದ ಮತ್ತು ಆಧುನಿಕ ಶಾಸ್ತ್ರಗಳಿಂದ ಸುಸಜ್ಜಿತವಾದ, ದೇಶಗಳೊಡನೆ ೧೬ ತಿಂಗಳು ಕಾಲ ಯುದ್ಧ ಮಾಡಿ ದ್ದರೂ, ೬೦,೦೦೦ ಜನರಿಗಿಂತ ಹೆಚ್ಚಾಗಿ ಬ್ರಿಟಿಷ್ ಪ್ರಜೆಗಳು ಪ್ರಾಣವನ್ನು ಕಳೆದುಕೊಡಿಕ್ಕಿವೆಂದೂ ಅವ ರಲ್ಲಿ ೩೦,೦೦೦ ಮಂದಿ ಸಿವಿಲ್ ಪ್ರಜೆಗಳೆಂದೂ ಸೂಚಿಸಿದರು ಮುಂದೆ ಬರುವ ೫–೬ ತಿಂಗಳಲ್ಲಿ, ಹೋರಾಟ ನಡೆಸುವ ಶಾಖೆಗಳಿಗಿಂತ ಹೆಚ್ಚಾಗಿ, ಶಸ್ತ್ರಾಸ್ತ್ರಗಳ ಕಾರ್ಖಾನೆಗಳ ಬಲವನ್ನು ಉಪಯೋಗಿಸಿಕೊಳ್ಳುವುದಾಗಿ ಸೂಚನೆ ಮಾಡಿದರು. ಬ್ರಿಟನ್ನಿನ ಸಂಗ್ರಾಮ ಪ್ರಯತ್ನವು ಇನ್ನೂ ಕೂಡಿನೆಯನ್ನು ಮುಟ್ಟಿಲ್ಲವೆಂದೂ, ಲಿಬಿಯದಲ್ಲಿ ಜಯವು ದೊರೆತಿರುವುದರ ಜೊತೆಗೆ, ಅಬಿಸೀನಿಯ ಮತ್ತು ಇರಿಟ್ರಿಯ ಗಡಿಗಳಲ್ಲಿ ಬಹಳ ಮುಖ್ಯವಾದ ಫಲಿತಗಳು ನಡೆಯುತ್ತಿರುವುದೆಂದೂ, ಈ ಫಲಿತಾಂಶಗಳಿಗಿಂತ ಫಲವಾಗಿ ಬಹಳ ಅನುಕೂಲವಾದ, ಪರಿಸ್ಥಿತಿಯು ಸ್ಪಷ್ಟವಾಗಿ ಬಹ.ದೆಂದೂ ಹೇಳಿದರು

ಭಾರತದ ಬಗ್ಗೆ
ಭಾರತ ಸೆಕ್ರೆಟರಿಗಳ ಹೇಳಿಕೆ

ಭಾರತದ ಸೆಕ್ರೆಟರಿಗಳಾದ ಅಮೆರಿಯವರು 'ಗ್ರೇಟ್ ಬ್ರಿಟನ್ ಅಂಡ್ ಈಸ್ಟ್' ಪತ್ರಿಕೆಯ ಸಂಪಾದಕರಾದ ಸರ್ ಆಲ್ಫ್ರೆಡ್ ವಾಟ್ಸನ್‌ರವರಿಗೆ ಹೇಳಿಕೆಕೊಡುತ್ತ—

ಭಾರತದ ನಿಜವಾದ ಸಮಸ್ಯೆಯು ಭಾರತೀಯರೇ ಬಗೆಹರಿಸಿಕೊಳ್ಳುವಂತಹದೆಂದೂ, ಸಂಗ್ರಾಮವು ಮುಗಿದ ನಂತರ ಭಾರತೀಯರಿಗೆ ವಿಶೇಷಾಧಿಕಾರವನ್ನು ಕೊಡುವು ದಕ್ಕೆ ಅಡ್ಡಿಬರುವ ವಿಧಿನಿಯಮಗಳೇನೂ ರಾಜ್ಯಾಂಗ ವ್ಯವಸ್ಥೆಯಲ್ಲಿಲ್ಲವೆಂದೂ, ಭಾರತದ ಶಾಂತಿಪಾಲನೆಯೂ ಭಾರತೀಯರ ಹಿತರಕ್ಷಣೆ ಮಾಡುವ ಜವಾಬ್ದಾರಿಯೂ ಬ್ರಿಟಿಷ್ ಸರ್ಕಾರಕ್ಕೆ ಸೇರಿದ್ದೆಂದೂ, ಅದು ಹಿಂದಿ ನಿಂದಲೂ ಬಂದಿರುವ ಜವಾಬ್ದಾರಿಯೆಂದೂ, ಭಾರತದ ರಾಷ್ಟ್ರೀಯ ಜೀವನದಲ್ಲಿರುವ ಪ್ರಮುಖ ಪ್ರಶ್ನೆಗಳು ಉಗ್ರವಾಗಿ ಪ್ರತಿಭಟಿಸತಕ್ಕ ಯಾವ ರಾಜ್ಯಾಂಗ ವ್ಯವ ಸ್ಥೆಗೂ ಆ ಜವಾಬ್ದಾರಿಯನ್ನು ಬ್ರಿಟಿಷ್ ಸರ್ಕಾರವು ಬಿಟ್ಟುಕೊಡಲು ಸಾಧ್ಯವಿಲ್ಲವೆಂದೂ" ಸೂಚಿಸಿದರು

ಭಾರತದ ನಾನಾ ಪಕ್ಷಗಳಿಂದ ಸಹಕಾರವನ್ನೂ ಸಹಾಯವನ್ನೂ ಪಡೆಯಲು ಇಂದಿನ ರಾಜ್ಯಾಂಗ ವ್ಯವ ಸ್ಥೆಯು ಎಷ್ಟು ದೂರ ಮುಂದೆ ಹೋಗಿರುವುದೆಂಬ ವಿಚಾ ರವನ್ನು ವಿಮರ್ಶಿಸುತ್ತ—" ಸಂಗ್ರಾಮವನ್ನು ಯಶಸ್ವಿ ಯಾಗಿ ಮುಂದುವರಿಸಿಕೊಂಡು ಒರುವುದಕ್ಕೆ ಭಾರತದ ಪ್ರಮುಖ ರಾಜಕೀಯ ಸಂಗಡಗಳ ಶ್ರಾಯಿಕರಿಗೆ ಅವ ಕಾಶವನ್ನು ಕೊಟ್ಟಿದ್ದಲ್ಲದೆ, ಅನುಕೂಲವಾದ ಭಾರತದ ರಾಜ್ಯಾಂಗ ವ್ಯವಸ್ಥೆಯನ್ನು ರೂಪುಗೊಳಿಸುವುದಕ್ಕೆ ಬೇಕಾದ ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಲು ಅವಕಾಶವನ್ನು ಒದಗಿಸಿಕೊಡುವುದಾಗಿ ನಾವಿ ಧರವ ಶತ್ತಿದ್ದೆವು ನಾವುಜೀವಗಳ ಪ್ರಜ್ಞೆಯು ನಮ್ಮ ಮುಂದೆ ಇದ್ದು ಭಯಂಕರ ಹೋರಾಟವನ್ನು ನಡೆಸುತ್ತಿರುವ ಇಂದಿನ ವಿಷಮ ಸನ್ನಿವೇಶದಲ್ಲಿ ಭಾರತಮಂತ್ರಾಲೋ ಚನ ಸಭೆಯಲ್ಲಿ ಹೆಚ್ಚು ನ ವಿ ಭಾರತೀಯರೇ ಇರು ವಂತೆ, ಅವಕಾಶವನ್ನು ಕಲ್ಪಿಸಿಕೊಡುವುದಾಗಿ ನಾವು

ಮಾಡಿದ ಸೂಚನೆಯು, ಬಹಳ ಮುಂದುವರಿದ ಸೂಚನೆಯೇ ಆಗಿರುವುದರಲ್ಲಿ ಯಾವ ಸಂದೇಹವೂ ಇಲ್ಲ ಸಂಸ್ಥಾನದ ಮಧ್ಯಪ್ರಜ್ಞೆಯ ಭಾರತದ ರಾಜ್ಯಾಂಗ ವ್ಯವಸ್ಥೆಯ ರೂಪವನ್ನೇ ಬದಲಾಯಿಸಿ ಹೊಸ ವ್ಯವಸ್ಥೆಯನ್ನು ಆಚರಣೆಗೆ ತರುವುದು ಅನುಚಿತವೂರ್ಣವಾದ ಆಲೋಚನೆಯೆಲ್ಲವೆಂದು ಹೇಳಿದರು

"ವೈಸರಾಯರ ಇಂದಿನ ಮಂತ್ರಿಮಂಡಲದಂತೆ ವಿಶಾಲಗೊಳಿಸಲ್ಪಡುವ ಮಂತ್ರಿಮಂಡಲವು ಕಾಡ ಸಾಮಾನ್ಯ ಹಿಕವಾಗಿ ಬಹಳ ಮುಖ್ಯವಾದ ಜವಾಬ್ದಾರಿಯನ್ನು ವಹಿಸಿರುವುದಿಲ್ಲವೆಂದು ಕಲವು ನುಂದಿ ಬ್ರಿಟಿಷ್ ರಾಜಕೀಯ ಟೀಕಾಕಾರರೂ ಬ್ರಿಟಿನ್ನಿನ ಟೀಕಾಕಾರರೂ ಒತ್ತಿ ಹೇಳಿ ತ್ತಿರುವುದು ಸರಿಯಲ್ಲ ಅದು ಕಪ್ಪುಪ್ರಾಯವಿಲ್ಲದ ಕೂಡಿದು ವುದಾಗಿದೆ ಮಂತ್ರಿಗಳಿಗೆ ಹೆಚ್ಚಿನ ಜವಾಬ್ದಾರಿಯ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವಕಾಶವಿಲ್ಲವೆಂದು ಹೇಳುವುದು ಸಹ ಸರಿಯಲ್ಲ ಈಗಿನ ನೀತಿಯ ಮಾತು ಹಾಗಿರಲಿ ಮಂತ್ರಿ ಡಲವು ಸಲುವ ಗಳಿಗೆ ಬ್ರಿಟಿಷ್ ಸರ್ಕಾರವು ಪನ್ನೆಲ್ಲಾಡಿಸಿ ಇಂಥ ದಿಲ್ಲ ವಂತ್ರಿಮಂಡಲವು ವಿಸ್ತಾರಗೊಳ್ಳಲು ಕಾ ಹಾಗೆಯೇ ಮುಂದುವರಿಸಿ ಹೆಚ್ಚಿನ ಅಧಿ ಗಲೂ ಕೂಡ ಪ್ರಿಟಿಷ್ ಸರ್ಕಾರವು ನಿರ್ವಹಿ ನೆಯ ಉದಾಹರಣೆಯನ್ನು ಯೋಜನೆಯ ಗತ್ತಿಲ್ಲ ಯೋಜನೆಯ ಸೂಚನೆಯಲ್ಲಿ ಬಂಗಾಳದ ವಾಣಿಜ್ಯ ಸಚಿವರು ಇಂಥ ವಂತೆ ಬ್ರಿಟಿಷ್ ಸರ್ಕಾರವು ಇಂಡಿಯೀ ಇರುವುದು ಈ ಬಹುದು ಭಾರತದ ಕಾಮ ಶಕ್ತಿ ಮೀರಿ ನಡಿಸಲು

ಜಾತಿ ಪತ್ರ ಸಮಸ್ಯೆ

ಇಂದಿನ ಸರಿಸ್ಥಿತಿಯ ಸಮಸ್ಯೆ ತೀರಿಸಬೇಕೆ ದೊ ಪ್ರಮುಖ ಸಮಸ್ಯೆಗಳಿಗೆ ಜಯವಾದರೆ ಕಾಣಿಸಿಕೊಳ್ಳುವ ಮಣ್ಣುಗೂಡವಾದ ಸಮಸ್ಯೆ ತಿಳಿದಿರುವರೆ ದೇ ಹೇಳಿದರು

ಸ್ತ್ರೀಯರಿಗೆ ವಿಶೇಷ ಸಂಚಿಕೆ

ಚಿತ್ತಾರ

ಸಾಮಾನ್ಯ ಸೂಚನೆ

ಪ್ರತಿ ವಿಷಯಕ್ಕೂ ಸಂಬಂಧಪಟ್ಟಂತೆ ಹೆಚ್ಚು ಹೇಳಿದೆ ಯಾವ ಚಿತ್ರಕ್ಕೂ ಪ್ರಥಮ ಪ್ರಶಸ್ತಿಯನ್ನು ಒದಗುವುದೋ ಆ ಪ್ರಥಮ ಪ್ರಶಸ್ತಿಯ ಚಿತ್ರವನ್ನು ಪ್ರಕಟಿಸಲಾ ಬಹುದು

ವೈದ್ಯರನ್ನು ಕರೆಯಿಸಬೇಕಾದುದೇ ಪ್ರಮುಖ ಕರ್ತವ್ಯ ಯಾತಕ್ಕಾಗಿ ಅವರನ್ನು ಕರಯ ಸತ್ತೆನೆ ಬದನ್ನು ಅವರಿಗೆ ತಿಳಿಸಿಸಬೇಕು

ಹಾವಿನ ವಿಷಕ್ಕೆ

1 ಕಚ್ಚಿದ ಗಾಯದಿಂದ ಮೇಲಕ್ಕಾ ಒಂದರಮೇಲೊಂದು ಎರಡು ಕಟ್ಟುಗಳನ್ನು ದಾರದಿಂದಾಗಲೀ ಮಡಿಸಿದ ಬಟ್ಟೆಯಿಂದಾಗಲೀ ಕಟ್ಟಬೇಕು ಗಾಯದಮೇಲೆ ಬಿಸಿ ನೀರನ್ನು ಹೊಯ್ಯಬೇಕು ಶುದ್ಧವಾದ ಚಾಕುವಿನಿಂದ ಕಚ್ಚಿದ ಗಾಯದಲ್ಲಿ ಲೋಡಿಸಿ ಕತ್ತರಿಸಿ ಗಾಯವಾಗಬೇಕು ಇಗರ ಔಷಧಿಗಳನ್ನು ತರುವವರೆ ಗಿಗೂ ಆರೋಗ್ಯವಾಗಿರುವವನೊಬ್ಬನ ಬಾಯಿ ಉಗುಳು ಮತ್ತು ಕಿವಿಯ ಗುಗ್ಗೆ ಇವೆರಡನ್ನೂ ಗಾಯದಮೇಲೆ ಹಾಕಿ ಉಜ್ಜುತ್ತಿರಬೇಕು

2 ಸುಮಾರು ಅರ್ಧ ರೂಪಾಯಿ ತೂಕದಷ್ಟು ಬಲಿತ ಕಾರೆಮರದ ಬೇರನ್ನು ಒಂದೂಕಾಲುರೂಪಾಯಿತೂಕ ದಷ್ಟು ನಿಂಬೇಹಣ್ಣಿನ ರಸದಲ್ಲಿ ತೇದು ಕುಡಿಯಬೇಕು ಅಲ್ಲದೆ ಗಟ್ಟಿಯಾದ ಇದೇ ಗಂಧವನ್ನೇ ಗಾಯದಮೇಲೆ ಉಜ್ಜುತ್ತಿರಬೇಕು ಈ ರೀತಿ ಅರ್ಧಘಂಟೆಗೊಂದಾವರ್ತಿ ಮೂರುತಾಲ್ಕುತಾರಿ ಹೊಟ್ಟೆಗೂ ಕೊಟ್ಟು ಮೇಲೆಯೂ ಉಜ್ಜಬೇಕು ಹೊಟ್ಟೆಗೆ ಕಡಿಯಲಾಗದಿದ್ದರೆ ತಲೆಯ ನೆತ್ತಿಯ (ಮೂರ್ಧ) ಮೇಲೆ ಶುದ್ಧವಾದ ಚಾಕುವಿನಿಂದ ಗಾಯಮಾಡಿ ಆ ಗಾಯಕ್ಕೂ ಕಚ್ಚಿದ ಗಾಯಕ್ಕೂ ನಿಂಬೇರಸದಲ್ಲಿ ತೇದ ಕಾರೆಮರದ ಗಂಧವನ್ನು ಉಜ್ಜುತ್ತಿರಬೇಕು

3 ಪತ್ರಜೀವಿ ಬೀಜದ ಒಳಗಿನ ಹಪ್ಪು 15 ನ್ನು ಸುಮಾರು ಎರಡೂವರೆ ರೂಪಾಯಿ ತೂಕದಷ್ಟು ತಣ್ಣೀರಿನಲ್ಲಿ ತೇಗ ಕುಡಿಯಲೀಕು ಕಚ್ಚಿದ ಗಾಯದಮೇಲೆ ಬೀಜದ ಪಪ್ಪನ್ನು ನಿಂಬೇಹುಳಿಯಲ್ಲಿ ತೇದು ಗಂಧವನ್ನು ಗಟ್ಟಿಯಾಗಿ ಪೂಡಿ ಉಜ್ಜುವುದು ಎರಡು ಕಣ್ಣುಗಳಿಗೂ ಇಪನ್ನೇ ಅಂಜನ ಹಾಕುವುದು ಎರಡು ಮೂಗಿನ ಹೊಳ್ಳೆಗಳಿಗೂ ನಿಂಬೆಹುಳಿ ಇದೇ ಗಂಧವನ್ನು ಹಚ್ಚಿಕವುದ ಇದೇ ರೀತಿ ಎರಡು ಘಂಟೆಗಳ ಕಾಲಬೆರೆಸಿ ಮೂರಾವರ್ತಿ ಮಾಡುವುದು

4 ಹೆಸರಿನ ಕಂಬಳಿ ಮಾಡಿನ ಎಳಸಾರ 1 1½ ರೂಪಾಯಿ ತೂಕದಷ್ಟು ತಣ್ಣೀರಿನಲ್ಲಿ ಅರೆದು ಕುಡಿಸುವುದು ಸಾಧ್ಯವಾಗಿನ ಎರಡು ಹೊಳ್ಳೆಗಳಿಗೂ ನಾಲ್ಕಾರು ಹನಿ ಹಾಕುವುದು ಇದೇ ರೀತಿ ಅರ್ಧಘಂಟೆಗೊಂದಾವರ್ತಿ ಎಂಟು ಪಾರಿ ಮಾಡುವುದು

(1) ಎಳವರಿ ಎಂದು ಭಾಗಗಳನ್ನು ಒಂದು ಎಳೆ ಬೆರಿ ಎಲಚಿ ಬೆರಿಯ ಮೊಳಕೆ ತೋಟಿ ಪಲ್ಲವ ಸಮಾನಾರು ಕೊಲುರೂಪಾಯಿ ತೂಕದಷ್ಟನ್ನು ಎಂಟು ಔನ್ಸು ರೂಪಾಯಿ ತೂಕ ನೀರಿನಲ್ಲಿ ಅರೆದು ಕೊಡಿಸಿದ ನೀರನ್ನು ಕುಡಿ ಎಳೆಗೆ ಅದರಷ್ಟೇ ಪ್ರಮಾಣ ನೀರನ್ನು ಸಾರಿ ತಿಳಿ ಬಾಗಿದ್ದಾಗ ಪ್ರತಿಭಾಗವೂ ಸುಮಾರು ಅರ್ಧ ಔನ್ಸು ಸುಮಾರು ಐದುರೂಪಾಯಿ ತೂಕವಾಗಿರುವಂತೆ ಅಂದು ಲೆಕ್ಕಿಸಿ ಕುಡಿಸುವುದು

(2) ಮಾವಿನ ಎಲೆ (ತೀಕ್ಷ್ಣವೃಕ್ಷ) ಹೂವಿನ ಎಸಳು ವೆಣಸನ್ನು ಎಳದಿನ ನೆನೆಯಿಸುವುದು ಕಾಯಿ ಮೆಣಸಿನ ಪೇಲಿನ ಸಿಪ್ಪೆಯನ್ನು ಉಜ್ಜಿದರೆ ಬರುವ ಗಂಧವನ್ನು ಪ್ರತಿದಿನ ಹೊದಾದ ಹಣೆಯಲ್ಲಿ ಗಂಧವನ್ನು ಇಡಬೇಕು ಈ ರೀತಿಯಾಗಿ ನೆನೆಯಿಸಿದ ಪೆಪ್ಪರ 1 ½ ನ್ನು ಸುಮಾರು ಎರಡೂವರೆ ರೂಪಾಯಿ ತೂಕ ತಣ್ಣೀರಿನಲ್ಲಿ ಅರೆದು ಕುಡಿಯಿಸುವುದು ಕಣ್ಣುಗಳಿಗೆ ಅಂಜನವಿಕ್ಕುವುದು ಮೂಗಿನ ಹೊಳ್ಳೆಗಳಿಗೂ ನಿಬ್ಬರು ತೊಟ್ಟು ಹಾಕುವುದು

ನಿಗ್ಗೇಮರದ ಬೀಜದ ವಿಶಕ್ಕೆ ಇದೇರೀತಿ ಮಾಡಿ ಉಪಯೋಗಿಸಬಹುದು

7 (a) ಬಾಗೇಮರದ ಒಣಗಿದ ಬೀಜವನ್ನು ಎಕ್ಕದ ಹಾಲಿನಲ್ಲಿ ಮೂರು ದಿನ ನೆನೆಯಿಸಿ ಒಣಗಿಸಿ ಪುಡಿಮಾಡಿಕೊಳ್ಳುವುದು ಈ ಪುಡಿಗೆ ಸಮತೂಕ ಹಿಪ್ಪಲಿ ಪುಡಿಯನ್ನು ಚೆನ್ನಾಗಿ ಬೆರಸಿ ಇಟ್ಟುಕೊಳ್ಳುವುದು ಈ ಚೂರ್ಣ 8 10 ಚಿಟಿಕೆಯಷ್ಟನ್ನು ಸುಮಾರು ನಾಲ್ಕುರೂಪಾಯಿತೂಕ ತಣ್ಣೀರಿನಲ್ಲಿ ಅರದು ಕುಡಿಯಿಸುವುದು ಅರ್ಧಘಂಟೆಗೊಂದಾವರ್ತಿ ನಾಲ್ಕುಸಾರಿ ಕೊಡಬೇಕು

6 ಒಂದು ರೂಪಾಯಿತೂಕ ಒಳ್ಳೆಯ ಹೊಗೆಸೊಪ್ಪನ್ನು ಸುಮಾರು ಹತ್ತರೂಪಾಯಿತೂಕ ತಣ್ಣೀರಿನಲ್ಲಿ ಕಿವುಚಿ ರೋಡಿಸಿಕೊಳ್ಳುವುದು ಈ ರೋಡಿಸಿದ ನೀರಿನಲ್ಲಿ ಅರ್ಧಭಾಗವನ್ನು ಕುಡಿಯಿಸುವುದು ಅನೇಕ ಸಾರಿ ವಾಂತಿಯಾಗಿ ಗುಣವಾಗಬಹುದು ಕಾಲು ಅರ್ಧ ರೂಪಾಯಿತೂಕ ಒಳ್ಳೆಯ ನಶ್ಯವನ್ನಾದರೂ ಹೀಗೆಯೇ ಮಾಡಬಹುದು

7 (1) ಹೆಸಿಯ ಅರಿಸಿನ ಸುಮಾರು ಒಂದು ರೂಪಾಯಿ ತೂಕದಷ್ಟನ್ನು ಸುಮಾರು ಅರೆಪಾವು ಹಾಲಿನಲ್ಲಿ ಅರೆಸಿ ಕದಡುವುದು (ಹೆಸುವಿನ ಅಥವಾ ಎಮ್ಮೆಯ ಹಾಲು) ಇದಕ್ಕೆ ಅರೆಪಾವು ನೀರು ಬೆರೆಸಿ ಅರೆವಾಸಾಗುವಂತೆ ಇಂಗಿಸಿ ಕುಡಿಯಿಸುವುದು ಒಂದು ಘಂಟೆಗೊಂದಾವರ್ತಿಯಂತೆ ಮೂರು ಸಾರಿ ಕೊಡಬೇಹುದು ಒಂದು ರೂಪಾಯಿತೂಕ ಅರಿಸಿನದ ಪುಡಿಯೂ ಆಗಬಹುದು ಅವರೆ ಹಸಿಯ ಅರಿಸಿನವೇ ಉತ್ತಮ

7 (b) ಒಂದು ರೂಪಾಯಿ-ತೂಕ ಅರಿಸಿನದಪುಡಿಯನ್ನು ಸುಮಾರು ಎರಡುವರೆ ಅಥವಾ ಮೂರು ರೂಪಾಯಿತೂಕ ಶೋಧಿಸಿದ ಗೋಮೂತ್ರದಲ್ಲಿ ಕಡಿಮೆ ಕುಡಿಯಿಸುವುದು. ಅರ್ಧಘಂಟೆಗೊಂದಾವರ್ತಿ ಮೂರುಸಾರಿ ಕೊಡಬಹುದು

8 ತುಂಬೆಎಲೆರಸ, ತುಲಸೀಎಲೆರಸ ಸಮಭಾಗ ಸೇರಿಸಿ ಇದರಲ್ಲಿ ನಾಲ್ಕಾರು ಮೆಣಸನ್ನು ಅರೆದು ಮೂಗಿನ ಹೊಳ್ಳೆಗಳಿಗೆ ನಾಲ್ಕಾರು ಕೊಟ್ಟು ಹಾಕುವುದು ಅರ್ಧಘಂಟೆಯ ಅಂತರ ಇನ್ನೊಂದಾವರ್ತಿ ಹಾಕುವುದು

ತಲೆಯ ನೆತ್ತಿಯನ್ನು ಶುದ್ಧವಾದ ಚಾಕು-ವಿನಿಂದ ಗೀರಿ ಆ ಗಾಯದಮೇಲೆ ತುಂಬೆಎಲೆ ರಸವನ್ನು ಉಜ್ಜುತ್ತಿರುವುದು ಕಚ್ಚಿದ ಗಾಯದಮೇಲೆ ಬಿಸಿ ಮಾಡಿದ ತುಂಬೆ ಎಲೆಗಳನ್ನು ಕಟ್ಟುವುದು. ಹೊಟ್ಟೆಯೊಳಗೆ ಕೊಡಬಹುದಾಗಿ ಬರೆದಿರುವ ಯಾವ ಔಷಧಿ ದೊರೆತರೂ ಅದನ್ನು ಕೊಡಬಹುದು

9 ಇಳಿಶಿಂಗಿ ಹೆಂಬು (ಬಲಿತಬಳ್ಳಿ) ಅರ್ಧ ಅಥವಾ ಮುಕ್ಕಾಲು ರೂಪಾಯಿ ತೂಕದಷ್ಟನ್ನು ನಿಂಬೇಹಣ್ಣಿನ ರಸದಲ್ಲಿ ತೇದು ಕುಡಿಸುವುದು ಅರ್ಧಘಂಟೆಗೊಂದಾವರ್ತಿ ಮೂರುಸಾರಿ ಕುಡಿಯಿಸಬಹುದು

10 ಕೆಂಪು ನೆನೆಕಿಡ್ಡಿ ಗಿಡದ ಎಲೆಗಳು ಒಣಗಿದ್ದು ಎರಡು ತೂಕ, ತುಂಬೆಎಲೆ ಒಣಗಿದ್ದು ಒಂದು ತೂಕ, (ನೆಲಲಿನಲ್ಲಿ ಒಣಗಿಸಿರಬೇಕು) ಎರಡನ್ನೂ ಕುಟ್ಟಿ ಚೂರ್ಣಮಾಡಿ ಮರದ ಭರಣಿಯಲ್ಲಿ ಇಟ್ಟುಕೊಳ್ಳಬೇಕು ಕಹಿಸೋರೆಬುರುಡೆಯಷ್ಟಿಟ್ಟಿರಲಿ ಗುಣವು ಹೆಚ್ಚು ಈ ಚೂರ್ಣ ಕಾಲುರೂಪಾಯಿ ತೂಕವನ್ನು ಸುಮಾರು ಎರಡೂವರೆ ರೂಪಾಯಿತೂಕ ತಣ್ಣೀರಿನಲ್ಲಿ ಹಾಕಿ ಕುಡಿಯಿಸುವುದು ಬಹಳ ಒಳ್ಳೆಯ ಔಷಧ. ಅರ್ಧಘಂಟೆಗೊಂದಾವರ್ತಿ ಎರಡು ಸಾರಿ ಕೊಡುವುದು ಔಷಧವನ್ನು ಕುಡಿಯಲಾಗದಿದ್ದರೆ ಚೂರ್ಣವನ್ನು ಮೂಗಿನ ಎರಡು ಹೊಳ್ಳೆಗಳಿಗೂ ಜೋರಾಗಿ ಉರುಬು (ಊದು) ವುದು

ಜಾಡ್ಡಿ, ಹಲ್ಲಿ, ಸಾವಿರಕಾಲು ಇತ್ಯಾದಿ ವಿಷಗಳಿಗೆ

11 ಮೇಲೆ ನಮೂದಿಸಿರುವ 5 (c) ಔಷಧವೇ ಆಗುತ್ತದೆ ಆರು ಘಂಟೆಗೊಂದಾವರ್ತಿ ದಿನಕ್ಕೆ ಎರಡು ಸಾರಿ ಕೊಡುವುದು. ಮೂರು ದಿವಸ ಕೊಟ್ಟರೆ ಸಾಕು

12 ಮೇಲೆ ನಮೂದಿಸಿರುವ 7 (a) ಅಥವಾ 7 (b) ಔಷಧವೇ ಆಗುತ್ತದೆ ಆರು ಘಂಟೆಗೊಂದಾವರ್ತಿ ದಿನಕ್ಕೆ ಎರಡು ವೇಳೆ ಮೂರು ದಿವಸ ಕೊಟ್ಟರೆ ಸಾಕು

13 ಇಳಿಶಿಂಗಿ ಹೆಂಬು ಅರ್ಧ ಅಥವಾ ಮುಕ್ಕಾಲು ರೂಪಾಯಿ ತೂಕದಷ್ಟನ್ನು ನಿಂಬೇ ಹುಳಿಯಲ್ಲಿ ಅರೆದು ಕಡಿಯಿಸುವುದು ಆರು ಘಂಟೆಗೊಂದಾವರ್ತಿ ದಿನಕ್ಕೆ ಎರಡು ವೇಳೆ ಮೂರು ದಿನ ಕೊಟ್ಟರೆ ಸಾಕು

ನಾಯಿಯ ವಿಷಕ್ಕೆ

14 ಹಾವಿನ ವಿಷಕ್ಕೆ ಕಟ್ಟುವಂತೆಯೇ ಗಾಯದಿಂದ ಮೇಲಕ್ಕೆ ಎರಡು ಕಟ್ಟುಗಳನ್ನು ಕಟ್ಟಿ ಗಾಯಕ್ಕೆ ಬಿಸಿನೀರನ್ನು ಹಾಕುವುದು ಗಾಯದ ಮೇಲೆ ಕೋಳಿಯ ಮಲವನ್ನು ಅರೆದು ಹೆತ್ತಿ ಹದರ ಮೇಲೆ ವಿಳ್ಳೇದೆಲೆ ಅಥವಾ ಹಾಗಲದ ಎಲೆ ಇಟ್ಟು ಕಟ್ಟುವುದು ದಿನಕ್ಕೆ ಒಂದೇ ವೇಳೆ 5 ಅಥವಾ 7 ದಿವಸ ಕೊಟ್ಟರೆ ಸಾಕಾಗುವುದು

15 ಮೇಲೆ ನಮೂದಿಸಿರುವ 13 ನೇ ನಂಬರು ಔಷಧವೇ ಆಗುತ್ತದೆ ಹೆಂಬನ್ನು ನಿಂಬೇಹುಳಿಯಲ್ಲಿ ತೇದು ಹೊಟ್ಟೆಯೊಳಕ್ಕೆ ಕೊಡುವುದು ಗಾಯಕ್ಕೂ ಹಾಕುವುದ 5—7 ದಿವಸ ಕೊಟ್ಟರೆ ಸಾಕಾಗುವುದು

16 ಉತ್ತರಣಿ ಗಿಡದ ಬೇರು ಸುಮಾರು ಎರಡು ರೂಪಾಯಿ ತೂಕದಷ್ಟು 7 8 ರೂಪಾಯಿ ತೂಕದಷ್ಟು ತಣ್ಣೀರಿನಲ್ಲಿ ಅರೆದು ರೋಡಿಸಿದ ನೀರಿನಲ್ಲಿ ಸುಮಾರು ಅರ್ಧ ರೂಪಾಯಿ ತೂಕ ಜೇನುತುಪ್ಪವನ್ನು ಹಾಕಿ ಕುಡಿಯಿಸುವುದು ದಿನಕ್ಕೆ ಒಂದೇ ವೇಳೆಯಂತೆ 5 ಅಥವಾ 7 ದಿವಸ ಕೊಟ್ಟರೆ ಸಾಕಾಗುವುದು

ಗಾಯದಮೇಗೆ ಹಾಕುವುದಕ್ಕೆ ಮೇಲ್ಕಂಡ 14 ನೇ ನಂಬರು ಔಷಧವೇ ಆಗುತ್ತದೆ

ಇಂಡಿಯ ವಿಷಕ್ಕೆ

17 ಸುಮಾರು ಎರಡೂವರೆ ರೂಪಾಯಿ ತೂಕ ಬೇಲದಸೊಪ್ಪನ್ನು ಒಂದು ಆಳತೆ ಕೇರು ನೀರಿನಲ್ಲಿ ಹಾಕಿ ಅರೆಪಾವು ಉಳಿಯುವಂತೆ ಕಷಾಯ. ಕಾಯಿಸಿ ಶೋಧಿಸಿ ಕೊಳ್ಳುವುದು ಈ ಅರೆಪಾವು ಕಷಾಯಕ್ಕೆ ಸುಮಾರು 1 1½ ರೂಪಾಯಿ ತೂಕ ಅಚ್ಚಿಬೆಲ್ಲವನ್ನು ಹಾಕಿ ಕುಡಿಯಿಸುವುದು ದಿನಕ್ಕೆ ಒಂದೇ ಬೇಳೆ 5 ಅಥವಾ 7 ದಿವಸ ಸಾಕಾಗುವುದು

18 ಶಾಲ್ಯು ಚಿಪ್ಪಿದ ಜೀಜದ ತಿರುಳನ್ನ ಸುಮಾರು ಐದು ರೂಪಾಯಿ ತೂಕ ಹಸುವಿನ ಮಜ್ಜಿಗೆಯಲ್ಲಿ ಅರೆದು ಕುಡಿಯಿಸುವುದು ದಿನಕ್ಕೆ ಒಂದೇ ನೇಳೆ 5 ಅಥವಾ 7 ದಿವಸ ಕೊಟ್ಟರೆ ಸಾಕಾಗುವುದು

19 ಮೇಲ್ಕಂಡ 1ಂ ನೇ ನಂಬರು ಔಷಧವೇ ಆಗುತ್ತದೆ

20 ಮೇಲ್ಕಂಡ 5 (c) ನೇ ನಂಬರು ಔಷಧವೇ ಆಗುತ್ತದೆ

ಚೇಳಿನ ವಿಷಕ್ಕೆ

21 ಅರಿಸಿನದ ಪುಡಿಯನ್ನು ಕೆಂಡದ ಮೇಲೆ ಹಾಕುವುದು ಆ ಹೊಗೆಯಲ್ಲಿ ಚುಚ್ಚಿದ ಜಾಗವನ್ನು ಕಾಯಿಸುವುದು ಆ ಹೊಗೆಯನ್ನೇ ಸ್ವಲ್ಪ ಸ್ವಲ್ಪ ಮೂಗಿಗೂ ಸೇದುವುದು ಕೆಲವು ನಿಮಿಷಗಳ ಮೇಲೆ ಪುನಃ ಇದೇ ರೀತಿ ಗುಣವಾಗುವವರೆಗೆ ಮಾಡ ವುದು

22 ಬಲಿತ ಕಾಡೇಮರದ ಬೇರು ಸುಮಾರು ಅರ್ಧ ರೂಪಾಯಿ ತೂಕದಷ್ಟನ್ನು ನಿಂಬೇಹುಳಿಯಲ್ಲಿ ತೇದು ಕುಡಿಸುವುದು ಚುಚ್ಚಿದ ಜಾಗಕ್ಕೂ ಲೇಪಿಸುವುದು ಅವಶ್ಯಕವಾದರೆ ಅರ್ಧ ಘಂಟೆಯ ಮೇಲೆ ಇನ್ನೊಂದಾವರ್ತಿ ಹೀಗೆಯೇ ಮಾಡುವುದು

23 ಆರೋಗ್ಯವಾಗಿರುವವನೊಬ್ಬನು ಒಂದು ವಿಳ್ಳೇದೆಲೆಯನ್ನ ಚೆನ್ನಾಗಿ ಬಾಯಿಯಲ್ಲಿ ಅಗಿದು ಬಾದ ಎಂಜಲನ್ನು 3 4 ತೊಟ್ಟು ಚೇಳು ಚುಚ್ಚಿದವನ ಕಿವಿಗೆ ಹಾಕುವುದು ಶರೀರದ ಒಳಭಾಗದಲ್ಲಿ ಚುಚ್ಚಿದ್ದರೆ ಎಡವ ಕಿವಿಗೆ, ಎಡಭಾಗದಲ್ಲಿ ಚುಚ್ಚಿದ್ದರೆ ಬಲವ ಕಿವಿಗೆ ಹಾಕುವುದು ವಿಳ್ಳೇದೆಲೆಗೆ ಸುಣ್ಣ, ಆಡಿಕೆ ಸೇರಿಸ ಬಾರದು ಇದು ಬಹಳ ಒಳ್ಳೆಯ ಯೋಗ

24 ಉತ್ತರಣಿ ಎಲೆಗಳನ್ನು ಅರೆದು ಚುಚ್ಚಿದ ಜಾಗಕ್ಕೆ ಮೆತ್ತುವುದು

25 ಚುಚ್ಚಿದ ಜಾಗಕ್ಕೆ ಸ್ವಲ್ಪ ಪಣ್ಣಿನ್ನು ಸವರಿ ಅದರ ಮೇಲೆ ಸ್ವಲ್ಪ ನವಸಾಗರವನ್ನು ಉಜ್ಜುವುದು. ಆ ಮಾಸಲೆಯನ್ನೇ ಸ್ವಲ್ಪ ಮೂಗಿಗೆ ಸೇದಿಸುವುದು

26 ಶತ್ರಜೀವಿ ಬೀಜದ ತಿರುಳು, ಮುತ್ತುಗದ ಬೀಜದ ತಿರುಳು, ಹೊಂಗೆ ಬೀಜದ ತಿರುಳು ಸಮತೂಕವನ್ನು ನೀರಿನಲ್ಲಿ ಅರೆದು ಬತ್ತಿಯಂತೆ ಮಾಡಿ ಒಣಗಿಸಿಟ್ಟು ಕೊಳ್ಳುವುದು ಈ ಬತ್ತಿಯನ್ನು ನೀರಿನಲ್ಲಿ ತೇದು ಚುಚ್ಚಿದ ಜಾಗಕ್ಕೆ ಲೇಪಿಸುವುದು

27 ಸುಮಾರು ಎರಡೂವರೆ ರೂಪಾಯಿ ತೂಕ ಎಮ್ಮೆ ಸಗಣಿ ರಸಕ್ಕೆ ಒಂದು ರೂಪಾಯಿ ತೂಕ ಸಕ್ಕರೆಯನ್ನು ಹಾಕಿ ಕುಡಿಸುವುದು

ಶ್ರೀಜಗದ್ಗುರು ದಾರುಕಾಚಾರ್ಯಾಯ ನವ

ಅನುಬಂಧ ಚತುಷ್ಟಯ

ಲೇ—ಆರ್ ಎಂ ಮಲ್ಲಿಕಾರ್ಜುನಶಾಸ್ತ್ರಿ, ತಿಪಟೂರು

ಪೂರ್ವೋಕ್ತ ಜ್ಞಾತಾಜ್ಞಪ್ತಿಯಿಂದ ಮೋಕ್ಷಸಾಮ್ರಾಜ್ಯಪೇಕ್ಷೆಯುಳ್ಳವರು ತತ್ಪಾಧನವಾದ ವೇದಾಂತತ್ರಯಾಧ್ಯಯನೇಚ್ಛೆಗಳಾದಿಗಳಲ್ಲಿ ಅಭಿವಿವೇಕಗಳೆಳ್ಳವುದಕ್ಕಿಂತಲೂ ಪೂರ್ವದಲ್ಲಿ ಅನುಬಂಧಚತುಷ್ಟಯವನ್ನು ತಿಳಿದಿರುವುದು ಯೋಗ್ಯವು ವಿಷಕ್ಕೆಂದರೆ—ಈ ಅನುಬಂಧ ಚತುಷ್ಟಯವನ್ನು ತಿಳಿಯದವಿನಾ ವಿವೇಕವಂತರ ಗ್ರಂಥಗಳಲ್ಲಿ ವಿವೇವುಂಟಾಗದು. ಅನ್ವಧಿಯ ಪ್ರಯೋಜನಗಳೆಂಬ ಈ ನಾಲ್ಕು ಅನುಬಂಧಗಳನ್ನೂ ತಿಳಿಯುವದು ಮುಖ್ಯವು

ಇದರಲ್ಲಿ ನಿತ್ಯನಿರತಿಶಯಾನಂದಪ್ರಾಪ್ತಿಯಲ್ಲಿ ಇಚ್ಛೆಯುಳ್ಳವನಾಯಿಯೂ, ತ್ರಿದೋಷ ಕಾರಣವಾದ ಚಂಚಲ ಚಿತ್ತ ರಹಿತನಾಗಿಯೂ, ಸಾಧನ ಚತುಷ್ಟಯ ಸಂಪನ್ನ ನಾಗಿಯೂ, ಇರುವಂಥವನೇ ಅಧಿಕಾರಿಯು

ಸಂಬಂಧನೆಂದರೆ—ಬಹ್ಮ ಆತ್ಮರ ಏಕತ್ವ ವಿಷಯ ರೂಪನಳಿಗೂ, ಮತ್ತು ವೇದಾಂತ ಗ್ರಂಥಗಳಿಗೂ ಇರುವ ಪರಸ್ಪರ ಪ್ರತಿಪಾದ್ಯ ಪ್ರತಿಪಾದಕ ಭಾವವು ಸಂಬಂಧವಾಗಿಯೂ ಇದರಲ್ಲಿ ವೇದಾಂತ ಗ್ರಂಥಗಳು ಪ್ರತಿಪಾದಕಗಳಾಗಿಯೂ, ತದ್ಗ್ರಂಥೋಕ್ತ ವಿಷಯಗಳು ಪ್ರತಿಪಾದ್ಯಗಳಾಗಿಯೂ ಇವೆ ಮತ್ತು ಪ್ರತಿಪಾದನೆ ಮಾಡ ನವು ಪ್ರತಿಪಾದಕತ್ವಾಗಿಯೂ, ಪ್ರತಿಪಾದನೆಗೆ ಯೋಗ್ಯವಾದುದು ಪ್ರತಿಪಾದ್ಯವಾಗಿಯೂ ಇರುವದು ಈ ರೀತಿ ಹೇಳಿದ ಸಂಬಂಧದಿಂದ ಅಧಿಕಾರಿಯು ಕರ್ತೃ ನಾಗಿಯೂ, ವಿಚಾರವು ಕರ್ತವ್ಯವಾಗಿಯೂ, ಇದ್ದು ಅಧಿಕಾರಿ ಮತ್ತು ಗ್ರಂಥ ವಿಚಾರಗಳಿಗೆ ಕರ್ತೃ ಕರ್ತವ್ಯ ಸಂಬಂಧವೂ ಕೂಡ ವ್ಯತ್ಪಡಿಸಿದಂತಾಯಿತು ಅಲ್ಲದೆ ವಿಚಾರ ದ್ವಾರದಿಂದ ಗ್ರಂಥವು ಜ್ಞಾನದಾಯಕವಾಗಿರುವುದರಿಂದ ಗ್ರಂಥ ಮತ್ತು ಜ್ಞಾನಗಳಿಗೂ ಸಹ ಪರಸ್ಪರ ಜ್ಯ ಜನಕ ಸಂಬಂಧವು ಕೂಡ ಇರುವದು ಹೇಗೆಂದರೆ, ಉಕ್ತತ್ವ ಮಾಡುವವನು ಜನಕನೆಂತಲೂ, ಉಕ್ತ ಸ್ವವಾಗವ ಕಾರ್ಯವು ಜನ್ಯವೆಂತಲೂ, ಪ್ರಸಿದ್ಧಿಯಿರುವುದರಿಂದ ವಿಚಾರ ದ್ವಾರದಿಂದ ಗ್ರಂಥವೂ ಜನಕ ನಾಗಿಯೂ, ಜ್ಞಾನವು ಜನ್ಯವಾಗಿಯೂ ಇರುವದು

ಇನ್ನು ವಿಷಯ ಮತ್ತು ಪ್ರಯೋಜನಗಳೆಂದರೆ,— ಮಹಾವಾಕ್ಯಾರ್ಥ ರೂಪನಾಗಿರುವ ಜೀವ ಬ್ರಹ್ಮರ ಅಭೇದ ಕಥನವೇ ಗ್ರಂಥ ವಿಷಯವೆಂದೂ, ತದ್ವಿಷಯವಾದ ಬಹ್ಮಾತ್ಮೈಕ್ಯಜ್ಞಾನದಿಂದ ಅಜ್ಞಾನವನ್ನು ನೀಗಿ ನಿತ್ಯಸುಖವನ್ನು ಪಡೆಯುವದೇ ಗ್ರಂಥ ಪ್ರಯೋಜನವೆಂದೂ ನಿಶ್ಚಯಿಸಬೇಕು ಇದೇ ಅತ್ಯಾವಶ್ಯಕವಾದ ಅನುಬಂಧ ಚತುಷ್ಟಯವು

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯತಿಥಿ

ಶಿವಮೊಗ್ಗಾ ೫॥ ಜಾಂಧ ಹಳ್ಳಿಯಲ್ಲಿರುವ ವೀಃ ಗುಬ್ಬಿ ಶಿವಕಥಾ ಪಂಡಿತ ಶಿವರದ್ರ ಶಾಸ್ತ್ರಿಗಳವರು ತಮ್ಮವಸಗ್ಗಹದಲ್ಲಿ ಇದೇ ಪುಷ್ಯ ಬ॥ ೪ (ತಾ॥ ೧೭ ೧ ೧೯೪೧) ಶ ಕ್ರವಾರದ ಪ್ರಾಕ್ಕಾಲ ಶ್ರೀ ಭಗವತ್ಪಾದರವರ ಭಾವಚಿತ್ರವನ್ನು ತಳರು ತೋರಣ ಪುಷ್ಪ ಗುಚ್ಛಗಳಿಂದಲಂಕೃತಮಾದ ಭವ್ಯ ಮಂಟಪದಲ್ಲಿ ಮೂರ್ತಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ, ವಂದಿಸಿ, ನುತಿಸಿ ಸ್ಮರಿಸಿ, ಸ್ವವಿರಚಿತ ಮಹಾಗುರು ಮಂಗಲಪದ್ಯಮಂಪಾಡಿ ಕೊಂಡಾಡಿ ಬೇಡಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ, ಮಧ್ಯಾಹ್ನ ಸಂತರ್ಪಣೆಯು ನಡೆದು ಸಾಯಂಕಾಲ ಜಗತ್ಪೂಜ್ಯರ ಪಾವನ ಜೀವನ ಚರಿತ್ರೆಯನ್ನು ಓದಿಹೇಳಿ ಶ್ರವಣೇಚ್ಛುಗಳಾದ ಭಾವುಕರನ್ನು ಧನ್ಯರನ್ನಾಗಿ ಮಾಡಿದರು

ಓರ್ವ ಗುರುಸೇವಕ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶಿವಯೋಗಿ ಸಾರ್ವಭೌಮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಪುಣ್ಯತಿಥಿಮಹೋತ್ಸವ ಕೊಲ್ಲಾಪುರ ೩೬॥

ತಾ॥ ೧೭ ೧ ೪೧ ನೆಯ ಶುಕ್ರವಾರ ದಿವಸ ಸೊಲ್ಲಾಪುರದಲ್ಲಿ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಶಿವಯೋಗಿಗಳವರ ಪುಣ್ಯತಿಥಿಮಹೋತ್ಸವವು ಒಳ್ಳೇ ವೈಭವದಿಂದ ಮಾಡಲ್ಪಟ್ಟಿತು ಬೆಳಿಗ್ಗೆ ಆಚಾರ್ಯರ ಲಿಂಗೋತ್ಪವರ್ಮೂರ್ತಿ ರುದ್ರಾಭಿಷೇಕವೂ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸನ್ನಿಧಿಯ ಚಿತ್ರಕ್ಕೆ ಪೂಜಾಭಿಷೇಕಾದಿಗಳೂ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸನ್ನಿಧಿಯ ಚಿತ್ರಕ್ಕೆ ಪೂಜಾಭಿಷೇಕಾದಿಗಳೂ ಶ್ರೀ॥ ಷ॥ ಬ್ರ॥ ಬಾಲಶಕಸ್ತಿ ಚೆನ್ನವೀರಶಿವಾಚಾರ್ಯರ ಕಡೆಯಿಂದ ಶ್ರೀ ಮನ್ಮಹಾಸ್ವಾಮಿ ಸೂತನ ಮಂದಿರದಲ್ಲಿ ಮಾಡಲ್ಪಟ್ಟಿತು ತರುವಾಯ ಮಾಹೇಶ್ವರಾರಾಧನೆಯು ನೆರವೇರಿತು ಮ॥ ರಾ॥ ಶಿವಲಿಂಗಪ್ಪ ಮಾಳಗೆ ಇವರ ಮನೆಯಲ್ಲಿ ವೀ॥ ಕಾಳೇಹಳ್ಳಿ ರುದ್ರಾರಾಧ್ಯರ ಕಡೆಯಿಂದ ರುದ್ರಾಭಿಷೇಕವೂ ಗಣರಾರಾಧನೆಯೂ ಮಾಡಲ್ಪಟ್ಟಿತು ಅನೇಲೆ ಮಧ್ಯಾಹ್ನ ಎರಡು ಘಂಟೆಗೆ ಶ್ರೀ॥ ಷ॥ ಬ್ರ॥ ಕಾಂತವೀರಶಿವಾಚಾರ್ಯರು ಹೊಸಾಪುರ ಹಿರೇಮಠ ಗುಲ್ಬರ್ಗ ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭ ವಾಯಿತು. ಪ್ರಥಮ ಸೋಲಾಪುರಸದಾಚಾರ ಸಮಾಜದ ಕುಮಾರಿಯರು ಜಗದ್ಗುರುಗಳ ಸ್ತೋತ್ರಮಾಡಿದಮೇಲೆ ಶ್ರೀ॥ ಷ॥ ಬ್ರ॥ ಬಾಲಶಕಪಟ್ಟಿಗಳು ಪ್ರಾರಂಭಿಸಿದರು ಶ್ರೀ ಜಗದ್ಗುರುಗಳು ಮಾಡಿದ ಶಿವಪೂಜೆ ಭಕ್ತರ ಹಿತಕಥನಗಳ್ಕೆಂದೂ, ಸೂರ್ಯನ ಉದಯಕಾಲದಲ್ಲಿಯೂ, ಅಸ್ತವಾಗುವ ಕಾಲದಲ್ಲಿಯೂ, ಪ್ರಾಸ್ತವಾಗುವ ಸಂಧ್ಯೆಯನ್ನು ಜನರು ಪವಿತ್ರವೆಂದು ಹೇಗೆ ತಿಳಿಯುವರೋ ಹಾಗೆಯೇ ಸತ್ಪುರುಷರು ಪರು ಉದಯವಾಗುವಾಗಲೂ, ಶಿವೈಕ್ಯರಾಗುವಾಗಲೂ ಪವಿತ್ರದಿನವೆಂದು ಆಚರಿಸಬೇಕಾಗಿದೆ ಎಂದು ತಮ್ಮ ಅಮೃತವಾಣಿಯಿಂದ ಶ್ರೀಮಹಾಸನ್ನಿಧಿಯ ಗುಣ ವರ್ಣನೆಮಾಡಿದರು ತರುವಾಯ ಸತ್ಕಿಗೇರಿ ಶ್ರೀಗಳು, ಶ್ರೀ ಬುಲಬ್ಬಹಸ್ತಿ ಮೊರಬ ಶ್ರೀಗಳು, ಶ್ರೀ॥ ವೀ॥ ಪ॥ ಜಗದ್ಗುರುಶಾಸ್ತ್ರಿಗಳವರು ಗುಣವರ್ಣನೆ ವಿಷಯ ವನ್ನೆತ್ತಿಕೊಂಡು ಎಲ್ಲರ ಮನಸ್ಸಿಗೆ ಪ್ರತಿಬಿಂಬಿಸುವಂತೆ ಭಾಷಣಮಾಡಿದರು ಅಮೇಲೆ ಶ್ರೀ ಕಾಳೇಹಳ್ಳಿ ರುದ್ರಾರಾಧ್ಯರು ವೀರಶೈವರ ಗುರುಗಳಾರು, ಯಾರನ್ನು ಗುರುವೆಂದುನಂಬಬೇಕು, ಏದುವನ ಆಚಾರ್ಯರ ಹೊರತು ಮಿಕ್ಕವರಲ್ಲಿ ಗುರುತ್ವವು ಸಂಭವಿಸುವುದಿಲ್ಲವೆಂದೂ, ತಮ್ಮ ಸೂತ್ರಗೋತ್ರಗಳನ್ನು ಬಿಟ್ಟು ಕಂಡಕಂಡವರನ್ನು ಹುಡ ಕಬಾರದೆಂದೂ ಅನೇಕ ಉದಾಹರಣೆ ಕೊಟ್ಟು ಸ್ಪುಟೀಕರಿಯಾಗಿ ಭಾಷಣಮಾಡುತ್ತಿರುವಾಗ್ಗೆ ನೆರೆದಂಥ ಜನರು ಮೇಲಿಂದಮೇಲೆ ಕರತಾಡನೆ ಮಾಡುತ್ತಿದ್ದರು ಅನಂತರ ಶ್ರೀ॥ ವೀ॥ ವಿರೂಪಾಕ್ಷಲಿಂಗ ಬಾವಣಗೇರಿ ಇವರು, ಏದುಕರಿಂದಲೇ ಶ್ರೀ ಸನ್ನಿಧಿಯವರ ಪ್ರಭುವು ಹೆಚ್ಚು ಬೆಳೆದಿದ್ದೆಂದು ಭಾಷಣಮಾಡಿ ಎಲ್ಲ ರನ್ನೂ ಆನಂದಗೊಳಿಸಿದರು ತರುವಾಯ ಅಧ್ಯಕ್ಷರು ಸಮಯೋಚಿತ ಭಾಷಣ ಮಾಡಿದಮೇಲೆ ಶ್ರೀ॥ ವೀ॥ ಪ॥ ಮಲ್ಲಿಕಾರ್ಜುನಶಾಸ್ತ್ರಿಗಳು ವಂದನಾರ ಇವರು ಸಮಾರೋಪಭಾಷಣಮಾಡಿದರು ಬಳಿಕ ಜಗದ್ಗುರುಗಳವರ ಜಯಘೋಷದೊಂದಿಗೆ ಸಭೆಯು ಮ ಕ್ತಾಯವಾಯಿತು ಈ ಉತ್ಸವಪ್ರೇರ್ಯರ್ಥ, ಶ್ರೀ ಜೈನಾಪುರ ಶ್ರೀಗಳವರ ಅಪ್ಪಣೆಯ ಮೇರೆಗೆ, ಶ್ರೀ ಕಾಳೇನಹಳ್ಳಿ ರುದ್ರಾರಾಧ್ಯರು ಒಂದು ರೂಪಾಯಿಯನ್ನು ಪ್ರಭಾಭೋಷಣಕ್ಕೆ ಅರ್ಪಿಸಿದರು

ಇದೇ ದಿವಸ ಮಧ್ಯಾಹ್ನ 4 ಘಂಟೆಗೆ ಸೋಲಾಪುರದ ವೀರಶೈವಪ್ರೇಮಿಯರ ವತಿಯಿಂದ ಶ್ರೀಮನ್ಮಹಾಸ್ವಾಮಿ ಮಂದಿರದಲ್ಲಿ ಶ್ರೀ॥ ಸೌ॥ ಪಾರ್ವತಮ್ಮ ವಂರದ ಇವರ ಅಧ್ಯಕ್ಷತೆಯಲ್ಲಿ ಶ್ರೀ ಶಿವಯೋಗಿ ಸಾರ್ವಭೌಮ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿಯ ಪ್ರೀತ್ಯರ್ಥ ಸಭೆಯು ನೆರವೇರಿಸಲ್ಪಟ್ಟಿತು ಅಧ್ಯಕ್ಷರು ಸ್ವಾಗತಾರ್ಹರಾದಮೇಲೆ ಕುಮಾರಿಯರು ಜಗಜ್ಜಾಚಾರ್ಯರ ಸ್ತೋತ್ರವನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು ತರುವಾಯ ಕುಮಾರಿಯರ ಸಂವಾದ ಶ್ರೀ॥ ಷ॥ ಸೋಪಾಣಾ ಉಳ್ಳಗಡ್ಡೆ ಇವರ ನಿಬಂಧ ವಾಚನವಾದಮೇಲೆ ಸೌ॥ ಸುಶೀಲಾಬಾಯಿ ಪಾಟೀಲ್, ಸೌ॥ ಬಸಮ್ಮ ನಂದಿಮಠ, ಸೌ॥ ದಾನಮ್ಮ ಹಿರೇಮಠ ಇವರು ಸನ್ನಿಧಿಯವರ ಗುಣವರ್ಣನೆ ವಿಷಯವಾಗಿ ಭಾಷಣಮಾಡಿದರು ಅನಂತರ ಅಧ್ಯಕ್ಷ ಭಾಯಿಯವರು ಸನ್ನಿಧಿಯ ಗುಣಾನುಪರಮಾದ ವಿಷಯವನ್ನೆತ್ತಿಕೊಂಡು ಎಲ್ಲರಿಗೂ ಆನಂದೋಳಿಸಿದರು ತರುವಾಯ ಸೌ॥ ಭಾಗೀರಥೀಬಾಯಿ ಕಟಾಪ ಇವರು, ಸನ್ನಿಧಿಯ ವ್ಯಕ್ತಿರಾಗ್ಯ, ಸನ್ನಿಧಿಯ ತಪೋಬಲ ಈ ವಿಷಯವನ್ನೊಳಗೊಂಡ ಭಾಷಣವನ್ನು ಮಾಡಿ ಎಲ್ಲರಿಗೂ ಸಂತೋಷ ಪಡಿಸಿ ಸಮಾರೋಪಸಮಾಡಿದಮೇಲೆ ಸನ್ನಿಧಿಯ ಭಾವ ಚಿತ್ರಕ್ಕೆ ಮಂಗಲಾರತಿಯಾಗಿ ಶ್ರೀ ಜಗದ್ಗುರುಗಳ ಜಯ ಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು ಊರಲ್ಲಿ ಹಿಂದೂ ಮುಸಲ್ಮಾನರ ನಾಶಾವರಣ ಸ್ವಲ

[೬ ನೆಯ ಪುಟವನ್ನು ನೋಡಿ

ಪಂಚಾಚಾರ್ಯಪ್ರಭಾ.

೧೯೪೧ನೆಯ ಜನವರಿ ತಾ|| ೨೭ನೇ ಸೋಮವಾರ

ಪ್ರಾಣಿಗಳ ವಿಷಗಳಿಗೆ ಸುಲಭ ಚಿಕಿತ್ಸೆಗಳು.

ಈ ಹೆಸರಿನ ಪುಸ್ತಕವನ್ನು ಮೈಸೂರು ಡಿ|| ಫಾರೆಸ್ಟ್ ಆಫೀಸರರಾದ ಶ್ರೀಮಾನ್ ಎಂ ಜಿ ವೆಂಕಟರಾಮ್ ಬಿ ಎ, ಇವರು ಪ್ರಕಾಶಪಡಿಸಿದ್ದಾರೆ ಇದರಲ್ಲುಲ್ಲೇಖವಾಗಿರುವ ಚಿಕಿತ್ಸೆಗಳು ಸಾಮಾನ್ಯ ವಾಗಿ ಎಲ್ಲರಿಗೂ ಸುಲಭ ಅನುಕೂಲವಾಗಿರುತ್ತವೆ ೧೫೦ರಿಂದ ಎಲ್ಲ ವಿಷಯಗಳನ್ನೂ ಸಮಾನ್ಯ ನಾರದಪಶ್ಚಿಮುಲ್ಲಿ ಪ್ರಕಟಿಸಿರುತ್ತೇವೆ ಆಸಕ್ತರು ಆ ವಿಷಯಗಳನ್ನು ಅವಶ್ಯ ತಿಳಿದು ಕೊಳ್ಳ ಬೇಕೆಂದಾಶಿಸುತ್ತೇವೆ-

ಶ್ರೀಮಾನ್ ಭಿಷಗ್ರತ್ನ ಪದ್ಮವಿಭೂಷಿತ ಕಟ್ಟಾಚಲ ಪಂಡಿತರು ಮೈಸೂರು, ಶ್ರೀಮಾನ್ ತಂಜಾವೂರ್ ಕಾಶಿ ಪಾಧ್ಯಾಯ, ವೈದ್ಯವಿಶಾರದ ಎಂ ಜಿ ಶಿಂಪ್ರಿಯಂಗಾರ್, ಹೆಚ್ ಎಂ ಎಸ್ ಎಂ ರಾಜೇಂದ್ರ ಸಿರಸ್ತೆದಾರರು ಮೈಸೂರು, ಶ್ರೀಮಾನ್ ಆಯುರ್ವೇದಭೂಷಣ ಎಂ ಎಸ್ ಕೃಷ್ಣಭಟ್ಟರ್ ಗೌರವ ಫಾರೆಸ್ಟ್ ಆಫೀಸರ್ ಹಾಗೂ ಪೇಜ್, ಡಿ ಮೈಸೂರು, ಈ ಸಾಲ್ವರು ಸ್ವಾನುಭವಪೂರ್ಣವಾಗಿ ಈ ಪುಸ್ತಕವನ್ನು ಕೇಳಿದವರ ಪ್ರಾರ್ಥನಾನುಕೂಲವಾಗಿ ಪ್ರಕಟಿಸಿದ್ದಾರೆ ಈ ಚಿಕ್ಕ ಪುಸ್ತಕದಲ್ಲಿ ಕಾಲುವ ವಿಷ ಪ್ರಾಣಿಗಳಿಂದುಟ್ಟಾಗುವ ಭೀಕರಗಳಿಂದ ಪ್ರಸ್ತುತವ ಬಹು ಸಮರ್ಪಕವಾಗಿ ವಿವರಿಸಲ್ಪಟ್ಟಿರುವುದು ಪ್ರಯೋಜನಕಾರಿಯಾಗಿದೆ. ಪ್ರತಿಯೊಬ್ಬರು ಈ ಪುಸ್ತಕವನ್ನು ತಿಸ್ಟ್ರಿಸ್ಟ್ಟಿನ ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಈ ಲೋಕೋಪಕಾರಕ ವಿಷಯದಲ್ಲಿ ಪ್ರಸಕ್ತ ಸಿಸ್ಟಿಹಿಡಿದಿರುವುದು ಮಹಾಪ್ರಯತ್ನವೆಂದು ಇವರು ಕೈಕೊಂಡಿರುವ ಈ ಕಾರ್ಯವು ಪರ್ವಜನೋಪಕಾರಕವಾಗಿರುವುದೆಂದೆ. ಸಂತೋಷದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ವಿಷಪ್ರಾಣಿಗಳ ಕಡಿತದಿಂದ ಪ್ರತಿವರ್ಷವೂ ಅಸಂಖ್ಯ ಜನರು ಮೃತ್ಯುಗುತ್ತಿರುವ ವಿಷಯವು ಸರ್ವರಿಗೂ ಗೊತ್ತೇ ಆದೆ ಅನಕ್ಷರಜನರಿಗೆ ವಿಷಪರಿಹಾರೋಪಾಯವು ಗೊತ್ತಿಲ್ಲದಿರುವುದೇ ಇದಕ್ಕೆ ಮುಖ್ಯಕಾರಣವಾಗಿದೆ ಇಂಗ್ಲೀಷ್ ವಿದ್ಯಾಭ್ಯಾಸ ಹಾಗೂ ಈ ಕಾಲದಲ್ಲಿ ನವ್ಯ ವೈದ್ಯ ಪದ್ಧತಿಯು ಲೋಕೋಪಕಾರಕವೆಂಬ ಭ್ರಮೆಯಿಂದ ಈ ಪುಸ್ತಕದಲ್ಲಿ ಸೂಚಿಸಿರುವ ಸುಲಭ ಚಿಕ್ಕ ಚಿಕ್ಕ ಚಿಕಿತ್ಸೆಗಳು ಅಸಡ್ಡೆಯಿಂದ ಕಾಣಲ್ಪಡುತ್ತಿವೆ. ಈ ಪುಸ್ತಕವು ಚಿಕ್ಕದಾಗಿದ್ದರೂ ಅನೇಕಮಹತ್ವವಿಷಯಗಳಿಂದ ಕೂಡಿರುವದು ಇಂತಹ ಅಮೂಲ್ಯಪುಸ್ತಕವನ್ನು ಜನೋಪಕಾರಕ್ಕಾಗಿ ಪ್ರಕಾಶಪಡಿಸಿದ ಮಹಾಶಯರಿಗೆ ನಾವು ಅನೇಕ ಧನ್ಯವಾದಗಳನ್ನು ಸಮರ್ಪಿಸುತ್ತೇವೆ ವಿಷಪರಿಹಾರಕ್ಕಾಗಿ **ಕಾಕೇಮುರದ ಬೇರು** ಮತ್ತು **ಇಳಿಸಿಂಗಿ ಹೂಬು** ಇನೇರಡು ವನಸ್ಪತಿಗಳು ಸಂಜೀವಿನಿಯಂತಿರುತ್ತವೆ ಈ ಎರಡು ವನಸ್ಪತಿಗಳು ಸರ್ವರಿಗೂ ದೊರೆಯಲೆಂಬ ಉದ್ದೇಶದಿಂದ ಡಿ|| ಫಾರೆಸ್ಟ್ ಆಫೀಸರರು ವಿಶೇಷವಾಗಿ ಸಂಗ್ರಹಿಸಿದ್ದಾರೆ ಆ ಆಜೆ ಪೋಸ್ಟ್‌ಪೈಸ್ಟಾಂಪುಗಳನ್ನು ಕಳುಹಿಸಿದವರಿಗೆ ಅವುಗಳನ್ನು ಪೋಸ್ಟಿನಮೂಲಕ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಮಹಾಜನಗಳು ಸಂಜೀವಿನಿಯಂತಿರುವ ಈ ಎರಡು ವನಸ್ಪತಿಗಳನ್ನು ಪ್ರಯತ್ನಿಸಬೇಕು ಈ ಚಿಕ್ಕ ಪುಸ್ತಕದಲ್ಲಿ ಉಕ್ತವಾಗಿರುವ ವಿಷಯಗಳೆಲ್ಲವನ್ನೂ ನಮ್ಮಾನಾದ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ ಪಾಚಕರು ಸಂಪೂರ್ಣವಾಗಿ ಓದಿನೋಡಿ ಆದರಂತೆ ಚಿಕಿತ್ಸೆಗಳನ್ನು ಮಾಡಿ ರೋಗಪೀಡಿತರನ್ನುನ್ನರಿಸಬೇಕೆಂದು ಹಾರೈಸುತ್ತೇವೆ

ಯುದ್ಧವಾರ್ತೆ.

ಅಬ್ಸಿನಿಯಾ ಗಡಿಯಲ್ಲಿ ಯುದ್ಧ

ದಕ್ಷಿಣಆಫ್ರಿಕಾಸೈನಿಗಳು ಅಬ್ಸಿನಿಯಾ ಗಡಿಯಲ್ಲಿರುವ ಎರಡು ರತ್ನ ಸ್ಥಾನಗಳನ್ನು ಆಕ್ರಮಿಸಿದವು. ಇಟಲಿ ಅದಿಕಾರಿಗಳ ನ್ಯಾಯಕತ್ವದಲ್ಲಿ ರಕ್ಷಿಸಲ್ಪಡುತ್ತಿದ್ದ ಎಲಿಟೊ ಎಂಬ ಸ್ಥಾನವನ್ನು ಹಿಡಿಯಲಾಯಿತು ಇಟಲಿ ಕಡೆ ಇದ್ದ ೧೦ ಅದಿಕಾರಿಗಳೂ ೧೯೯ ಸೈನಿಕರೂ ಸತ್ತರು ಒಬ್ಬ ಬ್ರಿಟಿಷ್ ಅಧಿಕಾರಿಗಾಯಗೊಂಡಿದ್ದಾನೆ

ಇಟಲಿಯವರು ಹಿಮ್ಮೆಟ್ಟಿದರು

ಗ್ರೀಕರನ್ನು ಎಂಪಿರಸ್ಸ್‌ನ ಆಲ್ಬೇನಿಯದ ಕೇಂದ್ರವಲ್ಲಿ ರುವ ಪರ್ವತಪ್ರದೇಶಗಳಲ್ಲಿ ಆಕ್ರಮಿಸಲು ಇಟಲಿಯವರು ಸಲ್ಲ ಸಾರ ಪ್ರಯತ್ನಿಸಿದರು, ಆದರೆ ಅವರ ಪ್ರಯತ್ನಗಳು ಸಫಲವಾಗದೆ ಪರಾಜಯವನ್ನೆಪಾಂದಿರುವರು ಆಕ್ರಮಣ ಕಾರ್ಯವನ್ನು ಬಿಟ್ಟು ಎಮ್ಮೆಟ್ಟಿಬೇಕಾಯಿತು ಈ ಪ್ರಯತ್ನಗಳಲ್ಲಿ ಇಟಾಲಿಯರ್ಯರಿಗೆ ಬಹಳ ಸಾವು ಸಿಕ್ಕಿದ್ದಲ್ಲದೆ, ಆಹಾರಸಂಗ್ರಹವನ್ನೂ ಗ್ರೀಕರು ಕೈವಶಮಾಡಿದರು

ಇಟಲಿಗೆ ಜರ್ಮನ್ ಸೈನ್ಯಗಳ ರವಾನೆ

ಜರ್ಮನ್ ಸೈನ್ಯಗಳು ಇಟಲಿಗೆ ಪ್ರಯಾಣಮಾಡುವ ಬಹು ಹೆಚ್ಚಾಗಿದೆ ಸೈನ್ಯಗಳಲ್ಲಿ ಮಧ್ಯಮಾರ್ಗದ ಕಾಂಪಥದಲ್ಲಿವೆ. ಅಲ್ಲಿಂದ ಮುಂದೆ ಎತ್ತಕಡೆ ಹೊರಡಬೇಕೆಂಬುದನ್ನು ನಿರ್ಧರಿಸಿಕೊಳ್ಳುತ್ತಿವೆ ಜರ್ಮನಿಯಿಂದ ಸೈನ್ಯಪಡೆಗಳು ರೈಲು ಹತ್ತುವಾಗ ಎಲ್ಲಿಗೆ ಹೋಗಬೇಕೆಂಬ ನಿರ್ಧರವಿರುವದಿಲ್ಲ ಅಂತೂ ಆಗ್ನೇಯದಿಕ್ಕಿಗೆ ಅಂದರೆ ಇಟಲಿ, ಗ್ರೀಸ್‌ಗಳ ಕಡೆಗೆ ಅಪಾರ ಯುದ್ಧಸಾಮಗ್ರಿಗಳು ಮತ್ತು ಜೋದರಿಂದ ತುಂಬಿದ ರೈಲುಗಳು ವಿರಾಮವಿಲ್ಲದೆ ಸಾಗುತ್ತಿವೆ

ಸಿಸಿಲಿ ಮೇಲೆ ಮುತ್ತಿಗೆ

೨೩ನೆಯ ತಾರೀಖಿನ ದಿವಸ ರಾತ್ರಿ ಬ್ರಿಟಿಷ್ ವಿಮಾನಗಳು ಸಿಸಿಲಿಯಲ್ಲಿರುವ ಇಟಲಿ ವಿಮಾನ ನಿಲ್ದಾಣಗಳ ಮೇಲೆ ಮುತ್ತಿಗೆ ನಡೆಸಿದವು ಕೋಮಿರೋ ಮೇಲೆ ಅಗ್ನಿವರ್ಧಕ ಮತ್ತು ಸ್ಫೋಟಕ ಬಾಂಬುಗಳನ್ನು ಹಾಕಲಾಯಿತು ಅಲ್ಲಿ ೨೦ ವಿಮಾನಗಳವರೆಗೆ ಸ್ಫೋಟನವು ಕೇಳಬಂದಿತು ಅಗಸ್ಟ್ಸಾ ವಿಮಾನ ನಿಲ್ದಾಣದ ಮೇಲೆ ಸಹ ಬಾಂಬುಗಳನ್ನು ಹಾಕಲಾಯಿತು ಮೋಡಗಳು ಬಹಳ ಕೆಳಗಿದ್ದವರಿಂದ ಅಲ್ಲಾವ ನಷ್ಟವನ್ನು ಪೂರ್ಣವಾಗಿ ಪರಿಶೀಲಿಸಲು ಆಗಲಿಲ್ಲ

ಹಿಟ್ಲರ್ ಮುಸ್ಸೋಲಿನಿ ಭೇಟಿ

ಮುಂದೆ ನಡೆಯುವ ಯುದ್ಧದಲ್ಲಿ ಜರ್ಮನಿಯು ಇಟಲಿಗೆ ಪೂರ್ಣ ಸಹಾಯವನ್ನು ಕೊಡುವ ವಿಚಾರದಲ್ಲಿ ಒಂದು ದೃಢನಿರ್ಧಾರಕ್ಕೆ ಬರುವಸಲುವಾಗಿ ಹಿಟ್ಲರ್ ಮುಸ್ಸೋಲಿನಿಗಳಬ್ಬರೂ ಕಳೆದ ೧೨ ನೆಯ ತಾರೀಖಿನ ದಿವಸ ಗುಪ್ತವಾಗಿ ಒಂದು ಸ್ಥಳದಲ್ಲಿ ಕೂಡಿ ಮಾತನಾಡಿದರೆಂದೂ ಎಂದು ದೇಶಗಳ ಹಿತಕ್ಕೂ ಸಂಬಂಧಿಸಿದ ಎಲ್ಲ ವಿಚಾರಗಳನ್ನೂ ಪೂರ್ಣ ಒಪ್ಪಂದಕ್ಕೆ ಬರಲಾಯಿತೆಂದೂ ಹೇಳಲಾಗಿದೆ. ಆದರೆ ಯಾವ ಸ್ಥಳದಲ್ಲಿ ಭೇಟಿ ನಡೆಯಿತು, ಯಾವ ವಿಷಯಗಳು ಚರ್ಚಿಸಲ್ಪಟ್ಟವು ಎಂಬುದು ಹೊರಪಟ್ಟಿಲ್ಲ.

ಭಾರತದಲ್ಲಿ ಇಟಲಿ ಸೆರೆಯಾಳುಗಳು

ಭಾರತದಲ್ಲಿ 38000 ಇಟಲಿ ಸೈನಿಕರನ್ನು ಸೆರೆಯಲ್ಲಿ ಡಲಾಗುವದೆಂದೂ, ಅವರುಗಳಿಗಾಗಿ ತಗಲುವ ವೆಚ್ಚವನ್ನು ಬ್ರಿಟಿಷ್ ಸರ್ಕಾರದವರೇ ವಹಿಸುವರೆಂದೂ ಪ್ರಕಟವಾಗಿದೆ.

ಆಲ್ಬೇನಿಯದಲ್ಲಿ ಹತರಾದ ಇಟಾಲಿಯನ್ನರು

ಆಲ್ಬೇನಿಯದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಇಲ್ಲಿಯವರೆಗೆ ಸುಮಾರು 50000 ರಕ್ಕಿ ಮೇಲ್ಪಟ್ಟು ಇಟಲಿ ಸೈನಿಕರು ಮಡಿದಿರುವರು, ಇಲ್ಲವೆ ಗಾಯಗೊಂಡಿರುವರೆಂದು ಲಂಡನ್ನಿನಕಛೇರಿಕಾರ್ಯಕ್ಷೇತ್ರಗಳಲ್ಲಿ ಲೆಕ್ಕಹಾಕಲಾಗಿದೆ.

ಎರಿಟ್ರಿಯದಲ್ಲಿ ಇಟಲಿಯ ಹಿಂದೋಟ

ಇಟಲಿಯ ಆಫ್ರಿಕೆಯ ಸ್ವಾಸ್ಥ್ಯವಾದ ಎರಿಟ್ರಿಯದಲ್ಲಿ ಇಟಲಿಯನರು ಗಡಿಪ್ರದೇಶವನ್ನು ಬಿಟ್ಟು ಹಿನ್ನೆಟ್ಟುತ್ತಿರಲೇ ಇದ್ದಾರೆಂದೂ ಭಾರಿ ಯುದ್ಧವೇನೂ ನಡೆದಿಲ್ಲವೆಂದೂ ಹೇಳಲಾಗಿದೆ. ಬ್ರಿಟಿಷ್ ಸೈನ್ಯಗಳು ಇಟಲಿ ಪಡೆಗಳನ್ನು ಬೆನ್ನಟ್ಟಿಟ್ಟು ತೊಂದರೆ ಕೊಡುತ್ತಿವೆ

ಅಬ್ಸಿನಿಯ ಚಕ್ರವರ್ತಿಗಳು ತಮ್ಮ ದೇಶವನ್ನು ಹೊಕ್ಕರು

ಅಬ್ಸಿನಿಯದ ಮಾಜಿ ಚಕ್ರವರ್ತಿಗಳು ಅಬ್ಸಿನಿಯಾ ಪ್ರಾಂತವನ್ನು ಪುನೇಶಿಪಡಿಸ್ದಾರೆ ಕಳೆದ ೧೨ನೆಯ ತಾರೀಖಿನೆ ದಿವಸ ಅವರು ಬ್ರಿಟಿಷ್ಸಿನ ವಿಮಾನವದಲ್ಲಿ ಕುಳಿತು ಅಬ್ಸಿನಿಯದ ಗಡಿಗೆ ಬಂದಿಳಿದರು ಅಬ್ಸಿನಿಯ ಪ್ರಾಂತಕ್ಕೆ ಕಾಲಿಟ್ಟ ಕೂಡಲೇ ಅಬ್ಸಿನಿಯದ ಧ್ವಜವನ್ನು ಹಾರಿಸಿದರು

ಅಮೆರಿಕೆಯು ಬ್ರಿಟಿಷ್ಸಿಗೆ ೧೨ ಹಡಗುಗಳನ್ನು ಮಾರಿತು

ಅಮೆರಿಕೆಯು 107000 ಟ್ ತೂಕದ 12 ಸಾಮಾನು ಹಡಗುಗಳನ್ನು ಬ್ರಿಟಿಷ್ಸಿಗೆ ಮಾರಿರುವದಾಗಿ ಪ್ರಕಟವಾಗಿದೆ ಈ 12 ಹಡಗುಗಳಿಗೆ ಬ್ರಿಟಿಷ್ಸು 7 ಲಕ್ಷ ಪೌಂಡುಗಳ ಬೆಲೆಯನ್ನು ಕೊಟ್ಟಿತು. ಇದುವರೆಗೆ ಅಮೆರಿಕೆಯು ಬ್ರಿಟಿಷ್ಸಿಗೆ 49 ಸಾಮಾನು ಹಡಗುಗಳನ್ನು ಮಾರಿರುತ್ತದೆ.

ಇಂಗ್ಲೆಂಡಿನಲ್ಲೂ ಪತ್ರಿಕೆಗಳಿಗೆ ಬಂಧನ

ಬಿಟಿಷ್ಸಿನ ಪ್ರಮುಖ ಕಮ್ಯೂನಿಸ್ಟ್ ಪತ್ರಿಕೆಯಾದ 'ಡೇಲಿವರ್ಕರ್' ಎಂಬ ಪತ್ರಿಕೆಯನ್ನು ರಕ್ಷಣ ಕಾಸನದ ಪ್ರಕಾರ ಸರ್ಕಾರದವರು ನಿಲ್ಲಿಸಿದ್ದಾರೆ. ಬ್ರಿಟಿಷ್ ಜನಾಂಗವು ನಡೆಸುತ್ತಿರುವ ಸಂಗ್ರಾಮ ಪ್ರಯತ್ನಗಳಿಗೆ ಈ ಪತ್ರಿಕೆಯು ವಿಘ್ನವನ್ನು ಕಂಡೊಡ್ಡುತ್ತಿರುವದಾಗಿ ಭಾವಿಸಿ ನಿಲ್ಲಿಸಿದ್ದಾರೆ.

ಭಾರತದ ನೆಲೆಗಡಲೆಕಾಯಿ

ಯೂರೋಪಿನಲ್ಲಿ ಯುದ್ಧಕಾರಣದಿಂದ ಅಲ್ಲಿಯ ಗಿರಣಿಗಳು ಮುಚ್ಚಲ್ಪಟ್ಟಿರುವುದರಿಂದ ಮಾರಾಟವಾಗದೆ ಭಾರತದಲ್ಲಿ ನಿಂತುಹೋಗಿರುವ ನೆಲೆಗಡಲೆಕಾಯಿಯ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂಬ ವಿಚಾರವನ್ನು ಇಂಡಿಯಾ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ತಿಳಿದುಬರುತ್ತದೆ. ಭಾರತವ ಆರ್ಥಿಕಪರಿಣತರಿಸಿದ ಡಾ|| ಇಂಗ್ಲಿಯವರು ದಕ್ಷಿಣಭಾರತದಲ್ಲಿ ಸಂಚರಿಸಿ ಈ ವಿಷಯವನ್ನು ಪರಿಶೀಲಿಸಬೇಕೆಂದು ಅಜ್ಞಾಪ್ತರಾಗಿದ್ದರು ಅವರು ಮದರಾಸು, ಹೈದರಾಬಾದು, ತಿರುವಾಂಕೂರು ಪ್ರಾಂತಗಳಿಗೆ ಹೋಗಿ ಪರಿಶೀಲನೆಯನ್ನು ನಡೆಯಿಸಿ ವರದಿಯನ್ನು ಇಂಡಿಯಾಸರ್ಕಾರಕ್ಕೆ ಒಪ್ಪಿಸಿದ್ದಾರೆ ಆ ವರದಿಯನ್ನು ಇಂಡಿಯಾ ಸರ್ಕಾರದವರು ಪರಿಶೀಲಿಸುತ್ತಿದ್ದಾರೆ.

ಷಾಂಗ್‌ಹೈ ತೆರಿಗೆದಾರರ ಸಭೆಯಲ್ಲಿ ಕೊಲೆಯ ಪ್ರಯತ್ನ

ಷಾಂಗ್‌ಹೈ ನಗರದಲ್ಲಿ ಪೌರಸಭೆಯವರು ತೆರಿಗೆಯನ್ನು ಹೆಚ್ಚಿಸಿರುವ ವಿಚಾರವನ್ನು ವಿಮರ್ಶಿಸಲು ಷಾಂಗ್‌ಹೈ ನಗರದ ತೆರಿಗೆದಾರ ವಿಶೇಷಸಭೆಯು ಸೇರಿದ್ದಾಗ ಬ್ರಿಟಿಷ್ ಪ್ರಜೆಯೂ ಪೌರಸಭೆಯ ಅಧ್ಯಕ್ಷರೂ ಆದ ಡಬ್ಲ್ಯೂ. ಜೆ ಕೆಸ್ಟ್ಲೆರವರ ಮೇಲೆ ಗುಂಡು ಹಾರಿಸಿ ಅವರನ್ನು ಕೊಲೆಮಾಡುವ ಪ್ರಯತ್ನ ನಡೆಯಿತು. ಅವರಿಗೆ ಗುಂಡಿನೇಟು ತಗಲಿದರೂ ಅಪಾಯಕರವಾದ ಗಾಯವೇನೂ ಆಗಲಿಲ್ಲ. ಜಪಾನೀಸ್ ತೆರಿಗೆದಾರ ಸಂಘದ ಅಧ್ಯಕ್ಷರಾದ ಹೆಯಾಸಿ ಎಂಬವರೇ ಈ ದುಷ್ಕೃತ್ಯ ಮಾಡಿದರೆಂದು ಅವರನ್ನು ದಸ್ತಗಿರಿಮಾಡಲಾಗಿದೆ. ಹೆಯಾಸಿಯವರು ಈ ಸಭೆಯ ಮುಂದಿಟ್ಟಿರುವ ತಿದ್ದುಪಡಿಯು ಬಿದ್ದುಹೋದಮೇಲೆ ಈ ಗುಂಡಿನ ಪ್ರಕರಣವು ನಡೆಯಿತು.

ಬ್ರಿಟನ್ನಿನ ಐಶ್ವರ್ಯ ಮತ್ತು ಉತ್ಪತ್ತಿಶಕ್ತಿ

ಬ್ರಿಟನ್ನಿಗೆ ವಿಮಾನಗಳ ಮತ್ತು ಆಯುಧಗಳ ಸರಬರಾಯಿ ವಿಷಯದಲ್ಲಿಯೂ ಮತ್ತು ಬ್ರಿಟನ್ನಿನಲ್ಲಿ ಉತ್ಪತ್ತಿ ಯಾಗುವ ಪದಾರ್ಥಗಳ ವಿಷಯದಲ್ಲಿಯೂ ಬ್ರಿಟನ್ನಿನ ಕೂಲಿಗಾರಶಾಖೆಯ ಸಚಿವರಾದ ಶ್ರೀಬೆವಿನ್‌ರವರು ಕಾಮನ್ಸ್‌ಸಭೆಯ ತಮ್ಮ ಹೇಳಿಕೆಯನ್ನು ಕೊಡುತ್ತ ವಿಮಾನಗಳ ನಿರ್ಮಾಣಕಾರ್ಯವು ಮೊದಲು ಸಣ್ಣ ನದಿಯಂತೆ ಪ್ರಾರಂಭವಾಗಿ ಈಗ ದೊಡ್ಡ ನದಿಯ ಪ್ರವಾಹದಲ್ಲಿ ಬಂದಿದೆ ಇನ್ನರಲ್ಲೇ ಪ್ರವಾಹದ ಮಿತಿಯು ಸೀರಾದೀತು" ಎಂದು ಸೂಚಿಸಿದರು. ಬ್ರಿಟನ್ನು ನಿರ್ಮಾಣ ಮಾಡಬೇಕೆಂದಿರುವ ಹೊಸಪ್ರಯೋಗದಲ್ಲಿ ಆದರೆ ವಿಮಾನಬಲವೇ ಶ್ರೇಷ್ಠವಾಗಿರುವಂತೆ ಮಾಡಲಾಗುವದೆಂದೂ ಇದರಿಂದ ಕೊನೆಯಲ್ಲಿ ಜಯವು ಲಭಿಸುವದರಲ್ಲಿ ಸಂದೇಹವಿಲ್ಲವೆಂದೂ ಹೇಳಿದರು

ಟೊಬ್ರುಕ್ ಪತನ

ಉತ್ತರ ಆಫ್ರಿಕೆಯಲ್ಲಿ ಇಟಲಿಯ ಆಯಕಟ್ಟಿನ ಬಂದರಾದ ಟೋಬ್ರುಕ್ ಎಂಬುದು ಬ್ರಿಟಿಷ್ ಸೈನಿಕರ ಸ್ವಾಧೀನವಾಯಿತು. ಬಹಳ ಮುಖ್ಯವಾದ ಸ್ಥಳದಲ್ಲಿರುವ ಈ ಬಂದರು ಬ್ರಿಟಿಷವಸಾಹತುದಂದಿಂದ ಈ ಪ್ರದೇಶದಲ್ಲಿ ಸುಮಾರು 200 ಮೈಲಿಗಳ ದೂರ ವರ್ತಮಾನ ಮತ್ತು ಮಾಗಸೌಕರ್ಯವು ಹತ್ತಿಗವಾದಂತಾಯಿತು. ಬ್ರಿಟಿಷರಿಗೆ ಸೆರೆಸಿಕ್ಕುವ ಶತ್ರುಗಳನ್ನು ಹೊರಕ್ಕೆ ಸಾಗಿಸಲು ಈ ಒಂದರಿಂದಲೆ ಬಹಳ ಉಪಯೋಗವಾಗುತ್ತದೆ ಸುಮಾರು 36 ಫುಟಿಗಳಕಾಲ ಹೊಡೆದಾಡಿದಮೇಲೆ ಬಂದರು ಬ್ರಿಟಿಷರ ಸ್ವಾಧೀನವಾಯಿತು ನಗರದ ಸುತ್ತ ತಂತಿ ಬೇಲಿಗಳನ್ನು ಆಸ್ಟ್ರೇಲಿಯಾ ಸೈನಿಕರು ಕತ್ತರಿಸಿ ಹಾಕಿದಮೇಲೆ ಸ್ವತಂತ್ರ ಫ್ರೆಂಚ್ ಸೇನೆಯು, ನಗರವನ್ನು ಪ್ರವೇಶಿಸಿ ಶತ್ರುಗಳನ್ನು ಹೊಡೆದೋಡಿಸಿತು ಬ್ರಿಟಿಷ್ ನಿಮಾನ ಮತ್ತು ನೌಕಾಪಡೆಗಳು ಪೂರ್ಣಸಹಕಾರಿಸಿ ಜಯವನ್ನು ಗಳಿಸಿಕೊಟ್ಟುವು.

ಅಬಿಸೀನಿಯಾದಲ್ಲಿ ಗುಪ್ತವಾಗಿ ಯುದ್ಧಸಿದ್ಧತೆ

1940ನೆಯ ಇಸವಿ ಜೂನ್‌ತಿಂಗಳಲ್ಲಿ ಬ್ರಿಟಿಷ್‌ಸೈನ್ಯದ ಒಂದು ಗುಂಪಿನವರು ಗುಪ್ತವಾಗಿ ಅಬಿಸೀನಿಯಾದೊಳಗೆ ನುಗ್ಗಿ ಕಾಡುಗಳ ಮಧ್ಯದಲ್ಲಿರುವ ಕಾಲುಹಾದಿಗಳಲ್ಲಿ ಸ್ಫೋಟಾಣಗಳನ್ನು ಆಹಾರಸಾಮಗ್ರಿಗಳನ್ನೂ ಹೇಸರಕತ್ತೆ ಗಳಮೇಲೆ ಸಾಗಿಸಿಕೊಂಡು ೫೦೦ ಮೈಲಿ ದೂರದಲ್ಲಿ ಅಬಿಸೀನಿಯದ ಮಧ್ಯವಲ್ಲಿರುವ ಒಂದು ಸ್ಥಳಕ್ಕೆ ಬಂದು ಸೇರಿದರು ಆದರು ಅಲ್ಲಿಗೆ ಬಂದಮೇಲೆ ಅಬಿಸೀನಿಯದವರು ಇಟಲಿಯವರಮೇಲೆ ದಂಗೆಮಾಳುವದಕ್ಕೆ ಯುದ್ಧೋಪಕರಣಗಳನ್ನು ಉಪಯೋಗಿಸುವ ಬಗೆಯನ್ನು ಅವರಿಗೆ ಕಲಿಸಿಕೊಡುತ್ತಾ ಬಂದಿರುತ್ತಾರೆ. ಬ್ರಿಟಿಷರು ಅಲ್ಲಿಗೆ ಬಂದಿದ್ದಾರೆಂಬುದು ಇಟಲಿಯ ಅಧಿಕಾರಿಗಳಿಗೆ ತಿಳಿದುಬಂದಿದ್ದರೂ ಅವರು ದಟ್ಟವಾದ ಕಾಡಿನಲ್ಲಿ ಯಾವುದೋ ಒಂದು ಗುಪ್ತ ಸ್ಥಳದಲ್ಲಿ ಇದ್ದ ಕಾರಣ ಅವರನ್ನು ಪತ್ತೆ ಮಾಡುವುದು ಅವರಿಗೆ ಸಾಧ್ಯವಾಗಲೇ ಇಲ್ಲ. ಅಬಿಸೀನಿಯದವರಲ್ಲಿ ಒಬ್ಬನಾದರೂ ಇಟಲಿಯವರ ಮಿತ್ರನಾಗಿ ಬ್ರಿಟಿಷ್ ಅಧಿಕಾರಿಗಳಿರುವ ಸ್ಥಳವನ್ನು ಅವರಿಗೆ ತೋರಿಸಿ ಕೊಡುವುದಕ್ಕೆ ಇಷ್ಟವಿಲ್ಲದೇ ಇಲ್ಲ ಈಗ ಅಬಿಸೀನಿಯದ ಸಾಮಂತರಲ್ಲಿ ಅನೇಕಾನೇಕ ಜನರು ಇಟಲಿಯ ವಿರಿದ ವಿಧೇಯರಾಗಿ ದಂಗೆ ಏಳುವುದಕ್ಕೆ ಸಿದ್ಧರಾಗುತ್ತಿದ್ದಾರೆ

ರುಮೇನಿಯಾದಲ್ಲಿ ದಂಗೆ !

ಜನರಲ್ ಆಂಟೊನೆಸ್ಕುರವರೂ ಮತ್ತು ಅವರ ಸೈನ್ಯ ಬಲದವರೂ ರುಮೇನಿಯದ ದಂಗೆಯ ಸ್ಥಿತಿಯನ್ನು ಪೂರ್ಣವಾಗಿ ಹತೋಟಿಗೆ ತಂದಿದ್ದಾರೆಂದೂ ಈಗ ಅಲ್ಲಿ ಶಾಂತಿಯು ನೆಲೆಸಿದೆಯೆಂದೂ, ೧೯ ಮಂದಿ ದಂಗೆಕೋರರು ಸತ್ತಿರೆಂದೂ, ದಂಗೆಕೋರರನ್ನು ಅಡಗಿಸಲು ಜರ್ಮನಿ ಸೈನಿಕರು ಸಹಾಯನೀಡಿದರೆಂಬುದು ಸುಳ್ಳೆಂದೂ ಪ್ರಕಟವಾಗಿದೆ ಜನರಲ್ ಆಂಟೊನೆಸ್ಕುರವರು ದಂಗೆಯನ್ನಡಗಿಸಲು ಉಗ್ರ ಶಾಸನ ಬಾಣಗಳನ್ನು ಆಚರಣೆಗೆ ತಂದಿದ್ದಾರೆ ಅಕ್ಕಪಕ್ಕದ ಪ್ರಾಂತಗಳಿಂದ ಬಂದಿರುವ ಸುದ್ದಿಗಳನ್ನು ನೋಡಿದರೆ, ಮೊದಲು ಊಹಿಸಿದ್ದುದಕ್ಕಿಂತ ಜೋರಾಗಿಯೇ ದಂಗೆಗಳು ನಡೆದವೆಂದು ಗೊತ್ತಾಗುತ್ತದೆ ಖಾರ್ಜನಿಕ ಸಭೆಗಳನ್ನು ನಿಷೇಧಿಸಲಾಗಿದೆ ಯಾರೂ ಆಯಿಧಗಳನ್ನಿಟ್ಟುಕೊಳ್ಳಲಾಗದೆಂದು. ಬಹಿಷ್ಕರಿಸಲಾಗಿದೆ ಸೈನಿಕರು ಮನೆಮನೆಗೂ ಹೋಗಿ ಶೋಧನೆ ಮಾಡುತ್ತಿದ್ದಾರೆ

ಬ್ರಿಟನ್ ನೌಕಾಬಲವನ್ನು ಜರ್ಮನ್ ವಿಮಾನಗಳು ಜಯಿಸಲಾರವು

ಜರ್ಮನಿಯ ನೌಕಾಬಲದ ಸುಪ್ರಸಿದ್ಧ ಇತಿಹಾಸ ಜ್ಞರೆನಿಸಿದ ಕ್ಯಾಪ್ಟೆಮನ್ ವಾಲ್ಟರ್ ಹಾಟ್ಟೆರವರು ಜರ್ಮನಿಯ ಒಂದು ಪತ್ರಿಕೆಯಲ್ಲಿ ಲೇಖನವನ್ನು ಬರೆಯುತ್ತಾ " ಬ್ರಿಟನ್ನಿನ ನೌಕಾ ಶಕ್ತಿಯನ್ನು ಜರ್ಮನ್ ವಿಮಾನ ಬಲವು ನಾಶಮಾಡಲು ಸಮರ್ಥವಾಗಿರಾರದೆಂದು " ತಿಳಿಸಿದ್ದಾರೆ

ಜರ್ಮನಿಯ ವಿಮಾನ ಬಲವು ಬ್ರಿಟನ್ನಿನ ನೌಕಾಬಲವನ್ನು ನಾಶಮಾಡಬಲ್ಲದೆಂಬ ಹಾಜಿಗಳ ಮಾತನ್ನು ಅವರು ಉಗ್ರವಾಗಿ ಖಂಡಿಸಿದ್ದಾರೆ ಸಮುದ್ರದ ಮೇಲೆ ಒಂದು ದೀರವು ಸ್ವಾಮಿತ್ವವನ್ನು ಇಟ್ಟುಕೊಂಡಿರುವ ವರೆಗೂ ಅದನ್ನು ಜಯಿಸುವುದಕ್ಕೆ ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಫ್ರಾನ್ಸಿನಫ್ಯಾಕ್ಟರಿ ಯಂತ್ರಗಳನ್ನು ಜರ್ಮನಿಗೆ ಸಾಗಿಸುತ್ತಿದ್ದಾರೆ.

"ಫ್ರಾನ್ಸಿನ ಅಯುಧ ಸಲಕರಣೆಗಳ ಫ್ಯಾಕ್ಟರಿಗಳ ಮಾಲೀಕರಿಗೂ ಕೂಲಿಗಾರರಿಗೂ ತೀವ್ರವಾದ ಭಿನ್ನಾಭಿಪ್ರಾಯಗಳುಬಾಗಿಯವದರಿಂದ ಜರ್ಮನರು ಫ್ರಾನ್ಸಿನ ಕಾರ್ಖಾನೆಗಳ ಪ್ರಯೋಜನಗಳನ್ನು ಪಡೆಯುವುದನ್ನು ಬಿಟ್ಟುಬಿಟ್ಟಿದ್ದಾರೆಂದೂ, ಫ್ರಾನ್ಸಿನ ಕಾರ್ಖಾನೆಗಳಲ್ಲಿರುವ ಯಂತ್ರಸಾಮಗ್ರಿಗಳನ್ನು ಜರ್ಮನರು ಜರ್ಮನಿಗೆ ತೆಗೆದುಕೊಂಡು ಹೋಗಿದ್ದಾರೆಂದೂ, ಇದಕ್ಕೆ ಪ್ರತಿಯಾಗಿ ಜರ್ಮನರು ಫ್ರೆಂಚ್‌ಮಾಲಿಕರಿಗೆ ಬೆಲೆಯನ್ನೇನೂ ಕೊಟ್ಟಿಲ್ಲವೆಂದೂ, ಫ್ರಾನ್ಸಿನಲ್ಲಿಹದೇಕಾರಿರುವ ಜರ್ಮನಿ ಸೈನ್ಯಪಡೆಗಳಿಗೆ ತಗಲುವ ವೆಚ್ಚದಲ್ಲಿ ಈ ಯಂತ್ರಗಳ ಬೆಲೆಯನ್ನು ವಜಾಮಾಡಲಾಗುವುದೆಂದು ಜರ್ಮನರು ಹೇಳಿದ್ದಾರೆಂದೂ" ದೇಲಿ ಟಿಲಿಗ್ರಾಫ್ ಪತ್ರಿಕೆಯು ಸ್ಪಷ್ಟಪಡಿಸಿದೆ.

ರಾಯಲ್ ಇನ್‌ಪೂರೆನ್ಸ್ ಕಂಪನಿ ಲಿಮಿಟೆಡ್ ಬೋಬಾಯಿ ಕೆಂಪನಿಯ ದಕ್ಷಿಣ ಕರ್ನಾಟಕದ ಅಫೀಸಿಯಲ್ ಅಗರ್ನೈಜರ್ ಜೆ. ಬಿ. ನರೇಂದ್ರಮರ ಹುಬ್ಬಳ್ಳಿ ಎಸ್ ಸಿ ಕೋದಂಡರಾಯಶೆಟ್ಟಿ ಆಂಡ್ ಕೋ ಮೈಸೂರು, ಲಕ್ಷ್ಮಿವಿಲಾಸಪ್ರೆಸ್ ಕಲಕತ್ತ, ನೆಲ್ಲುಣ ಆಂಡ್ ಕೋ. ಮದರಾಸ್ ಇತ್ಯಾದಿ ಕಂಪನಿಗಳವರು ಕಲುಪಿಸಿರುವ ಸುಂದರವಾದ ಕ್ಯಾಲೆಂಡರುಗಳನ್ನು ಅತ್ಯಾದರದಿಂದ ಸ್ವೀಕರಿಸುತ್ತೇನೆ.

ಜಪಾನಿಗೆ ವಿಷತ್ತು ಬರಲಿದೆ ಜಪಾನ್ ರಾಜಕುಮಾರರ ಭಾಷಣ

ಜಪಾನಿನ ಮಹಾಪ್ರಧಾನರಾದ ರಾಜಕುಮಾರ ಕೊನೋಮಿಯವರು 'ಥಯಟ್' ಸಭೆಯಲ್ಲಿ ಭಾಷಣ ಮಾಡುತ್ತ "ನಮ್ಮ ಸಾಮ್ರಾಜ್ಯವು ಅತ್ಯಂತ ಶೀಘ್ರವಾಗಿ ನಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ. ಈಗಿನ ಪರಿಸ್ಥಿತಿಯು ಹಿಂದೆಂದೂ ಒದಗಿರಲಿಲ್ಲ. ನಮ್ಮ ರಾಷ್ಟ್ರ ನೀತಿಯನ್ನು ಸಾಧಿಸಲು ಸಾಕಾಗುವಷ್ಟು ಶಕ್ತಿಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಗುವಂತೆ ಜನಾಂಗದ ಒಟ್ಟು ಬಲವನ್ನು ವೃದ್ಧಿಗೊಳಿಸಬೇಕಾಗಿದೆ. ಹೊರಗಡೆಯಿಂದ ಕೂಡ ನಾವು ಜಪಾನಿನ ಭವಿಷ್ಯವನ್ನು ಸಾಧಿಸಬೇಕಾಗಿದೆ. ಚೀನಾ ವಿಚಾರದಲ್ಲಿ ನಾವು ಇಟ್ಟುಕೊಂಡಿರುವ ಧೈರ್ಯದ ಆಧಾರದಮೇಲೆಯೇ ಪೂರ್ವ ವಿಷ್ಯಾದೆಲ್ಲಿಷ್ಟ ಹೊಸವ್ಯವಸ್ಥೆಯೊಂದನ್ನು ಸ್ಥಾಪಿಸಲು ನಾವು ಮುಂದಿಯಬೇಕಾಗಿದೆ. ವಿಶ್ವದಲ್ಲಿ ಶಾಂತಿಸ್ಥಾಪನೆ, ಪೂರ್ವ ವಿಷ್ಯಾದಲ್ಲಿ ಭದ್ರತೆಯಿಂದಕೂಡಿದ ವ್ಯವಸ್ಥೆ ಇವುಗಳನ್ನು ಸ್ಥಾಪಿಸುವುದೇ ಜಪಾನು ತ್ರಿರವ್ಯಷ್ಟ್ರಂಪ್ರಕ್ಕೆ ಸಹಿ ಹಾಕಿದ ಉದ್ದೇಶ. ನಾವು ಈಗ ಎಚ್ಚರಿಕೆಯಿಂದ ಸಿದ್ಧರಾಗದಿದ್ದರೆ ಜಪಾನಿಗೆ ಮಹಾವಿಪತ್ತೊದಗಲಿದೆ." ಎಂದು ಎಚ್ಚರಿಸಿದರು.

ಆಫ್ರಿಕಾದಲ್ಲಿ ಪುನಃ ೨೦ ಸಾವಿರ ಇಟಾಲಿಯನ್ನರ ಸೆರೆ !

ಇಟಲಿಯನರ ಟೋಬ್ರುಕ್ ನಗರವು 22 ನೇ ಕಾರೀ ಬಿನ ದಿವಸ ಬ್ರಿಟಿಷರ ವಶವಾಯಿತು ಇದುವರೆಗೆ 14,000 ಕ್ಕೆ ಮಿಗಿಲಿ ಶತ್ರುಗಳನ್ನು ಸೆರೆಹಿಡಿಯಲಾಗಿದೆ. ಇವರಲ್ಲಿ ಕಾಪ್ಸ್ ಕಮ್ಯಾಂಡರ್, ಡಿವಿಜ್ ಕಮ್ಯಾಂಡರ್, ಅನೇಕ ಸೈನ್ಯಾಧಿಕಾರಿಗಳು ಮತ್ತು ನೌಕಾಧಿಕಾರಿಗಳು ಇದ್ದಾರೆ ಬ್ರಿಟಿಷರ ಕಡೆಗೆ ಸುಮಾರು 500 ಮಂದಿ ಗಾಯಗೊಂಡರು ಶತ್ರುಗಳ ಕಡೆ ಎಷ್ಟುಮಂದಿ ಶತ್ರುರೆಂಬುದು ಖಂಡಿತವಾಗಿ ಗೊತ್ತಾಗಿಲ್ಲ ಗಾಯಗೊಂಡ 2000 ಮಂದಿ ಶತ್ರುಗಳನ್ನು ಈಗಾಗಲೇ ಬೇರೆ ಕಡೆಗೆ ಸಾಗಿಸಲಾಗಿದೆ. 200 ಫಿರಂಗಿಗಳೂ, ಆಪಾರ ಸಂಗ್ರಾಮ ವಸ್ತುಗಳೂ, ಹೆಸ್ಸಗತವಾದವು. ಎರಿಟ್ರಿಯಾದಲ್ಲಿ ಶತ್ರುಗಳು 100 ವೈಲಿಗಿಂತ ಹೆಚ್ಚಾಗಿ ಹಿಂದೆ ಸರಿದರು.

ಕಳೆದವಾರ ಬ್ರಿಟಿಷ್ ವಿಮಾನ ಪಡೆಯವರು ದೆರ್ನಾ ಮೇಲೆ ಉಗ್ರಮುತ್ತಿಗೆ ನಡೆಯಿಸಿದರು ಅಲ್ಲಿರುವ ಸೈನಿಕರ ಬಿಡಾರಗಳ ಮೇಲೆ ಹಲವು ಟನ್‌ಗಳಷ್ಟು ಬಾಂಬುಗಳನ್ನು ಸುರಿಸಿದುದರಿಂದ 80 ಮೈಲಿ ದೂರದವರೆಗೆ ಬೆಂಕಿಯು ಕಾಣುತ್ತಿತ್ತು. ಇತ್ತೀಚೆಗೆ 20,000 ಮಂದಿ ಇಟಾಲಿಯನರು ಸೆರೆಸಿಕ್ಕಿದ್ದಾರೆಂದು ಬ್ರಿಟಿಷ್ ಸೇನೆಯೊಡನೆ ಇರುವ 'ರಾಯಿಟರ್' ಸುದ್ದಿಗಾರರು ಅಂದಾಜು ಮಾಡಿದ್ದಾರೆ.

ಸ್ವೀಕಾರ.

ಸೊಲ್ಲಾಪುರದಲ್ಲಿ ನೆಲೆವೀಡಿರುವ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿಯಲ್ಲಿ ವೇ॥ ಕಾಳೇಗಹಳ್ಳಿ ರುದ್ರಾರಾಧ್ಯರು ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ] ರೂಪಾಯಿಯ ಖೌ॥ ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿಯುತ್ತಿದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಜಗದ್ಗುರು ರಂಭಾಪುರೀಪೀಠಕ್ಕೆ ಶ್ರೀಮನ್ಮಹಾರಾಜರವರ ಆಗಮನ

ಶ್ರೀಮನ್ಮಹಾರಾಜಾಧಿರಾಜ ಶ್ರೀಮತ್ಸಾರ್ವಭೌಮರೆನ್ನಿಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ಬಹದ್ದೂರ್ ಮಹಾಪ್ರಭುಗಳವರು ಭೆಬ್ರವರಿ ೧೬ ನೆಯ ತಾರೀಖಿನ ದಿವಸ ಶ್ರೀಜಗದ್ಗುರುರಂಭಾಪುರೀ ಮ.ಹಾಪೀಠದ ದರ್ಶನಕ್ಕಾಗಿ ದಯಮಾಡಿಸಿಗುವರು

[೩ ನೆಯ ಪುಟದಿಂದ ಮುಂದುವರೆದುದು]

ವೃತ್ಯಾಕರಣದುಬರಿಂದ ಸ್ರೀ ಪುರ ಹರ ಸಭೆಯು ಒಟ್ಟು ಗೂಡಿಸಿ ಮಾಡುವದಲ್ಲಿ ಬಂದಿತು ಸಭೆಗೆ ನಿಜಾಂ ಶಾಲಾಪಾ ನೆಂದೂರು ಶ್ರೀಗಳೂ, ಶ್ರೀ ವ ದಾಪುರೀ ಶ್ರೀಗಳೂ ಶ್ರೀ ಚಿದಂಬರೀ ಹಿರೇಸ ದರ ಗಲ ಬರಿಗದ ಶ್ರೀಗಳೂ, ಶ್ರೀ ಸತ್ಪತಿಗೇರಿ ಶ್ರೀಗಳೂ ಶ್ರೀಶೈ ಜೈನಾಪುರ ಶ್ರೀಗಳೂ ವಾರಣಾಸಿಯ ವಿದ್ಯಾರ್ಥಿಗಳೂ ಆಗಮಿಸಿ ವಿಶೇಷ ಕೋಳೆಯನ್ನುಂಟು ಮಾಡಿದ್ದರು ಊರಲ್ಲಿ ಶ್ರೀಸಿದ್ಧೇಶ್ವರಜಾತ್ರೆ ಇದ್ದುದ್ದರಿಂದ ಅನೇಕ ಸ್ಥಳಪರಸ್ಥಳದ ಜನರು ಸೇರಿ ಶ್ರೀ ಮಹಾಸನ್ನಿಧಿಯ ಮಹತ್ವಗಳನ್ನು ಕೇಳಿ ಧನ್ಯರಾದರು ಪುಷ್ಯ ತಿಥಿ ಪ್ರಿಯುಕ್ತ ಮರುದಿವಸ ಶ್ರೀಗಳ ವೇಷ ನಿಜಗುಣಾ ರಾಧ್ಯರು ಶ್ರೀಗಳಿಗೆ ಗಣವೇಷ ಕೇತರನೆಯ ನ್ನು ಶ್ರೀ ಮಲ್ಲಿಕಾರ್ಜುನ ದೇವಸ್ಥಾನವಲ್ಲಿ ಮಾಡಿ ಸರಸ್ವತಿಯ ಆನಂದಗೊಳಿಸಿದರ ತೃಪ್ತಿ ೦ನಯ ಸ್ವಾಮಿವರ ಶ್ರೀ ಚೆನ್ನಬಸವಯ್ಯನವರು ಪತಿಅನುಸೂಯಾ ಕೇತರನೆಯ ನ್ನು ಮಾಡಿ ಸಂರೇಷಗೊಳಿಸಿದರು

ಓರ್ವ ಗುರು ಭಕ್ತ

ಸುಪ್ರಸಿದ್ಧ ಶಿವಕ್ಷೇತ್ರಗಳು

ಭಾರತವರ್ಷದಲ್ಲಿನ ಪ್ರಸಿದ್ಧಗಳಲ್ಲಿ ಅನೇಕ ವಿಧ ಕ್ಷೇತ್ರಗಳು ವಿಶೇಷ ಪ್ರಸಿದ್ಧಿಯಲ್ಲಿವೆ ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗುವುದು—

೧ ಮಧುರೆ ಮೀನಾಕ್ಷಿ ಸುಂದರೇಶ್ವರ ಮಂದಿರ

ಮಧುರಾ ಪಟ್ಟಣವು ಒಮ್ಮೆಕಾಲದಲ್ಲಿ ರಾಜಧಾನಿ ಯಾಗಿರುವ ವೈಗೈನದೀ ದಡದಲ್ಲಿದ್ದು ತ್ತದೆ ಇಲ್ಲಿನ ಮೀನಾಕ್ಷಿ ಸುಂದರೇಶ್ವರ ದೇವಾಲಯವು ಅತ್ಯಂತ ವಿಶಾಲವಾಗಿ ರುತ್ತದೆ ಸುಮಾರು ಎರಡುಸಾರಿ ಆಡಿಗೆ ಎತ್ತರವಿರುತ್ತದೆ ದಕ್ಷಿಣ ಸಾರ್ವಭೌಮರಾದ ಶ್ರೀ ರಾಘೇಶ್ವರ ಶ್ರೀರಂಗ ಚಿದ ಒರ ಮೊದಲುದ ವಿಶಾಲವಾದ ದೇವ ಸ್ಥಾನಗಳಲ್ಲಿ ಇದ ಬಹಳ ಎತ್ತರವಾದುದ್ದು ಶಿಲ್ಪಕಲಾ ದೃಷ್ಟಿಯಿಂದ ಪರೀಕ್ಷಿಸಿದರೂ ಇದೇ ಬಹಳ ಶ್ರೇಷ್ಠವಾದುದು ಎಂದು ತಿಳಿದುಬರುತ್ತದೆ ಶ್ರೀ ಸುಂದರೇಶ್ವರನು ಮೀನಾಕ್ಷಿ ದೇವಿಯು (ಪರ್ವತರಾಜಪುತ್ರಿಯಾದ ಪಾರ್ವತಿಯ ಇನ್ನೊಂದು ಹೆಸರು) ಇವರಿಗೆ ಸಂಬಂಧಿಸಿದಂತೆ ಅನೇಕ ಪುರಾಣ ಕಥೆಗಳು ಪ್ರಚಲಿತವಾಗಿವೆ ಇವರಿಗೆ ಸಂಬಂಧಿಸಿದಂತೆ ಅನೇಕ ಉತ್ಸವಗಳು ಪ್ರತಿವರ್ಷವೂ ನಡೆಯುತ್ತವೆ ಅವುಗಳಲ್ಲಿ ಚಿತ್ತಿರೈ ಉತ್ಸವವು ಬಹಳ ಪ್ರಸಿದ್ಧವಾದುದು ಈ ಉತ್ಸವವು ಚಿತ್ತಿರೈ ತಿಂಗಳಲ್ಲಿ ಹತ್ತು ದಿವಸಗಳು ನಡೆಯುತ್ತದೆ ಈ ಉತ್ಸವದಲ್ಲಿ ಮೀನಾಕ್ಷಿ ಸುಂದರೇಶ್ವರರ ಕಲ್ಯಾಣೋತ್ಸವವು ಬಹಳ ಪ್ರಸಿದ್ಧವಾದುದು ಈ ಉತ್ಸವವು ಸುಮಾರು ೧೫ ದಿವಸಗಳು ನಡೆಯುತ್ತದೆ ಈ ಉತ್ಸವದಲ್ಲಿ ಸಾವಿರಾರು ಜನರು ಸೇರುತ್ತಾರೆ ಈ ಉತ್ಸವದಲ್ಲಿ ಸಾವಿರಾರು ರೂಪಾಯಿಗಳು ಖರ್ಚಾಗುತ್ತವೆ ಈ ಉತ್ಸವವನ್ನು ಮಧುರೆಯ ಪ್ರಜೆಗಳೆಲ್ಲರೂ ಸೇರಿ ಆಚರಿಸುತ್ತಾರೆ ಈ ಉತ್ಸವವನ್ನು ಆಚರಿಸಲು ಅನೇಕ ಸಾವಿರ ರೂಪಾಯಿಗಳು ಖರ್ಚಾಗುತ್ತವ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ತಿಯೊಂದು ಗುರುವರ್ಗದ ಮಠಕ್ಕೆ ಸಂಬಂಧವಾದ ಶಿಷ್ಯರ ಮನೆಗಳಿರುತ್ತವೆ. ಆ ಮಹಾಭಾಗರಿಗೆ ಯಾವಪರ್ಯಂತ್ರವೋ ಹತ್ತು ವರ್ಷಗಳಿಗೊ ಒಂದುಸಾರಿ ಹೋಗಿ ಶಿಷ್ಯರ ಮನೆಗಳಲ್ಲಿ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರು ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿರುವರು ಈ ಅವ್ಯವಸ್ಥೆಯಿಂದ ಅನೇಕ ಮತೆದವರಿಗೆ ತಮ್ಮ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ ಇದನ್ನು ಮೂರನೂಪುವುಕ್ಕೊಡ್ಡಿದ್ದರ ಸಲೀಲಂಡ ಪುಸ್ತಕವನ್ನು ಹೊಸದಾಗಿ ಮುದ್ರಾಂಗೊಳಿಸಿದ್ದೇವೆ ಇದರಲ್ಲಿ ಒಟ್ಟುವ ವಿಷಯಗಳ ವಿವರವು ಇನ್ನಾಗಿ ತೋರಿಸಲ್ಪಟ್ಟಿದೆ ಅದುದರಿಂದ ಸದರಿ ಪುಸ್ತಕವನ್ನು ಶಿಷ್ಯಮನೆ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರಗಳನ್ನೆಲ್ಲಾ ಬರೆದು ಮಂತ್ರಾಕ್ಷತೆ ಪಡೆಯುವುದು ಒಂದು ಪದ್ಧತಿಯಾಗಿ ತಮ್ಮ ಶಿಷ ರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಸಂಪೂರ್ಣ ತೆಪದಂಥ ಕಾಗದಗಳನ್ನು ಪಡೆಯಲಿಸುವುದಕ್ಕಿಂತ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪೀಷ್ಠಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
, ತಿನೇ ನೆಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಬಾಲಸಿಂಧೂರ	೧	೪—೦—೦
ತಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು

ವೈಡೂರ್ಯಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಕಾಮ್ರಭಸ್ಮ	೧	೦—೮—೦
ಮೋಹಭಸ್ಮ	೧	೦-೧೫—೦
ಅಂಗಭಸ್ಮ	೧	೦—೮—೦
ಲಿಂಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಭೃಕಭಸ್ಮ	೧	೩—೦—೦
ತ್ರಾಳಿಭಸ್ಮ	೧	೦—೮—೦
ಗಜಿನಭಸ್ಮ	೧	೦—೮—೦
ಸ್ಫಟಿಭಸ್ಮ	೧	೦—೮—೦
ಲಂಡೂರಭಸ್ಮ	೧	೦—೮—೦
ರ್ಣಮುಕ್ತಿಕಾಭಸ್ಮ	೧	೦-೧೫—೦
ಲಕ್ಕಾಭಸ್ಮ	೧	೪೦—೦—೦
ತಾಲಭಸ್ಮ	೧	೦—೮—೦
ೈಟಿಪ್ಪಿನೆ ಭಸ್ಮ	೧	೨—೮—೦
ಂಗದ ಕೋಡಿನೆ ಭಸ್ಮ	೧	೦—೮—೦
ತಿಂತಿಹರತಾಳಭಸ್ಮ	೧	೦—೮—೦
್ಯೂರಿ (೧ನೇ ನಂಬರ್)	೧	೫೦—೦—೦
ಾಜಿತ ಸೂರ್ಯಪುಟ	೧	೧—೦—೦
ಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಜೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ದಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರು,

ಆಯುರ್ವೇದ ರಸಾಯನಶಾಲಾ,

ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ ಯು ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇಗಿ ಪಂಗಿ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲವಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದನುಂಶ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇವಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಪ್ರತ್ಯೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಪುಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಮಾರ್ಜಿತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ತ್ರೋತ್ರನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೫ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಪ್ರಪ್ರಥಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕೆ ಕನ್ನಡ ಟೀಕೆಯು ೧೩೨೫ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘೋಷಣೋಪಹಾರವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ೪ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತರತ್ನವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಹುಡ್ಡಿನಕಡೆಗೆ ನೃಪ್ಪಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೪ ರೂಪಾಯಿ** ಒಂಬೆರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೩ ರೂ ೧೪** ದೊರೆಯುವುದು ವಿ ಪಿ ಚಾರ್ಜು ೧೧೫ ೫ ಆಣೆ ಪ್ರತ್ಯೇಕ

ಮ್ಯಾನೇಜರ್—

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಆಮ್ಯತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಅನುಗ್ರಹ ವೈಭವ, ವ್ಯಾಸ, ಸಾಮಂತ, ಮೊದಲಾದ ಮಹರ್ಷಿಗಳಿಗೆ ಶಿವತತ್ವಾಂತವನ್ನು ಪದೇಶಿಸುವ ಫೋಟೋ ಸೈಜು ೧೮×೧೪ ಬೆಲೆ . ೦—೧—೬

ಸದ್ಯ: ಸೀತಾಲೋಪಹರಣದಿಂದ ನಿಸರು ಆರ್ಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ ಕ್ಕೆ . ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರ ಫೋಟೋ ಸೈಜು ೨೦×೧೪ ಬೆಲೆ ೧೫ ಕ್ಕೆ . ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾವತಾರದ ಭೂಭಾರವಿಳಿವ ಅವತಾರದ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟ ಭಧೇಕ ಮಾಡುವ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ವಿಭಿನ್ನವಾದ ಸ್ವರ್ಣಸಿಂಹಾಸನದಲ್ಲಿ ಏಕಕಾಲದಲ್ಲಿಯೇ ಸೂಚಿಸಿಕೊಟ್ಟ ಗುರುರೂಪವನ್ನು ಧಾರಣೆಮಾಡಿ ಮೂವರಿಗೂ ಒಬ್ಬರಿಗೊಬ್ಬರು ಸಮಾನರೆಂಬ ಪ್ರತಿಪಾದಿಸುವ ಫೋಟೋ ಇಲ್ಲಿ ಸಿಗುವುದು ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯಾದಿ ಮಹರ್ಷಿಗಳಿಗೆ ಚಿದ್ರೂಪಲಿಂಗವನ್ನು ಅನುಗ್ರಹಿಸುವ ಫೋಟೋ .. ೦—೦—೯

ಶ್ರೀಶೈಲಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ಪಂಚಾಚಾರ್ಯರ ಇಂಪೀರಿಯಲ್ ಫೋಟೋ .. ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ಶಿವಾಚಾರ್ಯರ ಫೋಟೋ . ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಟ್ಟಲಿಂಗತಾಚಾರ್ಯರ ಫೋಟೋ . ೦—೦—೯

ಶ್ರೀಮದ್ರಂಭಾಪುರೀ ಸೀಹಾಸನಾಧೀಶ್ವರ ಜಗದ್ಗುರು ಪಾದಾನುಷ್ಠಾನ ಕಾರ್ಯ ಮಹಾಸ್ವಾಮಿಗಳವರ ಫೋಟೋ .. ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರು ಸ್ವಯಂಪ್ರಕಾಶ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಕೂಡಿದ ಶ್ರೀ ಕಾಶೀ ವಿದ್ವತ್ಸಭೆಯವರ ಫೋಟೋ ಬೆಲೆ ೧೫ ಕ್ಕೆ . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಸಮಸ್ತಾಧಿಕಾರಿಗಳ ಸಹಿತವಾದ ಫೋಟೋ ೧೫ ಕ್ಕೆ . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀಟಿನ ಚತ್ರ ಚಾಮರಗಳಿಂದ ಕೂಡಿದ ಸುಂದರ ಫೋಟೋ ೧೫ ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರ ಪೀಠದ ಚತ್ರ ಚಾಮರಗಳಿಂದ ಕೂಡಿದ ಸುಂದರವಾದ ಗೌರೀಶರ ಫೋಟೋ . ೦—೦—೯

ಹಿಮವತ್ಕೇದಾರ ಮಧ್ಯದಲ್ಲಿ ಜರುಗುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರುದ್ರಾಭಿಷೇಕ ಜಗದ್ಗುರು ಸಂದರ್ಭದಲ್ಲಿ ಶ್ರೀಲಂಕ್ಷಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೦—೯

ಬೆಂಗಳೂರು ಸಿಟಿಯಲ್ಲಿ ನಡೆದ ವೀರಶೈವ ಧರ್ಮಪ್ರಚಾರ ಜಗದ್ಗುರುಗಳ ಅದ್ದೂರಿಯ ಸಮಿರೋತ್ಸವದ ಫೋಟೋ ೦—೦—೯

ಕೂಡಿಸಿದ ಎಲ್ಲಾ ಸಿಂಗಿಸಿದ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ಖರೀದಿಸಿದವರಿಗೆ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೆ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆಯ ಬ್ಲಿಯ ನೋಗಗಳು. ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೮-೦ ವಿ.ಪಿ ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆದಿರಿ

ಗುರುಬಸವ ಅಂಡ್ ಸಂಜೆವಿ ಲಿಮಿಟೆಡ್,

[37] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೫ನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮ ವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚಮಂತ್ರಿ ಪ್ರಶ್ನೋತ್ತರಕಾರಿ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಸೋಜಾಚಾರ್ಯ ಮಂಗಲಸ್ತ್ರೋತ್ರಾವಳಿ (೯ನೆಯ ಆವೃತ್ತಿ)			೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	....		೨ ಆಣೆ
ಬಸವಾದಿಪ್ರಾಪಿತತ್ವದಪರಣ (೩ನೆಯ ಆವೃತ್ತಿ)	...		೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	....		೨ ಆಣೆ
ಪಂಚಾಚಾರ್ಯಪ್ರಭಾಕರ	....		೨ ಆಣೆ
ಶ್ರೀಗುರುತತ್ತ್ವಪದಗಳು ..	....	....	೨ ಆಣೆ
ಶ್ರೀರುದ್ರಮುಖಶಿವ ಚಾರ್ಯಶತಕ		....	೨ ಆಣೆ
ವೀರಶೈವಮತಮೀಮಾಂಸಾ	....	....	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸತ್ಯಾಸಾಶ್ರಮವಿಮರ್ಶತತ್ತ್ವ ಸ್ಪಷ್ಟೀಕರಣ (೩ನೆಯ ಆವೃತ್ತಿ)		....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿತ್ರಸಹಿತ)		....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಬಸವಧ್ಯಾನಂತದಿವಾಕರ (೩ನೆಯ ಆವೃತ್ತಿ)	....	....	೮ ಆಣೆ
ಶಿವಾದ್ವೈತಪ್ರಭಾವಾ (ಸಂಸ್ಕೃತ)	...	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಸಚರಿತಮು (ತೆಲುಗು)			೮ ಆಣೆ
ಪದ್ಯೋಧರತ್ನಾವಳಿ ..	....	....	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗಿ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಭೋಜಸಿವಾಚಾರ್ಯಕೃತ)		....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....		೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....	...	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....	....	೧೨ ಆಣೆ
ಶ್ರೀಕರಧಾಮ್ಯಂ (ಚಮತ್ಕೃಸ್ತೋತ್ರ)	..	....	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....	....	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೪೦ಮಹತ್ವದ ಫೋಟೋಗಳಿರುವವು)	....		೧೫ ರೂ
ಸಿದ್ಧಾಂತಶಿಖಾಮಣಿಪಪಷ್ (ಕನ್ನಡ ವ್ಯಾಖ್ಯಾನಸಹಿತ)		...	೧ ರೂ.
ಕೇದೋಪನಿಷತ್ (ಕನ್ನಡ ವ್ಯಾಖ್ಯಾನಸಹಿತ)	....	....	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಾನುವಾದ)		....	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ)	....	....	೨ ರೂ
ವೀರಶೈವಸಿದ್ಧಾಂತಸುಧಾಕರ	....	....	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೫ ಪುಟ)	....	....	೪ ರೂ
A brief life-sketch of Pandit Sri Kashinatha Shastriji (*English*)			**4 As.**
The Philosophical Aspect of Virasaivism (*English*)	....		**8 As.**
Speeches by Pandit Shri Kashinatha Shastriji *English*)			**12 As.**
ಶಿವಾಚಾರಚಂದ್ರಿಕಾ (ಸಂಸ್ಕೃತ)	...	...	೩ ಕ.
ವೀರಶೈವರತ್ನ (ಕನ್ನಡ) ...	...	..	೧ ಕ.
ಮಹಾಚಾರಚಂದ್ರಿಕೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)			೧ ಕ.
ವೀರಶೈವೈತ್ಯಕೇಶರ (ಸಂಸ್ಕೃತ)	...	...	೧ ಕ
ಶುಕಸಪ್ತಕಮ್ (ವೀರಶೈವಾಚಿನಭಾಷೆಗಳಲ್ಲಿ)	....	..	೪ ಆಣೆ
ಸಂಧಿಕೌಮುದಕಾರಿಕಾ (ಸಂಸ್ಕೃತ)	.	...	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀರಾಘವೇಂದ್ರ ಪಂಚಾಚಾರ್ಯಾಭ್ಯಾಂ ಪ್ರಸೀದತಾಂ ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರ್ಯನಿಯಾಮಕರ್ ಪರಿಲಸತ್ಪಂಚಾಕ್ಷರೀದೀಕ್ಷಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಜೋಕಮಂ ॥

ಸ್ಥಳವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ಗಿಕ್ಕೆ ೬ ಸೈ ಪರಸ್ಥಳವರಿಗೆ ೨ ರೂ ೮ ಆಣೆ ವಿ. ಪಿ. ಹಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ ನೇ ಫೆಬ್ರುವರಿ ೧೯೪೧ [ಸಂಚಿಕೆ ೩೯

ಹರ್ ಹಿಟ್ಲರರ ಭಾಷಣ

ಬ್ರಿಟನ್ನಿನ ನಿಂದೆ, ಅಮೆರಿಕೆಗೆ ಭಯಪ್ರದರ್ಶನ.

ಹರ್ ಹಿಟ್ಲರರವರು ಬರ್ಲಿನ್ನಿನ ಸ್ಪೋರ್ಟ್ಸ್ ಪ್ಯಾಲೇಸಿನಲ್ಲಿ ಕಳೆದ 30 ನೆಯ ತಾರೀಖಿನ ದಿವಸ ಜೋರಾದ ಭಾಷಣ ಮಾಡಿದರು. ಮುಖ್ಯಾಧಿಕಾರಿಗಳೂ, ಸಚಿವರೂ ಮತ್ತು ನಾಜಿಪಕ್ಷದ ಪ್ರಮುಖರೂ ವೇದಿಕೆಯ ಮೇಲೆ ಮಂಡಿಸಿದ್ದರು ನಾಜಿಧ್ವಜಗಳಿಂದ ಸಭಾಮಂಟಪವನ್ನು ಅಲಂಕರಿಸಲಾಗಿತ್ತು.

"ಬ್ರಿಟನ್ನು ೩೦೦ ವರ್ಷಗಳಕಾಲ ಪಾಶವಿಬಲವನ್ನು ಉಪಯೋಗಿಸಿ, ಈಗಿನ ಬ್ರಿಟಿಷ್ ಸಾಮ್ರಾಜ್ಯವನ್ನು ಕಟ್ಟಲಾಗಿದೆಯೆಂದೂ ಬ್ರಿಟನ್ನು ಒಂದರಹಿಂದೊಂದರಂತೆ ಯುದ್ಧ ನಡೆಸಿತೆಂದೂ, ಬ್ರಿಟನ್ನಿಗೆ ಸಹಾಯ ಮಾಡಲೆತ್ನಿಸುವ ಯಾರೇ ಆಗಲಿ ನಮ್ಮ ಟಾರ್ಪೆಡೋ ಒಳಗಿರುವ ಪ್ರತಿಯೊಂದು ಹಡಗಿಗೂ ಟಾರ್ಪೆಡೋವನ್ನು ಠಾಸಿಸಲಾಗುವುದೆಂಬುದನ್ನು ಮರೆಯಕೂಡದೆಂದೂ, ಯೂರೋಪಿನ ಯುದ್ಧದಲ್ಲಿ ತಲೆಹಾಕಲು ಅಮೆರಿಕನ್ನರೇ ನಾದರೂ ಪ್ರಯತ್ನಿಸಿದರೆ ನಮ್ಮ ಗುರಿಯು ತತ್‌ಕ್ಷಣ ಬದಲಾವಣೆ ಹೊಂದುವುದೆಂದೂ, ಅಂತಹ ಪ್ರಯತ್ನವನ್ನು ಯೂರೋಪು ಖಂಡತ ಸಹಿಸುವುದಿಲ್ಲವೆಂದೂ, ಬ್ರಿಟನ್ನಿಗೆ ಜಗತ್ತಿನಲ್ಲೆಲ್ಲ ತಾನೇತಾನಾಗಿ ಮೆರೆಯಬೇಕೆಂಬ ಅಕಿಯಿದೆಯೆಂದೂ, ಯೂರೋಪಿನಲ್ಲಿ ಜರ್ಮನಿ ಮತ್ತು ಇಟಲಿ ಜನಾಂಗಗಳು ತಲೆ ಎತ್ತಿರುವಂದಿ ಬ್ರಿಟನ್ನಿನ ಈ ಆಶೆ ನೆರವೇರಲು ಅಡ್ಡಿಯಾಯಿತೆಂದೂ, ಇಟಲಿ ಮತ್ತು ಜರ್ಮನಿಗಳು ಇನ್ನೂ ಹೆಚ್ಚಾಗಿ ತಲೆ ಎತ್ತದಂತೆ ಮಾಡಲೆಳ್ಕೆಯೇ ಬ್ರಿಟನ್ನು ೧೯೧೪ ರಲ್ಲಿ ಸಂಗ್ರಾಮವನ್ನು ಆರಂಭಿಸಿದೆಂದೂ, ಕಳೆದ ಯುದ್ಧದಲ್ಲಿ ಜರ್ಮನಿಯು ಖಂಡಿತವಾಗಿಯೂ ಸೋಲಿಸಲ್ಪಡಲಿಲ್ಲವೆಂದೂ, ಹಲವು ವ್ಯಕ್ತಿಗಳ ಆಯೋಗ್ಯತೆಯ ದೆಸೆಯಿಂದ ಜರ್ಮನಿಗೆ ಜಯವು ಲಭಿಸದೆ ಹೋಯಿತೆಂದೂ, ಇದರಿಂದ ಜರ್ಮನ್ ಜನಾಂಗವು ಒಂದು ಪಾಠವನ್ನು ಕಲಿಯಿತೆಂದೂ, ಜರ್ಮನ್ ಪ್ರಜಾಪ್ರಭುತ್ವವು ವಿಫಾದ ಪೂರ್ಣವಾದ ಕಲ್ಪನೆಯೆಂಬುದನ್ನು ಅದು ಮರೆತಿಲ್ಲವೆಂದೂ, 'ನ್ಯಾಷನಲಿಸ್ಟ್' ಮತ್ತು 'ಸೋಷಿಯಲಿಸ್ಟ್' ಗುಂಪುಗಳಲ್ಲಿ ರಚನಾತ್ಮಕವಾದ ಆದರ್ಶಗಳೇ ಮಾಡಿರದೂ ಅವೆರಡೂ ಉಗ್ರವಾಗಿ ಹೊಡೆದಾಡುತ್ತಿದ್ದವೆಂದೂ, ಈ ಎರಡನ್ನೂ ಒಂದುಗೂಡಿಸಬೇಕಾಗಿತ್ತೆಂದೂ, ನಾವು ಈಗ ಈ ಐಕಮತ್ಯವನ್ನು ಸ್ಥಾಪಿಸಿದ್ದೇವೆಂದೂ, ಕೇವಲ ಪ್ರೇರಣೆಯಿಂದಲೇ ನಾಜಿ ಪಕ್ಷವನ್ನು ಸ್ಥಾಪಿಸಲಾಯಿತೆಂದೂ, ಹಾಗಿಗೆ ಜರ್ಮನ್ ಜನಾಂಗದಿಂದ ಅಧಿಕಾರದಂಡವನ್ನು ಪಡೆದಿದ್ದೇನೆಂದೂ" ನುಡಿದರು.

ಜರ್ಮನಿಯ ನೀತಿ

"ವಿದೇಶಾಂಗ ನೀತಿಯನ್ನು ಒಂದೇ ಒಂದು ವಾಕ್ಯದಲ್ಲಿ ಸಂಗ್ರಹವಾಗಿ ಹೇಳಬಹುದು, ನರ್ವೇಲ್ಸ್ ಕರಾರನ್ನು ರದ್ದುಗೊಳಿಸುವುದೇ ಅದು ನಾನು ಕೊಟ್ಟಿರುವ ಅನೇಕ ಭಾಷಣಗಳಲ್ಲಿ ಸುಸ್ಪಷ್ಟ ಹೇಳಿಕೆಗಳಲ್ಲಿ ಶಾಂತ ರೀತಿಯಲ್ಲಿ ಈ ಕರಾರನ್ನು ಬದಲಾವಣೆ ಮಾಡಬೇಕೆಂಬ ಒಂದೇ ಆಭಿಪ್ರಾಯವಿದೆ. ನಾನು ಶಾಂತ ರೀತಿಯಲ್ಲಿ ನಡೆಯಿಸಿದ ಪ್ರಯತ್ನಗಳಲ್ಲಿ ನಿಷ್ಫಲವಾದವು ಬ್ರಿಟನ್ನಿನೊಂದಿಗೆ ನನಗೆ ಜಗಳವೇ ಇರಲಿಲ್ಲ ನನ್ನ ಸ್ನೇಹ ಹೆತ್ತವನ್ನು ಮೇರಿಂದ ಮೇಲೆ ನೀತಿದೆ ನನಗೂ ಬ್ರಿಟನ್ನಿಗೂ ಭಿನ್ನಭಿಪ್ರಾಯದ ಒಂದೇಒಂದು ಅಂಶವೆಂದರೆ ಕಾಲೋನಿಗಳ ವಿಚಾರ ಇಷ್ಟು ಆತುರದ ವಿಚಾರವೇನೂ ಆಗಿರಲಿಲ್ಲ ಬ್ರಿಟನ್ನಿಗೆ ತಾಲೋನಿಗಳು ಅತ್ಯಯೋಜಕವಾಗಿವೆ ಅದೂ ಅದು ಭೂಪಾಷ್ಟದಿಂದ ಅದಕ್ಕೇ ಕಚ್ಚಿಕೊಂಡು ಕುಳಿತಿದೆ.

ಬ್ರಿಟಿಷ್ ಕುಲಿಗಾರ ಮುಂಚೂಣಿಗಳ ಸಾಮರ್ಥ್ಯ ಶತ್ರುಗಳನ್ನು ಕದಿಯುತ್ತಿದ್ದಾರೆ ಯುದ್ಧವು ಬಹಳ ಕಾಲ ಮುಂದುವರಿದರೆ ಇದು ಬ್ರಿಟನ್ನಿನ ಮೇಲೆ ವಿಪತ್ಕಾರ ಪರಿಣಾಮವನ್ನುಂಟುಮಾಡುತ್ತದೆ."

ಯುದ್ಧವು ಆರಂಭವಾದಂದಿನಿಂದ ತಾವು ಶಾಂತಿಗಾಗಿ ನಡೆಸುತ್ತಿರುವ ಪ್ರಯತ್ನದ ವೈಖರಿಯನ್ನೆತ್ತಿ— "ಫ್ರಾನ್ಸು ಉರುಳಿದಮೇಲೆ ನಾನು ಬ್ರಿಟನ್ನಿಗೆ ಶಾಂತಿ ಹಸ್ತವನ್ನು ನೀಡಿದೆ ಆಗ ನನ್ನನ್ನು ಅದು ಪರಿಹಾಸ್ಯ ಮಾಡಿತು. ಬ್ರಿಟಿಷರು ನನ್ನ ಮುಖಕ್ಕೆ ಉಗುಳಿದರು." ಎಂದು ನುಡಿದರು

"ಇಟಲಿಗೂ ಜರ್ಮನಿಗೂ ಭಿನ್ನಾಭಿಪ್ರಾಯ ಬೇಟಾಗುವುದೆಂದು ಭವಿಷ್ಯ ನುಡಿಯುವುದರಲ್ಲಿ ಉಪಯೋಗವಿಲ್ಲ. ಅಥವಾ ಇಟಲಿಯು ಯುದ್ಧದಿಂದ ಹೊರಗಾಗುವುದೆಂದು ಹೇಳುವುದು ಕೂಡ ಉಪಯೋಗವಿಲ್ಲ ಇಟಲಿಯಲ್ಲಿ ಕ್ರಾಂತಿಯುಂಟಾಗುವುದೆಂದು ಊಹಿಸುವುದಂತೂ ಆಗದ ಮಾತು ನಾವು ಬ್ರಿಟನ್ನಿಗೆ ಎಲ್ಲೆಲ್ಲಿ ವಿಟುಹಾಕಬಹುದೋ ಅಲ್ಲೆಲ್ಲ ವಿಟು ಹಾಕುತ್ತೇವೆ. ನಮ್ಮ ಜೊತೆಗಾರನಿಗೆ ಲಭಿಸಿದ ಹಲವು ಮೆದ್ದುಪೈರಿನ ಪ್ರಸಂಗಗಳಲ್ಲಿ ತಮ್ಮ ನಿಜಬಲ ಕುರಿಯಿದೆಯೆಂದು ಬ್ರಿಟನ್ನು ಎಂದಿಸುವುದಾದರೆ ನನಗೆದು ಆರ್ಥವಾಗುವುದಿಲ್ಲ. ನಾನೂ ಮಸೋಲಿನಿಯೆಯರೂ ಯಕೊದ್ಯರೂ ಅಲ್ಲ ವ್ಯಾಪಾರಿಗಾರರೂ ಅಲ್ಲ ಹಾಗಿಗೆ ಕೈಜೋಡಿಸಿ ನಿಂತಿದ್ದರೆ, ಆತ್ಮಗೌರವವುಳ್ಳವರು ಕೈಜೋಡಿಸಿ ನಿಂತಿರುವ ಸಂದರ್ಭವದು" ಎಂದು ಹೇಳಿದರು

ತಮ್ಮ ಭಾಷಣವನ್ನು ಮುಗಿಸುತ್ತ "ಪ್ರಚಾರ ಮತ್ತು ಸುಳ್ಳುಹೇಳುವುದರಿಂದ ಜರ್ಮನಿಯನ್ನು ಪಾದಾಕ್ರಾಂತರನ್ನಾಗಿ ಮಾಡಿಕೊಳ್ಳಬೇಕೆಂದು ಬ್ರಿಟಿಷರು ಭಾವಿಸಿದ್ದರೆ ಅವರು ಇಷ್ಟು ದೀರ್ಘಕಾಲ ಸುಮ್ಮನಿರಬಾರದಾಗಿತ್ತೆಂದು ನಾನು ಹೇಳುವೆನು. ಇಟಲಿ ಜಪಾನಿಗೂ ಮತ್ತು ಮಸೂಲಿನಿಯವರಿಗೂ ಭಿನ್ನಾಭಿಪ್ರಾಯವುಂಟು ಮಾಡಲು ಈಗ ನಡೆಸುತ್ತಿರುವ ಪ್ರಯತ್ನವು ಎಷ್ಟು ಹಾಸ್ಯಾಸ್ಪದವಾಗಿದೆಯೋ ಅದೂ ಕೂಡ ಅಷ್ಟೇ ಹಾಸ್ಯಾಸ್ಪದವಾದುದು ಹಾಗೀಗ ಹೊಸ ವರ್ಷದಲ್ಲಿ ಆಡಿಯಿಟ್ಟಿದ್ದೇವೆ ಜರ್ಮನಿಯು ಇಷ್ಟು ಬಲಯುತ ರೀತಿಯಲ್ಲಿ ಶಸ್ತ್ರಸಂಗ್ರಹ ಮಾಡಿಸಿದ್ದು ಅನರ ಇತಿಹಾಸದಲ್ಲಿ ಇನ್ನೊಂದು ಇಲ್ಲ ಈ ಶರದ್ಋತುವಿನಲ್ಲಿ ನಾವು ಯು-ಬೋಟ್ ಚಟುವಟಿಕೆಯನ್ನು ಆರಂಭಿಸುತ್ತೇವೆ. ಆಗ ನಾವು ಮಲಗಿ ನಿದ್ದೆಮಾಡುತ್ತಿರುವಿದಿಲ್ಲವೆಂದು ನಮ್ಮ ಶತ್ರುಗಳು ಅರಿಯುವರು. ನಮಗೆ ವಿಜಯವು ಖಂಡಿತ ನೆಂಬ ನಂಬಿಕೆ ಪೂರ್ಣವಾಗಿದೆ ೧೯೪೧ ನೇ ವರ್ಷದಲ್ಲಿ ದೇವರು ನಮ್ಮನ್ನು ಕೈ ಬಿಡದಿರಲೆಂದು ಪ್ರಾರ್ಥನೆ ಮಾಡುತ್ತೇನೆ" ಎಂದು ಹೇಳಿದರು

ಶ್ರೀ ರೂಜ್‌ವೆಲ್ಟರ ಭರವಸೆ

ಹರ್ ಹಿಟ್ಲರರು ಎಷ್ಟು ವೆದರಿಸಿದರೂ ಹೆದರದೆ ಅಮೆರಿಕೆಯು ಬ್ರಿಟನ್ನಿಗೆ ಹೆಚ್ಚು ಹೆಚ್ಚಾಗಿ ಸಹಾಯ ಮಾಡುತ್ತ ಹೋಗಬೇಕೆಂಬ ತನ್ನ ನೀತಿಯನ್ನು ಬಿಡದೆ ಅನುಸರಿಸುತ್ತ ಹೋಗುವುದೆಂದು ಶ್ರೀ ರೂಜ್‌ವೆಲ್ಟರು ಬ್ರಿಟನ್ನಿನ ಪ್ರತಿನಿಧಿಗಳಾದ ಲಾರ್ಡ್ ಹ್ಯಾಲಿಫಾಕ್ಸ್‌ರವರಿಗೆ ಭರವಸೆ ಇತ್ತರು

ಸೆರೆ ಸಿಕ್ಕ ಸೈನಿಕರಿಂದ ವ್ಯವಸಾಯ

ಬ್ರಿಟನ್ನಿನ ಸಂಗ್ರಾಮ ಸಚಿವರು ಇಟಲಿಯ ಖಂದಿಗಳ ವಿಚಾರವಾಗಿ ವಿವರಿಸುತ್ತ 'ಅನೇಕ ಮಂದಿ ಕೈಸೆರೆ ಸಿಕ್ಕಿರುವ ಇಟಲಿಯ ಯೋಧರನ್ನು ಭರತಖಂಡಕ್ಕೆ ಕಳುಹಿಸಿಕೊಡಲಾಗುವದಲ್ಲದೆ, ಬ್ರಿಟನ್ನಿನಲ್ಲಿ ವ್ಯವಸಾಯದಲ್ಲಿ ತೊಡಗಿರುವವರ ಸಂಖ್ಯೆಯು ಕಡಿಮೆಯಾಗಿರುವದರಿಂದ ಇಟಾಲಿಯ ಬಂದಿಗಳನ್ನು ಕರೆಕಂಬಿ ಈ ಕೆಲಸಕ್ಕೆ ನಿಯಮಿಸಿಕೊಳ್ಳಲಾಗುವದೆಂದು ಸೂಚಿಸಿದರು.

ಕೌಂಟ್ ಸಿಯಾನೋರವರನ್ನು ಹೊರಗಟ್ಟಿದ್ದಾರೆ.

ಕೌಂಟ್ ಸಿಯಾನೋರವರು ಮಂತ್ರಿಪದವಿಯನ್ನು ಬಿಟ್ಟು ಬಾಂಬರ್ ವಿಮಾನ ಪಡೆಯೊಂದರ ಅಧಿಕಾರವನ್ನು ವಹಿಸಿದ ವಿಷಯವನ್ನು ಕುರಿತು "ನ್ಯೂಯಾರ್ಕ್ ಟೈಮ್ಸ್" ಪತ್ರಿಕೆಯು ಟೀಕೆಮಾಡುತ್ತ—"ಮಸೂಲಿನಿಯವರು ಕೌಂಟ್ ಸಿಯಾನೋರವರನ್ನು ಕೆಲಸದಿಂದ ವಜಾಮಾಡಿ ವಿದೇಶಾಂಗಸಚಿವರ ಅಧಿಕಾರವನ್ನೆಲ್ಲಾ ತಾವೇ ವಹಿಸಿಕೊಂಡಿದಾರೆ." ಎಂದು ತಿಳಿಸಿದೆ

ಭೂಭ್ರಮಣ ವಿಚಾರ

ಲೇ—ಮೈಸೂರು ಶ್ರೀಮನ್ಮಹಾರಾಜಕಲೆಜಿನ ಅಸ್ಥಾನವಿದ್ವಾನ್ ಶಾಸ್ತ್ರಿಪಾರಂಗತ ಆರೂಢ ಶಕ್ತಾಚಾರ್ಯರು.

ಈಗ ಭೂಭ್ರಮಣ ವಿಚಾರದಲ್ಲಿ ಪಾಶ್ಚಾತ್ಯರು ಹೇಳುವಂತೆ ನಮ್ಮ ಆರ್ಯಭಟರೂ ಸಹ ಭೂಭ್ರಮಣದ ಪಕ್ಷಪಾತಿಯೇ ತಾತ್ಪರ್ಯವುಳ್ಳವರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಸೂಕ್ಷ್ಮವಾಗಿ ಆರ್ಯಭಟ ಪಿಪ್ಪಲಾದಿಯ ವ್ಯಾಖ್ಯಾನವನ್ನೊಡಗೆದೆ ಪರಿಶೀಲಿಸಿ ನೋಡಿದರೆ ಆರ್ಯಭಟರಿಗೆ ಭೂಭ್ರಮಣದಲ್ಲಿ ಅಪಪ್ರಾಯವಿಲ್ಲವೆಂದೂ ಸ್ಪಷ್ಟವಾಗಿ ಹೇಳಬಹುದು ಆದು ಹೇಗೆಂದರೆ, ಆರ್ಯಭಟೀಯ ದಲ್ಲಿ ಗಣಿತಪಾದದ ಗೀತಿಕಾ ಸೂತ್ರನ "ಯುಗಪದ್ ಗಣಾಃ ಎಂಬ ಮೊದಲನೆಯ ಶ್ಲೋಕದಲ್ಲಿ ಪ್ರಮಾಯುಗ 4320000 " ವರ್ಷದಲ್ಲಿ ಸೂರ್ಯಾದಿ ಗ್ರಹಗಳು ಪೂರ್ವಗತಿಯಿಂದ ಅಂಬರಾಯಣ ಭಗಣಸರಾಸಾರವಲ್ಲಿ ಹೇಳಿದಂತೆ ಭೂಮಿಗೂ ಭಗಣ ಸಂಬಂಧವನ್ನು ಕೊಟ್ಟಿರುವುದರಿಂದ ಆರ್ಯಭಟರಿಗೂ ಭೂಭ್ರಮಣದಲ್ಲಿ ಅಪ್ರಾಮಾಣ್ಯವಿಲ್ಲವೆಂದೂ ಕೆಲವರು ಹೇಳುತ್ತಾರೆ. ಇನ್ನು ಕೆಲವರು ಆರ್ಯಭಟರ ವಿಚಾರವಾಗಿ ನೋಡಿದರೆ ಪ್ರಮಾಣವಿಲ್ಲದೆ ಅಲ್ಪಾಕ್ಷರಗಿನಲ್ಲಿ ಕುಳಿತು ಪ್ರಯಾಣ ಮಾಡಿದಂತೆ ಆಗುತ್ತದೆ ಎಂದೂ ವೈಕ್ಷಾದಿಗಳಿಗೆ. ಪೂರ್ವಕ್ಕೆ ಹೋಗುವ ರೈಲ್ವೆ ಪ್ರಯಾಣವು ಪಶ್ಚಿಮಕ್ಕೆ ಹೋಗುವಂತೆ ಆಗುತ್ತದೆಯೋ, ಆದಂತೆ ಸೂರ್ಯನು ಪೂರ್ವಕ್ಕೆ ಅತಿ ವೇಗದೊಡನೆ ಪ್ರಯಾಣಮಾಡುತ್ತಿರುವುದರಿಂದ ಭೂಮಿಯು ತಿರುಗುವುದರಿಂದ ಸೂರ್ಯನು ಪೂರ್ವಕ್ಕೆ ಹೋಗುತ್ತಿರುವಂತೆ ಕಾಣುತ್ತದೆ ಇದೇ ಸಮಜಾತಿ ಮಿಥ್ಯಾಜ್ಞಾನವೆಂದು ಭಾನು ಸಂಸ್ಥಾನ ಎನ್ನುವ ನಿರ್ದೇಶ ಮಾಡಿರುತ್ತಾರೆ ಹೀಗಿದ್ದಾಗ್ಯೂ ಸಹ ಆರ್ಯಭಟರು 'ಆನುಲೋಮ್ಯಗತಿನ್ ನ ಪ್ರತೀಪಂ ಚಲಂ ವಿಲೋಮಂ ಯತ್ಸ್ಥಾ ಕಾತಲಸಿಸ್ಥಿತಮ್ ತದ್ವತ್ ಸಮಪಶ್ಚಿಮಗಾನಿ ಲಂಕಾಯಾಂ ಎಂದು ಗ್ರಂಥದಲ್ಲಿ ವಿಶದೀಕರಿಸಿದ ತ್ತಾರೆ ಆದ್ದರಿಂದ ಭೂಭ್ರಮಣಸಂಖ್ಯೆಯು ಕೇವಲ ಪ್ರಪ್ರಥಮಾಸ್ಯಾಯ ಪರವಾಗಿದೆ ವಾಸ್ತವವಾಗಿ ಒಂದಿಂದನ್ನ ಸತ್ತತ್ತಿಗೆ ಭಗೋಳ ಭ್ರಮಣಸಂಖ್ಯಾಪದೇ ಹೊರತ, ಭೂ ಭ್ರಮಣದಲ್ಲಿ ತಾತ್ಪರ್ಯವಿಲ್ಲವೆಂದು ಪರಮೇಶ್ವರಾದಾರ್ಯರೂ ಸಹ ಆರ್ಯಭಟೀಯ ನ್ಯಾಖ್ಯಾನದಲ್ಲಿ ಒರೆದಿರುತ್ತಾರೆ

ಆರ್ಯಭಟೀಯ ತಪ್ಪಿ ಗ್ರಂಥದಲ್ಲಿ ವಂದೆ ಹೇಳಿರುವ—ಶ್ಲೋ॥ ಉದಯಾಸ್ತಮಯನಿಮಿತ್ತಂ ನಿತ್ಯಂ ಪ್ರವತೇನ ವಾಯುನಾ ಕ್ಷಿಪ್ತಃ। ಲಂಕಾಸಮಪಶ್ಚಿಮಗೋ ಭಗವಾಶಸ್ಯಸ್ಯ ಹೋ ಭ್ರಮತಿ॥ ಭಾನಾಮಧಃಸ್ಥಿತ್ಯೈಶ್ವರ ಸುರಗುರು ಭೌಮಾರ್ಕಶುಕ್ರ ಬುಧಚಂದ್ರಾ। ತೇಷಾಮಧಶ್ಚ ಭೂಮಿರ್ನಿಧಿ ಭೂತಾಖವ ಪ್ಯಸ್ಥಾ॥ ಇತ್ಯಾದಿ ಶ್ಲೋಕಗಳಿಂದ ಹೇಳಿರಕ್ಕ ಭೂಭ್ರಮಣವು ವಾಸ್ತವ ಜ್ಞಾನವಲ್ಲವೆಂದು ತಿಳಿಯಬರುತ್ತದೆ ಈ ಶ್ಲೋಕಗಳಿಗೆ ಪರಮೇಶ್ವರಾಚಾರ್ಯರಿಂದ ಮಾಡಲ್ಪಟ್ಟ ವ್ಯಾಖ್ಯಾನವೂ ಸಹ ಇದೇ ರೀತಿ ಇರುತ್ತದೆ ಆ ಅನುಪ್ಪಾಖ್ಯಾನವನ್ನೇ ಇಲ್ಲಿ ಉದಾಹರಿಸುತ್ತೇನೆ.

"ಯುಗಪಿವಿಭಗಣಾ"ಎಂಬ ಶ್ಲೋಕದ ವ್ಯಾಖ್ಯಾನವು ಭೂಮೇಃ ಯತ್ ಸ್ಥಾಬ್ಯಮಂ ಭ್ರಮಣಂ ತತ್ಯಶತಃ ಯುರ್ಗೇ ಸಂಭೂತಾ ಸಂಖ್ಯಾತ್ಕೋತ್ಕ್ರಾ॥ ಭೂಮಿರ್ನಿರ ಅಚಲೇತಿ ಪ್ರಸಿದ್ಧ್ಯಾತ್ಯಾಕಥಮುತ್ಪತ್ತ್ಯಭ್ರಮಣಕಥನಮಾ? ಉಚ್ಯತೇ ಪ್ರವಹಾಕ್ಷೇಪಾತ್, ಪಶ್ಚಿಮಾಭಿಮುಖಂಪ್ರವಹತೋ ನಕ್ಷತ್ರಮಂಡಲಸ್ಯ, ವಿಪರ್ಯಾಜ್ಞಾನವಶಾತ್ ಭೂಮೇಃ ಭ್ರಮಣಂ ಪ್ರತೀಯತೆ ತದೀಗೀಕೃತ್ಯ ಇಹ ಭೂಮೇರ್ಭ್ರಮಣಮುಕ್ತಂ। ವಸ್ತುತಸ್ತು ನ ಭೂಮೇಃ ಭ್ರಮಣಮಸ್ತಿ, ಅಚೇತನತ್ವಾತ್ಪಮಂಡಲಸ್ಯ, ಭ್ರಮಣ ಪ್ರದರ್ಶನಪರಮತ್ವ ಭೂಭ್ರಮಣಕಥನಮಿತಿ ವೇದ್ಯಂ, ವಕ್ಷ್ಯತಿಚ ವಿಪರ್ಯಾಜ್ಞಾನಂ 'ಅನುಲೋಮಗತಿರ್ನೌಸ್ಥಃ' ಇತ್ಯಾದಿನಾ,

ಹೀಗೆ " ಉದಯಾಸ್ತಮಯನಿಮಿತ್ತಂ ಭಾನಾಮಧಶ್ಚ ಸ್ಥೈರ್ಯಂ " ಎಂಬ ಶ್ಲೋಕಗಳ ವ್ಯಾಖ್ಯಾನದಲ್ಲೂ, ಇದೇ ಅಭಿಪ್ರಾಯವನ್ನೇ ಸ್ಪಷ್ಟಪಡಿಸಿರುತ್ತಾರೆ ಮತ್ತು ತಾವು ಮಾಡಿದ ಗೋಳದೀಪಿಕಾ ಎಂಬ ಗ್ರಂಥದಲ್ಲಿ—

ಶ್ಲೋ॥ ' ಭೂನಾಭಮುಖಂ ಭ್ರಮತಿ ಸ್ಪೋಡೀ ಕಾಸ್ತಿ ಭೈಮಃ ಖಗಸ್ಯಾಣಾಂ ತತಿಲೆ ವದಂತಿ ಕೇಚಿ ನ್ನಾಭಿಮತಂಚಾರ್ಯಭಟ್ಟಸ್ಯ' ಎಂಬ ಶ್ಲೋಕದಿಂದಲೂ ಇದೇ ಆಭಿಪ್ರಾಯವನ್ನೇ ಹೇಳಿರುತ್ತಾರೆ ಲಲ್ಲ, ವರಾಹ ಮಿಹಿರ ಪೃಥಿಪ್ರಭೃತಿ ಜ್ಯೋತಿರ್ಗ್ರಂಥಕಾರರು ' ಯದಿಚಾ ಭ್ರಮತಿ ಕ್ಷಮಾ ತದಾ, ಸ್ಥಿರ ಆಯಂ ಕಥಮಾಪ್ಯುಯಾಃ ಖಗಾಃ ಇತಪ್ಯಾಹಿನಿಯಂ ಸಮಸ್ತಜಾ ಪಿಪತಿಕಂತಸ್ಯಾ ರವಾಸಿವೇದಿತಿ॥

ಇತ್ಯಾದಿ ಶ್ಲೋಕಗಳಿಂದ ಭೂಭ್ರಮಣವನ್ನು ಖಂಡಿಸಿರುತ್ತಾರೆ ಆದರೆ ಸಾರಂಶವೇನೆಂದರೆ—ಭೂಮಿಯು ಪೂರ್ವಾಭಿಮುಖವಾಗಿ ಅತಿವೇಗವಾಗಿ ಹೋಗುವುದೆಂದು ಹೇಳುವುದಾದರೆ ಮಿಯವೂ ಪೂರ್ವಕ್ಕೆ ಬೀಸಬೇಕಾಗಿರುವುದರಿಂದ ಪೂರ್ವಕ್ಕೆ ಚಲನಯ ನ್ಮದ್ದನ್ನಾಗಿ ಮಾಡಬೇಕೇ ಹೊರತ ಪಶ್ಚಿಮಕ್ಕೆ ಗತಿಯನ್ನುಂಟುಮಾಡಲು ಅವಕಾಶವಿಲ್ಲವೆಂದೂ ಭೂಭ್ರಮಣದಿಂದ ಆಗುವ ಸಾಂಸಾರಿಕ ವ್ಯವಹಾರಗಳಿಗೆ ಭಂಗವುಂಟಾಗುತ್ತದೆ ಎಂದೂ ಹೇಳಿರುವುದಾದರೆ ಇದಕ್ಕೆ ಸಮಾಧಾನವೇನೆಂದರೆ—ಭೂಮಿಯು ಪೂರ್ವಾಭಿಮುಖವಾಗಿ ಅತಿವೇಗವಾಗಿ ಹೋಗುವುದೆಂದು ಹೇಳುವುದಾದರೆ ಸಮುದ್ರಗಳಲ್ಲಿ ಪಶ್ಚಿಮಕ್ಕೆ ಹೋಗುವ ಹಡಗುಗಳಿಗೂ ಪಶ್ಚಿಮಕ್ಕೆ ಹೋಗುವ ರೈಲ್ವೇ ಪ್ರಯಾಣಕ್ಕೂ ಭಂಗವುಂಟಾಗಬೇಕಾಗಿರುವುದರಿಂದ ಭೂಭ್ರಮಣವಾಯುವಿಗೇ ಬಲಾಧಿಕ್ಯವನ್ನು ಕೊಟ್ಟಿರುವುದರಿಂದ ಆ ಬಲಾಧಿಕ್ಯವು ಸಾಮಾನ್ಯವಾಗಿ ಪಶ್ಚಿಮಕ್ಕೆ ಹೋಗುವ ರೈಲ್ವೇ ಪ್ರಯಾಣಕ್ಕೆ ತೊಂದರೆಯನ್ನು ಕೊಡುವುದಿಲ್ಲವೆಂದೂ ಸಮಾಧಾನ ಹೇಳಬಹುದು ಅಲ್ಲದೆ ಭೂಮಿಯ ಗತಿಯನ್ನು ಪಶ್ಚಿಮಕ್ಕೆ ಎಂದಿಗೂ ಬದಲಾಯಿಸಲಾಗದು ಇದೇ ಮೊದಲಾದ ಯುಕ್ತಿಗಳಿಂದ ಭೂಭ್ರಮಣವನ್ನು ನಿರಾಕರಿಸುತ್ತಾರೆ

ಭೂಪರಿಧಿ ವಿಚಾರ

ಭೂಪರಿಧಿ ಎಂದರೆ ಭೂಮಿಯ ಸುತ್ತಳತೆ ಅಂದ್ರೆ ಕಂಡ ಹಿಡಿಯುವ ಕ್ರಮ ಯಾವ ಸ್ಥಳದಲ್ಲಿ ನಿಶ್ಚಿತವಾದ ಭೂಮ್ಯಾಕಾರಗಳು ಪರಸ್ಪರ ಸೇರಿ ಕೊಂಡಿರುವ ಕಾಣತ್ತವೆಯೋ ಆ ಸ್ಥಳಕ್ಕೆ ಕ್ಷಿತಿಜ ವೃತ್ತ ಎಂಬ ಹೆಸರು ಆ ಕ್ಷಿತಿಜದಿಂದ ಉತ್ತರದಿಕ್ಕಿನ ನಕ್ಷತ್ರವು ಎತ್ತರವಲ್ಲಿ ಕಾಣತ್ತಿರುವಷ್ಟು ಎತ್ತರಕ್ಕೆ ಅಕ್ಷಾಂಶವೆಂದು ಹೆಸರು ಅಕ್ಷಾಂಶ ಸಂಖ್ಯೆಯನ್ನು 90 ರಲ್ಲಿ ಕಳೆದರೆ ಬರುವುದಕ್ಕೆ ಯೂ (ಜೆನಿತ್) ಉತ್ತರಮ್ಯಾಸಕ್ಕೂ (ನಾರ್ತ್‌ಪೋಲ್) ಇರುವ ಅಂತರಾಂಶವು ಕೊಲಟಿಟ್ಯೂಡ್' ಬರುತ್ತದೆ ಇದೇ ಲಂಬಾಕಾರವನ್ನು ಸ್ಯಸೂರು ದೇಶಕ್ಕೆ 12 ಡಿಂಗ್ರಿ ಎತ್ತರವಲ್ಲಿ ಆ ಧ್ರುವನಕ್ಷತ್ರವು ಇರುತ್ತದೆ ಈ ನಮ್ಮ ದೇಶದಿಂದ ಸಮವಾದ ವರ್ತುಲದಲ್ಲಿ ಉತ್ತರಕ್ಕೆ 13 ನೇ ಅಕ್ಷಾಂಶ (ಲ್ಯಾಟಿಟ್ಯೂಡ್) ಸಿಕ್ಕುವವರೆಗೂ ಹೋಗಿ ಆ ಎರಡು ಅಕ್ಷಾಂಶಗಳಿಗಿರುವ ಅಂತರವನ್ನು ಗೊತ್ತು ಮಾಡಿ ಒಂದು ಅಕ್ಷಾಂಶಾಂತರಕ್ಕೆ ಇಷ್ಟು ಯೋಜನ ವಾದರೆ 360 ಅಕ್ಷಾಂಶಾಂತರಕ್ಕೆ ಎಷ್ಟು ? ಎಂಬ ಅನುಪಾತದಿಂದ ನೋಡಿದರೆ ಒಟ್ಟು ಭೂಮಿಯ ಸುತ್ತಳತೆಯು ಗೊತ್ತಾಗುತ್ತದೆ ಈ ಭೂಪರಿಧಿಯನ್ನು ಸ್ಥೂಲಭೂಪರಿಧಿ, ಮಧ್ಯಮಭೂಪರಿಧಿ ಎಂದು ಎರಡು ವಿಧವಾಗಿ ವಿಂಗಡಿಸಿರುತ್ತಾರೆ ನಿರಕ್ಷ ದೇಶದಿಂದ ಮೇರುವು 90 ಅಂಶದಲ್ಲಿರುವುದರಿಂದ ಮೇರುವನ್ನೇ ಕೇಂದ್ರವಾಗಿಟ್ಟುಕೊಂಡು 90 ಅಂಶದ ವ್ಯಾಸಪರಿಮಿತವಾದ ವೃತ್ತವನ್ನಾಧರಿಸಿದ ಸಾಧಿಸಿದರೆ ನಿರಕ್ಷ ದೇಶದ ಮೇಲೆ ಬೀಳುತ್ತವೆ ಇದಕ್ಕೆ ಮಧ್ಯಮ ಭೂಪರಿಧಿ ಎಂದು ಹೆಸರು ಇದನ್ನೇ ಆಂಗಿಲ ಭೇದದಿಂದ ಕೆಲವರು 4967 ಯೋಜನವೆಂದೂ, ಮತ್ತೆ ಕೆಲವರು 5059 ಯೋಜನವೆಂದೂ ಹೇಳುವರು. ನಿರಕ್ಷದೇಶ ವೆಂದರೆ, ಯಾವ ಸ್ಥಳದಲ್ಲಿ ದಕ್ಷಿಣೋತ್ತರ ಧ್ರುವಗಳು ಸಮವಾಗಿ ಕಾಣತ್ತವೆಯೋ ಯಾವಾಗಲೂ ಹಗಲು 30 ಘಳಿಗೆ (12 ಘಂಟೆ) ರಾತ್ರಿ, 30 ಘಳಿಗೆಯಂತೆ ಎಲ್ಲಿ ಆಗತ್ತದೆಯೋ, ಯಾವ ದೇಶದಲ್ಲಿ ಭಗೋಳವು ತಲೆಯ ಮೇಲೆ ನೇರವಾಗಿ ಸುತ್ತುವಂತೆ ಕಾಣತ್ತದೆಯೋ, ಮತ್ತು ಎಲ್ಲಿ ಮಾರ್ಚಿ 20-21 ನೇ ತಾರೀಖಿನಲ್ಲಿ (ಮಿಸನಮಾಸ ತೆದಿ 8) ಸಪ್ಟೆಂಬರ್ 22 ನಾ 23 ರಲ್ಲಿ, (ಕನ್ಯಾಮಾಸ ತೆದಿ 8) ಮಧ್ಯಾಹ್ನ ಕಾಲದಲ್ಲಿ, ಹನ್ನೆರಡು ಅಂಗುಲಪರಿತಕ್ಕ ಶಂಕುವನ್ನು ಸಮಭೂತಲದ ವೃತ್ತಮಧ್ಯದಲ್ಲಿ ಸ್ಥಾಪಿಸಿ ನೋಡಿದರೆ ಕೇತ್ರಿಯಮೆಲೆ ಸರಿಯಾಗಿ ಸೂರ್ಯನು ಬರುವುದರಿಂದ ಆ ಶಂಕುವಿನ ಛಾಯೆಯು ಬೀಳುವುದಿಲ್ಲವೋ ಅಂತಹ ಪ್ರದೇಶಕ್ಕೆ ನಿರಕ್ಷದೇಶವೆಂದು ಹೆಸರು. ಇತರ ದೇಶಗಳಲ್ಲಿ ಆ ಛಾಯೆಯು ಬೀಳುತ್ತದೆ. ಆ ನಿರಕ್ಷದೇಶ ಗಳಾವುವು ಎಂದರೆ—ಲಂಕಾ, ಯಮಕೋಟಿ, ಸಿದ್ಧಪುರ, ರೋಮಕ ಎಂಬ ಪಾಲ್ಕು ನಗರಗಳು

ಸ್ಪುಟಭೂಪರಿಧಿ—ಎಂದರೆ, ಮೇರುವನ್ನು ಕೇಂದ್ರವಾಗಿಟ್ಟುಕೊಂಡು, ಲಬಬಚ್ಚಾ ಎಂದರೆ ಸ್ವದೇಶ ಭೂವ್ಯಾಸಾರ್ಧದಿಂದ ವೃತ್ತವನ್ನು ಹಾಕಿದರೆ, ಅದು ಸ್ವದೇಶದ ಮೇಲೆ ಬೀಳುತ್ತದೆ. ಈ ಪರಿಧಿಯೇ ಸ್ಪುಟ ಭೂಪರಿಧಿ

ರೇಖಾಂತ

ಲಂಕೆಯಿಂದ ಹೊರಟು, ಉಜ್ಜಯಿನೀ ಕುರುಕ್ಷೇತ್ರ ನೊದಲಾದ ದೇಶಗಳನ್ನು ಹಾಯ್ದು, ಮೇರುವಿನವರೆಗೆ ಹೋಗುವ ದಕ್ಷಿಣೋತ್ತರ ರೇಖೆಯೇ, ಭೂಮಧ್ಯರೇಖೆಯು ಆ ರೇಖೆಗೆ ಸ್ವದೇಶವು ಪೂರ್ವದಲ್ಲಾಗಲಿ, ಪಶ್ಚಿಮದಲ್ಲಾಗಲಿ ಎಷ್ಟುಯೋಜನದಲ್ಲಿದೆಯೋ, ಅದೇ ದೇಶಾಂತರ ಯೋಜನವು.

ಅವುಗಳನ್ನು ತಿಳಿಯುವ ಉಪಾಯ—ಭೂಮಧ್ಯರೇಖೆಯಲ್ಲಿರುವ ದೇಶಕ್ಕೆ ಚಂದ್ರಗ್ರಹಣ ಸ್ಪರ್ಶಕಾಲವನ್ನು ದೃಗ್ಗಣಿತದಿಂದ ಕಂಡುಹಿಡಿದು, ಆ ಕಾಲವನ್ನು ಘಟಿ ಕಾಯಂತ್ರದಿಂದ ಪರೀಕ್ಷಿಸಿದರೆ, ಗಣಿತಾಗತವಾದ ಕಾಲಕ್ಕಿಂತ ಆನಂತರ ಸ್ಪರ್ಶಕಾಲ ಕಂಡುಬಂದಲ್ಲಿ, ನಮ್ಮ ದೇಶವು ಭೂಮಧ್ಯರೇಖೆಗೆ ಪೂರ್ವದಲ್ಲಿದೆಯೆಂದೂ, ಅದೇ ಗಣಿತಾಗತಕಾಲಕ್ಕೆ ಪೂರ್ವದಲ್ಲಿಯೇ ಸ್ಪರ್ಶಕಾಲ ಕಂಡುಬಂದಲ್ಲಿ, ನಮ್ಮ ದೇಶವು ಆಗ ಪಶ್ಚಿಮದಲ್ಲಿದೆ ಯೆಂದೂ ತಿಳಿಯಬೇಕು ಗಣಿತಾಗತಕಾಲಕ್ಕೂ ಪ್ರತ್ಯಕ್ಷಕಾಲಕ್ಕೂ ಇರುವ ಅಂತರವೇ ದೇಶಾಂತರ ಘಟಿಕಾ ಅವಶ್ಯತ್ವ ಘಳಿಗೆಗಳಿಗೆ ಇಷ್ಟು ಸ್ವದೇಶ ಭೂಪರಿಧಿ ಯಾದರೆ, ದೇಶಾಂತರ ಘಳಿಗೆಗಳಿಗೆಷ್ಟು? ಎಂಬ ಅನುಪಾತದಿಂದ ದೇಶಾಂತರ ಯೋಜನಗಳು ಲಬ್ಧವಾಗುತ್ತವೆ ಇಷ್ಟು ಸ್ವದೇಶ ಭೂಪರಿಧಿಯೋಜನವಕ್ಕೆ 360 ಭಾಗಗಳಾದರೆ, ದೇಶಾಂತರ ಯೋಜನವಕ್ಕೆಷ್ಟು? ಎಂಬ. ದಾಗಿ ಬರುವ ಫಲವೇ ದೇಪಾಂಶ. (ಛಾಂಷಿಟ್ಯೂಡ್)

ಗ್ರಹಗಳ ಳಕ್ಷಾಕ್ಷೆಯ ಮತ್ತು ಅವುಗಳ ಪರಿಧಿಗಳು

ಭೂಗೋಳದ ಮೇಲೆ ಮೊದಲು ಚಂದ್ರ ಕಕ್ಷೆಯೂ, ಅನಂತರ ಬುಧ, ಶುಕ್ರ, ರವಿ, ಕುಜ, ಗುರು, ಶನಿ, ನಕ್ಷತ್ರ ಇವುಗಳ ಕಕ್ಷೆಗಳೂ, ಒಂದಕ್ಕಿಂತ ಮತ್ತೊಂದು ಕ್ರಮವಾಗಿ ಎತ್ತರವಾಗಿಯೂ ವಿಸ್ತಾರವಳ್ಳದ್ದಾಗಿಯೂ ಇರುತ್ತವೆ. ಇವುಗಳ ಸುತ್ತಳತೆಯು ನಮ್ಮ ಶಾಸ್ತ್ರದಲ್ಲಿ ಈ ಕೆಳಗೆ ಬರೆದಿರುವ ರೀತಿಯಾಗಿ ಹೇಳಲ್ಪಟ್ಟಿದೆ.

ಚಂದ್ರಕಕ್ಷೆ	ಭೂಗರ್ಭದಿಂದ ಕಕ್ಷೆಯ ಸ್ಪಷ್ಟ ಗಳಿಗಿರುವ ಅಂತರ		ಯೋಜನಗಳು
ಪ್ರಮಾಣ	324000		51566
ಬುಧ ,,	1043211	,,	166032
ಶುಕ್ರ	2664630	....	424088
ರವಿ	4631497	....	689377
ಕುಜ	8146916	....	1296619
ಗುರು	51374821	....	8176538
ಶನಿ	127668787	....	2031907
ನಕ್ಷತ್ರ ...	259889850	..	41362658

ಯೋಜನ ಲಕ್ಷಣ

' ನೃಪಿಯೋಜನಂ ' ಎಂದು ಆರ್ಯಭಟರು, ಒಂದು ಯೋಜನಕ್ಕೆ 8000 ಪುರುಷ ಪ್ರಮಾಣವೆಂದು ಒಪ್ಪಿರುಕ್ತಾರೆ. ಪುರುಷಪ್ರಮಾಣವು 96 ಅಂಗುಲವುಳ್ಳದ್ದು ಅಂಗುಲವೆಂದರೆ 8 ಜವೆಗೋಧಿಗಳ ಅಗಲವೆಂದು ಭಾಸ್ಕರಾಚಾರ್ಯ ಪ್ರಭೃತಿಗಳು ಹೇಳಿರುತ್ತಾರೆ ಮತ್ತೆ ಕೆಲವರು ರೆಟೆಕಿಯಿಂದ ಪ್ರದೇಶಿಸುವ ಸೂರ್ಯರಶ್ಮಿಯಲ್ಲಿ ಕಾಣುವ ಸೂಕ್ಷ್ಮರೂಪಿಗೆ ಪರಮಾಣುವೆಂದೂ, ಅಂತಹ ಎಂಟು ಸ್ಥರಮಾಣುಗಳಿಗೆ ರೇಣುವೆಂದೂ 8 ರೇಣುಗಳಿಗೆ ವಾಲಾಗ್ರವೆಂದೂ, 8 ವಾಲಾಗ್ರಗಳಿಗೆ ಲಿಕ್ಷೆ ಯೆಂದೂ, ಅಂತಹ ಎಂಟು ಲಿಕ್ಷೆಗಳಿಗೆ 1 ಯೂಕ ವೆಂದೂ, 8 ಯೂಕಗಳಿಗೆ ಒಂದು ಯವೆಯೆಂದೂ ಅಂತಹ 8 ಯವೆಗಳಾದರೆ 1 ಅಂಗುಲವೆಂದೂ, ಹೇಳುತ್ತಾರೆ. ಆರು ಅಥವಾ ಏಳು ಯವೆಗಳಿಗೆ ಒಂದೆಂಗುಲ

ನೆಂದು ಕೆಲವರ ಮತ ಈ ರೀತಿಯಾಗಿ ಅಂಗುಲ ಭೇದಗಳಲ್ಲಾಯ್ತು. ಒಟ್ಟಿನಲ್ಲಿ ಒಂದು ಯೋಜನಕ್ಕೆ ಏದು ಮೈಲಿಯೆಂದು ಕೆಲವರೂ, ಎಂಟು ಮೈಲಿಯೆಂದು ಕೆಲವರೂ ಅಭಿಪ್ರಾಯ ಪಡುವರು

ಮೇಲ್ಕಂಡ ಗ್ರಹಕಕ್ಷೆಗಳವರಿಗೆ ಅವುಗಳ ಭಿನ್ನಿಸ್ಥ ಇವುಗಳನ್ನು ಕಂಡುಹಿಡಿಯುವ ಕ್ರಮ.

ಖಕಕ್ಷ್ಯಾ ಎಂದರೆ, ಸೂರ್ಯನ ಕಿರಣಗಳು ಆಕಾಶದಲ್ಲಿ ಎಷ್ಟು ದೂರದವರೆಗೆ ಪ್ರಸರಿಸುತ್ತವೆಯೋ, ಅಷ್ಟು ಆಕಾಶದ ಮತ್ತ್ಯಳತೆಯೇ ಖಕಕ್ಷ್ಯೆಯಾಗಿರುತ್ತದೆ. ಇದರ ಪ್ರಮಾಣವು 1871,20,69,20,00,00,000 ಯೋಜನ ಗಳಾಗುತ್ತವೆ. ಇವನ್ನು ಕಂಡುಹಿಡಿಯಬೇಕಾದರೆ ಚಂದ್ರನು ಒಂದು ಕಕ್ಷ್ಯದಲ್ಲಿ, ವರ್ಷ (432,00,00,000) 3,24,000 ಯೋಜನವಿರುವ ತನ್ನ ಕಕ್ಷ್ಯೆಯನ್ನು 37,75,33,00,000 ಸಾರಿ ಸುತ್ತುತ್ತಾನೆ ಇದಕ್ಕೆ ಚಂದ್ರಭಗಣವೆಂದು ಹೆಸರು. ಈ ಚಂದ್ರಭಗಣಸಂಖ್ಯೆಯನ್ನು ಚಂದ್ರಕಕ್ಷ್ಯಾಪ್ರಮಾಣದಿಂದ ಗುಣಿಸಿದರೆ ಖಕಕ್ಷ್ಯಾ ಪ್ರಮಾಣವಾಗುತ್ತದೆ. ಆ ಖಕಕ್ಷ್ಯೆಯನ್ನು ಕಲ್ಪದಲ್ಲಿ ಆಯಾಗ್ರಹಗಳ ಹೇಳಿರುವ ಭಗಣ ಸಂಖ್ಯೆಯಿಂದ ಭಾಗಿಸಿದರೆ ಆಯಾಗ್ರಹಗಳ ಕಕ್ಷ್ಯಾಪ್ರಮಾಣವು ಗೊತ್ತಾಗುತ್ತದೆ

ಗ್ರಹ ಭಗಣಗಳು

ಚಂದ್ರಭಗಣಪ್ರಮಾಣ	577533000000
ಬುಧ	17936998984
ಶುಕ್ರ	7022389192
ರವಿ	4320000000
ಕಾಜ	2296828522
ಗುರು	364226455
ಶನಿ	146367296
ನಕ್ಷತ್ರ	1582236450000

೩೯೭೯ ಯೋಜನಪರಿಧಿಯರುವಾಗ 1250 ವ್ಯಾಸ ವಿರುವುದೆಂದು ನಿಶ್ಚಯಿಸಲ್ಪಟ್ಟಿದೆ. ಇದರಂತೆ ಅಯಾ ಗ್ರಹಗಳ ಕಕ್ಷಾಪರಿಧಿಗಳ ವ್ಯಾಸವನ್ನು ಕಂಡುಹಿಡಿದು ಅದನ್ನು ಅರ್ಧಭಾಗ ಮಾಡಿದರೆ ಎಷ್ಟ್ಯಾಗುತ್ತದೋ ಅಷ್ಟು ಭೂಗೋಳದಿಂದ ಕಕ್ಷ್ಯೆಯವರೆಗೆ ಇರುವ ಅಂತರವಾಗುತ್ತದೆ ಹೀಗೆಯೇ ಎಲ್ಲಾ ಗ್ರಹಗಳಿಗೂ ಕಂಡುಹಿಡಿದಿರುವ ಅಂಕಿಸ್ಥಿಗೆ ಹಿಂದೆ ಸೂಚಿಸಿದೆ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ರಂಭಾಪುರೀ ಜಗದ್ಗುರುಗಳವರ ಸಂಚಾರ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶಿಷ್ಯಸಮುದಾಯದ ಉದ್ಧಾರ ಕ್ಯೈಕ್ಯರವಾಗಿ ಜಗನ್ಮಾತೃಶ್ರೀ ಸಂಚಾರಸುತ್ತ ಅವಿಚ್ಛಾಂಶಕ್ತಿಮಯವನ್ನು ವಹಿಸಿ ಧರ್ಮೋದ್ಧಾರವನ್ನೆಸಗುವರು ಸರ್ವಶ್ರುತವಾಗಿದೆ ಶ್ರೀಮಚ್ಛಾಶಿಗಳವರ ತಪೋಬಲವಿದ್ಯಾಪ್ರಭಾವಗಳು ಅಧರ್ಮಾಂಧಕಾರವನ್ನು ಓಡಿಸಿಲು ಸಮರ್ಥರಾಗಿವೆ. ಶ್ರೀಕಾಶಿ ವಿಶ್ವಾರಾಧ್ಯನವು ಅವಿಚ್ಛಿನ್ನವಾಗಿ ನಡೆಯುತ್ತಲಿದೆ ಶ್ರೀಗಳವರು ಪೀಠಾರೋಹಣವನ್ನು ಮಾಡಿ ೧೫ ವರ್ಷಗಳು ತುಂಬಿ ೧೬ ನೇ ವರ್ಷವು ನಡೆಯುತ್ತಲಿದೆ ಈ ದೀರ್ಘಕಾಲದಲ್ಲಿ ತಮ್ಮ ಶ್ರೀಕಾಲ ಶಿವಪೂಜಾತಪೋಸ್ಥಾನವನ್ನು ಕೊಂಚವೂ ಲೋಪಬರದಂತೆ ಸಾಗಿಸುತ್ತಿರುವುದನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಹಾಲಿ ಇರುವ ತಾಯಿಯನ್ನು ಹೊಂದಿದ ಅಶಕ್ತ ಶಿಶುಗಳು ಏನು ಕ ವುದೆಂತು? ವಿದ್ಯಾ ತಪೋಬಲವಿಲ್ಲದ ಗುರುವಿನಿಂದ ಶಿಷ್ಯಕೋಟಿಯು ಪದ್ಮತಯನ್ನೈದುವುದೇ? ತಪೋ ಮೂರ್ತಿಯಾದ ಗುರುವಿನ ದರ್ಶನ, ಸ್ಪರ್ಶನ, ಸ್ಮರಣ, ಪೊನಲಾದುವುಗಳಲ್ಲಿ ಶಿಷ್ಯನ ಸೌಭಾಗ್ಯವೃದ್ಧಿಯಾಗ ಬೇಕು. ಶ್ರೀಗುರುವಿನ ಅಂಗವನ್ನು ಸೋಂಕಿದ ಗಾಳಿಯ ಸ್ಪರ್ಶದಿಂದಲೂ ಶಿಷ್ಯನ ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ. ತಪೋಬಲವಿಲ್ಲದ ಆಶೀರ್ವಾದವೂ ವಿದ್ಯಾಬಲವಿಲ್ಲದ ಉಪದೇಶವೂ ರಸವಿಲ್ಲದ ಕಬ್ಬು ನಂತೆಯೂ ತಿರುಳಿಲ್ಲದ ತೆಂಗಿನಕಾಯಿಯೂ ಲೋಕೋಪ ಕಾರವನ್ನು ಮಾಡಲಾರವು ಶ್ರೀಮಚ್ಛಾ.ರ್ಯಗವರ ತಪೋವಿದ್ಯಾವೈಭವಿಯು ಸಕಲ ಮತೀಯರಿಗೂ ಮಾನ್ಯ ವಾಗಿರುವುದನ್ನು ಹೊಸದಾಗಿ ಉಲ್ಲೇಖಿಸಬೇಕಾಗಿಲ್ಲ ಮದ್ರಾಸ ಆಧಿಪತ್ಯಕ್ಕೆ ಸೇರಿದ ಕೊಳ್ಳೇಗಾಲ ತಾಲೂಕು ಮುಡಿಗುಂಡ ನಿವಾಸಿಗಳಾದ ವೀರಶೈವರ ಪ್ರಾರ್ಥನೆಯ ನ್ನಂಗೀಕರಿಸಿ ಶ್ರೀ ಮ.ಹಾಸನ್ನಿಧಾನದವರು ತಾ|| ೧೬-೧೨-೧೯೪೦ ನೇ ಸೋಮವಾರ ಪ್ರಾತಃಕಾಲ ೧೦ ಘಂಟೆಗೆ ಆಷ್ಟಪಲ್ಲಕ್ಕಿ ಉತ್ಸವದೊಡನೆ ಮುಡಿಗುಂಡ ಗ್ರಾಮಕ್ಕೆ ದಯಮಾಡಿಸಿದರು. ಮುಡಿಗುಂಡವು ಆಕಾರ ದಲ್ಲಿ ಹೆಳ್ಳಿಯಾದರೂ ಜೀವನದಲ್ಲಿ ಶಕರವನ್ನು ಹಿಂದಟ್ಟಿ ವಿರದು ಧಾರ್ಮಿಕ, ಲೌಕಿಕ ಪದ್ಧತಿಗಳಲ್ಲಿ ಸರ್ವರೂ ಮುಂದುವರಿದಿರುವರು ಅಲಂಕರಿಸಲ್ಪಟ್ಟ ಪೆಸರಬೀದಿ ಗಳಲ್ಲಿ ಉತ್ಸವವು ಸರ್ವಾಂಗಸುಂದರವಾಗಿ ಸಂಚರಿಸಿ ವಿನಾಸಗ್ಗಹಕ್ಕೆ ಸಭಾಮಂಟಪಕ್ಕೆ ಬಂದಿತು. ಶ್ರೀಗಳ ವರು ಸಿಂಹಾಸನಾರೋಹಣವನ್ನು ಮಾಡಿದನೆಲೆ ಶ್ರೀಮಾನ್ ವಿರೂಪಾಕ್ಷಪ್ಪನವರು ಬಿ ಎ,ಬಿ ಎಲ್ ವಕೀಲರು ವಿಜ್ಞಾಪನಾಪತ್ರಿಕೆಯನ್ನೋದಿ ಒಪ್ಪಿಸಿದರು ಶ್ರೀ ಸನ್ನಿಧಿಯವರು ಉತ್ತರರೂಪವಾಗಿ ಆಶೀರ್ವಾದವನ್ನಿತ್ತರು. ಜನಸಂದಣಿಯು ಅಪಾರವಾಗಿತ್ತು. ಆಚಾರ್ಯರ ಭಕ್ತಿಯು ತುಂಬಿತುಳುಕುತ್ತಲಿದ್ದಿತು ಅದೇ ದಿನ ಸಾಯಂಕಾಲ ಮೊದಲುಮಾಡಿ ನಿತ್ಯದಲ್ಲಿ ಯೂ ಶ್ರೀ ಗಂಗಾಧರಶಿವಾಚಾರ್ಯರ ಉಪಸ್ಥಾನವು ನಡೆಯುತ್ತಲಿದ್ದಿತು ಆಪ್ತುವರ್ಗವಾದ ಸೇವಾಲಾಭವನ್ನು ಜನರು ಕಳೆದುಕೊಳ್ಳದೆ ಶ್ರೀ ಜಗದ್ಗುರುಗಳವರನ್ನು ಉತ್ಸವಪೂರ್ವಕವಾಗಿ ತಮ್ಮತಮ್ಮ ಮನೆಗಳಿಗೆ ದಯಮಾಡಿಸಿಕೊಂಡು ಸೇವೆಯನ್ನು ಸಲ್ಲಿಸುತ್ತಿದ್ದರು ಶ್ರೀ ಮಹಾ ಗುರುಗಳವರ ತ್ರಿಕಾಲಪೂಜಾನುಷ್ಠಾನದಿಂದಲೂ ಶ್ರೀ ಗಂಗಾಧರ ಶಿವಾಚಾರ್ಯರ ಉಷದೇಶಾನುತಕಾನದಿಂದಲೂ ಜನರ ಆನಂದಕ್ಕೆ ಪಾರವೇ ಇರಲಿಲ್ಲ ದಿನದಿನಕ್ಕೆ ಜನರಲ್ಲಿ ಶ್ರವಣಾಪೇಕ್ಷೆಯು ಬೆಳೆಯಹತ್ತಿತು ಕೊಳ್ಳೇಗಾಲ, ಮಧುವನಹಳ್ಳಿ ಮೊದಲಾದ ಗ್ರಾಮಗಳಿಂದ ಶ್ರವಣಾ ಪೇಕ್ಷೆಯಿಂದ ಅನೇಕ ಸ್ತ್ರೀಮತ ಪರಮತೀಯ ಸುಜ್ಞ ಸ್ತ್ರೀಪುರುಷರು ಬಡಿಕ್ಕಲಿದ್ದರು ಒಂದೊಂದು ದಿನ ಶ್ರೀ ಮಹಾಸನ್ನಿಧಾನದವರ ಉಷದೇಶವೂ ದೊರೆಯುತ್ತಿ ದ್ದಿತು. ೩-೪ ದಿವಸಗಳಲ್ಲಿ ಕೇವಲ ಸ್ತ್ರೀಹುರಿಗಾಗಿಯೇ ಉಷದೇಶವಾಯಿತು. ಸ್ತ್ರೀಸಮಾಜದ ಅನಂದೋತ್ಸಾಹ ಗಳಿಗೆ ಪಾರವೇ ಇರಲಿಲ್ಲ. ಈ ಉಷದೇಶ್ರವಣಮಹೋ ತ್ಸವವು ತಾ|| ೧೪-೧೨-೧೯೪೦ ನೇ ಶನಿವಾರ ಸಾಯಂಕಾ ಲಕ್ಕೆ ಮಂಗಲವನ್ನೈದಿತು. ಅಂದು ವಿಶೇಷಸಮ್ಮಸ್ಥೆ ಯು ಮಹತ್ವಪೂರ್ಣವಿದ್ದಿತು. ಸಭಾಮಂಟಪದಲ್ಲಿ ಜನರು ಕಿಕ್ಕಿರಿಯುತ್ತಿದ್ದರು. ಜಯಘೋಷಮೊಡಿತು ಶ್ರೀ ಮಹಾ ಗುರುಗಳವರು ಸಿಂಹಾಸನವನ್ನಾರೋಹಿಸಿದರು. ಶ್ರೀ ಗಂಗಾಧರ ಶಿವಾಚಾರ್ಯರು ತಮ್ಮ ದೀರ್ಘಕಾಲದ ಉಷ ಸ್ಥಾಸರಂಪರೆಯನ್ನು ಉಷಸಂಹಾರಗೊಳಿಸುತ್ತ ಧರ್ಮದ ಮರ್ಮವು ಅಚಾಲವ್ಯದ್ರಿಂಗೂ ತಿಳಿಯುವಂತೆ ತಾ|| ನವರೆಗೆ ಸ್ವಯಿದಾಯಕವಾದ ಭಾಷಣವನ್ನು ಮಾಡಿ ದರು ಆನೆಲೆ ಶ್ರೀ ಮಹಾಸನ್ನಿಧಾನವರು ಅದೇ ವಿಷಯವನ್ನು ಪುಷ್ಟೀಕರಿಸಿ ಸರಲರಿಗೂ ಧರ್ಮದಲ್ಲಿ ಆಸ ಕ್ತಿಯುಂಟಾಗುವಂತೆ ಶುಭಾಶೀರ್ವಾದರೂಪವನ್ನಿತ್ತರು. ತರುವಾಯ ಶ್ರೀಮಾ ವಿರೂಪಾಕ್ಷಪ್ಪನವರು ಬಿ ಎ ಬಿ.ಎಲ್ ಎಂದು ಶ್ರೀಮಹಾಸನ್ನಿಧಾನದವರ ಶುಭಾಗ ಮನ ಯೋಗದಿಂದ ಶ್ರೀ ಗಂಗಾಧರಶಿವಾಚಾರ್ಯರ ಉಷದೇಶಾಮೃತವು ದೊರೆತದ್ದಕ್ಕಾಗಿ ಆತ್ಯಾನಂದ ವನ್ನು ವ್ಯಕ್ತಗೊಳಿಸಿ ಗ್ರಾಮದ ಪರವಾಗಿ ಪುಷ್ಪಮಾಲೆ ಕೆಗಳನ್ನರ್ಪಿಸಿದರು ಜನರ ಆನಂದಕ್ಕೆ ಪಾರವೇ ಇರ ಲಿಲ್ಲ ಶ್ರೀಮಹಾಸನ್ನಿಧಾನವರು ಕೊಳ್ಳೇಗಾಲ ನಿವಾಸಿಗಳಾದ ವೀರಶೈವ ಮಂಡಳಿಯವರ ಪೌರ್ಣಿ ಯನ್ನಂಗೀಕರಿಸಿ ತಾ|| ೨೨-೧೨-೧೯೪೦ ನೇ ಬುಧವಾರ ಪ್ರಾತಃಕಾಲಕ್ಕೆ ಕೊಳ್ಳೇಗಾಲಕ್ಕೆ ದಯಮಾಡಿಸಿದರು ಅಷ್ಟಪಲ್ಲಕ್ಕಿ ಮಹೋತ್ಸವವು ಸಕಲ ಬಿರುದಾವಳಿ ಗಳೊಡನೆ ಸುಂದರವಾಗಿ ಸಾಗಿತು ಶ್ರೀಮಾನ್ ರಾ|| ಸಾ|| ಜಿ. ಬಿ. ಮಲ್ಲಪ್ಪನವರು ಶ್ರೀ ಮಹಾಸನ್ನಿ ಧಾನದವರಿಗೆ ಗ್ರಾಮದ ಪರವಾಗಿ ಭಿನ್ನವತ್ತಳೆಯನ್ನರ್ಪಿಸಿದರು. ಶ್ರೀ ಮಹಾಗುರುಗಳವರು ಉತ್ತರ ರೂಪ ವಾಗಿ ನಿರೂಪಿಸಿದ್ದರು. ತಾಲ್ಲೂಕಿನ ಸ್ಥಲವಾದುದ ರಿಂದ ಉತ್ಸವದ ಕೋಳಿಯು ಅಸಾಧಾರಣವಾಗಿದ್ದಿತು. ಸಾಯಂಕಾಲಕ್ಕೆ ಶ್ರೀ ಮ.ಹಾಸನ್ನಿಧಿಯಲ್ಲಿ ಶ್ರೀ ಗಂಗಾ ಧರಶಿವಾಚಾರ್ಯರು "ಧರ್ಮಿಷ್ಠಜೀವನ" ವೆಂಬ ವಿಷಯವಾಗಿ ಶುಶ್ರಾವ್ಯವಾದ ಭಾಷಣವನ್ನು ಮಾಡಿ ದರು ತಾ|| ೨೩ ನೇ ಗುರುವಾರ ಸಾಯಂಕಾಲಕ್ಕೆ "ಧರ್ಮದ ಅವಶ್ಯಕತೆ" ಎಂಬ ಭಾಷಣವು ಶ್ರೀಗುರು ರಾ|| ಸಾ|| ಜಿ ಬಿ. ಮಲ್ಲಣ್ಣನವರ ಕುಮಾರ ಶ್ರೀಮಾ ನಪಟಾಜ ಬಿ ಎ, ಬಿ ಎಲ್. ರವರ ಸಂಗೀತವೂ ನಡೆ ದವು ಸಂಗೀತವು ಪ್ರಬಂಧವನ್ನೂ ಸಂತೋಷಪಡಿಸುವುದು ಸಹಜವೇ ಆಗಿದೆ. ಜನಜೀವನದ ಸುಧಾರಣೆಗೆ ಆಧಾರ ಕಾಲೆಮಂತಿರುವ ಧಾರ್ಮಿಕೋಪನ್ಯಾಸಸಪ್ರವಾಹವೇ ಕ್ರಮೆಯು ಜನರನ್ನು ಆತುರರೋಳಿಸಿದ್ದಿತು ಸಕಲ ಮತೀಯ ಶ್ರೀ ಪುರುಷರೂಂದಲೂ, ವಿದ್ಯಾವಂತರಿಂದಲೂ, ಪದವೀ ಧರರಿಂದಲೂ ಸಭೆಯು ರಾಜಿಯಿಸುತ್ತಿದ್ದಿತು. ಉಭಯ ವಿಧಗಳಲ್ಲಿಯೂ ಶ್ರೀ ಮಹಾಗುರುಗಳವರು ಉಪದೇಶಾ ರಾತ್ಮಕವಾಗಿ ಭಾಷಣಮಾಡಿ ಸರಕಾರದ ಅಧಿಕಾರಿಗಳಿಗೂ ಪ್ರಮುಖರಿಗೂ ಆಶೀರ್ವಾದಪೂರೂಪವನ್ನು ದಯಪಾಲಿಸಿ ದರು ತಾ||೩ಳಲ್ಲಿ ಶ್ರೀ ಮಹಾಗುರುಗಳವರು ಮಧುವನ ಹಳ್ಳಿಗೆ ದಯಮಾಡಿಸಿದರು ಆ ದಿನ ಶ್ರೀ ಗಂಗಾಧರ ಶಿವಾಚಾರ್ಯರು "ಗುರುಶಿಷ್ಯ ಜೀವನ" ವೆಂಬ ವಿಷ ಯದಲ್ಲಿ ಭಾಷಣಮಾಡಿದರು ಮಧುವನಹಳ್ಳಿಯ ಜನ ರಿಗೆ ಗುರುಸೇವೆಯ ಬಗೆ ಬಹು ಹಿಗ್ಗು ಶ್ರೀ ಮಹಾ ಗುರುಗಳವರು ಎಷ್ಟುದಿವಸವಿದ್ದರೂ ಪ್ರೇಸುವೇ ಇಲ್ಲ. ಆದರೆ ಗುರುಭಕ್ತಿಯು ಕ್ಷಣಕ್ಷಣಕ್ಕೂ ನೂತನವೈವಿಧ್ಯವನ್ನೆಯ ತ್ತಲಿದೆ ತಾ|| ೭ನೇ ಶನಿವಾರ ಶ್ರೀ ಮಹಾಗುರು ಗಳವರು ಮಜ್ಯನಿವಾಸ (ಹೆಡ್‌ಕ್ವಾರ್ಟರ್ಸ್) ವಾದ ಮುಡಿಗುಂಡಕ್ಕೆ ದಯಮಾಡಿಸಿದರು ಶ್ರೀ ನೈಜೂರು ಮಹಾಪ್ರಭುಗಳವರು ಶ್ರೀ ರಂಭಾಪುರೀಪೀಠದ ಸಂದರ್ಶ ಕ್ಕಾಗಿ ತಾ|| ೧೬-೨-೧೯೪೧ ನೇ ಭಾನುವಾರ ದಯಮಾ ಡಿಸುವುದರಿಂದ ಶ್ರೀ ಮಹಾಗುರುಗಳವರು ಮೂಗೂರು, ಸೋಸಲೆ ಮೊದಲಾದ ಗ್ರಾಮಗಳಲ್ಲಿ ಸಂಚರಿಸಿ ಕ್ರಿಸ್ತ ದಲ್ಲಿಯೇ ಶ್ರೀ ರಂಭಾಪುರಿಗೆ ದಯಮಾಡಿಸುವುದಾಗಿ ತಿಳಿಯುತ್ತಿದೆ. ಜಗದಾಚಾರ್ಯರ ಸಂಚಾರದಿಂದ ಜಗತ್ತು ಪಾವನವಾಗುವ ಯೋಗವು ಒದಗಿದೆ. ಶ್ರೀ ಗಂಗಾಧರ ಶಿವಾಚಾರ್ಯರು ತಾ|| ೧೫ ನೇ ದಿನ ಸಾಯಂಕಾಲಕ್ಕೆ ಮಧುವನಹಳ್ಳಿಯಲ್ಲಿ ವೀರಕ್ಷೇವ ತತ್ತ್ವದ ವಿಷಯದಲ್ಲಿ ಭಾಷಣವನ್ನು ಮಾಡಿ ೨೬ ನೆಯ ಭಾನುವಾರ ಕೊಳ್ಳೇ ಗಾಲಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣಮಾಡಿದರು. ಅರುಣೋದಯ ಸೂರ್ಯೋದಯಗಳಲ್ಲಿ ಅಂಧಕಾರವು ತೊಲಗಿ ಪ್ರಕಾಶವು ಪ್ರಸರಿಸುವಂತೆ ಉಪಾಚಾರ್ಯ, ಸಮಾಚಾರ್ಯರ ಸಂಚಾರದಿಂದ ಅಜ್ಞಾನಾಂಧಕಾರವು ದೂರವಾಗಿ ಧಾರ್ಮಿಕ ತೇಜಸ್ಸು ಹರಡಿ ಜನಜೀವನವು ಸುಖಮಯವಾಗಲೆಂದು ಜಗದಾಚಾರ್ಯರ ಪಾದಕಮಲ ಗಳನ್ನು ಸ್ಮರಿಸುತ್ತೇನೆ.

ಓರ್ವ ಗುರುಭಕ್ತ.

ಲಿಂಗಧಾರಣ ವಿಧಿ

ಬಹುಜನರ ಪ್ರಾರ್ಥನೆಯ ಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದ ವರಿಗೆ ಈ ವಿಧಿಯು ಮುಖ್ಯವಾಗಿರುವಂತೆ ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಮಹಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ ಹೇಳಿಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು.

ಶ್ರೀಜಗದ್ಗುರು ರಂಭಾಪುರೀಪೀಠಕ್ಕೆ

ಶ್ರೀಮನ್ಮಹಾರಾಜರವರ ಆಗಮನ.

(ತಾ॥ 16-2-1941 ಭಾನುವಾರ)

ಶ್ರೀಮನ್ಮಹಾರಾಜಾಧಿರಾಜ ಕರ್ನಾಟಕರತ್ನ ಸಿಂಹಾಸನಾಧೀಶ್ವರ
ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಗಳವರು.

ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ದರ್ಶನೀಯಗಳೆಲ್ಲೊಂದಾದ ಶ್ರೀಜಗದ್ಗುರು ರೇಣುಕಾಚಾರ್ಯರ ಧರ್ಮಪೀಠವಾದ ಶ್ರೀರಂಭಾಪುರಿ ಪ ಸ್ಥೂರ ನರಸಿಂಹರಾಜಪುರ ಪರಿಸರೋಪಸ್ಥಿತರಿರುವ ವಿಷಯವು ಸರ್ವರಿಗೂ ನೇದ್ಯವೇ ಆದೆ ಈ ದರ್ಮಪೀಠವು ಧರ್ಮಸಂಸ್ಥಾಪನಾರ್ಥಕವಾಗಿ ಅವತರಿಸಿದಲ್ಲಿಂದಲೂ ಈ ಧರ್ಮರಾಜ್ಯದಲ್ಲಿಯೇ ವಿರಾಜಿಸುತ್ತಿರುವುದು. ಈ ವಿಷಯವನ್ನು ಸ್ವಾಮಿಯು ವಿಶೇಷಾಗಮಗಳಲ್ಲಿ —

ಶ್ರೀಮದ್ರೇವಣಸಿದ್ಧಸ್ಯ ಕುಲ್ಯಪಾಕಪುರೋತ್ತಮೇ ।
ಸೋಮೇಶಲಿಂಗಾಜ್ಜನಿಸಮಾವಾಸಃ ಕದಲೀಪುರೇ ॥

ಇತ್ಯಾದಿ ಶ್ಲೋಕಗಳಿಂದ ಪ್ರತಿಪಾದಿಸುತ್ತಿರುವರು. ಈ ಪೀಠದ ಮೂಲಾಚಾರ್ಯರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೂ, ವಿಘ್ನೇಶ್ವರ, ವಿಕ್ರಮಾರ್ಕ ಮೊದಲಾದ ಚಕ್ರವರ್ತಿಗಳಿಗೂ ಶಿವಸಿದ್ಧಾಂತವನ್ನು ಪದೇಶಿಸಿ, ಅವರನ್ನು ಧನ್ಯರನ್ನಾಗಿ ಮಾಡಿದರು ಈ ವಿಷಯವನ್ನು ಇವರ ವಿಷಯಕವಾಗಿರುವ ಸಕಲ ಚರಿತ್ರಗ್ರಂಥಗಳು ಮುಕ್ತಕಂಠದಿಂದ ಉದ್ಘೋಷಿಸುತ್ತಿರುವವು

ಅನಾದಿಕಾಲದಿಂದ ರಾಜಾಧಿರಾಜನ್ಯಾಯವಾಗಿರುವ ಈ ಧರ್ಮಪೀಠದ ವಿಷಯದಲ್ಲಿ ನನ್ನು ಯದುವಂಶೀಯ ಧರ್ಮಪ್ರಭುಗಳೂ ಸಹ ಪ್ರಾಚೀನಕಾಲದಿಂದ ಈ ಪೀಠವನ್ನು ಆಸ್ಥಾನಾಭಿಮಾನದ ಭಕ್ತಿಯಿಟ್ಟು ಈ ಪೀಠದ ಪುರೋಭಿವೃದ್ಧಿಯನ್ನು ಬಯಸುತ್ತಿರುವರು ಶ್ರೀನಿಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾ ಪ್ರಭುಗಳವರು ಈ ಪೀಠದ ಅಭಿವೃದ್ಧಿಗಾಗಿ ವಿಶೇಷದಾನವನ್ನು ಸಲ್ಲಿಸಿರುವರು ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಭುಗಳವರು ತಮ್ಮ ಅಲ್ಪಕಾಲವಿದ್ದ ಪೀಠದ ದರ್ಶನಕ್ಕಾಗಿ ಎರಡುಸಾರಿ ಆಗಮಿಸಿದ್ದರು ಅಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಭುಗಳವರು ಆನಾಯಕನಾಗಿದ್ದ ಈ ಪೀಠಕ್ಕೆ ಸದ್ಯ ಈ ಪೀಠವನ್ನಲಂಕರಿಸಿರುವ ಶ್ರೀಜಗದ್ಗುರುಗಳವರನ್ನು ಅಭಿಷಿಕ್ತರಿಗನ್ನಾಗಿ ಮಾಡಿ, ಸಕಲರಾಜಚಿಹ್ನಾವಳಿ ಸೊಬಗಾದ ಗೌರವಗಳನ್ನು ದಯಪಾಲಿಸಿ (ತಾ॥ 30-11-1931) ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಬ॥ ೫ ಸೋಮವಾರ ರುಭವನಿಷ ಈ ಮಹಾಪೀಠಕ್ಕೆ ಆಗಮಿಸಿ, ಭರತಖಂಡದಲ್ಲಿರುವ ಸಕಲವೀರಶೈವಜನಾಂಗಕ್ಕೆ ಪರಮಸಂತೋಷವನ್ನುಂಟು ಮಾಡಿದರು. ಅಜ್ಞತೆ (ತಾ॥ 4-10-1934) ರಲ್ಲಿ ಶ್ರೀಜಗದ್ಗುರುಗಳವರನ್ನು ಸಕಲರಾಜ್ಯೈಭವದೊಡನೆ ಅರಮನೆಗೆ ದಯಮಾಡಿಸಿಕೊಂಡು ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಪರಮಾನಂದಭರಿತರಾದರು

ಸದ್ಯ: ನಮ್ಮನ್ನಾಳುತ್ತಿರುವ ಮಹಾಸ್ವಾಮಿಯವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಹಿಂದಿನ ಮಹಾಪ್ರಭುಗಳವರಂತೆಯೇ ಈ ಪೀಠದ ವಿಷಯದಲ್ಲಿ ನಿರತಿಶಯವಾದ ಭಕ್ತಿವಿಶ್ವಾಸಗಳನ್ನಿಟ್ಟು ಇದೇ ತಿಂಗಳು **16** ನೆಯ ತಾರೀಖು ಮಾಘ ಬ॥ ೫ ಭಾನುವಾರ ದಿವಸ ಪ್ರಾತಃಕಾಲ ಧರ್ಮಪೀಠಕ್ಕೆ ದಯಮಾಡಿಸುತ್ತಿರುವುದನ್ನು ನೋಡಿದರೆ ಇದು ನೀರಕೈವ ಸಮಾಜದ ಪುಣ್ಯವಿಶೇಷವೇದೇ ಭಾವಿಸಬೇಕಾಗಿದೆ. ಮಹಾಗುರುಗಳು ಮತ್ತು ಮಹಾರಾಜರು ಸಂಧಿಸುವ ಆ ದಿನವು ಮಹಾಪವಿತ್ರದಿವಸವೆಂದು ಸಾರಿಸಾರಿ ಹೇಳಬಹುದಾಗಿದೆ. ಆದುದರಿಂದ ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರು ಆ ದಿವಸಕ್ಕೆ ಸರಿಯಾಗಿ ಗುರುಪೀಠಕ್ಕೆ ಆಗಮಿಸಿ ಮೂಲಪೀಠದ ದರ್ಶನವನ್ನೂ, ಶ್ರೀಜಗದ್ಗುರುಗಳವರ ದರ್ಶನವನ್ನೂ, ಕರ್ನಾಟಕಸಾರ್ವಭೌಮರ ದರ್ಶನವನ್ನೂ ಪಡೆದು ಧನ್ಯರಾಗಬೇಕೆಂದಾಶಿಸುತ್ತೇವೆ.

ಬಾಳೆಹೊನ್ನೂರು ಮಹಾಪೀಠಕ್ಕೆ ಆಗಮಿಸಬೇಕಾದರೆ ಹುಬ್ಬಳ್ಳಿ ಬೆಂಗಳೂರು ಮಧ್ಯದಲ್ಲಿರುವ ಕಡೂರು ಸ್ಟೇಷನ್ನಿಗೆ ಇಳಿಯಬೇಕು. ಅಲ್ಲಿಂದ ಶ್ರೀಮಠಕ್ಕೆ ೬೦ ಮೈಲು ಆಗುವದು. ಸ್ಟೇಷನ್ನಿನಲ್ಲಿ ಮೋಟಾರುಗಳು ದೊರೆಯುವವು.

ವೀರಾಭಿಮಾನಿಗಳಲ್ಲಿ ವಿಜ್ಞಾಪನೆ.

ಶ್ರೀಮನ್ಮಹಾರಾಜರವರು ಇದೇ ತಿಂಗಳು ೧೬ ನೆಯ ತಾರೀಖಿನ ದಿವಸ ಶ್ರೀಜಗದ್ಗುರು ರಂಭಾಪುರೀ ಪೀಠಕ್ಕೆ ದಯಮಾಡಿಸುವರೆಂಬ ವಿಷಯವು ಸರ್ವತ್ರ ಪ್ರಸಿದ್ಧವಾಗಿರುವುದಷ್ಟೆ! ಈ ವಿಷಯವನ್ನು ತಿಳಿದು ಅನೇಕ ಜನ ಗುರುಪೀಠಾಭಿಮಾನಿಗಳು ಆ ಕಾಲಕ್ಕೆ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಆಗಮಿಸುವರೇ? ಎಂದು ಪತ್ರಮುಖದಿಂದ ಕೇಳಿ ತಿಳಿದರು ಸಂಡಿತರು ಈ ಕಾರ್ಯದಲ್ಲಿ ಮುಖ್ಯ ಭಾಗಿಗಳಾಗಿರುವುದರಿಂದ ಅವಶ್ಯವಾಗಿ ಆಗಮಿಸುವರೆಂಬ ವಿಷಯವನ್ನು ಈ ಮೂಲಕ ಸರ್ವರಿಗೂ ಶ್ರುತಪಡಿಸಿದೆ.

ಮ್ಯಾನೇಜರ್.

ಯುದ್ಧವಾರ್ತೆ.

ಮಾರ್ಷಲ್ ಗ್ರೆಜಿಯಾನಿಯವರು ಕೆಲಸದಿಂದ ತೆಗೆಯಲ್ಪಟ್ಟರೆ?

ಲಿಬ್ಯಾದಲ್ಲಿ ಇಟಲಿ ಸೈನ್ಯಗಳ ನಾಯಕರಾಗಿದ್ದ ಮಾರ್ಷಲ್ ಗ್ರೆಜಿಯಾನಿಯವರನ್ನು ಕೆಲಸದಿಂದ ವಜಾ ಮಾಡಿ ಅವರ ಸ್ಥಾನಕ್ಕೆ ಜನರಲ್ ಬಾರ್ಡಿಯವರನ್ನು ಮಕಸೂದಲಾಗಿನೆಯೆಂದು ಸುದ್ದಿ ಹರಡಿದೆ. ಅಬ್ಸಿನಿಯಾ ಯುದ್ಧದಲ್ಲಿ ಇವರು ಪ್ರಸಿದ್ಧಿಪಡೆದಿರುವರಂತು. ಆಕಾರಣದಿಂದೇ ಯೆಂತವು ಈ ಸುದ್ದಿಯನ್ನು ಕೊಟ್ಟಿತು. ಆದರೂ ಅದು ದೃಢಪಟ್ಟಿಲ್ಲ. ಲಿಬ್ಯಾದಲ್ಲಿ ಇಟಲಿಗೊದಗಿದ ದುಸ್ಥಿತಿಯನ್ನು ನೋಡಿದರೆ ಈ ವರ್ತಮಾನವು ನಿರಾಧಾರವಾದುದೆಂದು ಹೇಳುವಂತಿಲ್ಲ.

ಆಫ್ರಿಕದಲ್ಲಿ ಇಟಾಲಿಯನ್ನರದುರವಸ್ಥೆ

ಟೋಬ್ರುಕ್ ನಗರದಲ್ಲಿ ಸೆರೆಸಿಕ್ಕಿದ ಇಟಾಲಿಯನ್ನರ ಸಂಖ್ಯೆ 25000 ಕ್ಕೆ ಮೀರಿದೆಯೆಂದು ಪ್ರಕಟವಾಗಿದೆ ಬ್ರಿಟಿಷ್ ಸೈನ್ಯಗಳು ಡೆರ್ನಾ ಎಂಬಲ್ಲಿಗೆ ವಿಕಪ್ರಕಾರ ಮುನ್ನುಗ್ಗುತ್ತಿವೆ ಇಟಲಿಯನ್ನರ ನೌಕಾಬಲದ ಮತ್ತು ವಿಮಾನಪಡೆಯ ಮೂಲಸ್ಥಾನವಾಗಿದ್ದ ಬೋಂಬಾ ಎಂಬುದನ್ನು ಶತ್ರುಗಳು ತ್ಯಜಿಸಿದ್ದಾರೆ. ಅಲ್ಲಿಯ ಭೂಪ್ರದೇಶವು ಗುಡ್ಡಮಯವಾಗಿದ್ದರೂ ನೀರಿನ ಸೌಕರ್ಯವು ಬೇಕಾದಷ್ಟಿರುವುದರಿಂದ ಬ್ರಿಟಿಷ್ ಸೈನ್ಯಗಳು ಮುಂದುವರಿಯಲು ಬಹಳ ಅನುಕೂಲವಾಗಿದೆಯೆಂದು ಹೇಳಲಾಗಿದೆ. ಅಬ್ಸಿನಿಯದಲ್ಲಿ ಸ್ವದೇಶಾಭಿಮಾನಿಗಳಾದ ದೇಶಭಕ್ತ ನಾಯಕರು ಮುಂದೆ ನುಗ್ಗಲು ಸಾಧ್ಯರಾಗಿದ್ದಾರೆ. ಅಬ್ಸಿನಿಯಾದಲ್ಲಿರುವ ಆಹಾರ ವಸ್ತುಗಳನ್ನು ಸಾಗಿಸಿಕೊಂಡು ಹೋಗಲು ಇಟಾಲಿಯನ್ನರು ಪ್ರಯತ್ನಪಡುತ್ತಿದ್ದಾರಂತೆ ಆದರು ಅಬ್ಸಿನಿಯವನ್ನೇ ಸಂಪೂರ್ಣವಾಗಿ ಬಿಟ್ಟುಹೋಗುವ ಸ್ಥಿತಿ ಒದಗಿದಂತಿದೆ.

ಜರ್ಮನಿಯನ್ನು ಸೋಲಿಸಬಹುದು

'ಲೆಂಡ್ ಮತ್ತು ಲೀಸ್' ಮಸೂದೆಯನ್ವಯ ಅಮೆರಿಕೆಯು ಕೊಡಲಿರುವ ಸಹಾಯದಿಂದ ಬ್ರಿಟನ್ನು ಜರ್ಮನಿಯನ್ನು ಸೋಲಿಸಬಹುದೆಂದು ಅಮೆರಿಕೆಯ ಸೈನ್ಯ ಶಾಖೆಯ ಮುಖ್ಯಾಧಿಕಾರಿಗಳಾದ ಜನರಲ್ ಜಾರ್ಜ್ ಮಾರ್ಷಲ್‌ರವರು ವೃತ್ತಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು

ಜರ್ಮನಿ ನೌಕಾಧಿಕಾರಿಗಳ ಎಚ್ಚರಿಕೆ

ಜರ್ಮನಿಯ ನೌಕಾಬಲದ ಮುಖ್ಯಾಧಿಕಾರಿಗಳಾದ ಆಡ್ಮಿರಲ್ ರೀಡರ್‌ರವರು ನೌಕಾ ಕ್ಷೇತ್ರಗಳಲ್ಲಿ ಕೆಲಸಮಾಡುವ ಜರ್ಮನ್ ಕೆಲಸಗಾರರನ್ನು ಕುರಿತು ಭಾಷಣಮಾಡುತ್ತ "ಬ್ರಿಟನ್ನಿನೊಡನೆ ನಡೆಯಬೇಕಾಗಿರುವ ಕಟ್ಟಕಡೆಯ ಹೋರಾಟವು ಅತ್ಯುನ್ನತಬಲವಲ್ಲ ಬ್ರಿಟನ್ನಿನ ನೌಕಾಬಲವನ್ನು ನಾಶಮಾಡಬೇಕು. ನಾವು ರತ್ನಗಳೊಡನೆ ಪಸಮಪಟ್ಟೆ ಹೋರಾಡಲು ಪ್ರಯತ್ನಿಸಬೇಕು ರತ್ನನಿನ ಒಲವನ್ನು ನಾವು ಕಡೆಗೆ ಇಂಗ್ಲಾಂಡಿನ ದಾಕ್ಷಿಣ್ಯವನ್ನು ಅವರೆ ಅವರನ್ನು ಜಯಿಸುವಷ್ಟು ಸಬಲಪಕ್ಷಪಾತಬುದ್ಧಿಯಿಂದ ಹೋರಾಡುತ್ತಿದ್ದಾರೆ' ಎಂದು ಎಚ್ಚರಿಕೆ ಕೊಟ್ಟರು

ಫ್ರೆಂಚ್-ಇಂಡೋ-ಚೀನಾ ಯುದ್ಧ ನಿಂತಿತು.

ಫ್ರೆಂಚ್ ಮತ್ತು ಸೈಂ ಇಂಡೋ ಚೀನಾ ಗಳ ಕಳೆದ 27 ನೇ ತಾರೀಖು ಸೈಗಾನ್ ಜಿಲ್ಲೆ ಜಪಾನ್ ಸಂಗಾಮ ನೌಕೆಯಮೇಲೆ ಶಾಂತಿ ಸ್ಥಾಪನೆಯ ಮಾತುಕತೆಗಳು ಆರಂಭವಾದವು ಜಪಾನ್ ಮಿಲಿಟರಿ ಗೋಷ್ಠಿಯ ನಾಯಕರಾದ ಮೇಜರ್ ಜನರಲ್ ಸಿಮಿಟಾರವರು ಭಾಷಣಮಾಡಿದಮೇಲೆ ಅರ್ಧಘಂಟೆಯಕಾಲ ವಿಚಾರವಿನಿಮಯನಡೆದು ಅಂತಿಮ ಕಾರ್ಯಕ್ರಮವು ಕೊನೆಗೊಂಡಿತು. ಗಡಿಯನ್ನು ನಿರ್ಧರಿಸುವ ವಿಷಯವು ಮೊದಲು ಚರ್ಚಿಸಲ್ಪಡುವುದೆಂದು ನಿರೀಕ್ಷಿಸಲಾಗಿದೆ ಕೆಲವು ಮಾಗಳಲ್ಲಿ ಸಣ್ಣಪುಟ್ಟ ಘಟನೆಗಳು ನಡೆಯುತ್ತಿರುವುದರ ಹೊರತು ಯುದ್ಧವು ನಿಂತಿರುವುದಾಗಿ ಫ್ರೆಂಚ್ ಪ್ರಕಟಣೆಯು ತಿಳಿಸುತ್ತಿದೆ

ಬ್ರಿಟನ್ನಿನ ಮುತ್ತಿಗೆ ಯಾವಾಗ?

ಜರ್ಮನಿಯು ಈ ವರ್ಷದ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಬ್ರಿಟನ್ನಿಗೆ ದುತ್ತಿಗೆ ಹಾಕುವ ಪ್ರಯತ್ನ ಮಾಡಬಹುದೆಂದು ಹಲವರು ಅಭಿಪ್ರಾಯ ಪಡುತ್ತಿದ್ದಾರೆ. ಆದರೆ ಬ್ರಿಟನ್ನು ಅಮೆರಿಕೆಯ ಸಹಾಯವನ್ನು ಪಡೆದು ಜರ್ಮನಿಯನ್ನು ಹಿಂದಕ್ಕಟ್ಟಿ ಜಯಗಳಿಸಲು ಮುಂದೆ ನುಗ್ಗುವದೆಂಬ ಕೆಲವರು ಅಭಿಪ್ರಾಯಪಡುವುದು ಯೂರೋಪಿನಿಂದ ಬರುತ್ತಿರುವ ಅಧಿಕಾರಯುತವಾದ ಈಚಿನ ಸುದ್ದಿಗಳ ಆಧಾರದ ಮೇಲೆ ಈ ರೀತಿ ಅಭಿಪ್ರಾಯಪಡಲಾಗಿದೆಯೆಂದು ತೋರುತ್ತದೆ ಪ್ರೆಸಿಡೆನ್ಸಿ ಸುತ್ತಿಗೆಯ ಹೆಸರಿನಲ್ಲಿ ಇಲ್ಲಿಯ ತನಕೆ ಉಪಯೋಗಿಸದಿರುವ ಹೊಸ ಮಾದರಿಯ ವಿಮಾನಗಳನ್ನು ಉಪಯೋಗಿಸುವೆನೆಂದೂ, ಬ್ರಿಟಿಷ್ ನೌಕಾಪಡೆಯನ್ನು ಜಯಿಸಲು ಟಾರ್ಪೆಡೋಗಳನ್ನು ಬಳಸುವ ವಿಮಾನಗಳನ್ನು ಬಹಳವಷ್ಟಿಗೆ ಉಪಯೋಗಿಸಲಾಗುವುದೆಂದೂ ನಂಬಲಾಗಿದೆ.

ಹಿಟ್ಲರ್-ಮುಸೋಲಿನಿ ಭೇಟಿ

ಸರ್ವಾಧಿಕಾರಿಗಳ ಭೇಟಿಯು ವಿಷಯದಲ್ಲಿ ಪಾರಿಕೆಯ ಸುದ್ದಿಗಾರರು ತಮ್ಮ ಪತ್ರಿಕೆಗೆ ಕೊಟ್ಟಿರುವ ವರದಿಯಲ್ಲಿ "ಜರ್ಮನಿಯಲ್ಲಿ ಎಲ್ಲೋ ಒಂದು ಪ್ರದೇಶದಲ್ಲಿ ಹಿಟ್ಲರ್ ಮ.ಮೋಲಿನಿಗಳಿಗೆ ಭೇಟಿಯಾಯಿತು. ಇಂಗ್ಲೆಂಡನ್ನು ಆಕ್ರಮಿಸುವುದಕ್ಕೆ ಮೊದಲು ಈ ಉಭಯರ ಮಧ್ಯೆ ನಡೆಯಬೇಕಾಗಿದ್ದ ಭೇಟಿಯಿದೆಂದು ಪ್ಯಾರಿಸ್ ನಗರದಲ್ಲಿ ಅಧಿಕಾರಯುತವಾಗಿ ಹೇಳಲಾಗಿದೆ. ಈ ವಿಚಾರದಲ್ಲಿ ಇಟಲಿ ಜರ್ಮನ್ನರಿಗಿಂತ ಹೆಚ್ಚಾಗಿ ಆಸಕ್ತಿಯನ್ನು ತೋರಿಸಿದೆ. ಇಟಲಿಯ ಪ್ರಧಾನಿಯಾದ ಮುಸೋಲಿನಿಯವರು ಹಿಟ್ಲರ್‌ರವರನ್ನು ಭೇಟಿಯಾಗಲು ಬರ್ಲಿನ್ ನಗರಕ್ಕೆ ಹೋಗಿದ್ದರು. ಈ ಭೇಟಿಯಲ್ಲಿ ಅವರು ಮಾತನಾಡಿದ ವಿಷಯಗಳು ಈ ಕೆಳಕಂಡಂತಿವೆ. 1. ಅಮೆರಿಕೆಯ ಸಹಾಯವು ಹೆಚ್ಚಾಗಿ ಒದಗುವದಕ್ಕಿಂತ ಮುಂಚೆ ಬ್ರಿಟನ್ನನ್ನು ನಾಶಮಾಡುವ ರೀತಿ, 2. ಅಮೆರಿಕದ ವಿಚಾರದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮ, 3. ಮಸಲೇನಿಯ ಪತನವನ್ನು ಏನಾರಿಸುವ ಬಗೆ ಕುರಿತು ಆಲೋಚನೆ, 4 ಆಕ್ಸಿಸ್ ರಾಷ್ಟ್ರಗಳ ಆರ್ಥಿಕ ವಿಚಾರ. ಈ ವಿಷಯಗಳೆಲ್ಲವೂ ಜರ್ಮನ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈ ಭೇಟಿಯು ನಡೆಯಬೇಕೆಂದು ಸೂಚಿಸಿದವರು ಹಿಟ್ಲರೇ. ಜರ್ಮನಿ ಮತ್ತು ಅಮೆರಿಕೆಯ ಬಾಂಧವ್ಯವು ಇಂದು ಬಹಳ ಹೀನಸ್ಥಿತಿಯಲ್ಲಿದೆ "ಎಂದು ಹೇಳಲಾಗಿದೆ.

ಆಫ್ರಿಕೆಯಲ್ಲಿ ಬ್ರಿಟಿಷರ ಮುಂದೋಟ

ಬ್ರಿಟಿಷ್ ಪಡೆಗಳು ಜೆನ್ನಾ ನಗರವನ್ನು ಆಕ್ರಮಿಸಿದವೆಂದು ಸ್ವಕಟವಾಗಿದೆ ಲಭ್ಯಿಂದ ಮುಂದೆ ಬ್ರಿಟಿಷ್ ಪಡೆಗಳು ಬೆಂಗಾಜಿ ಕಡೆ ಮುಂದುವರಿಯುತ್ತಲಿವೆ ಬೆಂಗಾಜಿಯೂ ಬ್ರಿಟಿಷರ ಕೈಗೆ ಬೀಳುವುದು ಖಂಡಿತ ಸೇಂದ ಹೇಳಲಾಗುತ್ತಿದೆ ಲಿಬ್ಯನ್ಸ್ರಾಂತದ ನಿಗರಗಳಲ್ಲೆಲ್ಲ ಇದೇ ಪರಿಸ್ಥಿತಿಯು ಇದು ಬ್ರಿಟಿಷರ ಪರವಾಗಿರುವಂತೆ ರತ್ನಗಳು ಈಜಿಪ್ತಿಗೆ ನುತ್ತಿಗೆ ಹಾಕಿವ ಸಂಭವವೇ ತಪ್ಪಿದಂತಾಗುತ್ತದೆ ಎಂಬುದಕ್ಕೆ ಬಹಳ ಕಷ್ಟವಾಗುತ್ತಿದೆ ಲಿಬ್ಯನ್ ಮರುಭೂಮಿಯಲ್ಲಿ ಸಂಚರಿಸುತ್ತಿರುವ ಬ್ರಿಟಿಷ್ ಸೈನ್ಯಕ್ಕೂ ಬಂದಿಗಳ ಸಂಖ್ಯೆಯೂ, ಕೆಪ್ಪಗತವಾದ ಸಂಗ್ರಾಮ ಸಾಮಗ್ರಿಗಳ ವಿವರಗಳೂ ಪ್ರಕಟವಾಗಿಲ್ಲ ಒಟ್ಟಿಗೆ ಆಫ್ರಿಕೆಯಲ್ಲಿ ಇಟಲಿಯವರು ಬಹು ಭೂಮಿಯನ್ನು ಕಳೆದುಕೊಂಡರಲ್ಲದೆ ಲಕ್ಷ್ಯೋತ್ತರ ಸೈನಿಕರನ್ನು ಕಳೆದು ಕೊಂಡಿರುವ ಇದರಿಂದ ಇಟಲಿಯ ದೌರ್ಭಾಗ್ಯಕ್ಕೆ ಎಣೆಯಿಲ್ಲವೆಂದು ಹೇಳಬೇಕಾಗಿದೆ.

ರಷ್ಯನ್ನರು ಅಮೆರಿಕೆಯಿಂದ ಸಾಮಾನುಗಳನ್ನು ತರಿಸಿ ಜರ್ಮನಿಗೆ ಕಳುಹಿಸುತ್ತಿರುವರಂತೆ !

ರಷ್ಯವು ತನ್ನಲ್ಲಿರುವ ಸಾಮಾನುಗಳನ್ನು ಜರ್ಮನಿಗೆ ಕಳುಹಿಸಿ ಅದಕ್ಕೆ ಬದಲು ಅಮೆರಿಕೆಯಿಂದ ಸಾಮಾನುಗಳನ್ನು ತರಿಸಿ ಜರ್ಮನಿಗೆ ಕಳುಹಿಸುತ್ತಿದೆಯೆಂಬ ಇತ್ತೀಚೆಗೆ ತಿಳಿದುಬಂದಿದೆ. ಈ ಬಗ್ಗೆ ಕಾಮನ್ಸ್ ಸಭೆಯಲ್ಲಿ ಯುದ್ಧಮಂತ್ರಿಗಳು ಕೆಳಗೆ ಕಂಡಂತೆ ಹೇಳಿದರು.

"ಅಮೇರಿಕೆಯಿಂದ ಬಂದ ವಸ್ತುಗಳು ರಷ್ಯದ ಮೂಲಕ ಜರ್ಮನಿಗೆ ಹೋಗುತ್ತವೆಯೆಂಬುದಕ್ಕೆ ಸರಿಯಾದ ನಿದರ್ಶನವಿಲ್ಲ ಆದರೆ ಅಮೇರಿಕೆಯಿಂದ ಹತ್ತಿಯು ರಷ್ಯಕ್ಕೆ ಬೆಲೆಬಲು ಬಂದಿಲು ಅಲ್ಪಪ್ರಮಾಣದಲ್ಲಿ ಬರುತ್ತಿದ್ದು, ಕಳೆದ ವರ್ಷದ ಕಡೆಯ ಮೂರು ತಿಂಗಳಲ್ಲಿ 50,000 ಟ್ಗಗಳಷ್ಟು ಬಂದಿತು. ಇದೇ ಅವಧಿಯಲ್ಲಿ ಅಕಾರ ಹತ್ತಿಯು ರಷ್ಯಂದ ಜರ್ಮನಿಗೆ ಹೋಯಿತು ಯುದ್ಧಮಂತ್ರಿಯು ಮಂಚೆ ತಾವು ಮತ್ತು ಹಿತ್ತಾಳೆಗಳು ರಷ್ಯಕ್ಕೆ ಹೆಚ್ಚಿಗೆ ಬಿಡತ್ತಿರಲಿಲ್ಲ. ಆದರೆ ಕಳೆದ 3 ತಿಂಗಳಲ್ಲಿ ಈ ಲೋಹಗಳು 52,000 ಟ್ಗಗಳಷ್ಟು ಬಂದವು ಮೊದಲು ಅಕ್ಟೋಬ್ರ ಪ್ರಮಾಣದಲ್ಲಿ ಬರುತ್ತಿದ್ದ ಗೋಧಿಯು ೨ ಲಕ್ಷ ಟ್ಗ ಬಂತು. ಕಳೆದ ವರ್ಷ 11 ತಿಂಗಳಲ್ಲಿ ಅಮೇರಿಕೆಯಿಂದ ರಷ್ಯಕ್ಕೆ 1,14,000 ಟ್ಗ ಪೆಟ್ರೋಲಿಯಂ ಬಂದಿತು ಇತ್ತೀಚೆಗೆ ಜರ್ಮನಿಗೂ ರಷ್ಯಕ್ಕೂ ಮತ್ತು ರಷ್ಯಕ್ಕೂ ಮಾಮೈತ್ರಿ ಒಪ್ಪಂದವೊಂದಾಯಿತಷ್ಟೆ ! ಆ ಪ್ರಕಾರ ಗೋಧಿ ಮತ್ತು ಪೆಟ್ರೋಲಿಯಂ ಇವೆರಡನ್ನೂ ಜರ್ಮನಿಗೆ ಸರಪರಾಜು ಮಾಡಲಾಗುವುದೆಂದು ರಷ್ಯವು ಮಾತುಕೊಟ್ಟಿದೆ.

ಎಣ್ಣೆ ಪ್ರಿಕ್ಷಿಂಗ್ ಯಂತ್ರೋಪಕರಣಗಳು 1938 ರಲ್ಲಿ ಅಮೇರಿಕದಿಂದ ರಷ್ಯಕ್ಕೆ ಬಂದಿದ್ದುದಕ್ಕೆ ಎರಡರಷ್ಟು 1940 ನೇ ವರ್ಷದ ಮೊದಲಿನ ಎಂಟು ತಿಂಗಳಲ್ಲಿ ಬಂದವು.

ಈ ವಿಚಾರದಲ್ಲಿ ಬ್ರಿಟಿಷರ ಮನೋಭಾವವನ್ನು ಎರಡು ಪಕ್ಷದವರಿಗೂ ವ್ಯಕ್ತಪಡಿಸಲಾಗಿದೆ. ಈಗ ವಾಷಿಂಗ್‌ಟನ್ನಿನೊಂದಿಗೆ ನಡೆಯುತ್ತಿರುವ ಸಂಧಾನದ ಫಲವಾಗಿ ಈ ವ್ಯಾಪಾರವನ್ನು ಕಡಿಮೆ ಮಾಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲು ಸಾಧ್ಯವಾದೀತೆಂದು ಭಾವಿಸಿದ್ದೇನೆ" ಎಂದು ಹೇಳಿದರು.

ವೀರಶೈವ ವಿದ್ಯಾರ್ಥಿನಿಲಯದ ಸಭೆ. ಮೈಸೂರು

ಕಳೆದ ತಿಂಗಳು 30 ನೆಯ ತಾರೀಖಿನವಿವಸ ರಾಜ ಧಾನಿಯಲ್ಲಿರುವ ಮರಿಮಲ್ಲಪ್ಪ ಹೈಸ್ಕೂಲ್ ಕಟ್ಟಡದಲ್ಲಿ ನೇಮ್ಯಾಂಡ ಸಭೆಯು ನೆರವೇರಿತು. ಅಧ್ಯಕ್ಷತೆ ರಾಗಿದ್ದ ರಿ ಡಿಸ್ಟ್ರಿಕ್ಟ್ ಮತ್ತು ಸಷನ್ಸ್ ನ್ಯಾಯಾಧೀಶರಾದ ಶ್ರೀಮಾನ್ ಎಚ್. ಕೆ ವೀರಬಸವಪ್ಪನವರು ರಾಜಕೀಯ ವಿಷಯವಾಗಿಯೂ ಧಾರ್ಮಿಕ ವಿಷಯವಾಗಿಯೂ ತಮ್ಮೂಲ್ಯವಾದ ಭಾಷಣವನ್ನುಮಾಡಿ ವಿದ್ಯಾರ್ಥಿಗಳಿಗೆ ಸದ್ಬೋಧೆಮಾಡಿದರು ಆವರು ತಮ್ಮ ಭಾಷಣದಲ್ಲಿ—"ಈಗ ಪ್ರಪಂಚವಾಗಿರುವ ಪೋರಯುದ್ಧದಲ್ಲಿ ಭಾರತೀಯರೆಲ್ಲರೂ ಬ್ರಿಟಿಷ್ಸಿಗೆ ಪೂರ್ಣ ಸಹಾಯಮಾಡಬೇಕೆಂದೂ, ಬ್ರಿಟಿಷರು ಮೊದಲೇ ದೂರಾಲೋಚನೆಯನ್ನು ಮಾಡಿ ಭಾರತದಲ್ಲಿ ಸಂಗ್ರಾಮವಸ್ತುಗಳನ್ನು ತಯಾರುಮಾಡುವ ವ್ಯವಸ್ಥೆಯನ್ನು ಮಾಡಿದ್ದರೆ ಈ ಸಮಯದಲ್ಲಿ ಜಾರತದಿಂದ ಬೇಕಾದಷ್ಟು ಸಾಮಾನುಗಳನ್ನು ಒದಗಿಸಬಹುದಾಗಿತ್ತೆಂದೂ, ಹೊರಪೇಟೆಗಳಿಂದ ಆವುಗಳನ್ನುಕೊಳ್ಳುವ ಆನಿವಾರ್ಯತೆಯೇ ಇರುತ್ತಿರಲಿಲ್ಲವೆಂದೂ" ಹೇಳಿದರು ಕೋಮು.ವಾರು ವಿಷಯಸ್ಪರ್ಶಿಸಿ—"ಈಗ ಭಾರತದಲ್ಲಿ ಜಾತಿ ವಿಷಯಕವಾದ ದ್ವೇಷಗಳು ಹೆಚ್ಚುತ್ತಿರುವುದರಿಂದ ರಚನಾತ್ಮಕವಾದ ಕಾರ್ಯಗಳನ್ನು ಮಾಡುವುದು ಅಸಾಧ್ಯವಾಗಿದೆಯೆಂದೂ, ಅನೇಕ ಮತಗಳಿಂದ ಕೂಡಿರುವ ಪವಿತ್ರ ದೇಶದಲ್ಲಿ ರಾಜಕಾರಣ ಧುರೀಣರು ಮತಗಳನ್ನು ಸೃಷ್ಟಿಯೋಜನೆಕ್ಕಾಗಿ ಉಪಯೋಗಿಸಿಕೊಳ್ಳಲು ಅವಕಾಶವಾಗಿದೆಯೆಂದೂ, ಎಲ್ಲಾ ಮತಗಳ ಧ್ಯೇಯವು ಶಾಂತಿ ಮೈತ್ರಿಗಳಿಂದ ಕೂಡಿದ್ದು ಮನುಕ್ಕೆ ಸಾಧಕವಾಗಿರುವುದೆಂದೂ, ಆದುದರಿಂದ ಮತ ಮತಾಂತರದವರು ಪರಸ್ಪರ ಮತದ್ವೇಷವನ್ನು ಬಿಟ್ಟು ಸ್ನೇಹದಿಂದ ವರ್ತಿಸಬೇಕೆಂದೂ, ಈಗ ಭಾರತದಲ್ಲಿರುವ ವಿದ್ಯಾರ್ಥಿಗಳು ರಾಜಕಾರಣದಲ್ಲಿ ಹೆಚ್ಚು ಭಾಗವಹಿಸುತ್ತಿರುವರಲ್ಲದೆ, ಮುಕ್ಕರವಲ್ಲಿಯೂ ಭಾಗವಹಿಸುತ್ತಿರುವರೆಂದೂ, ಇದರಿಂದ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುವುದರಿಂದ ವಿದ್ಯಾರ್ಥಿಗಳು ಅವುಗಳಲ್ಲಿ ಭಾಗವಹಿಸುವುದು ಸರಿಯಲ್ಲವೆಂದೂ" ಬೋಧಿಸಿದರು. ಆನಂತರ ವೀರಶೈವಮತದ ಸಮಾತೃತ್ವವನ್ನು ಪ್ರತಿಪಾದಿಸುತ್ತ ಶ್ರೀವಗದ್ಗುರು ಪಂಚಾಚಾರ್ಯರ ಪ್ರಾಚೀನ ವೈದಿಕ ಸಿದ್ಧಾಂತವನ್ನು ವಿವರಿಸುವದರಮೂಲಕ ಬಳವನಕಾಲ ದಿಂದೀಚೆಗೆಉಂಟಾಗಿರುವ ವಿಲಕ್ಷಣಾಸ್ಥರೂಪವನ್ನು ವರ್ಣಿಸಿದರು. ಜನಾಂಗವನ್ನು ಹೆಚ್ಚಿಸಬೇಕೆಂದು ಯೋಚಿಸಿ ಕಂಡ ಕಂದ ಜಾತಿಯವರಿಗೆ ಲಿಂಗವನ್ನು ಕಟ್ಟುವದರಿಂದ ಮತವ ಪ್ರಾಶಸ್ತ್ಯವೆ ಹಾಳಾಗಿಹೋಗುವುದೆಂದೂ, ಪಾಮರರಿಂದ ಕೂಡಿದ ಸಮಾಜವು ಅಸಂಖ್ಯಜನರಿಂದ ಕೂಡಿದ್ದರೂ ಅವಕ್ಕೆ ಬೆಲೆಯಿಲ್ಲವೆಂದೂ, ಸಮಾಜವು ಸುಧಾರಕರೂ ಪರಾಚಾರಸಂಪನ್ನರೂ ಆದ ಸ್ವಲ್ಪಜನರಿಂದ ಕೂಡಿದ್ದರೂ ಅದಕ್ಕೆ ಬಹಳ ಪ್ರಾಶಸ್ತ್ಯವುಂಟೆಂದೂ, ಇದಕ್ಕೆ ಪಾರ್ವಿಜನ್ಯಾಂಗವೇ ತಾತ್ಪರ್ಯವೆಂದೂ ಹೇಳಿದರು. ಆ ಮೇಲೆ ಸಂಕ್ಷೇಪವಾಗಿ ಸಭಾಸ್ಥಲಗಳ ವಿಷಯವನ್ನು ಪ್ರತಿಪಾದಿಸಿದರು. ಬಳಿಕ ಸಭೆಯು ಸಮಾಪ್ತಿಗೊಂಡಿತು. ಸಭೆಗೆ ಮಹಾರಾಜಾಕಾಲೇಜ್ ಪ್ರೊಫೆಸರ್ ಎ. ಆರ್ ವಾಡಿಯಾ, ಡಾಃ ಟಿ. ಎಸ್ ಸಿದ್ಧಪ್ಪ ಮೊದಲಾದ ಅನೇಕಸ ಪ್ರಮುಖರೂ, ಅನೇಕ ಜನ ವಿದ್ಯಾರ್ಥಿಗಳೂ ಆಗಮಿಸಿದ್ದರು.

ವಿಮಾನ ಮುತ್ತಿಗೆಗೆಂದು ನೊಂದವರ ಕಷ್ಟ ಪರಿಹಾರ ನಿಧಿಗೆ ಮೈಸೂರು ಸಂಗ್ರಾಮ ನಿಧಿಯಿಂದ ಮತ್ತೆ 2000 ಪೌಂಡುಗಳನ್ನು ಕಳುಹಿಸಿಕೊಡಬೇಕೆಂದು ಕಳೆದ 30 ನೆಯ ತಾರೀಖಿನವಿವಸ ಸೇರಿದ್ದ ಮೈಸೂರು ಸಂಗ್ರಾಮ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯಮತು ನಿರ್ಧರಿಸಿದರು.

ಸೊಲ್ಲಾಪುರದಲ್ಲಿ ನೆರವೇರಿದ ಶ್ರೀಮದುಜ್ಜಯನೀ ಜಗದ್ಗುರುಗಳ ಪುಣ್ಯತಿಥಿಯಲ್ಲಿ ಸ್ತೋ॥ ಭಾಗೀರಥೀ ಬಾಯಿಯವರು ಭಕ್ತ್ಯಧರದಿಂದ ರಚಿಸಿದ ಸ್ತೋತ್ರ

(ಧಾಟಿ—ಶಿವನೇ ಬಾ ಬಾ ಅಪಜನೆ ಎಂಬಂ)

ಗುರುವೇ ಬಾ ಬಾ । ಧರಣಿಗೆ ನಿನ್ನಯ । ಕರಣೆಯ ಬೀರಲು ಬೇಗನೆ ಬಾ ॥ ಪರಿಪರಿಯಿಂದ ಸುಭಾವದಿ ನುತಿಸುವ । ಶರಣಾಗತರನು ಪ್ರೋರಿಯಲು ಬಾ ॥ಸ॥ ಗುರುವೇ ಬಾ ಬಾ ॥

ನಿನ್ನನು ನೋಡಿದ ಸವ್ಯಯ ಕಣ್ಣಿಗ । ಸನ್ನುತ ಮಹಿಮನೆ ಶಿವಗಣ ಬಾ । ಚೆನ್ನಜಗದ್ಗುರ ದೇವನೆ ದುರಿತದ । ಬಣ್ಣವ ಬಿಡಿಸಲು ಬೇಗನೆ ಬಾ ॥ ೧ ॥

ವೇದವ ನಿಂದಿಸಿ ತಿರಿಗುವ ಮಂದರ । ಜಾಡವ ಖಂಡಿಸಿ ಧರ್ಮವನು । ಬೋಧಿಸಿ ದುರಳರಿಗಾಗಿಸಿ ಯಮ । ಬಾಧೆಯ ಬಿಡಿಸಲು ವೇಗದಿ ಬಾ ॥ ೨ ॥

ಕಂಡಕಂಡವರಿಗೆ ಲಿಂಗವ ಬಿಗಿಯುವ । ಪ್ರಾಂತರ ತಂಡವ ಖಂಡಿಸಿ ಬಾ । ಪಂಡಿತ ಕಾಶೀನಾಥನ ಪುತ್ರ । ಚಂಡನಿನಾದನ ವಂಡಿಸಿ ಬಾ ॥ ೩ ॥

